ಚಂದ್ರಶೇಖರ ಕಂಬಾರರ ಕಾದಂಬರಿಗಳಲ್ಲಿ ತಾಯಿಸಂಸ್ಕೃತಿಯ ಪ್ರಾತಿನಿಧ್ಯ

(ಕನ್ನಡ ವಿಶ್ವವಿದ್ಯಾಲಯ,ಹಂಪಿ, ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ
ಎಂ.ಫಿಲ್ ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕಿ
ರಾಜೇಶ್ವರಿ ವೀ ಶೀಲವಂತ

ಮಾರ್ಗದರ್ಶಕರು
ಡಾ.ವ್ಹಿ.ಎಸ್.ಬಡಿಗೇರ
ಪ್ರಾಧ್ಯಾಪಕರು

೨೦೦೮

ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಚಂದ್ರಶೇಖರ ಕಂಬಾರರ ಕಾದಂಬರಿಗಳಲ್ಲಿ
ತಾಯಿಸಂಸ್ಕೃತಿಯ ಪ್ರಾತಿನಿಧ್ಯ

(ಕನ್ನಡ ವಿಶ್ವವಿದ್ಯಾಲಯ,ಹಂಪಿ, ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ
ಎಂ.ಫಿಲ್ ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕಿ
ರಾಜೇಶ್ವರಿ ವೀ ಶೀಲವಂತ

ಮಾರ್ಗದರ್ಶಕರು
ಡಾ.ವ್ಹಿ.ಎಸ್.ಬಡಿಗೇರ
ಪ್ರಾಧ್ಯಾಪಕರು

೨೦೦೮

ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩ ೨೭೬

ಪ್ರಮಾಣ ಪತ್ರ

ಚಂದ್ರಶೇಖರ ಕಂಬಾರರ ಕಾದಂಬರಿಗಳಲ್ಲಿ ತಾಯಿಸಂಸ್ಕೃತಿಯ ಪ್ರಾತಿನಿಧ್ಯ ಎಂಬ ನಿಬಂಧವನ್ನು ಡಾ.ವ್ಹಿ.ಎಸ್.ಬಡಿಗೇರ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಭಾಷಾನಿಕಾಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

R. V. Sheelavand
ರಾಜೇಶ್ವರಿ ವೀ.ಶೀಲವಂತ
ಎಂ.ಫಿಲ್ ವಿದ್ಯಾರ್ಥಿನಿ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ,ಹಂಪಿ

ಸ್ಥಳ: ವಿದ್ಯಾರಣ್ಯ
ದಿನಾಂಕ : ೧೮.೮.೨೦೦೮

ಮಾರ್ಗದರ್ಶಕರ ಪ್ರಮಾಣ ಪತ್ರ

ಚಂದ್ರಶೇಖರ ಕಂಬಾರರ ಕಾದಂಬರಿಗಳಲ್ಲಿ ತಾಯಿಸಂಸ್ಕೃತಿಯ ಪ್ರಾತಿನಿಧ್ಯ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್ ಪದವಿಗಾಗಿ **ರಾಜೇಶ್ವರಿ ವೀ. ಶೀಲವಂತ** ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ.ವ್ಹಿ.ಎಸ್. ಬಡಿಗೇರ
ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ,ಹಂಪಿ

ಸ್ಥಳ: ವಿದ್ಯಾರಣ್ಯ
ದಿನಾಂಕ : ೧೮-೦೯-೦೮

ಕೃತಜ್ಞತೆಗಳು

ಎಂ.ಫಿಲ್ ಅಧ್ಯಯನದ ಆಸೆಯಿಟ್ಟುಕೊಂಡು ವಿದ್ಯಾರಣ್ಯಕ್ಕೆ ಬಂದ ನನಗೆ, 'ಚಂದ್ರಶೇಖರ ಕಂಬಾರರ ಕಾದಂಬರಿಗಳಲ್ಲಿ ತಾಯಿಸಂಸ್ಕೃತಿಯ ಪ್ರಾತಿನಿಧ್ಯ' ಎಂಬ ವಿಷಯದ ಮೇಲೆ ಎಂ.ಫಿಲ್ ಅಧ್ಯಯನ ಮಾಡಲು ಅವಕಾಶ ಮಾಡಿಕೊಟ್ಟ ಅಂದಿನ ಕುಲಪತಿಗಳಾದ ಕೆ.ವಿ.ನಾರಾಯಣರಿಗೆ ಮತ್ತು ಇಂದಿನ ಕುಲಪತಿಗಳಾದ ಡಾ.ಎ.ಮುರಿಗೆಪ್ಪನವರಿಗೂ ಕೃತಜ್ಞತೆಗಳು.

ನನಗೆ ಅಧ್ಯಯನದಲ್ಲಿ ಆಸಕ್ತಿಯನ್ನು ಬೆಳೆಸಿ, ನನ್ನ ಎಲ್ಲ ತಪ್ಪುಗಳನ್ನು ತಿದ್ದಿ ತಾಳ್ಮೆ, ಸಮಾಧಾನದಿಂದ ಮಾರ್ಗದರ್ಶನ ಮಾಡಿದ ಡಾ.ವ್ಹಿ.ಎಸ್.ಬಡಿಗೇರ ಅವರಿಗೆ ಕೃತಜ್ಞತೆಗಳು.

ನನ್ನಲ್ಲಿ ವಿದ್ಯೆಯ ಬಗ್ಗೆ ಆಸಕ್ತಿಯನ್ನು ಬೆಳೆಸಿ, ಮಕ್ಕಳು ಕಲಿಯಬೇಕೆಂಬ ಆಸೆ, ಹಂಬಲ ಹೊತ್ತು, ಅದಕ್ಕೆ ಎಲ್ಲ ರೀತಿಯ ಸಲಹೆ ಸಹಕಾರ ಕೊಡುತ್ತಾ ಮಕ್ಕಳ ಜ್ಞಾನದ ಪ್ರಗತಿಯಲ್ಲಿಯೇ ತಮ್ಮ ಜೀವನದ ಯಶಸ್ಸನ್ನು ಕಾಣುತ್ತಿರುವ ಅಕ್ಕರೆಯ ಅಪ್ಪ ಅವ್ವರಾದ ಶ್ರೀ ವೀರೇಂದ್ರ ಶೀಲವಂತ ಶ್ರೀಮತಿ ಶಾಂತಾ ಶೀಲವಂತ ಅವರಿಗೂ, ನನ್ನ ಅಧ್ಯಯನಕ್ಕೆ ಪ್ರೋತ್ಸಾಹ, ಬೆಂಬಲ ಕೊಡುತ್ತಿರುವ ಸಹೋದರರಾದ ವಿದ್ಯಾಧರ ಶೀಲವಂತ, ಸುರೇಶ, ಶೇಖರ ಗೊಳಸಂಗಿ ಮತ್ತು ಸಹಕಾರ ನೀಡಿದ ಕುಟುಂಬದ ಸಮಸ್ತ ಬಂಧುಗಳಿಗೆ ಕೃತಜ್ಞತೆಗಳು.

ಅಧ್ಯಯನಕ್ಕೆ ಬೇಕಾದ ಎಲ್ಲಾ ರೀತಿಯ ಮಾಹಿತಿ ಮತ್ತು ಸಹಕಾರ ನೀಡಿದ ಹಸ್ತಪ್ರತಿಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಎಸ್.ಎಸ್.ಅಂಗಡಿ, ಪ್ರಾಧ್ಯಾಪಕರುಗಳಾದ ಡಾ.ಎಫ್.ಟಿ.ಹಳ್ಳಿಕೇರಿ, ಡಾ.ಚೆನ್ನವೀರಪ್ಪ ಅವರಿಗೆ ಕೃತಜ್ಞತೆಗಳು.

ನನ್ನಲ್ಲಿ ಓದಿನ ಬಗ್ಗೆ ಆಸಕ್ತಿ ಹುಟ್ಟಿಸಿ ಇಲ್ಲಿಯವರೆಗೆ ಕಲಿಯಲು ಪ್ರೇರಣೆ, ಸಹಕಾರ ನೀಡಿದ ಗುರುಗಳಾದ ಡಾ.ಶ್ರೀರಾಮ್ ಇಟ್ಟಣ್ಣವರ, ಶ್ರೀ. ಎಚ್.ಬಿ.ಧರ್ಮಣ್ಣನವರು, ಡಾ.ಬಿ.ಕೆ.ಹಿರೇಮಠ, ಡಾ.ಜಿ.ವೀರಭದ್ರಗೌಡ, ಡಾ.ವೆಂಕಟಗಿರಿ ದಳವಾಯಿಯವರಿಗೆ ನನ್ನ ಕೃತಜ್ಞತೆಗಳು.

ಅಧ್ಯಯನ ಕಾಲದಲ್ಲಿ ನನ್ನೊಂದಿಗೆ ಚರ್ಚೆ ಮಾಡುತ್ತಾ, ನನಗೆ ಸಲಹೆ ಸೂಚನೆ ಕೊಡುತ್ತ ಬಂದ ಸ್ನೇಹಿತೆಯರಾದ ಸುಮತಿ, ವಿಜಯಶ್ರೀ ಇಟ್ಟಣ್ಣವರ, ಸುಮಂಗಲ ಮೇಟಿ, ಶಶಿಕಲಾ, ರೇವಿನಾ, ವಿಜಯಶ್ರೀ ಮಲ್ಲಣ್ಣ, ಜ್ಯೋತಿ ಹಾಗೂ ಇತರ ಸ್ನೇಹಿತೆಯರಿಗೆ ನನ್ನ ಕೃತಜ್ಞತೆಗಳು.

ಅಧ್ಯಯನಕ್ಕೆ ಸಂಬಂಧಿಸಿದಂತೆ ಮಾಹಿತಿ ಒದಗಿಸುತ್ತಾ, ಸಲಹೆ ಸೂಚನೆ ಕೊಡುತ್ತಿದ್ದ ಹಿರಿಯರಾದ ಶ್ರೀ ಹನುಮಂತರಾಯ ಕಂಠಿ, ಆತ್ಮಿಯರಾದ ಶ್ರೀ ಶಿವಾನಂದ ಶೆಲ್ಲಿಕೇರಿ ಅವರಿಗೆ ನನ್ನ ಕೃತಜ್ಞತೆಗಳು.

ನನ್ನನ್ನು ಪ್ರೀತಿಯಿಂದ ಕಂಡು ಎಲ್ಲಾ ರೀತಿಯ ಸಹಾಯ, ಸಹಕಾರ ನೀಡಿದ ಡಾ.ವೀರೇಶ ಬಡಿಗೇರ ಮತ್ತು ಅವರ ಪತ್ನಿಯವರಾದ ಶ್ರೀಮತಿ ಅನಿತಾ ಬಡಿಗೇರ ಮತ್ತು ಅವರ ಇಡೀ ಕುಟುಂಬ ವರ್ಗಕ್ಕೆ ನನ್ನ ಕೃತಜ್ಞತೆಗಳು.

ಕಾಲಕಾಲಕ್ಕೆ ನಮಗೆ ಪುಸ್ತಕಗಳನ್ನು ಕೊಟ್ಟು ಸಹಕರಿಸಿದ ಸಮಸ್ತ ಸಿಬ್ಬಂದಿ ವರ್ಗಕ್ಕೆ ಕೃತಜ್ಞತೆಗಳು.

ಎಷ್ಟೇ ಬಾರಿ ಅಕ್ಷರ ತಿದ್ದಲು ಹೇಳಿದರೂ ಬೇಸರಪಟ್ಟುಕೊಳ್ಳದೇ ಸಹನೆಯಿಂದ ತಿದ್ದಿ ಅಂದವಾಗಿ ಡಿಟಿಪಿ ಮಾಡಿಕೊಟ್ಟ ಶ್ರೀ ರವಿಕುಮಾರ್.ಎ ಮತ್ತು ಶ್ರೀ ಕುಮಾರ ಬಡಿಗೇರ ಅವರಿಗೆ ಕೃತಜ್ಞತೆಗಳು

ಎಂ.ಫಿಲ್ ಅಧ್ಯಯನದಲ್ಲಿ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷವಾಗಿ ಸಹಾಯ ಮಾಡಿದ ಪ್ರತಿಯೊಬ್ಬರಿಗೂ ನನ್ನ ಕೃತಜ್ಞತೆಗಳು.

ರಾಜೇಶ್ವರಿ ವೀ.ಶೀಲವಂತ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಅಧ್ಯಯನದ ಉದ್ದೇಶ

"ಕೆರೆಯಂ ಕಟ್ಟಿಸು ಭಾವಿಯಂ ಸವಸು ದೇವಾಗಾರಮಂ ಮಾಡಿ
ಸಜ್ಜೆರೆಯೊಳ್ಸಿಲ್ಕಿದನಾಥರಂ ಬಿಡಿಸು ಮಿತ್ರರ್ಗ್ಗಿಂಬುಕೆಯಿ ನಂಬಿ
ದರ್ಗ್ಗೆರೆವೆಟ್ಟಾಗಿರು ಶಿಷ್ಟರಂ ಪೊರೆಯೆನುತ್ತಿಂತೆಲ್ಲವಂ ಪಿಂದೆ ತಾಂ
ಯೇರದಳ್ವಾಲೆರೆವಂದು ತೊಟ್ಟು ಕಿವಿಯೊಳ್ ಲಕ್ಷ್ಮಿಧರಾಮಾತ್ಯನಾ॥"

ತಾಯಿ ಸಿಂಗಲೆ ಕೂಸಾದ ಲಕ್ಷ್ಮಿಧರಾಮಾತ್ಯನಿಗೆ ಮೊಲೆಹಾಲು ಕುಡಿಸುತ್ತಾ ಹೇಳುವ ಲೋಕೋಪಕಾರದ ಮಾತುಗಳಿವು. ಇಲ್ಲಿ ತಾಯಿ ಕೆರೆಗಳನ್ನು ಕಟ್ಟಿಸು, ಬಾವಿಗಳನ್ನು ನಿರ್ಮಿಸು, ದೇವಾಲಯಗಳನ್ನು ಕಟ್ಟಿಸು, ಕಷ್ಟದಲ್ಲಿ ಸಿಲುಕಿದ ಅನಾಥರನ್ನು ಬಿಡಿಸು, ಮಿತ್ರರಿಗೆ, ನಂಬಿದವರಿಗೆ ಆಶ್ರಯ ನೀಡು, ಶಿಷ್ಟರನ್ನು ಪೊರೆ ಎಂದು ಹೊಟ್ಟೆಗೆ ಎದೆಹಾಲಿನ ಅಮೃತವನ್ನು ಉಣಿಸುತ್ತಲೇ ಕಿವಿಗೆ ನೀತಿಮಾತಿನ ಅಮೃತವನ್ನು ಧಾರೆಯೆರೆಯುತ್ತಾಳೆ. ಈ ತಾಯಿ ಬಯಸುವುದು ತನ್ನ ಎದೆಹಾಲನ್ನು ಉಂಡು ಮಗು ದೈಹಿಕವಾಗಿ ಮಾತ್ರ ಬಲಿಷ್ಟವಾಗಲಿ ಎಂದಲ್ಲ. ತನ್ನ ನೀತಿ ಮಾತುಗಳನ್ನು ಅಳವಡಿಸಿಕೊಂಡು ಆತ ಬೌದ್ಧಿಕವಾಗಿಯೂ, ಮಾನಸಿಕವಾಗಿಯೂ ಬಲಿಷ್ಟವಾಗಲಿ, ಲೋಕೋಪಕಾರಿಯಾಗಲಿ, ರಾಜ್ಯವನ್ನು ಕಟ್ಟುವ ಸಮರ್ಥ ವ್ಯಕ್ತಿಯಾಗಲಿ ಎಂದು. ಆತ ನ್ಯಾಯಪರ, ನೀತಿವಂತ, ದಯಾಮಯ ಸ್ನೇಹಪರ ಮನುಷ್ಯನಾಗಬೇಕು. ಸಾರ್ವಜನಿಕರಿಗೆ ಉಪಯೋಗವಾಗುವಂತಹ ಕೆರೆ, ಬಾವಿ, ಅರವಟ್ಟಿಗೆ, ಉದ್ಯಾನವನ, ಧರ್ಮಶಾಲೆಗಳನ್ನು ನಿರ್ಮಿಸಬೇಕು. ಕಷ್ಟದಲ್ಲಿ ಸಿಲುಕಿದವರಿಗೆ, ಅನಾಥರಿಗೆ, ಶರಣಾಗತರಾದವರಿಗೆ, ನೊಂದವರಿಗೆ ಆಶ್ರಯ, ರಕ್ಷಣೆಯನ್ನು ನಿಡಬೇಕು. ಗುರುಹಿರಿಯರನ್ನು, ಸ್ತ್ರೀಯರನ್ನು, ಪೂಜ್ಯರನ್ನು ಗೌರವಾದರಗಳಿಂದ ಕಾಣಬೇಕು. ದೇವರನ್ನು, ಪ್ರಕೃತಿಯನ್ನು ಭಕ್ತಿಯಿಂದ ಆರಾಧಿಸಬೇಕು. ಈ ಎಲ್ಲ ಕಾರ್ಯಗಳ ಮೂಲಕ ತನ್ನ ಮಗ ಇಡೀ ಸಮಾಜವೇ ಗೌರವಿಸುವ ವ್ಯಕ್ತಿಯಾಗಬೇಕೆಂದು ಹಂಬಲಿಸುತ್ತಾಳೆ. ಇಲ್ಲಿ ತಾಯಿ ತನ್ನ ಮಗುವನ್ನು ಬೆಳಸ ಹೊರಟಿರುವುದು ಒಬ್ಬ ಸಶಕ್ತ, ಸಂಪೂರ್ಣವ್ಯಕ್ತಿತ್ವದ, ಸ್ವಾವಲಂಬಿ, ಉತ್ಪಾದನಶೀಲ, ವಿಕಾಸಶೀಲ ವ್ಯಕ್ತಿಯನ್ನಾಗಿ. ತನ್ನ ಮಗು ಪರಾವಲಂಬಿ, ಸ್ವಾರ್ಥ, ನಿರ್ವೀರ್ಯ, ಲೋಕಕಂಟಕನಾಗುವುದನ್ನು ಯಾವ ತಾಯಿಯೂ ಸಹಿಸಳು. ಆತ ಹಾಗೆ ಕೆಟ್ಟದಾರಿ ಹಿಡಿಯದ ಹಾಗೆ ಮಗುವಾಗಿರುವಾಗಿನಿಂದಲೂ

ಜಾಗೃತೆ ವಹಿಸುತ್ತಾಳೆ. ಮಗನನ್ನು ಸುಸಂಸ್ಕೃತ ವ್ಯಕ್ತಿಯನ್ನಾಗಿ ಮಾಡುವುದಕ್ಕಾಗಿ ತನ್ನ ಜೀವನವನ್ನೇ ಮುಡಿಪಾಗಿಡುತ್ತಾಳೆ.

"ಆಚಾರಕೆ ಅರಸಾಗು ನೀತಿಗೆ ಪ್ರಭುವಾಗು
ಮಾತಿಗೆ ಚೂಡಾಮಣಿಯಾಗು। ನನಕಂದ
ಜ್ಯೋತಿಯೇ ಆಗು ನೀ ಜಗಕ್ಕೆಲ್ಲ"

ಎಂದು ಇಡೀ ಜಗತ್ತಿಗೆ ಮಾದರಿಯಾಗಬಲ್ಲ ವ್ಯಕ್ತಿ ತನ್ನ ಮಗನಾಗಬೇಕೆಂದು ಹಂಬಲಿಸುತ್ತಾಳೆ. ಹೀಗೆ ಸದೃಢ ಮಗುವನ್ನು ಸಮಾಜಕ್ಕೆ ನೀಡುವ ಮೂಲಕ ಇಡೀ ಸಮಾಜದ ಪೋಷಣೆ ಹಾಗೂ ರಕ್ಷಣೆಯ ಜವಾಬ್ದಾರಿ ವಹಿಸಿ ಸರ್ವಶಕ್ತ ಸಮಾಜ ನಿರ್ಮಾಣಕ್ಕೆ ಕಾರಣಳಾಗುತ್ತಾಳೆ. ತಾಯಂದಿರ ಈ ನೀತಿಮಾತುಗಳನ್ನು ಕೇಳಿಕೊಂಡು ಬೆಳೆದ ಮಕ್ಕಳು ಇವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದರಿಂದ ಸದೃಢ, ಸುಸಂಸ್ಕೃತ ಸಮಾಜ ನಿರ್ಮಾಣವಾಗುತ್ತದೆ. ತಾಯಂದಿರಿಂದ ಬಳುವಳಿಯಾಗಿ ಬಂದ ಗುಣಗಳನ್ನು ಅಳವಡಿಸಿಕೊಂಡು ನಿರ್ಮಾಣವಾದ ಇಡೀ ಸಮಾಜವೇ ತಾಯಿಯಂತೆ ವರ್ತಿಸುತ್ತದೆ. ತಾಯಿ ಬಿತ್ತಿದ ಸದ್ಗುಣಗಳೆಂಬ ಬೀಜಗಳ ಫಲವಾಗಿ ಇಡೀ ಸಂಸ್ಕೃತಿ ತಾಯಿಸಂಸ್ಕೃತಿಯಾಗಿ ನಿರ್ಮಾಣವಾಗುತ್ತದೆ.

ಈ ತಾಯಿಸಂಸ್ಕೃತಿಯ ಸಮಾಜದಲ್ಲಿ ಪ್ರೀತಿ, ವಿಶ್ವಾಸ, ತ್ಯಾಗ, ಸಹನೆ, ಸಹಕಾರ, ಅನ್ಯೋನ್ಯತೆ, ವಾತ್ಸಲ್ಯ ಮುಂತಾದ ಮಾನವೀಯ ಗುಣಗಳಿಗೆ ಅಗ್ರಸ್ಥಾನ. ಇಲ್ಲಿ ರಕ್ತಸಂಬಂಧವಷ್ಟೇ ಕುಟುಂಬವಾಗದೆ ಜೈವಿಕ ಮತ್ತು ಮಾನಸಿಕ ಸಂಬಂಧ ಪಡೆದ ಒಂದು ವ್ಯವಸ್ಥೆಯೇ ಕುಟುಂಬದಂತೆ ವರ್ತಿಸುತ್ತದೆ. ಇಲ್ಲಿ ಒಬ್ಬರ ನೋವು ನಲಿವುಗಳಿವು ಇಡೀ ಸಮಾಜದ ನೋವು ನಲಿವುಗಳಾಗಿ ಪ್ರತಿಯೊಬ್ಬರು ಅದಕ್ಕೆ ಸ್ಪಂಧಿಸುತ್ತಾರೆ. ಪ್ರತಿಯೊಬ್ಬರು ಶ್ರಮವಹಿಸಿ ದುಡಿದು ಬಂದ ಫಲವನ್ನು ಹಂಚಿ ಉಣ್ಣುತ್ತಾರೆ. ವ್ಯಕ್ತಿ ಅರಿಯದೇ ದಾರಿ ತಪ್ಪಿ ನಡೆದಾಗ ಸಮಾಜ ಅವನನ್ನು ತಿದ್ದಿ ಸರಿಯಾದ ದಾರಿಯಲ್ಲಿ ನಡೆಯುವಂತೆ ಮಾಡುತ್ತದೆ. ಈ ಸಮಾಜದಲ್ಲಿ ಜಾತಿ, ಮತ ಎಂಬ ವ್ಯತ್ಯಾಸವಿದ್ದರೂ ಪ್ರತಿಯೊಬ್ಬರು ಅಣ್ಣತಮ್ಮಂದಿರಂತೆ ಕೂಡಿ ಬಾಳುತ್ತಾರೆ. ಇಲ್ಲಿ ಯಾವುದೇ ರೀತಿಯ ವ್ಯಾಜ್ಯಗಳಿದ್ದರು ಅವು ಕೋರ್ಟು ಕಟಕಟಿಯ ಮೆಟ್ಟಿಲು ಹತ್ತದೆ ಅಲ್ಲಿಯೇ ಪಂಚರಿಂದ ತೀರ್ಮಾನವಾಗುತ್ತವೆ. ಬುದ್ಧಿಮಾತುಗಳು ಮತ್ತು ಅಲ್ಪಪ್ರಮಾಣದ ದಂಡಗಳ ಮೂಲಕ ಈ ಕಲಹಗಳಿಗೆ ಅಂತ್ಯ ಕಾಣಿಸಲಾಗುತ್ತದೆ. ಇಂತಹ ಸಂಸ್ಕೃತಿಯಲ್ಲಿ ಸ್ವಾರ್ಥ, ಆಲಸ್ಯ, ಮೋಸ, ವಂಚನೆ ಉಪಭೋಗಕ್ಕೆ ಆಸ್ಪದವಿಲ್ಲ. ಈ ಸಂಸ್ಕೃತಿ ತಟಸ್ಥವಾಗಿರದೆ, ಗತಿಶೀಲವಾಗಿದ್ದು, ಸಮಾಜದ ಅಗತ್ಯಕ್ಕೆ ತಕ್ಕಂತೆ ಸಾವಕಾಶವಾಗಿ ಬದಲಾವಣೆ ಹೊಂದುತ್ತಾ ಸಮಾಜವನ್ನು ಮರುಸೃಷ್ಠಿ ಮಾಡುತ್ತಾ ಹೋಗುತ್ತದೆ. ಇದು ನಿರ್ಮಲ ಮನುಸ್ಸುಗಳ, ನೆಮ್ಮದಿಯಿಂದ ಕೂಡಿದ ಸಂಸ್ಕೃತಿ.

ಇಂತಹ ತಾಯಿಸಂಸ್ಕೃತಿಯಲ್ಲಿ ದೈವಕ್ಕೆ ಅಗ್ರಸ್ಥಾನ. ಇಲ್ಲಿಯ ಜನರು ತಮ್ಮ ಪ್ರತಿಯೊಂದು ಚಲನೆಗೂ ದೇವರೆ ಕಾರಣ ಎಂದು ನಂಬುತ್ತಾರೆ. ಈ ಜಗತ್ತು ನಡೆಯುವುದು ದೇವರಿಂದ, ತಮ್ಮ ಹುಟ್ಟು, ಸಾವು, ಪಾಲನೆ, ಪೋಷಣೆ ಎಲ್ಲವನ್ನು ದೇವರೆ ಮಾಡುತ್ತಾನೆ ಎಂಬ ನಂಬಿಕೆ ಇವರದು. ತಮಗೆ ಕೆಟ್ಟದಾದಾಗ ಅದು ತಾವು ಮಾಡಿದ ಯಾವುದೋ ತಪ್ಪಿಗೆ ದೇವರು ಕೊಟ್ಟ ಶಿಕ್ಷೆ ಎಂದು ತಿಳಿದು ಅದನ್ನು ನಿವಾರಿಸಲು ದೇವರಿಗೆ ಹರಕೆ ಹೊರುತ್ತಾರೆ. ಒಳ್ಳೆಯದಾದಾಗ ಅದು ದೇವರ ಅನುಗ್ರಹದಿಂದಾಯಿತೆಂದು ಭಾವಿಸಿ ದೇವರಿಗೆ ಕೃತಜ್ಞರಾಗಿರುತ್ತಾರೆ. ತಾವು ಮಾಡುವ ಪ್ರತಿಯೊಂದು ಕಾರ್ಯಕ್ಕು ದೇವರ ಸಹಕಾರ ಕೃಪೆ

ಬೇಕು. ಅಂದಾಗ ಮಾತ್ರ ಆ ಕಾರ್ಯ ಯಶಸ್ವಿಯಾಗುತ್ತದೆ. ಇಲ್ಲದಿದ್ದರೆ ಇಲ್ಲ ಎಂಬ ನಂಬಿಕೆ ಈ ಸಂಸ್ಕೃತಿಯದ್ದು. ತಮ್ಮ ಅವಿರತ ದುಡಿಮೆಯ ನಡುವೆಯು ಇವರು ದೇವರ ಪ್ರಾರ್ಥನೆ ಪೂಜೆಗಾಗಿ ಸಮಯವನ್ನು ಮೀಸಲಿಡುತ್ತಾರೆ. ಇವರಿಗೆ ದೇವರ ಬಗ್ಗೆ ಭಕ್ತಿಯೊಂದಿಗೆ ಭಯವು ಉಂಟು. ತಾವು ಒಂದು ವೇಳೆ ತಪ್ಪು ಮಾಡಿದರೆ, ಅನ್ಯಾಯದ ಮಾರ್ಗದಲ್ಲಿ ನಡೆದರೆ ಪರರಿಗೆ ದ್ರೋಹ ಬಗೆದರೆ ತಮಗೆ ದೇವರು ಒಳ್ಳೆಯದನ್ನು ಮಾಡಲಾರ, ನಮಗೆ ನಮ್ಮ ಕುಟುಂಬಕ್ಕೆ ಶಿಕ್ಷೆ ಕೊಟ್ಟೇ ಕೊಡುತ್ತಾನೆ, ಇದು ಜನ್ಮಜನ್ಮಾಂತರಕ್ಕು ಬಿಡದು ಎಂಬ ನಂಬಿಕೆ ಇವರದು. ದೇವರ ಬಗ್ಗೆ ಇವರಲ್ಲಿರುವ ಭಯ ಇವರೆಂದೂ ತಪ್ಪು ಕೆಲಸ ಮಾಡಿ ಅನ್ಯಾಯದ ಮಾರ್ಗದಲ್ಲಿ ನಡೆಯದಂತೆ ನೋಡಿ ಕೊಳ್ಳುತ್ತದೆ. ಇವರ ದೈವ ನಂಬಿಕೆ ನ್ಯಾಯಯುತ ಸಮಾಜಕ್ಕೆ ಕಾರಣವಾಗುತ್ತದೆ.

ತಾಯಿಸಂಸ್ಕೃತಿ ಪ್ರಕೃತಿ ಆರಾಧಕ ಸಂಸ್ಕೃತಿ. ತಮಗೆ ಅನ್ನ, ನೀರು, ಗಾಳಿ, ಬೆಳಕು ನೀಡಿ ಸಲಹುವ, ಪೋಷಿಸುವ ನಿಸರ್ಗ ಇವರಿಗೆ ದೇವರ ಸಮಾನ. ಭೂಮಿ, ಗಿಡ, ಮರ, ಜಲಗಳನ್ನು ದೇವರೆಂದು ಗೌರವಾದರಗಳಿಂದ ಪೂಜಿಸುತ್ತಾರೆ. ಪ್ರಕೃತಿಯಲ್ಲಿರುವ ಯಾವುದೇ ವಸ್ತುವನ್ನು ನಾಶಮಾಡುವುದು ಪಾಪ ಎಂಬ ನಂಬಿಕೆ ಇವರದು. ಭೂಮಿಯಿಂದ ವರ್ಷಕ್ಕೆ ಇಷ್ಟೇ ಬೆಳೆ ತೆಗೆಯಬೇಕು, ಅದಕ್ಕಿಂತ ಹೆಚ್ಚು ಭೂಮಿಯನ್ನು ಶ್ರಮಕ್ಕೀಡುಮಾಡಬಾರದು, ಗಿಡಮರಗಳನ್ನು ಕಡಿಯಬಾರದು, ಒಂದು ವೇಳೆ ಅವಶ್ಯಕತೆ ಇದ್ದರೆ ಪೂಜಿಸಿ ಆ ಸ್ಥಳದಲ್ಲಿ ಮತ್ತೊಂದು ಮರವನ್ನು ನೆಟ್ಟು ಕಡಿಯಬೇಕೆಂಬ ರಿವಾಜು ಇವರದು. ತಮಗೆ ಅಪಾಯಕಾರಿಯಾದ ಕ್ರೂರಮೃಗಗಳ ಹೊರತು ಸಾಧುಪ್ರಾಣಿಗಳ ಕೊಲ್ಲುವಿಕೆ ನಿಷೇದ. ಈ ಮೂಲಕ ಇವರು ಪ್ರಾಕೃತಿಕ ಸಮತೋಲನ ಕಾಯ್ದುಕೊಳ್ಳುತ್ತಿದ್ದರು.

ವಸಾಹತುಶಾಹಿ ಪ್ರಭಾವದಿಂದಾಗಿ ಇಂದು ಈ ನಿರ್ಮಲ ಮನಸ್ಸುಗಳ ನೆಮ್ಮದಿಯಿಂದ ಕೂಡಿದ ಸಂಸ್ಕೃತಿಯಲ್ಲಿ ಅನ್ಯಸಂಸ್ಕೃತಿಯೊಂದು ಪ್ರವೇಶ ಮಾಡಿದೆ. ಔದ್ಯೋಗಿಕರಣ, ಇಂಗ್ಲಿಷ್ ಶಿಕ್ಷಣ, ಜಾಗತೀಕರಣ, ಸಮೂಹ ಮಾಧ್ಯಮ, ಕಂಪ್ಯೂಟರೀಕರಣ ಎಂಬ ವಿವಿಧ ರೂಪಗಳನ್ನು ಪಡೆದು ಇದು ಕ್ರಮೇಣವಾಗಿ ನಮ್ಮ ಸಂಸ್ಕೃತಿಯನ್ನು ಆಕ್ರಮಿಸಿಕೊಳ್ಳತೊಡಗಿದೆ. ಈ ಪರಕೀಯ ಸಂಸ್ಕೃತಿ ಮನುಷ್ಯ ಮನುಷ್ಯರ ನಡುವಿನ ಸಂಬಂಧಗಳಲ್ಲಿ ಬಿರುಕನ್ನು ಉಂಟುಮಾಡಿ ಇಡೀ ಸಮಾಜವನ್ನು ಛಿದ್ರಗೊಳಿಸುತ್ತಿದೆ. ಈ ಸಂಸ್ಕೃತಿಯ ಭೋಗ ಜೀವನಕ್ಕೆ ಮರುಳಾದ ಮನುಷ್ಯ ಭ್ರಮೆಯ ಬೆನ್ನು ಹತ್ತಿ ಸತ್ಯವನ್ನು ಮರೆಯುತ್ತಿದ್ದಾನೆ. ಕೇವಲ ಉಪಭೋಗ ಜೀವನಕ್ಕೆ ಬಲಿಯಾಗಿ ಶ್ರಮತತ್ವವನ್ನು ಮರೆತು ತನ್ನ ಸೃಷ್ಟಿಶಕ್ತಿಯನ್ನೆ ಕಳೆದುಕೊಳ್ಳುತ್ತಿದ್ದಾನೆ. ಸ್ವಾರ್ಥಿಯಾದ ಮನುಷ್ಯ ಜೈವಿಕ, ಮಾನಸಿಕ ಸಂಬಂಧಗಳೊಡನೆ ರಕ್ತ ಸಂಬಂಧವನ್ನು ನಿರ್ಲಕ್ಷಿಸುತ್ತಿದ್ದಾನೆ. ಮನುಷ್ಯನ ದೇಹ ಮನಸ್ಸುಗಳ ನಡುವೆಯೇ ವಿಘಟನೆ ಉಂಟಾಗುತ್ತಿದೆ. ಚಿಕ್ಕ ಚಿಕ್ಕ ಕಲಹಗಳು ಸಹ ಕೋರ್ಟು ಕಟಕಟೆಯ ಮೆಟ್ಟಿಲು ಹತ್ತಿ ಅದಕ್ಕಾಗಿ ಹಣದ ಹೊಳೆಯನ್ನೇ ಹರಿಸಬೇಕಾಗಿದೆ. ಅಲ್ಲಿಯೂ ನ್ಯಾಯ ಸಿಗುತ್ತದೆ ಎಂಬ ನಂಬಿಕೆಯಿಲ್ಲ. ಪರಿಣಾಮವಾಗಿ ನಮ್ಮ ಸಂಸ್ಕೃತಿಯಲ್ಲಿ ಶ್ರೇಷ್ಠಸ್ಥಾನ ಪಡೆದಿದ್ದ ಮಾನವೀಯ ಮೌಲ್ಯಗಳು ಕುಸಿಯತೊಡಗಿವೆ.

ಈ ಅಧುನಿಕತೆ ಪ್ರವೇಶವು ಮನುಷ್ಯನಲ್ಲಿ ವೈಜ್ಞಾನಿಕ ವಿಚಾರಗಳನ್ನು ಬೆಳೆಸಿ ದೇವರ ಬಗೆಗಿನ ನಂಬಿಕೆಯನ್ನು ಕಳೆದುಕೊಳ್ಳುವಂತೆ ಮಾಡಿದೆ.ಇದರಿಂದ ಮನುಷ್ಯ ಪ್ರತಿಯೊಂದು ಕ್ರಿಯೆಯು ನನ್ನಿಂದಲೇ

ನಡೆಯುತ್ತದೆ, ನಾನು ಪೂಜಿಸಿದಾಗ ಮಾತ್ರ ದೇವರು ಪೂಜೆ ಪಡೆದುಕೊಳ್ಳುತ್ತಾನೆ, ಅವನಿಗಿಂತ ನಾನೇ ಶ್ರೇಷ್ಠ ಎಂಬ ಅಹಂಕಾರವನ್ನು ಬೆಳಸಿ ಕೊಳ್ಳುತ್ತಿದ್ದಾನೆ. ದೇವರ ಬಗ್ಗೆ ಮತ್ತು ಪಾಪ–ಪುಣ್ಯದ ಬಗ್ಗೆ ಅವನಿಗೆ ನಂಬಿಕೆ ಮತ್ತು ಭಯ ಇರದಿರುವುದರಿಂದ ಅವನು ಯಾವ ಅನ್ಯಾಯದ ಕಾರ್ಯವನ್ನು ಮಾಡಲು ಹಿಂದೆಮುಂದೆ ನೋಡನು. ಇದರಿಂದ ಸಮಾಜದಲ್ಲಿ ಅನ್ಯಾಯಕ್ಕೆ ಆಸ್ಪದ ದೊರೆಯುತ್ತಿದೆ. ಹೀಗೆ ಅಧುನಿಕತೆಯ ಮೂಲಕ ಸಮಾಜವನ್ನು ಪ್ರವೇಶಿಸಿದ ವಿಜ್ಞಾನ ಸಮಾಜವನ್ನು ತಪ್ಪು ದಾರಿಗೆ ಎಳೆಯುವದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಜಾಗತೀಕರಣದ ಪ್ರಭಾವದಿಂದಾಗಿ ಮನುಷ್ಯ ಪ್ರಕೃತಿಯ ಬಗೆಗೆ ಇಟ್ಟಿದ್ದ ಆರಾಧನಾ ಭಾವನೆಯನ್ನು ಕಳೆದುಕೊಂಡು ಆತ ಪ್ರಕೃತಿ ನಾಶಕನಾಗಿ ಪರಿವರ್ತನೆಯಾಗಿದ್ದಾನೆ. ದೇವರಂತೆ ಪೂಜಿಸುತ್ತಾ, ತಾಯಿಯಂತೆ ಪ್ರೀತಿಸುತ್ತಿದ್ದ ನಿಸರ್ಗವನ್ನು ತನ್ನ ಉಪಭೋಗಕ್ಕಾಗಿ ಬಲಿಕೊಡುತ್ತಿದಾನೆ. ಹೆಚ್ಚಿನ ಪ್ರಮಾಣದಲ್ಲಿ ಬೆಳೆ ಬೆಳೆಯುವ ಉದ್ದೇಶದಿಂದ ರಾಸಾಯನಿಕ ಗೊಬ್ಬರಗಳನ್ನು ಬಳಸಿ ಭೂಮಿಯ ಸತ್ವವನ್ನು ನಾಶಗೊಳಿಸುತ್ತಿದ್ದಾನೆ. ತನಗೆ ಮನೆ, ಕಾರ್ಖಾನೆ ಕಟ್ಟುವ ಉದ್ದೇಶದಿಂದ ಗಿಡ ಮರಗಳನ್ನು ಕಡಿದು ಕಾಡನ್ನು ನಾಶ ಮಾಡುತ್ತಿದ್ದಾನೆ. ಮುಗ್ದ ಪ್ರಾಣಿಗಳನ್ನು ತನ್ನ ಅಲಂಕಾರಿಕ ಉಡುಪಿಗಾಗಿ, ಮೋಜಿಗಾಗಿ ಬೇಟೆಯಾಡುತ್ತಿದ್ದಾನೆ. ಕಾರ್ಖಾನೆಗಳ ಮಲಿನ ನೀರನ್ನು ಸೇರಿಸಿ ನೀರಿನ ಮೂಲಗಳನ್ನು ವಿಷಮಯಗೊಳಿಸುತ್ತಿದ್ದಾನೆ. ಪ್ರಕೃತಿನಾಶ ತನ್ನ ನಾಶ ಎಂದು ಅರಿಯದೆ ಉಪಭೋಗಿಯಾಗಿ ತಾಯಿರೂಪದಲ್ಲಿದ್ದು ನಮ್ಮನ್ನು ಸಂರಕ್ಷಿಸುತ್ತಿದ್ದ ನಿಸರ್ಗದ ಮೇಲೆ ಹಿಂಸ್ರಕ ಆಕ್ರಮಣ ನಡೆಸಿದ್ದಾನೆ.

ಇವೆಲ್ಲವುಗಳಿಂದಾಗಿ ಈ ನಮ್ಮ ಸಂಸ್ಕೃತಿ ಕ್ರಮೇಣವಾಗಿ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆಯೇನೋ? ಎಂಬ ಭಾವನೆ ಉಂಟಾಗುತ್ತದೆ. ಹೀಗೆ ನಮ್ಮ ಸಂಸ್ಕೃತಿಯನ್ನು ಪ್ರವೇಶಿಸಿದ ಅನ್ಯಸಂಸ್ಕೃತಿಯನ್ನು ನಮ್ಮ ಸಂಸ್ಕೃತಿ ಯಾವ ಪ್ರತಿರೋಧವಿಲ್ಲದೆ ಸ್ವೀಕರಿಸುತ್ತದೆಯೇ? ಪ್ರತಿರೋಧ ಏರ್ಪಟ್ಟರೆ ಅದು ಯಾವ ರೀತಿಯದು? ಮತ್ತು ಪರಿಣಾಮ ಏನಾಗುತ್ತದೆ? ನಮ್ಮ ಸಂಸ್ಕೃತಿ ಸಂಪೂರ್ಣವಾಗಿ ನಾಶವಾಗುತ್ತದೆಯೇ? ಒಂದು ವೇಳೆ ಸಂಪೂರ್ಣವಾಗಿ ನಾಶವಾಗುವಂತಿದ್ದರೆ ಅದನ್ನು ಉಳಿಸಿಕೊಳ್ಳುವ ವಿಧಾನಗಳೇನು? ಎಂಬುವು ಅನ್ಯಸಂಸ್ಕೃತಿಯ ಪ್ರವೇಶದಿಂದ ನಮ್ಮಲ್ಲಿ ಹುಟ್ಟುತ್ತಿರುವ ಪ್ರಶ್ನೆಗಳು. ಈ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಬೇಕಾದರೆ ಎರಡು ಸಂಸ್ಕೃತಿಗಳ ಸಂಪೂರ್ಣ ಅನುಭವ ಹೊಂದಿದ ವ್ಯಕ್ತಿಗಳು ಅಥವಾ ಅಂತಹ ವ್ಯಕ್ತಿಗಳಿಂದ ನಿರ್ಮಾಣವಾದ ಸಾಹಿತ್ಯದಿಂದ ಮಾತ್ರ ಸಾಧ್ಯ. ಇವೆರಡು ಸಂಸ್ಕೃತಿಗಳ ನೇರ ಅನುಭವ ಪಡೆದ ಮತ್ತು ಆ ಅನುಭವಗಳನ್ನು ತಮ್ಮ ಕೃತಿಗಳಲ್ಲಿ ಅಳವಡಿಸಿದ ಪ್ರಮುಖ ವ್ಯಕ್ತಿಗಳಲ್ಲಿ ಡಾ. ಚಂದ್ರಶೇಖರ ಕಂಬಾರರು ಒಬ್ಬರು.

ಡಾ.ಚಂದ್ರಶೇಖರ ಕಂಬಾರರು ತಾಯಿಸಂಸ್ಕೃತಿಯ ಪ್ರತಿರೂಪವಾದ ಗ್ರಾಮೀಣಸಂಸ್ಕೃತಿಯಿಂದ ಬಂದವರಾಗಿದ್ದಾರೆ. ಜೊತೆಗೆ ಬ್ರಿಟಿಷ ಸರಕಾರದ ಆಡಳಿತ ಕೇಂದ್ರಗಳಲ್ಲೊಂದಾದ ಬೆಳಗಾವಿಯಲ್ಲಿ ಶಿಕ್ಷಣ ಪಡೆದಿದ್ದಾರೆ. ಇಂದು ಬೆಂಗಳೂರಿನಲ್ಲಿ ನೆಲಸಿದ್ದು ಅಲ್ಲಿಯ ನಗರ ಸಂಸ್ಕೃತಿಯ ಅನುಭವವನ್ನು ಪಡೆದಿದ್ದಾರೆ. ಹೀಗೆ ಗ್ರಾಮೀಣಸಂಸ್ಕೃತಿ, ವಸಾಹತುಸಂಸ್ಕೃತಿ, ನಗರಸಂಸ್ಕೃತಿಯ ನೇರ ಅನುಭವ ಪಡೆದ ಕಂಬಾರರು ತಮ್ಮ ಅನುಭವಗಳನ್ನು ತಮ್ಮ ಸಾಹಿತ್ಯದಲ್ಲಿ ಹಿಡಿದಿಟ್ಟಿದ್ದಾರೆ. ಆಧುನಿಕತೆಯ ಪ್ರವೇಶ ನಮ್ಮ

ಸಂಸ್ಕೃತಿಯಲ್ಲಿ ಉಂಟು ಮಾಡಿದ ತಲ್ಲಣಗಳೇ ಕಂಬಾರರ ಬಹುತೇಕ ಕಾದಂಬರಿಗಳ ವಸ್ತುವಾಗಿವೆ. ಹೊಸದಕ್ಕೆ ತೆರೆದುಕೊಳ್ಳುವಾಗ ಅನುಭವಿಸುವ ಮುಜಗರ ಅವರ ಸಾಹಿತ್ಯದಲ್ಲಿ ಸ್ಥಾನ ಪಡೆದಿದೆ. ಜೊತೆಗೆ ನಮ್ಮ ಸಂಸ್ಕೃತಿಯ ವೈರುಧ್ಯ, ಒತ್ತಡ ಯಾವ ರೀತಿಯ ಸಮಸ್ಯೆ ಹುಟ್ಟುಹಾಕಿವೆ? ಮತ್ತು ಅವನ್ನು ಪರಿಹರಿಸುವ ಬಗೆಯನ್ನು ಕಂಬಾರರ ಕೃತಿಗಳಲ್ಲಿ ಕಾಣಬಹುದಾಗಿದೆ. ತಾಯಿಸಂಸ್ಕೃತಿಯ ಸ್ವರೂಪವನ್ನು ಮತ್ತು ಅದಕ್ಕೆ ಅನ್ಯಸಂಸ್ಕೃತಿಯ ಪ್ರವೇಶದಿಂದ ಒದಗುವ ಸ್ಥಿತಿಯನ್ನು ಅರಿಯುವ ಉದ್ದೇಶ ಮತ್ತು ಕಂಬಾರರ ಕಾದಂಬರಿಗಳಲ್ಲಿ ಇಂತಹ ಅಂಶಗಳಿರುವುದರಿಂದ ಕಂಬಾರರ ಕಾದಂಬರಿಗಳನ್ನು ನಾನು ನನ್ನ ಅಧ್ಯಯನಕ್ಕಾಗಿ ಬಳಸಿಕೊಳ್ಳುತ್ತಿದ್ದೇನೆ.

ಅಧ್ಯಯನದ ವ್ಯಾಪ್ತಿ

ಒಬ್ಬ ಸಾಹಿತಿಯ ನಿಲುವು ದೃಷ್ಟಿಕೋನಗಳನ್ನು ಅರಿಯಬೇಕಾದರೆ ಅವರ ಸಮಗ್ರ ಸಾಹಿತ್ಯವನ್ನು ಅಧ್ಯಯನ ಮಾಡಲೇಬೇಕು. ಹಾಗೆಯೇ ಕಂಬಾರರ ನಿಲುವುಗಳನ್ನು ಅವರ ಮನೋಗತಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಅವರ ಸಮಗ್ರ ಸಾಹಿತ್ಯವನ್ನು ಓದಲೇಬೇಕು. ಕಂಬಾರರು ಕಾವ್ಯ, ನಾಟಕ, ಕಾದಂಬರಿ, ಚಿಂತನೆಗಳು ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಬೇಸಾಯ ಮಾಡಿ ಉತ್ತಮ ಬೆಳೆ ತೆಗೆದಿದ್ದಾರೆ. ಅವರ ಪ್ರತಿಯೊಂದು ಸಾಹಿತ್ಯ ಪ್ರಕಾರದಲ್ಲಿಯೂ ಅವರು ಪರಂಪರೆಯ ಬಗ್ಗೆ ಅಭಿಮಾನ ಮತ್ತು ಭ್ರಮೆಯ ಬೆನ್ನು ಹತ್ತಿ ಸತ್ಯವನ್ನು ನಿರ್ಲಕ್ಷಿಸುತ್ತಿರುವ ಮಾನವನ ಬಗ್ಗೆ ವಿಷಾದವನ್ನು ವ್ಯಕ್ತಪಡಿಸುತ್ತಾರೆ. ನನ್ನ ಎಂ.ಫಿಲ್ ಸಂಶೋಧನಾ ಸಮಯದ ದೃಷ್ಠಿಯಿಂದ ಅವರ ಸಮಗ್ರ ಸಾಹಿತ್ಯವನ್ನು ನನ್ನ ಅಧ್ಯಯನಕ್ಕೆ ಒಳಪಡಿಸಲು ಸಾಧ್ಯವಿಲ್ಲ. ಆದ್ದರಿಂದ ನಾನು ನನ್ನ ಅಧ್ಯಯನಕ್ಕೆ ಸೀಮಿತ ಚೌಕಟ್ಟನ್ನು ಹಾಕಿಕೊಳ್ಳಬೇಕಾಗುತ್ತದೆ. ಗದ್ಯವು ವ್ಯಕ್ತಿಯ ನಿಲುವನ್ನು ಗಟ್ಟಿಯಾಗಿ ಸ್ಪಷ್ಟಪಡಿಸುವ ಸಾಹಿತ್ಯ ಪ್ರಕಾರ. ಆದ್ದರಿಂದ ನಾನು ನನ್ನ ಅಧ್ಯಯನಕ್ಕೆ ಕಂಬಾರರ ಕಾದಂಬರಿಗಳನ್ನು ಆಯ್ಕೆಮಾಡಿಕೊಂಡಿದ್ದೇನೆ. ಇಲ್ಲಿ ಅವರ ಅಪ್ರಕಟಿತ ಕಾದಂಬರಿ 'ಅಣ್ಣತಂಗಿ'ಯನ್ನು ಹೊರತುಪಡಿಸಿ ಕೆಳಗಿನ ೪ ಕಾದಂಬರಿಗಳನ್ನು ನನ್ನ ಅಧ್ಯಯನಕ್ಕೆ ಒಳಪಡಿಸಿದ್ದೇನೆ.

೧. ಕರಿಮಾಯಿ

೨. ಜೀಕೆ. ಮಾಸ್ತರರ ಪ್ರಣಯ ಪ್ರಸಂಗ

೩. ಸಿಂಗಾರೆವ್ವ ಮತ್ತು ಅರಮನೆ

೪. ಶಿಖರಸೂರ್ಯ

ಅಧ್ಯಯನದ ವಿಧಾನ

ಇಲ್ಲಿ ನಾನು 'ತಾಯಿಸಂಸ್ಕೃತಿ'ಯ ಅಧ್ಯಯನವನ್ನು ಲಿಖಿತ ಸಾಹಿತ್ಯದ ಮೂಲಕ ಮಾಡಹೊರಟಿದ್ದೇನೆ. ಕಂಬಾರರ ಕಾದಂಬರಿಗಳು, ಅವರ ಇತರ ಕೃತಿಗಳು, ಕಂಬಾರರು ಮತ್ತು ಅವರ ಸಾಹಿತ್ಯವನ್ನು ಕುರಿತು ರಚಿತ ಕೃತಿಗಳು ಮತ್ತು ನನ್ನ ಅಧ್ಯಯನಕ್ಕೆ ಪೂರಕವಾಗುವ ಮಾಹಿತಿಯನ್ನು ಒದಗಿಸುವ ಇತರ ಕೃತಿಗಳನ್ನು ಆಕರಗಳನ್ನಾಗಿ ಬಳಸಿಕೊಂಡಿದ್ದೇನೆ.

ನನ್ನ ದೃಷ್ಟಿಯಲ್ಲಿ ತಾಯಿಸಂಸ್ಕೃತಿ ಎನ್ನುವುದು ಒಂದು ವಿವೇಕ, ಅರಿವು. ಬದುಕಿನ ಸಂಸ್ಕೃತಿಯ ಅನುಭವ. ಇಲ್ಲಿ ತಾಯಿಸಂಸ್ಕೃತಿ ಎಂದೊಡನೆ ಹೆಣ್ಣು ಮತ್ತು ಆಕೆ ಮಾಡುವ, ಹೆರುವ, ಹೊರುವ, ಪೊರೆಯುವ ಕಾರ್ಯಗಳಿಗೆ ಮಾತ್ರ ಸೀಮಿತಗೊಂಡದ್ದು ಎಂದು ಭಾವಿಸಬಾರದು. ಇಲ್ಲಿ ತಾಯಿಸಂಸ್ಕೃತಿ ಎಂಬುದು ಒಂದು ಹೆಣ್ಣು ಅಥವಾ ಒಂದು ಕುಟುಂಬಕ್ಕೆ ಸೀಮಿತವಾಗಿರದೆ ಒಂದು ಸಮುದಾಯದ ಅಖಂಡ ಸಂಸ್ಕೃತಿಯ ಪ್ರತೀಕವಾಗಿದೆ. ಒಂದು ಸಮುದಾಯದ ಸಂಸ್ಕೃತಿಯೊಳಗಡೆ ಅನ್ಯಸಂಸ್ಕೃತಿಯು ಪ್ರವೇಶಿಸಿದಾಗ ಆ ಸಂಸ್ಕೃತಿಯನ್ನು ಮೂಲಸಂಸ್ಕೃತಿ ಹೇಗೆ ಸ್ವೀಕರಿಸುತ್ತದೆ? ಅಥವಾ ಘರ್ಷಣೆಗಿಳಿಯುತ್ತದೆಯೋ? ಘರ್ಷಣೆಗಿಳಿದರೆ ಅದರ ಪರಿಣಾಮಗಳೇನು? ಎಂಬುದನ್ನು ಇಲ್ಲಿ ನೋಡಲಾಗಿದೆ. ಇಲ್ಲಿ ಒಂದು ಸಂಸ್ಕೃತಿ ಹೆಚ್ಚು ಒಂದು ಸಂಸ್ಕೃತಿ ಕಡಿಮೆ ಎಂದೋ, ಅಥವಾ ಒಂದು ಸಂಸ್ಕೃತಿಯಲ್ಲಿರುವ ಪ್ರತಿಯೊಂದು ಒಳ್ಳೆಯದು, ಮತ್ತೊಂದರಲ್ಲಿರುವುದು ಕೆಟ್ಟದ್ದು ಎಂದು ಭಾವಿಸದೆ ಎರಡರಲ್ಲಿರುವ ಗುಣದೋಷಗಳನ್ನು ವಿವೇಚಿಸುವ ಪ್ರಾಮಾಣಿಕ ಪ್ರಯತ್ನವನ್ನು ನಾನಿಲ್ಲಿ ಮಾಡಿದ್ದೇನೆ. ಅಧ್ಯಯನದ ಅನುಕೂಲತೆಯ ದೃಷ್ಟಿಯಿಂದ ನಾನು ಕೆಳಗಿನಂತೆ ೬ ವಿಭಾಗಗಳಲ್ಲಿ ವಿಷಯವನ್ನು ವಿಂಗಡಿಸಿ ಆ ಮೂಲಕ ಅಧ್ಯಯನ ಮಾಡಿದ್ದೇನೆ.

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ

ಈ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಅಧ್ಯಯನಕ್ಕಾಗಿ ಆರಿಸಿಕೊಳ್ಳುವ ವಿಧಾನವನ್ನು ಕುರಿತು ಹೇಳಿದ್ದೇನೆ.

ಅಧ್ಯಾಯ ೨

ಅಧ್ಯಯನದ ಸಮೀಕ್ಷೆ

ಇದುವರೆಗೆ ಕಂಬಾರರ ಕಾದಂಬರಿಗಳ ಬಗ್ಗೆ ಅನೇಕ ಚರ್ಚೆ ವಿಮರ್ಶೆಗಳು ಬಂದಿವೆ. ಅವನ್ನೆಲ್ಲ ಈ ಅಧ್ಯಾಯದಲ್ಲಿ ಕ್ರೋಢೀಕರಿಸಿ ಸಮೀಕ್ಷಿಸುವ ಪ್ರಯತ್ನವನ್ನು ನಾನಿಲ್ಲಿ ಮಾಡಿದ್ದೇನೆ.

ಅಧ್ಯಾಯ ೩

ಕಂಬಾರರ ಸಾಂಸ್ಕೃತಿಕ ಪರಿಸರ

ಮನುಷ್ಯ ವ್ಯಕ್ತಿತ್ವ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸುವುದು ಆತನ ಪರಿಸರ. ಇದಕ್ಕೆ ಕಂಬಾರರು ಹೊರತಲ್ಲ. ಕಂಬಾರರಂತಹ ಪ್ರತಿಭಾವಂತ ಸಮೃದ್ಧ, ಸುಸಂಸ್ಕೃತ ವ್ಯಕ್ತಿಯ ನಿರ್ಮಾಣಕ್ಕೆ ಕಾರಣವಾದ ಸಾಂಸ್ಕೃತಿಕ ಪರಿಸರ ಎಂತಹದ್ದು? ಮತ್ತು ಅದು ಕಂಬಾರರ ಸಾಹಿತ್ಯದಲ್ಲಿ ಯಾವ ರೀತಿ ಪಾತ್ರ ನಿರ್ವಹಿಸಿದೆ? ಎಂಬುದನ್ನು ~~ಈ ಅಧ್ಯಾಯದ~~ಲ್ಲಿ ನಿರೂಪಿಸಿದ್ದೇನೆ.

ಅಧ್ಯಾಯ ೪

ಕಂಬಾರರ ಕಾದಂಬರಿಗಳು

ನನ್ನ ಅಧ್ಯಯನಕ್ಕೆ ಆಯ್ಕೆಮಾಡಿಕೊಂಡ ಕಂಬಾರರ ೪ ಕಾದಂಬರಿಗಳ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಡುವ ಪ್ರಯತ್ನವನ್ನು ನಾನು ಈ ಅಧ್ಯಾಯದಲ್ಲಿ ಮಾಡಿದ್ದೇನೆ.

ಅಧ್ಯಾಯ ೫

ಕಂಬಾರರ ಕಾದಂಬರಿಗಳಲ್ಲಿ ತಾಯ್ತನದ ನೆಲೆಗಳು

ಕಂಬಾರರ ಕಾದಂಬರಿಗಳಲ್ಲಿ ನಿರೂಪಿತವಾದ ತಾಯಿಸಂಸ್ಕೃತಿಯ ಸ್ವರೂಪ, ಅದರ ಗುಣದೋಷ, ಅನ್ಯಸಂಸ್ಕೃತಿಯೊಂದಿಗೆ ಅದರ ವರ್ತನೆ ಮತ್ತು ಅದು ಯಾವ ನೆಲೆಗಳಲ್ಲಿ ಹರಡಿಕೊಂಡಿದೆ ಎಂಬುದನ್ನು ಈ ಅಧ್ಯಾಯದಲ್ಲಿ ಚರ್ಚಿಸಿದ್ದೇನೆ. ಇಲ್ಲಿ ತಾಯ್ತನದ ನೆಲೆಗಳನ್ನು ೩ ರೀತಿಯಲ್ಲಿ ವರ್ಗೀಕರಿಸಿ ಅಲ್ಲಿ ತಾಯ್ತನ ಯಾವ ರೀತಿ ಬಿಂಬಿತವಾಗಿದೆ ಎಂದು ನೋಡಿದ್ದೇನೆ.

೫.೧. ದೈವಿ ನೆಲೆಗಳು : ತಾಯಿ ಸಂಸ್ಕೃತಿಯಲ್ಲಿ ದೇವರ ಸ್ಥಾನ, ಅವರ ನಂಬಿಕೆ, ಆಚರಣೆಗಳು ಮುಂತಾದವುಗಳ ಬಗ್ಗೆ ವಿವರಿಸಿದ್ದೇನೆ.

೫.೨. ಪ್ರಾಕೃತಿಕ ನೆಲೆಗಳು : ಪ್ರಕೃತಿ ಈ ಸಂಸ್ಕೃತಿಯಲ್ಲಿ ಹೇಗೆ ತಾಯಿಸ್ಥಾನ ದೊರಕಿಸಿಕೊಂಡಿದೆ? ಪ್ರಕೃತಿ ಜೊತೆಗಿನ ಅವರ ಸಂಬಂಧಿ ಯಾವ ತರಹದ್ದು ಎಂಬುದನ್ನು ಚರ್ಚಿಸಿದ್ದೇನೆ.

೫.೩. ಮಾನವೀಯ ನೆಲೆಗಳು : ಇಲ್ಲಿ ಮಾನವೀಯ ಗುಣಗಳು, ಸಮಾಜದ ರೀತಿ–ನೀತಿಗಳ ಬಗ್ಗೆ ವಿವರಿಸಲಾಗಿದೆ.

ಅಧ್ಯಾಯ ೬

ಅಧ್ಯಯನದ ಫಲಿತಗಳು

ಈ ಅಧ್ಯಾಯದಲ್ಲಿ ಇದುವರೆಗಿನ ನನ್ನ ಅಧ್ಯಯನ ಮತ್ತು ಚರ್ಚೆಗಳಿಂದ ಬಂದ ಫಲಿತಗಳನ್ನು ಕುರಿತು ಹೇಳಿದ್ದೇನೆ.

* * *

ಅಧ್ಯಾಯ ೨

ಅಧ್ಯಯನದ ಸಮೀಕ್ಷೆ

ಒಬ್ಬ ಮೇರು ಸಾಹಿತಿ ಅಥವಾ ಅವನ ಸಾಹಿತ್ಯವನ್ನು ಕುರಿತು ಸಾಹಿತ್ಯವಲಯದಲ್ಲಿ ಚರ್ಚೆ, ವಿಮರ್ಶೆಗಳು ನಡೆಯುವುದು ಸಹಜ. ಇದು ಅವರ ಸಾಹಿತ್ಯವನ್ನು ಒರೆಗಲ್ಲಿಗೆ ಹಚ್ಚುವುದರ ಜೊತೆಗೆ ಅವರ ಸಾಹಿತ್ಯದ ಬೆಳವಣಿಗೆಗೆ ಪ್ರೋತ್ಸಾಹವನ್ನು ನೀಡುತ್ತದೆ. ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ ಕಂಬಾರರು ಮತ್ತು ಅವರ ಎಲ್ಲ ಬಗೆಯ ಸಾಹಿತ್ಯ ಪ್ರಕಾರಗಳನ್ನು ಕುರಿತು ಚರ್ಚೆಗಳು ವಿಮರ್ಶೆಗಳು ನಡೆದಿವೆ. ಕಾದಂಬರಿಗಳ ಕುರಿತು ವಿಫುಲವಾದ ಚರ್ಚೆಗಳು ಬಂದಿದ್ದು ಇದುವರೆಗಿನ ಚರ್ಚೆಗಳ ಅಭಿಪ್ರಾಯಗಳು ಕೆಳಗಿನಂತಿವೆ.

೧. ಕರಿಮಾಯಿ

ಗ್ರಾಮೀಣ ಪರಿಸರ ಮತ್ತು ನಗರೀಕರಣದ ಪ್ರವೇಶದಿಂದ ಅಲ್ಲಿ ಉಂಟಾಗುವ ತಲ್ಲಣಗಳನ್ನು ಚಿತ್ರಿಸುವ ಕರಿಮಾಯಿ ಚಂದ್ರಶೇಖರ ಕಂಬಾರರ ದ್ವಿತೀಯ ಕಾದಂಬರಿ. ಇದು ಚಲನಚಿತ್ರ ಸಹ ಆಗಿದೆ. ಈ ಕೃತಿಯ ಬಗ್ಗೆ ಇದುವರೆಗೂ ಅನೇಕ ಅಧ್ಯಯನಗಳು ನಡೆದಿದ್ದು, ಆ ಅಧ್ಯಯನಗಳ ಅಭಿಪ್ರಾಯಗಳನ್ನು ಕೆಳಗೆ ಕ್ರೂಢೀಕರಿಸಲಾಗಿದೆ.

'ಶಿವಾಪುರ ಕಂಬಾರ ನಮಸ್ಕಾರ' ಕೃತಿಯ 'ಕರಿಮಾಯಿ ಮರು ಓದು' ಎಂಬ ಲೇಖನದಲ್ಲಿ **ಟಿ.ಪಿ.ಅಶೋಕ** ಅವರು "ಕಾದಂಬರಿಯು ವಸಾಹತುಶಾಹಿಯ ಕ್ರೌರ್ಯವನ್ನು, ಸ್ವರಾಜ್ಯದ ಹಂಬಲಿಕೆಯನ್ನು ಧ್ವನಿಸುತ್ತದೆ" (೨೦೦೪-ಪು-೧೫೮) ಎಂದು ಹೇಳುತ್ತಾರೆ. ಹಳೆಯ ವ್ಯವಸ್ಥೆ ಸುಂದರವಾಗಿದ್ದು, ಹೊಸ ವ್ಯವಸ್ಥೆ ಭಯಂಕರವಾಗಿದ್ದರೂ ಚಲನೆ ಅನಿವಾರ್ಯ ಎಂದು ಹೇಳುತ್ತಾ ಕಾದಂಬರಿಯು ಹಳೆಯದರ ಕಡೆಗೆ ವಾಲುತ್ತದೆ ಎಂಬ ಅಭಿಪ್ರಾಯವನ್ನು ಕರಿಮಾಯಿ ಕಾದಂಬರಿ ಕುರಿತು ಅವರು ವ್ಯಕ್ತಪಡಿಸುತ್ತಾರೆ.

'ಚಂದ್ರಶೇಖರ ಕಂಬಾರ' ಕೃತಿಯ 'ಕಾದಂಬರಿಗಳು' ಎಂಬ ಭಾಗದಲ್ಲಿ **ಡಾ.ಬಸವರಾಜ ಮಲಶೆಟ್ಟಿ** ಅವರು "ಒಂದು ಅಖಂಡ ಸಾಂಸ್ಕೃತಿಕ ಘಟಕವಾದ ಶಿವಾಪುರ ಆಧುನಿಕತೆಗೆ ಸ್ಪಂದಿಸಿದ ಪರಿಯನ್ನು ಕರಿಮಾಯಿ ವಿವರಿಸುತ್ತದೆ" (೨೦೦೬, ಪುಟ- ೪೯) ಎಂದು ಹೇಳುತ್ತಾರೆ. ಭಾರತೀಯ ಮನೋವಿಜ್ಞಾನ ಮತ್ತು ಸಮಾಜಶಾಸ್ತ್ರವನ್ನು ಅರಿಯಲು ಕರಿಮಾಯಿ ಕಾದಂಬರಿ ಸೂಕ್ತ ಆಕರವಾಗಿ ನಿಲ್ಲುತ್ತದೆ ಎಂಬ ನಿಲುವನ್ನು ಮಲಶೆಟ್ಟರು ವ್ಯಕ್ತಪಡಿಸುತ್ತಾರೆ.

'ಶಿವಾಪುರ ಕಂಬಾರ ನಮಸ್ಕಾರ' ಕೃತಿಯ 'ಕರಿಮಾಯಿ ಗ್ರಾಮೀಣ ಜೀವನದ ನಾಟಕೀಯ ಅಂಶಗಳು' ಎಂಬ ಲೇಖನದಲ್ಲಿ **ಶಾಂತಿನಾಥ ದೇಸಾಯಿ** ಅವರು ಮಾಯವಾಗುತ್ತಿರುವ ಗ್ರಾಮೀಣ ಸಂಸ್ಕೃತಿಯ ಬಗೆಗೆ ಕಂಬಾರರಿಗೆ ಅತ್ಯಂತ ಕಳಕಳಿ. ಈ ಸಂಸ್ಕೃತಿಯನ್ನು ಪಟ್ಟಣದ ಬೇರಿಲ್ಲದ ಸಂಸ್ಕೃತಿ ನಾಶಗೊಳಿಸಲಿದ್ದು, ಅದರ ಬಗ್ಗೆ ಕಂಬಾರರಿಗೆ ಸಂಶಯ, ಭಯ, ದ್ವೇಷಗಳಿವೆ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾ "ಉದ್ದೇಶದ ದೃಷ್ಟಿಯಿಂದ ಕರಿಮಾಯಿ ಪ್ರತಿಗಾಮಿ ಎನ್ನಬಹುದಾದ ಕಾದಂಬರಿ" (೨೦೦೪, ಪುಟ-೧೩೦) ಎಂದು ಹೇಳುತ್ತಾರೆ.

'ಸಿರಿಸಂಪಿಗೆ ಕಂಬಾರ ೬೦' ಕೃತಿಯ 'ಕರಿಮಾಯಿ' ಎಂಬ ಲೇಖನದಲ್ಲಿ ಸ್ವಾತಂತ್ರ್ಯಪೂರ್ವದ ಗ್ರಾಮಗಳ ಸ್ಥಿತಿ ಮತ್ತು ಅವುಗಳ ಮೇಲೆ ನಗರೀಕರಣ ಬೀರುತ್ತಿರುವ ಪ್ರಭಾವವನ್ನು ಚಿತ್ರಿಸುವ ಕಾದಂಬರಿ ಎಂಬ ಅಭಿಪ್ರಾಯವನ್ನು **ನಾ.ಡಿಸೋಜ** ಅವರು ವ್ಯಕ್ತಪಡಿಸುತ್ತಾರೆ. "ಕಂಬಾರರು ಪ್ರಜಾಪ್ರಭುತ್ವಕ್ಕೆ ಹೇಳಿ ಮಾಡಿಸದ ವಿಚಾರವನ್ನು ಬೆಂಬಲಿಸುತ್ತಾರೆಯೋ ಏನೋ ಎನಿಸುತ್ತದೆ" (೧೯೯೩, ಪು-೧೯೧) ಎಂದು ಹೇಳುವ ಮೂಲಕ ಕಂಬಾರರು ಪ್ರಜಾಪ್ರಭುತ್ವ ವಿರುದ್ಧ ವಿಷಯಗಳಿಗೆ ಬೆಂಬಲ ನೀಡಿ ಹಳೆಯ ಪದ್ಧತಿಗಳ ಬಗ್ಗೆ ಅವಿಶ್ವಾಸ ಬರುವಂತೆ ಮಾಡುತ್ತಾರೆ ಎಂಬ ನಿರ್ಧಾರವನ್ನು ವ್ಯಕ್ತಪಡಿಸುತ್ತಾರೆ.

೨. ಸಿಂಗಾರೆವ್ವ ಮತ್ತು ಅರಮನೆ

ನಮ್ಮ ಸಮಾಜ ವ್ಯವಸ್ಥೆಯ ಒಂದು ಭಾಗವಾದ ಊಳಿಗಮಾನ್ಯ ಪದ್ಧತಿಯ ದಬ್ಬಾಳಿಕೆ ಮತ್ತು ಅಲ್ಲಿರುವ ನಿರ್ಬಲತೆಯನ್ನು ತಿಳಿಸುವ ಕಾದಂಬರಿ. ಚಲನಚಿತ್ರವಾಗಿ ಪ್ರಸಿದ್ಧತೆ ಪಡೆದಿದೆ. ಈ ಕೃತಿಯ ಬಗ್ಗೆ ಇದುವರೆಗೂ ಅನೇಕ ಅಧ್ಯಯನಗಳು ನಡೆದಿದ್ದು, ಆ ಅಧ್ಯಯನಗಳ ಅಭಿಪ್ರಾಯಗಳನ್ನು ಕೆಳಗೆ ಕ್ರೋಢಿಕರಿಸಲಾಗಿದೆ.

'ಬೇರು ಕಾಂಡ ಚಿಗುರು' ಕೃತಿಯ 'ಸಿಂಗಾರೆವ್ವ ಮತ್ತು ಅರಮನೆ ಎರಡು ಟಿಪ್ಪಣಿಗಳು' ಎಂಬ ಲೇಖನದಲ್ಲಿ **ಕೆ.ವಿ.ನಾರಾಯಣ** ಅವರು ಗಂಡು ಮತ್ತು ಹೆಣ್ಣು ಜಗತ್ತುಗಳ ಮುಖಾಮುಖಿಯನ್ನು ತಿಳಿಸುತ್ತದೆ ಎನ್ನುತ್ತಾ "ಗಂಡು ಜಗತ್ತಿನ ಕ್ರೌರ್ಯ ತುಂಬಿದ ವಿರಳತನವನ್ನು ಗುರುತಿಸುವುದು" (೧೯೯೭, ಪುಟ-೩೫೩) ಎಂದು 'ಸಿಂಗಾರೆವ್ವ ಮತ್ತು ಅರಮನೆ' ಕಾದಂಬರಿಯನ್ನು ಕುರಿತು ಹೇಳುತ್ತಾರೆ.

'ಶಿವಾಪುರ ಕಂಬಾರ ನಮಸ್ಕಾರ' ಕೃತಿಯ 'ಇಂಗ್ಲೀಷನಲ್ಲಿ ಸಿಂಗಾರೆವ್ವ ಮತ್ತು ಅರಮನೆ' ಎಂಬ ಲೇಖನದಲ್ಲಿ **ಜಿ.ಬಿ.ಜೋಷಿ** ಅವರು "ಸಿಂಗಾರೆವ್ವ ಕಥೆ ಭಾರತೀಯ ಮತ್ತು ಜಾಗತಿಕ ಸಾಹಿತ್ಯದಲ್ಲಿಯ ಒಂದು ಆಶಯವು ಬೇರೆ ಬೇರೆ ವಿವರಗಳಲ್ಲಿ ಬೇರೆ ಬೇರೆ ಸನ್ನಿವೇಶಗಳಲ್ಲಿ ಪುನರುಚ್ಚರಿಸುತ್ತದೆ. ಅದು ಪುರುಷತ್ವವುಳ್ಳ ಗಂಡಿನ ಬಳಿಗೆ ಹೆಣ್ಣಿನ ಗಮನ" (೨೦೦೪, ಪುಟ-೧೮೭) ಎಂದು ಹೇಳುತ್ತಾ ಭಾರತೀಯ ಸಂಪ್ರದಾಯದಲ್ಲಿ ಗಂಡು ಹೆಣ್ಣು ಉಸಿರುಗಟ್ಟುವ ವಾತಾವರಣದೊಳಗಡೆ ಸಿಕ್ಕು ಅದರಿಂದ ಹೊರಬರಲು ಯತ್ನಿಸಿದ್ದರೂ ಅದರಿಂದ ಬರಲಾಗದ ಪರಿಸ್ಥಿತಿಯನ್ನು ಎದುರಿಸುವ ಸನ್ನಿವೇಶ ಕಟ್ಟಿಕೊಡತ್ತದೆಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

'ವಿಮರ್ಶೆಯ ಸವಾಲುಗಳು' ಕೃತಿಯ 'ಸಿಂಗಾರೆವ್ವ ಮತ್ತು ಅರಮನೆ ತಾತ್ವಿಕ ಅಂಶಗಳು' ಎಂಬ ಲೇಖನದಲ್ಲಿ **ಆರ್ಕೆ ಮಣಿಪಾಲ** ಅವರು ಕಾದಂಬರಿ ಕುರಿತು, ಸಾಮಾಜಿಕ ವ್ಯವಸ್ಥೆಯು ಬಿರುಕುಬಿಟ್ಟರೆ ಆ ವ್ಯವಸ್ಥೆ ವಿನಾಶದತ್ತ ಸಾಗುತ್ತದೆ. ಆ ವ್ಯವಸ್ಥೆಯ ವಿನಾಶಗಳನ್ನು ಹೇಳುವವ ತನ್ನ ಕಾರ್ಯದಲ್ಲಿ

ಯಶಸ್ವಿಯಾದರು ಅಲ್ಲಿ ಅವನಿಗೆ ಬದುಕಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. "ಸಸ್ಯ ಜಗತ್ತಿನ ವಿಕಾಸ ಮತ್ತು ವಿನಾಶದ ಚಕ್ರೀಯ ವರ್ತನೆಗೆ ಸಂವಾದಿಯಾಗಿ ಕ್ರಾಂತಿ ಕೂಡಾ ಮತ್ತೆ ಮತ್ತೆ ಸಾಯಬೇಕಾದ ಅನಿವಾರ್ಯ ಕಂಬಾರರು ಗುರುತಿಸುವ ಕ್ರಾಂತಿಯ ಮಾದರಿಯಾಗಿದೆ" (೨೦೦೬, ಪುಟ-೧೧೪) ಎಂದು ಹೇಳುತ್ತಾರೆ.

'ರಂಗಸಂಪನ್ನರು ಚಂದ್ರಶೇಖರ ಕಂಬಾರ' ಕೃತಿಯಲ್ಲಿ ಒಂದು ವ್ಯವಸ್ಥೆಯ ನಾಶಕ್ಕೆ ಆ ವ್ಯವಸ್ಥೆಯೊಳಗಿರುವ ಸಮಸ್ಯೆಗಳು ಕಾರಣವಾಗುವಂತೆ ಈ ಕಾದಂಬರಿ ಚಿತ್ರಿಸಿವೆ ಎಂಬ ಅಭಿಪ್ರಾಯವನ್ನು **ಎಚ್.ನಾಗವೇಣಿ** ಅವರು 'ಸಿಂಗಾರೆವ್ವ ಮತ್ತು ಅರಮನೆ' ಕುರಿತು ವ್ಯಕ್ತಪಡಿಸುತ್ತಾರೆ. "ಪುರುಷ ಜಗತ್ತಿನ ಕ್ರೌರ್ಯದ ಜೊತೆಗೆ ಅತೃಪ್ತ ಹೆಣ್ಣೊಬ್ಬಳ ಒಳತೋಟ ಮತ್ತು ಉಳಿಗಮಾನ್ಯ ವ್ಯವಸ್ಥೆಯ ಮುಖಾಮುಖಿಯಾದ ಅರಮನೆಗಳಿಗಿರುವ ಸ್ಥಿತಿಯನ್ನು ಕಂಬಾರರು ಈ ಕಾದಂಬರಿಯಲ್ಲಿ ಬಿಚ್ಚಿಟ್ಟಿದ್ದಾರೆ." (೨೦೦೪, ಪುಟ-೭೩) ಎಂದು ಹೇಳುತ್ತಾರೆ.

'ಶಿವಾಪುರ ಕಂಬಾರ ನಮಸ್ಕಾರ' ಕೃತಿಯ 'ಸಿಂಗಾರೆವ್ವ ಮತ್ತು ಅರಮನೆ' ಲೇಖನದಲ್ಲಿ **ಕಮಲಾ ಹಂಪನಾ** ಅವರು ಸಿಂಗಾರೆವ್ವನನ್ನು ಕುರಿತು 'ದುರಂತನಾಯಕಿ' ಎಂದು ಹೇಳಿ ಒಳ್ಳೆತನದ ಮೇಲಿನ ಆಕ್ರಮಣ ಅತಿಯಾದಾಗ ಅದಕ್ಕೆ ಪ್ರತಿಭಟಿಸುವ ಛಲ ಬರುತ್ತದೆ ಎಂಬ ಅಭಿಪ್ರಾಯವನ್ನು ಸಿಂಗಾರೆವ್ವ ಮತ್ತು ಅರಮನೆ ಕಾದಂಬರಿ ಕುರಿತು ವ್ಯಕ್ತಪಡಿಸುತ್ತಾರೆ. (೨೦೦೪, ಪುಟ-೧೩೫-೧೩೯)

'ಶಿವಾಪುರ ಕಂಬಾರ ನಮಸ್ಕಾರ' ಕೃತಿಯ 'ಕಂಬಾರರ ಸಿಂಗಾರೆವ್ವ ಮತ್ತು ಅರಮನೆ' ಎಂಬ ಲೇಖನದಲ್ಲಿ **ಜಯಪ್ರಕಾಶ ಮಾವಿನಕುಳಿ** ಅವರು, ಯಾವ ಪಾಪ ಮಾಡದ ಸಿಂಗಾರೆವ್ವ ಎಲ್ಲರ ಮೋಸಕ್ಕೆ ಬಲಿಯಾಗಿ ದುರಂತ ನಾಯಕಿಯಾಗುತ್ತಾಳೆ ಎಂಬ ಅಭಿಪ್ರಾಯವನ್ನು ಸಿಂಗಾರೆವ್ವ ಪಾತ್ರ ಕುರಿತು ಹೇಳುತ್ತಾರೆ. (೨೦೦೪, ಪುಟ.೧೩೧-೧೩೪)

೩. ಜೀಕೆ.ಮಾಸ್ತರರ ಪ್ರಣಯ ಪ್ರಸಂಗ

ಕಥಾ ರೂಪದ ಕಾದಂಬರಿ. ಒಬ್ಬ ಸುಸಂಸ್ಕೃತ ವ್ಯಕ್ತಿ ಮನಸ್ಸಿನ ಹತೋಟಿಯನ್ನು ಕಳೆದುಕೊಂಡಾಗ ಯಾವ ರೀತಿ ದುರಂತದ ಹಾದಿ ಹಿಡಿಯುತ್ತಾನೆ ಎಂಬುದನ್ನು ಚಿತ್ರಿಸುತ್ತದೆ. ಇದು ಕಿರುಚಿತ್ರವಾಗಿದೆ. ಈ ಕೃತಿಯ ಬಗ್ಗೆ ಇದುವರೆಗೂ ಅನೇಕ ಅಧ್ಯಯನಗಳು ನಡೆದಿದ್ದು, ಆ ಅಧ್ಯಯನಗಳ ಅಭಿಪ್ರಾಯಗಳನ್ನು ಕೆಳಗೆ ಕ್ರೋಢಿಕರಿಸಲಾಗಿದೆ.

ಉದ್ಯಾವರ ಮಾಧವಾಚಾರ್ಯ ಅವರು 'ಶಿವಾಪುರ ಕಂಬಾರ ನಮಸ್ಕಾರ' ಕೃತಿಯ 'ಜಿ.ಕೆ.ಮಾಸ್ತರರ ಪ್ರಣಯ ಪ್ರಸಂಗ' ಲೇಖನದಲ್ಲಿ **ಉದ್ಯಾವರ ಮಾಧವಾಚಾರ್ಯ** ಅವರು "ಒಬ್ಬ ವ್ಯಕ್ತಿತ್ವದ ಸಾಮಾಜಿಕ ಹಾಗು ಆಂತರಿಕ ಮುಖಗಳನ್ನು ಸಂಬಂಧಗಳ ಸುಳಿಯಲ್ಲಿ ಬೆತ್ತಲುಗೊಳಿಸಿ ಅಸಲು ಮನುಷ್ಯತ್ವವನ್ನು ಬೆಳಕಿಗೆ ತರುವ ಉದ್ದೇಶ ಈ ಕಾದಂಬರಿ" (೨೦೦೪, ಪುಟ-೧೪೦) ಎಂದು ಹೇಳುತ್ತಾ ಆದರ್ಶದ ತೀರ್ಮ ಕೊಡುವಲ್ಲಿ ಮಾತ್ರ ಈ ಕಾದಂಬರಿ ಸೋಲುತ್ತದೆಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ.

ಡಾ.ಎಚ್.ನಾಗವೇಣಿ ಅವರು ರಂಗಸಂಪನ್ನರು – ಚಂದ್ರಶೇಖರ ಕಂಬಾರ' ಕೃತಿಯಲ್ಲಿ ಜಿ.ಕೆ.ಮಾಸ್ತರರು ಹೆಣ್ಣಿನ ಪ್ರೇಮಕ್ಕೆ ಮನಸ್ಸಿನ ಕಡಿವಾಣದ ಹತೋಟಿ ಕಳೆದುಕೊಳ್ಳುವ ಅವರ ಪರಿವರ್ತನೆಯಿಂದ ಅವರ ಮೂಲಗುಣಗಳಾದ ಪ್ರೀತಿ, ಅಂತಃಕರಣ, ಕ್ಷಮೆ, ಉದಾರತೆ ಮತ್ತೆ ತೇಲಿ ಬರುವುದಾಗಿ ಚಿತ್ರಿಸಿರುವ ಕಾದಂಬರಿ ಎಂದು ಅಭಿಪ್ರಾಯಪಡುತ್ತಾರೆ. (೨೦೦೪, ಪುಟ-೭೪)

೪. ಶಿಖರಸೂರ್ಯ

ಕಂಬಾರರ ಇತ್ತೀಚಿನ ಮತ್ತು ಹೆಚ್ಚು ಚರ್ಚೆಗೆ ಒಳಗಾದ ಕಾದಂಬರಿ. ಕಂಬಾರರ ಈ ಕಾದಂಬರಿಯನ್ನು ಕುರಿತು ದಿನಪತ್ರಿಕೆ ಮತ್ತು ಮಾಸಪತ್ರಿಕೆಗಳಲ್ಲಿ ಅನೇಕ ಚರ್ಚೆಗಳು ವಿಮರ್ಶೆಗಳು ಬಂದಿವೆ. ಈ ಕೃತಿಯ ಬಗ್ಗೆ ಇದುವರೆಗೂ ಅನೇಕ ಅಧ್ಯಯನಗಳು ನಡೆದಿದ್ದು, ಆ ಅಧ್ಯಯನಗಳ ಅಭಿಪ್ರಾಯಗಳನ್ನು ಕೆಳಗೆ ಕ್ರೂಢಿಕರಿಸಲಾಗಿದೆ.

'ಪ್ರಜಾವಾಣಿ' ದಿನಪತ್ರಿಕೆಯ 'ಸಾಪ್ತಾಹಿಕ ಪುರವಣಿಯ ಸಾಹಿತ್ಯ ಸಂವಾದ' ಎಂಬ ಅಂಕಣದ 'ಜಾಗತೀಕರಣದ ಎದುರು ದೇಶಿ ಅಂತಸತ್ವ: 'ಎಂಬ ಲೇಖನದಲ್ಲಿ **ಡಾ.ಕವಿತಾ ರೈ** ಅವರು ಕಾದಂಬರಿ ಕುರಿತು ಒಳ್ಳೆತನ, ಶುದ್ಧಚಾರಿತ್ರ್ಯ, ಪಾರದರ್ಶಕ ಜೀವನ ಮೌಲ್ಯ ಮತ್ತು ಸ್ವಾರ್ಥ ಲೋಲುಪತೆ ದುಷ್ಟತನಗಳು ಮುಖಾಮುಖಿಯಾಗುತ್ತವೆ ಎಂದು ಅಭಿಪ್ರಾಯಪಡುತ್ತಾ "ಅಧಿಕಾರವನ್ನು, ನೆಲವನ್ನು, ಹೆಣ್ಣನ್ನು ಉಪಭೋಗದ ಹಿನ್ನೆಲೆಯಲ್ಲಿ ಬಯಸುವ ಶಿಖರಸೂರ್ಯನ ವ್ಯಕ್ತಿತ್ವವೇ ಇಲ್ಲಿ ಬರುವ ಹೆಣ್ಣುಗಳ ಮುಂದೆ ಅರ್ಥಹೀನವಾಗಿ ಕಾಣಿಸುತ್ತದೆ" ಎಂದು ಹೇಳುತ್ತಾರೆ. (೯.೯.೨೦೦೭)

ಪ್ರಜಾವಾಣಿ ಸಾಪ್ತಾಹಿಕ ಪುರವಣಿಯ ಸಾಹಿತ್ಯ ಸಂವಾದ ಅಂಕಣದ 'ಬೌದ್ಧಿಕ ಅಹಂಕಾರದ ಅನ್ವೇಷಣೆ' ಎಂಬ ಲೇಖನದಲ್ಲಿ **ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ** ಅವರು 'ಶಿಖರಸೂರ್ಯ' ಕಾದಂಬರಿ ಕುರಿತು ಮಾತೃಸಂಸ್ಕೃತಿ ಇಲ್ಲಿಯ ಪರಿಸರದಲ್ಲಿ ಪೋಷಿಸುವ, ಸಲಹುವ, ರಕ್ಷಿಸುವ ಕಾರ್ಯ ಮಾಡುತ್ತದೆ. ವಿದ್ಯೆಯನ್ನು ವಿನಯದಿಂದ ಬಳಸದೆ ಅಹಂಕಾರವನ್ನು ಮೈಗೂಡಿಸಿಕೊಂಡು ರಕ್ಷಿಸುವ ಸಂಸ್ಕೃತಿಯ ವಿರುದ್ಧ ನಡೆದರೆ ವಿನಾಶ ಖಂಡಿತ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಪ್ರಜಾವಾಣಿ ಸಾಪ್ತಾಹಿಕ ಪುರವಣಿಯ 'ಸಾಹಿತ್ಯ ಸಂವಾದ' ಅಂಕಣದ 'ಹೊಸಕಾಲದ ಚೈತನ್ಯ ಕಥನ' ಎಂಬ ಲೇಖನದಲ್ಲಿ **ಎಲ್.ಎಸ್.ಮುಕುಂದರಾವ್** ಅವರು "ಚಿನ್ನ ಆರಾಧಕರಿಗೆ ಪಿತೃಸಂಸ್ಕೃತಿ ದೊಡ್ಡದಾಗಿ ಕಾಣುತ್ತದೆ. ಅವರಿಗೆ ತಂದೆ ದೊಡ್ಡವನು ಅವರು ಪ್ರೇಮ ವಿರೋಧಿಗಳು. ಪ್ರೀತಿ ಬಲ್ಲವರಿಗೆ ಮಾತ್ರ ತಾಯಿ ದೊಡ್ಡವಳು ಹೆತ್ತವರೆಲ್ಲ ತಾಯಿಯಂತೆ ಪುಣ್ಯಕೋಟಿಯಂತೆ ಕಾಣುತ್ತಾರೆ" (೨೩.೯.೨೦೦೭) ಎಂದು ಹೇಳುತ್ತಾರೆ. ಇವರ ದೃಷ್ಟಿಯಲ್ಲಿ ಸ್ವಯಂನಿರ್ಮಿತರು ತಾವೇ ಅಖಂಡವಾಗಿ ಸಂಸ್ಕೃತಿಯನ್ನು ವಿರೂಪಗೊಳಿಸುತ್ತಾರೆ ಎಂಬ ನಿಲುವಿದೆ.

ಪ್ರಜಾವಾಣಿ 'ಸಾಪ್ತಾಹಿಕ ಪುರವಣಿ'ಯ ಸಾಹಿತ್ಯಸಂವಾದ ಅಂಕಣದ 'ನಿಬ್ಬೆರಗಾಗಿಸುವ ಕಾವ್ಯ ಪ್ರತಿಭೆ' ಎಂಬ ಲೇಖನದಲ್ಲಿ **ಎನ್.ಎಸ್.ಶಂಕರ್** ಅವರು ಕಾದಂಬರಿ ಕುರಿತು "ನಾಗರಿಕತೆಯ ಮೂಲ ತಾಕಲಾಟಗಳನ್ನು ಹಿಡಿಯಲು ಯತ್ನಿಸುತ್ತದೆ" ಎಂದು ಅಭಿಪ್ರಾಯಪಡುತ್ತಾರೆ.

ಪ್ರಜಾವಾಣಿ ಸಾಪ್ತಾಹಿಕ ಪುರವಣಿಯ ಸಾಹಿತ್ಯ ಸಂವಾದ ಅಂಕಣದ 'ಕಾವ್ಯಕ್ಕೆ ಗುರು ಎನಲು ರಚಿಸಿದ ಶಿಖರಸೂರ್ಯ' ಎಂಬ ಲೇಖನದಲ್ಲಿ **ಡಾ. ಮಾಧವ ಪೆರಾಜೆ** ಅವರು "ಕಾವ್ಯಕ್ಕೆ ಗುರು ಎನಲು ರಚಿಸಿದ ಶಿಖರಸೂರ್ಯ"(೭.೧೦.೨೦೦೭) ಎಂದು ಹೇಳುತ್ತಾರೆ. ಇವರ ದೃಷ್ಟಿಯಲ್ಲಿ ಕಾದಂಬರಿ ಒಂದು ಅತ್ಯುನ್ನತ ಕಾವ್ಯ.

ಪ್ರಜಾವಾಣಿ 'ಸಾಪ್ತಾಹಿಕ ಪುರವಣಿಯ' ಸಾಹಿತ್ಯ ಸಂವಾದ ಅಂಕಣದ 'ಅನ್ನ ಹುಲ್ಲು ಕಸಿಯುವವರ ವಿರುದ್ಧ ಅಂತಃಚಕ್ಷು' ಎಂಬ ಲೇಖನದಲ್ಲಿ ಕಾದಂಬರಿ ಕುರಿತು "ಜಗತ್ತು ನಡೆಯುವುದು ಕೃಷಿ ಧಾನ್ಯ

ಭೂಮಿಗಳಿಂದಿಲ್ಲ. ಕೇವಲ ಚಿನ್ನ ಮತ್ತು ಶಕ್ತಿಯಿಂದ ಎಂಬ ತೀರ್ಮಾನಕ್ಕೆ ನಾವಿಂದು ಬಂದಿದ್ದೇವೆ." (೧೪.೧೦.೨೦೦೭) ಎನ್ನುತ್ತಾರೆ. ಕಾದಂಬರಿ ಇಂದಿನ ನಿಜಸ್ಥಿತಿಯು ವಿವರಿಸುತ್ತಿರುವುದರಿಂದ ಅದರ ಬಗ್ಗೆ ಅವರಲ್ಲಿ ಆತಂಕದಲ್ಲಿದೆ.

ಪ್ರಜಾವಾಣಿ 'ಸಾಪ್ತಾಹಿಕ ಪುರವಣಿಯ' ಸಾಹಿತ್ಯ ಸಂವಾದ ಅಂಕಣದ 'ವ್ಯಸನಶಾಹಿ ವಿರುದ್ಧ ಸೃಜನಶೀಲ ಅಸ್ತ್ರ' ಎಂಬ ಲೇಖನದಲ್ಲಿ **ಡಾ.ವೀರೇಶ ಬಡಿಗೇರವರು** "ಶಿಖರಸೂರ್ಯ ಮಾತೃ-ಪಿತೃ ಪರಂಪರೆಗಳ ಘರ್ಷಣೆಯನ್ನು ಹೇಳುವ ಕೃತಿ ಕೂಡಾ" (೦೪.೧೧.೨೦೦೭) ಎಂದು ಹೇಳುತ್ತಾರೆ. ಇವರ ದೃಷ್ಟಿಯಲ್ಲಿ ಉಪಭೋಗ ಪ್ರಧಾನವಾದ ಪಿತೃಸಂಸ್ಕೃತಿಯು ಉತ್ಪಾದನಶೀಲ ಗುಣವುಳ್ಳ ತಾಯಿಸಂಸ್ಕೃತಿಗೆ ಸೋಲುತ್ತದೆ. ಕಾಲವನ್ನು ಅಖಂಡವಾಗಿಸುವ ಮಾತೃಸಂಸ್ಕೃತಿಗೆ ಜಯ ಎಂಬ ಅಭಿಪ್ರಾಯ ಇವರದು.

ವಿಜಯ ಕರ್ನಾಟಕ ಪತ್ರಿಕೆಯ ' ಸಾಪ್ತಾಹಿಕ ವಿಜಯ'ದಲ್ಲಿ ಪ್ರಕಟವಾದ 'ಶಿಖರಸೂರ್ಯ ಈ ಯುಗದ ಪ್ರತಿಪುರಾಣ' ಎಂಬ ಲೇಖನದಲ್ಲಿ ಕಾದಂಬರಿಯನು ಕುರಿತು **ಸುರೇಂದ್ರನಾಥ ಮಿಣಜಗಿಯವರು** "ಕಾದಂಬರಿಯು ಒಂದು ಹಂತದಲ್ಲಿ ಭಾರತೀಯ ಸಂಸ್ಕೃತಿಯ ಅನಾವರಣಗೊಳಿಸುತ್ತಿದ್ದಂತೆಯೇ ಇನ್ನೊಂದು ಹಂತದಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಉಕ್ತವಾದ ವೈಜ್ಞಾನಿಕ ಪ್ರಗತಿಯು ತಂದೊಡ್ಡಲಿರುವ ವಿಘಟಿತ ಸಂಸ್ಕೃತಿಯನ್ನು ಅನಾವರಣಗೊಳಿಸುತ್ತದೆ" (೨೭.೦೧.೨೦೦೮) ಎನ್ನುತ್ತಾರೆ. ಈ ಯುಗದ ಸಂಸ್ಕೃತಿಯನ್ನು ಅನಾವರಣಗೊಳಿಸುವುದರಿಂದ ಇದು ಈ ಯುಗದ ಪ್ರತಿ ಪುರಾಣ ಎಂಬ ಅಭಿಪ್ರಾಯ ಸುರೇಂದ್ರನಾಥರದು.

ಮಯೂರ ಮಾಸಪತ್ರಿಕೆಯ 'ಮಂಜಿನ ಶಿವಾಲಯ ಮತ್ತು ಬಿಸಿಲ ಕಳಸ' ಎಂಬ ಲೇಖನದಲ್ಲಿ **ಎಚ್.ಎಸ್.ರಾಘವೇಂದ್ರರಾಯರು** "ಆಧುನಿಕ ನಾಗರಿಕ ಜೀವನ ಕ್ರಮದ ಭೋಗ ಮಗ್ನತೆಯನ್ನು ಖಂಡಿಸುತ್ತಾ ಅದಕ್ಕೆ ವ್ಯತಿರಿಕ್ತವಾಗಿ ಗ್ರಾಮೀಣ ಜೀವನದ ಸರಳ ಮುಗ್ಧ ಜೀವನದ ಪ್ರೀತಿಯನ್ನು ವೈಭವೀಕರಿಸುವ ನೂರಾರು ವಿವರಣೆಗಳು ಇಲ್ಲಿ ಇಡಿಕಿರಿದಿವೆ" (ಫೆ.೨೦೦೮, ಪುಟ.೪೧) ಎನ್ನುತ್ತಾರೆ. ಉಪಭೋಗ ಸಂಸ್ಕೃತಿ ಮತ್ತು ವಿದ್ಯೆಯನ್ನು ಸಮರ್ಥವಾಗಿ ಬಳಸಲಾಗದ ನೈತಿಕ ಕೊರತೆಯೇ ಶಿಖರಸೂರ್ಯನ ಅವನತಿಗೆ ಕಾರಣ ಎಂಬ ಅಭಿಪ್ರಾಯ ರಾಘವೇಂದ್ರರಾವ್ ಅವರದು.

* * *

ಅಧ್ಯಾಯ ೩

ಕಂಬಾರರ ಸಾಂಸ್ಕೃತಿಕ ಪರಿಸರ

ಒಬ್ಬ ವ್ಯಕ್ತಿಯ ವ್ಯಕ್ತಿತ್ವ ನಿರ್ಮಾಣದಲ್ಲಿ ಪ್ರಮುಖ ಪಾತ್ರ ವಹಿಸುವುದು ಆತನ ಸುತ್ತಮುತ್ತಲಿನ ಪರಿಸರ. ಒಬ್ಬ ವ್ಯಕ್ತಿ ಹುಟ್ಟಿದ ಕುಟುಂಬ, ಆತ ಬೆಳೆಯುತ್ತಿರುವ ಸಮಾಜ, ಗ್ರಾಮ, ಅಲ್ಲಿಯ ಶಿಕ್ಷಣ, ಕಲೆ, ನಿಸರ್ಗ, ಆಚರಣೆಗಳು, ಸಾಮಾಜಿಕ ವ್ಯವಸ್ಥೆ, ಸಮಾಜದ ವ್ಯಕ್ತಿಗಳು ಹೀಗೆ ಆತನ ಸುತ್ತಮುತ್ತಲಿನ ಪರಿಸರದ ಪ್ರತಿಯೊಂದು ಅಂಶವೂ ಅವನ ವ್ಯಕ್ತಿತ್ವ ನಿರ್ಮಾಣದಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ವಾಸಿಸುತ್ತಿರುವ ಪರಿಸರ ಸಾಂಸ್ಕೃತಿಕವಾಗಿ ಶ್ರೀಮಂತವಾಗಿದ್ದು, ಸದ್ಗುಣಗಳನ್ನು ಮೈಗೂಡಿಸಿಕೊಂಡಿದ್ದರೆ ಆ ವಾತಾವರಣದಲ್ಲಿ ಬೆಳೆಯುವ ವ್ಯಕ್ತಿಗಳು ಸುಸಂಸ್ಕೃತವಂತರು, ಸಮಾಜದ ಪ್ರತಿಷ್ಠಿತ ವ್ಯಕ್ತಿಗಳಾಗಿ ಬೆಳೆಯುವ ಸಾಧ್ಯತೆ ಹೆಚ್ಚಾಗಿರುತ್ತದೆ. ಒಂದು ವೇಳೆ ಸಮಾಜ, ಕುಟುಂಬ ಸುಸಂಸ್ಕೃತವಾಗಿರದಿದ್ದರೆ ಆ ವ್ಯಕ್ತಿ ದೇಶದ್ರೋಹಿ, ಸಮಾಜದ್ರೋಹಿ ಆಗುವುದೇ ಹೆಚ್ಚು. ಚಂದ್ರಶೇಖರ ಕಂಬಾರರು ಹಾಡು, ಅಭಿನಯ ಸಾಹಿತ್ಯ ರಚನೆ ಚಲನಚಿತ್ರ ನಿರ್ದೇಶನ, ಶೈಕ್ಷಣಿಕ ಕಾರ್ಯ ಹೀಗೆ ವಿವಿಧ ರಂಗಗಳಲ್ಲಿ ಕಾರ್ಯನಿರ್ವಹಿಸಿ ಪ್ರತಿಯೊಂದರಲ್ಲಿಯೂ ಯಶಸ್ಸು ಗಳಿಸಿದ ವ್ಯಕ್ತಿ. ಅದೇ ರೀತಿ ಸುಸಂಸ್ಕೃತರು, ತಾಯಿ ನೆಲದ ಬಗ್ಗೆ ಪ್ರೀತಿ, ಅಪಾರ ಕಾಳಜಿಯುಳ್ಳ ವ್ಯಕ್ತಿ. ಅವರನ್ನು ಇಂತಹ ಪ್ರತಿಭಾವಂತ ವ್ಯಕ್ತಿಯನ್ನಾಗಿ ನಿರ್ಮಿಸಿದ್ದು ಅವರು ಹುಟ್ಟಿ ಬೆಳೆದ ಪರಿಸರ. ಇಂತಹ ಯಶಸ್ವಿ ವ್ಯಕ್ತಿಯನ್ನು ನಿರ್ಮಿಸಿದ ಸಾಂಸ್ಕೃತಿಕ ಪರಿಸರದ ಪರಿಚಯ ನಮ್ಮ ಅಧ್ಯಯನದ ದೃಷ್ಟಿಯಿಂದ ಅವಶ್ಯಕ.

ಗ್ರಾಮ

ಬೆಳಗಾಂವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಗೋಡಗೇರಿ ಒಂದು ಹಳ್ಳಿ. ಇದು ಘಟಪ್ರಭಾ ನದಿಯ ದಂಡೆಯ ಮೇಲೆ ಇದೆ. ಘಟಪ್ರಭಾ ನದಿಯು ಗೋಡಗೇರಿಯಲ್ಲಿ ಉತ್ತರಾಭಿಮುಖವಾಗಿ ತಿರುಗಿ ಹರಿಯುತ್ತದೆ. ಜುಲೈ ಆಗಸ್ಟ ತಿಂಗಳಿನಲ್ಲಿ ಮಳೆಯಿಂದಾಗಿ ಈ ನದಿಗೆ ಮಹಾಪೂರ ಬರುತ್ತದೆ. ಈ ನದಿಯು ಮಕ್ಕಳಿಗೆ ಈಜು ಕಲಿಯಲು ಮೋಜುಮಾಡಲು ಪ್ರಶಸ್ತವಾದ ಜಾಗ. ನದಿಯೊಂದಿಗೆ ಕೆರೆ, ಗುಡ್ಡ, ಬೆಟ್ಟ, ಕಾಡು, ಹೊಲ, ಗದ್ದೆ ಹೊಂದಿರುವ ಗೋಡಗೇರಿ ನೈಸರ್ಗಿಕವಾಗಿ ಸಮೃದ್ಧಿಯನ್ನು ಹೊಂದಿರುವ ಗ್ರಾಮ. ಉತ್ತರ ಕರ್ನಾಟಕಕ್ಕೆ ಸೇರಿರುವ ಇದು ಸಂಪೂರ್ಣ ಉತ್ತರ ಕರ್ನಾಟಕದ ಹಳ್ಳಿಗಳ ಮೈಗುಣಗಳನ್ನು ತನ್ನದಾಗಿಸಿಕೊಂಡಿದೆ. ಎಲ್ಲಾ ಹಳ್ಳಿಗಳಲ್ಲಿರುವಂತೆ ಬಡತನ, ಸಿರಿತನ, ಹಾದರ, ವೈರ, ಪ್ರೀತಿ, ದ್ವೇಷ ಮುಂತಾದ ಎಲ್ಲ ಗುಣಗಳನ್ನು ಈ ಊರು ತನ್ನೊಳಗೆ ಸೇರಿಸಿಕೊಂಡಿದೆ.

ಇವರೊಂದಿಗೆ ಉದಾರತೆ, ಅನುಕಂಪ, ಜಾತಿಮತ ಬೇಧವಿಲ್ಲದ ಹೊಂದಾಣಿಕೆಯ ಮನೋಭಾವ, ಸಹಕಾರ ತತ್ವ, ಸಹಬಾಳ್ವೆ ಮುಂತಾದ ಮಾನವೀಯ ಗುಣಗಳನ್ನು ಹೊಂದಿದ ಹಳ್ಳಿ. ರಾಷ್ಟ್ರ ಭಕ್ತರು, ನ್ಯಾಯವಂತರು, ಕಲಾರಸಿಕರು, ಕ್ರಿಯಾಶೀಲರೂ ಆದ ವ್ಯಕ್ತಿಗಳು ಈ ಊರ ಜನ. ಈ ಊರಲ್ಲಿ ಕೃಷಿ ಪ್ರಧಾನ ಉದ್ಯೋಗವಾದರೆ ಅದನ್ನು ಅವಲಂಬಿಸಿದ ಇತರ ಕುಲಕಸುಬುಗಳು ಇಲ್ಲಿದ್ದವು. ಹೀಗೆ ಪ್ರಾಕೃತಿಕವಾಗಿಯೂ ಸಾಂಸ್ಕೃತಿಕವಾಗಿಯೂ ಶ್ರೀಮಂತವಾದ ಗ್ರಾಮ ಗೋಡಗೇರಿಯಲ್ಲಿ ಚಂದ್ರಶೇಖರ ಕಂಬಾರರು ಜನಿಸಿದರು. ಇಂತಹ ವಾತಾವರಣ ಕಂಬಾರರನ್ನು ನಿಸರ್ಗಪ್ರಿಯರನ್ನಾಗಿಯೂ, ಸಾಂಸ್ಕೃತಿಕ ಕಾಳಜಿಯುಳ್ಳ ವ್ಯಕ್ತಿಯನ್ನಾಗಿಯೂ ರೂಪಿಸಿತು ಎನ್ನಬಹುದು.

ಕೌಟುಂಬಿಕ ಪರಿಸರ

ಚಂದ್ರಶೇಖರ ಕಂಬಾರರು ಹುಟ್ಟಿದ್ದು ಹಾಡು, ಕಥೆ, ಅಭಿನಯ, ಶಿಕ್ಷಣ, ಕಲಾರಾಧನೆಗಳಿಂದ ಸಾಂಸ್ಕೃತಿಕವಾಗಿಯೂ, ರಾಷ್ಟ್ರಭಕ್ತಿ, ನ್ಯಾಯಪರತೆ, ವಿಚಾರವಂತಿಕೆ, ಸಹಬಾಳ್ವೆ ಗುಣಗಳಿಂದ ನೈತಿಕವಾಗಿಯೂ, ಶ್ರೀಮಂತವಾದ ಸುಸಂಸ್ಕೃತ ಕುಟುಂಬದಲ್ಲಿ. ಕಂಬಾರಿಕೆ ವೃತ್ತಿ ಮಾಡುತ್ತಿದ್ದ ಬಸವಣ್ಣೆಪ್ಪ ಚನ್ನಮ್ಮರ ಮಗನಾಗಿ ೧೯೩೭ ಜನವರಿ ೨ರಂದು ಗೋಡಗೇರಿಯಲ್ಲಿ ಜನಿಸಿದರು. ದೇವರ ಸೃಷ್ಟಿಕರ್ತರಾದ ವಿಶ್ವಕರ್ಮರ ಪಂಗಡವಾದ 'ಕಂಬಾರ' ಚಂದ್ರಶೇಖರರ ಕಂಬಾರರ ಜಾತಿ.

ಕಂಬಾರರ ತಂದೆ ಬಸವಣ್ಣೆಪ್ಪನವರು ಉತ್ತಮ ಹಾಡುಗಾರರು, ಅಭಿನಯಕಾರರು, ಕಲಾಪ್ರೇಮಿಗಳು, ರಸಿಕರು ಆಗಿದ್ದು, ೧೮೬೦ರಲ್ಲಿಯೇ ತಮ್ಮೂರಲ್ಲಿ ಪ್ರಾರಂಭವಾಗಿದ್ದ ಪ್ರಾಥಮಿಕ ಶಾಲೆಯಲ್ಲಿ ಕಲಿತು ಅಕ್ಷರಸ್ಥರೂ ಆಗಿದ್ದರು. ಬಸವಣ್ಣೆಪ್ಪನವರು ಉತ್ತಮ ಜನಪದ ಹಾಡುಗಾರರಾಗಿದ್ದು, ನಾಟಕ ಪಾರಿಜಾತಗಳಲ್ಲಿ ಅಭಿನಯ ಮಾಡುತ್ತಿದ್ದರು. 'ಕೌಜಲಗಿ ನಿಂಗವ್ವನ ಪಾರಿಜಾತ ತಂಡ' ಪ್ರತಿವರ್ಷ ಈ ಊರಿಗೆ ಬೇಟಿಕೊಡುತ್ತಿತ್ತು. ಊರ ಜನರ ಪಾಲಿಗೆ ದಂತಕಥೆಯಾಗಿದ್ದ 'ಕೌಜಲಗಿ ನಿಂಗವ್ವ' ಕಂಬಾರರ ತಂದೆಯ ಬಗ್ಗೆ ಅಪಾರ ಗೌರವವನ್ನು ಹೊಂದಿದ್ದಳು. ಅವರು ಬಂದು ಅಟ್ಟದ ಮುಂದೆ ಕೂಡುವವರೆಗೆ ತನ್ನ ಅಭಿನಯವನ್ನು ಪ್ರಾರಂಭಿಸುತ್ತಿರಲಿಲ್ಲ. ಬಸವಣ್ಣೆಪ್ಪನವರು ಅವಳ ಹಾಡುಗಳನ್ನು ವರ್ಣಿಸುತ್ತಾ, ಅವಳ ನಟನೆಯನ್ನು ಮೆಚ್ಚಿ ಅವಳನ್ನು 'ಅಪ್ಸರೆ' ಎಂದು ಕರೆಯುತ್ತಿದ್ದರು.

ತಂದೆಯ ಹಾಡುಗಾರಿಕೆ ಅಭಿನಯ ಕಲೆ ಮಗನಿಗೆ ಬಳುವಳಿಯಾಗಿ ಬಂದಿತೆನ್ನಬಹುದು. ತಂದೆಯ ಜೊತೆ ಕುಳಿತುಕೊಂಡು ಪಾರಿಜಾತ ನೋಡುತ್ತ ಹಾಡು ಕೇಳುತ್ತಿದ್ದ ಕಂಬಾರರು ತಮ್ಮ ಮೂರನೇ ಇಯತ್ತೆಯಲ್ಲಿಯೇ ಹಾಡು, ಲಾವಣಿ ರಚನೆ ಹಾಗೂ ನಾಟಕ ಅಭಿನಯದಲ್ಲಿ ತೊಡಗಿಕೊಂಡರು. ಶಾಲೆಯ ಮೇಷ್ಟ್ರುಗಳು ಹಾಗೂ ಊರ ಜನರು ಅವರ ಹಾಡು, ಅಭಿನಯ ಮೆಚ್ಚಿ ಭೇಷ್ ಎಂದಂತೆ ಕಂಬಾರರ ತಂದೆಯು ಅವರ ಹಾಡು, ಅಭಿನಯಗಳನ್ನು ಮೆಚ್ಚಿ ಹೆಮ್ಮೆಪಟ್ಟರು. ಮಗ ಶಾಲೆ ಕಲಿತು ವಿದ್ಯಾವಂತನಾಗಬೇಕೆಂದು ಬಯಸುತ್ತಿದ್ದ ತಂದೆ ಮಗನ ಈ ಎಲ್ಲ ಚಟುವಟಿಕೆಗಳು ಅವನ ವಿದ್ಯಾಭ್ಯಾಸಕ್ಕೆ ಅಡಚಣೆ ಉಂಟುಮಾಡಬಹುದೆಂದು ಯೋಚಿಸಿ ಜಾಗೃತರಾಗಿ ಮಗನನ್ನು ವಿದ್ಯಾಭ್ಯಾಸದ ಕಡೆಗೆ ಗಮನ ಕೊಡುವಂತೆ ಮಾಡಿದರು.

ಕಂಬಾರರ ತಂದೆಯವರು ೧೯೪೨ರಲ್ಲಿ ನಡೆದ 'ಭಾರತಬಿಟ್ಟು ತೊಲಗಿ' ಚಳುವಳಿಯಲ್ಲಿ ಭಾಗವಹಿಸಿದ್ದರು. ಈ ಚಳುವಳಿಯಲ್ಲಿ ಭಾಗವಹಿಸಿದ ಇತರ ೩ ಜನ ಜೈಲು ಸೇರಿದ್ದರು. ಇವರಿಗೆ

ಜೈಲುವಾಸ ಆಗಿರಲಿಲ್ಲ. ಇವರು ಅಕ್ಷರ ಬಲ್ಲವರಾಗಿದ್ದರಿಂದ ನಿತ್ಯ ಪತ್ರಿಕೆಗಳಲ್ಲಿ ಬರುತ್ತಿದ್ದ ರಾಷ್ಟ್ರೀಯ ಚಳುವಳಿಗೆ ಸಂಬಂಧಿಸಿದ ವಿಷಯಗಳನ್ನು ಜನರಿಗೆ ಓದಿ ಹೇಳುತ್ತಾ ಜನರಲ್ಲಿ ರಾಷ್ಟ್ರಾಭಿಮಾನ ಬೆಳೆಸುತ್ತಿದ್ದರು. ಜೊತೆಗೆ ಈ ಊರಲ್ಲಿದ್ದ ಪಂಚಾಯಿತಿಯ ಪಂಚರಲ್ಲಿ ಬಸವಣ್ಣೆಪ್ಪನವರು ಒಬ್ಬರಾಗಿದ್ದರು. ಪಂಚಾಯತಿಗೆ ಬರುತ್ತಿದ್ದ ಫಿರ್ಯಾದಿಗಳನ್ನು ನ್ಯಾಯಯುತವಾಗ ಬಗೆಹರಿಸುತ್ತಿದ್ದರು. ತಂದೆಯ ಈ ರಾಷ್ಟ್ರಭಕ್ತಿ ಹಾಗೂ ನ್ಯಾಯಪರತೆ ಬಾಲಕನಾಗಿದ್ದ ಕಂಬಾರರ ಮೇಲೆ ಪ್ರಭಾವ ಬೀರಿದವು. ಕಂಬಾರರ ಸಾಹಿತ್ಯದ ಮೂಲಶಕ್ತಿಯಾದ ದೇಶಿಯತೆಯ ಅಭಿಮಾನ, ಸಾಂಸ್ಕೃತಿಕ ಹೆಮ್ಮೆಗಳು ತಂದೆಯಿಂದ ರಕ್ತಗತವಾಗಿ ಬಂದ ಗುಣಗಳೆನ್ನಬಹುದು.

ಬಸವಣ್ಣೆಪ್ಪನವರು ಜಾನಪದ ಕಲಾವಿದರು, ರಾಷ್ಟ್ರಪ್ರೇಮಿಗಳಾದಂತೆ ಉನ್ನತ ವಿಚಾರವಂತರು ಆಗಿದ್ದರು. ಇವರ ಕಂಬಾರಸಾಲೆ ಬಸವಣ್ಣನವರ 'ಅನುಭವಮಂಟಪ'ದಂತೆ ಒಂದು ಬೌದ್ಧಿಕ ಚರ್ಚಾಕೇಂದ್ರವೇ ಆಗಿತ್ತು. ತಮ್ಮ ಬೇಸಾಯದ ಉಪಕರಣಗಳ ದುರಸ್ತಿಗೆ ಬರುತ್ತಿದ್ದವರು, ತಮ್ಮ ಸಮಯವನ್ನು ಕಳೆಯಲು ಬರುತ್ತಿದ್ದ ವಯಸ್ಸಾದವರು ಕಂಬಾರಸಾಲೆಯನ್ನು ಒಂದು ಚರ್ಚಾಗೋಷ್ಠಿಯನ್ನಾಗಿ ಪರಿವರ್ತಿಸುತ್ತಿದ್ದರು. ಅಲ್ಲಿ ಅನೇಕ ವಿಷಯಗಳು ಚರ್ಚೆಗೆ ಒಳಪಡುತ್ತಿದ್ದವು. ಬಸವಣ್ಣೆಪ್ಪನವರು ಈ ಚರ್ಚಾಗೋಷ್ಠಿಯ ಹೆಚ್ಚು ತಿಳುವಳಿಕಸ್ಥ ವ್ಯಕ್ತಿಯಾಗಿರುತ್ತಿದ್ದರು. ಒಮ್ಮೆ ಇಲ್ಲಿ ಚರ್ಚೆ ನಡೆದಾಗ 'ಪ್ರಪಂಚದಲ್ಲಿ ಅತಿ ಸುಂದರರು ಯಾರು?' ಎಂಬ ವಿಷಯ ಚರ್ಚೆಗೆ ಒಳಪಟ್ಟಿತಂತೆ. ಆಗ ಅಲ್ಲಿಯ ಜನ ರಾಜಕುಮಾರ, ರಾಜಕುಮಾರಿ, ಗಾಂಧಿ, ಗಾಂಧಿಯ ಹೆಂಡತಿ, ನೆಹರು, ನೆಹರು ಹೆಂಡತಿ ಎಂದು ಅನೇಕ ಬಗೆಯ ಉತ್ತರಗಳನ್ನು ಕೊಡುತ್ತಿದ್ದರಂತೆ. ಆಗ ಬಸವಣ್ಣೆಪ್ಪನವರು 'ಚೊಚ್ಚಲ ಬಸುರಿ ಚಂದ ದುಡಿಯುವ ಗಂಡ ಚಂದ'[೧] ಎಂಬ ಉತ್ತರ ಕೊಟ್ಟರೆಂದು ಕಂಬಾರರು ಹೇಳುತ್ತಾರೆ. ಬಸವಣ್ಣೆಪ್ಪನವರ ಈ ಉತ್ತರ ನಮ್ಮ ಸಂಸ್ಕೃತಿಯೊಳಗಡೆ ತಾಯ್ತನ ಮತ್ತು ದುಡಿಮೆಗೆ ಇರುವ ಬೆಲೆ ಮತ್ತು ಈ ಸಂಸ್ಕೃತಿಯ ಬಗ್ಗೆ ಬಸವಣ್ಣೆಪ್ಪನವರಿಗೆ ಇರುವ ಹೆಮ್ಮೆ ಕಾಳಜಿಯನ್ನು ತೋರಿಸುತ್ತದೆ. ಅವರ ದೃಷ್ಟಿಯಲ್ಲಿ ಬಾಹ್ಯಸೌಂದರ್ಯ ಮುಖ್ಯವಲ್ಲ. ಮಗುವನ್ನು ಹೆತ್ತು ಬೆಳಸಿ ಸಮಾಜಕ್ಕೆ ಒಬ್ಬ ಸಧೃಡ ವ್ಯಕ್ತಿಯನ್ನು ಕೊಡುವ ಜವಾಬ್ದಾರಿ ಹೊತ್ತ ತಾಯಿ, ತನ್ನ ದುಡಿಮೆಯ ಮೂಲಕ ಕುಟುಂಬದ ಜವಾಬ್ದಾರಿಯೊಂದಿಗೆ ಇಡೀ ಸಮಾಜಕ್ಕೆ ಅವಶ್ಯಕವಾದ ಅನ್ನ ಬೆಳೆಯುವ ಜವಾಬ್ದಾರಿ ಹೊತ್ತ ರೈತನ ಆಂತರಿಕ ಸೌಂದರ್ಯ ಪ್ರಾಮುಖ್ಯತೆಯನ್ನು ಗಳಿಸುತ್ತದೆ. ತಂದೆಯ ಈ ಉನ್ನತ ವಿಚಾರಗಳು ಅಲ್ಲಿಯೇ ಕುಳಿತುಕೊಂಡು ಇವನ್ನೆಲ್ಲ ಕೇಳುತ್ತಿದ್ದ ಬಾಲಕ ಕಂಬಾರರ ಮನಸ್ಸನ್ನು ಆಕರ್ಷಿಸಿದರಲ್ಲಿ ಸಂದೇಹವೇ ಇಲ್ಲ. ಈ ವಿಚಾರವೆ ಕಂಬಾರರಲ್ಲಿ ತಾಯಿ, ತಾಯಿನೆಲ, ತಾಯಿ ಸಂಸ್ಕೃತಿ, ಉತ್ಪಾದನಾಶೀಲತೆಯ ಬಗ್ಗೆ ಗೌರವ, ಅಭಿಮಾನ ಹುಟ್ಟಿಸುವುದರೊಂದಿಗೆ ಆ ವಿಚಾರಗಳ ಬಗ್ಗೆ ಅವರನ್ನು ಚಿಂತನಾಪರರನ್ನಾಗಿ ಮಾಡಿದವು. ಅವರ ಇಡೀ ಸಾಹಿತ್ಯದಲ್ಲಿ ಸಾಂಸ್ಕೃತಿಕ ಚಿಂತನೆ, ಅಭಿಮಾನ, ಉತ್ಪಾದನಾಶೀಲತೆಗೆ ಕೊಟ್ಟ ಪ್ರಾಶಸ್ತ್ಯಕ್ಕೆ ತಂದೆಯ ಈ ವೈಚಾರಿಕ ಮನೋಭಾನೆಗಳೇ ಕಾರಣವೆನ್ನಬಹುದು.

ಒಮ್ಮೆ ಕಂಬಾರರು ಕನ್ನಡಿ ನೋಡುತ್ತಾ ಕುಳಿತುಕೊಂಡಾಗ ಅಲ್ಲಿಗೆ ಬಂದ ಬಸವಣ್ಣೆಪ್ಪನವರು ಮಗನಿಗೆ "ಆ ಕನ್ನಡಿ ನೋಡಿದರೆ ಏನು ಕಾಣಿಸುತ್ತೆ. ನೀನು ಒಬ್ಬನೆ ಕಾಣಿಸುತ್ತಿ. ಹೊಂಡದ ನೀರಿನಲ್ಲಿ ನಿನ್ನನ್ನು ನೋಡಿಕೋ, ನಿನ್ನ ಜೊತೆಗೆ ಸೂರ್ಯ, ಆಕಾಶ, ಮೋಡ. ಹಾರುವ ಹಕ್ಕಿಗಳು ಸುತ್ತಮುತ್ತಲ ಗಿಡಬಳ್ಳಿಗಳು ಕಾಣಿಸುತ್ತೆ. ನಿನ್ನನ್ನು ಮಾತ್ರ ನೋಡಿಕೊಳ್ಳುವುದಲ್ಲ ನಿನ್ನ ಜೊತೆಗೆ ನಿನ್ನ ಕರುಳಬಳ್ಳಿಯನ್ನೆಲ್ಲಾ

ನೋಡಿಕೊಳ್ಳುವುದನ್ನು ಕಲಿ"[೨] ಎಂದು ಹೇಳಿದರಂತೆ. ತಂದೆಯ ಈ ಮಾತು ಕಂಬಾರರಲ್ಲಿ ಸಾಮುದಾಯಿಕ ಪ್ರಜ್ಞೆಯ ಬೆಳವಣಿಗೆಗೆ ಕಾರಣವಾಯಿತೆನ್ನಬಹುದು. ಮನುಷ್ಯ ಸ್ವಾರ್ಥಿಯಾಗಬಾರದು, ತನ್ನ ಸುತ್ತಮುತ್ತಲ ನಿಸರ್ಗ, ಸಮಾಜವನ್ನು ತನ್ನಂತೆ ಭಾವಿಸಬೇಕು. ಅದರೊಂದಿಗೆ ಸೇರಿದಾಗ ಮಾತ್ರ ತನ್ನ ಬದುಕಿಗೆ ಬೆಲೆ, ಸಾರ್ಥಕತೆ ಎಂಬ ತಂದೆಯ ವಿಚಾರ ಕಂಬಾರರಲ್ಲಿ ನಿಸರ್ಗ ಪ್ರೀತಿಯನ್ನು ಸಾಮಾಜಿಕ ಒಗ್ಗಟ್ಟಿನ ಮಹತ್ವವನ್ನು ಬೆಳೆಸಿತು. ತಂದೆಯಿಂದ ಕಾಣಿಕೆಯಾಗಿ ಬೆಳೆದು ಬಂದ ಈ ಅಖಂಡತೆಯ ಪ್ರಜ್ಞೆ ಕಂಬಾರರ ಸಾಹಿತ್ಯದುದ್ದಕ್ಕೂ ಪ್ರವಹಿಸುತ್ತಲೇ ಇದೆ. ಛಿದ್ರೀಕರಣವನ್ನು ಕಂಬಾರರು ವಿರೋಧಿಸುತ್ತಲೇ ಬಂದಿದ್ದಾರೆ.

ಕಂಬಾರರ ತಾಯಿ ಚನ್ನಮ್ಮನವರಲ್ಲಿ ಜನಪದ ಹಾಡು ಕತೆಗಳ ಸಂಗ್ರಹವೇ ಇತ್ತು. ಇವರು ಜಾನಪದ ಹಾಡುಗಳನ್ನು ಹಾಡುವುದರಲ್ಲಿ ಕತೆಗಳನ್ನು ಹೇಳುವುದರಲ್ಲಿ ಸಿದ್ಧಹಸ್ತರಾಗಿದ್ದರು. ಆಗ ಇನ್ನೂ ಗಿರಣಿಗಳು ಹಳ್ಳಿಗಳನ್ನು ಪ್ರವೇಶಿಸಿರಲಿಲ್ಲ. ಹಳ್ಳಿಗರು ಕಾಳುಗಳನ್ನು ಬೀಸಲು ಬೀಸುಕಲ್ಲನೇ ಅವಲಂಬಿಸಿದ್ದರು. ಈ ಬೀಸುಕಲ್ಲುಗಳು ಜನಪದ ಗೀತೆಗಳ ಉಗಮಸ್ಥಳಗಳಾಗಿದ್ದವು. ಕಂಬಾರರ ತಾಯಿ ಮತ್ತು ಅಕ್ಕಂದಿರು ಬೀಸುತ್ತಾ ಹಾಡುಗಳನ್ನು ಹಾಡುತ್ತಿದ್ದರು. ಈ ಹಾಡುಗಳಲ್ಲಿ ಜನಪದ ಗೀತೆಗಳ ಜೊತೆಗೆ ಉದ್ಯೋಗಕ್ಕಾಗಿ ಮುಂಬೈಗೆ ವಲಸೆ ಹೋಗಿ ಅಲ್ಲಿಂದ ವಾಪಸ್ಸಾಗಿ ಬಂದ ಜನರನ್ನು ಕುರಿತು ಕಟ್ಟಿದ ಹಾಡುಗಳು ಸೇರಿರುತ್ತಿದ್ದವು. ಈ ಜನಪದ ಗೀತೆಗಳು ಕಂಬಾರರ ಮನಸ್ಸನ್ನು ಜನಪದದತ್ತ ಸೆಳೆಯುವಲ್ಲಿ ಯಶಸ್ವಿಯಾದವು. ಹೀಗೆ ಜಾನಪದ ಗೀತೆಗಳಿಂದ ಪ್ರಭಾವಿತರಾದ ಕಂಬಾರರ ಸಾಹಿತ್ಯದುದ್ದಕ್ಕು ಜಾನಪದ ಅಂಶಗಳು ಸ್ಥಾನವನ್ನು ಪಡೆದವು. ಕಂಬಾರರನ್ನೂ ಜಾನಪದ ಕವಿ, ನಾಟಕಕಾರ, ಹಾಡುಗಾರರನ್ನಾಗಿ ಮಾಡಿದ್ದು ಈ ಜನಪದ ಅಂಶಗಳೇ.

ಕಂಬಾರರಿಗೆ ಬಾಲ್ಯದಿಂದಲೂ ಅಜ್ಜಿಕತೆ, ದೆವ್ವದ ಕತೆ, ಅಲೌಕಿಕ ಜಗತ್ತಿನ ಕಟ್ಟುಕತೆಗಳೆಂದರೆ ಹೆಚ್ಚು ಆಸಕ್ತಿ. ಅವರ ಈ ಕತೆಗಳ ಆಸಕ್ತಿಯನ್ನು ತಣಿಸುತ್ತಿದ್ದವರು ತಾಯಿ ಚೆನ್ನಮ್ಮ ಮತ್ತು ಹತ್ತಿರದ 'ಸುಲಧಾಳ'ದಲ್ಲಿದ್ದ ಅವರ ದೊಡ್ಡಮ್ಮ. ಅವರ ದೊಡ್ಡಮ್ಮನು ಸಹ ಹಾಡು ಕತೆಗಳಲ್ಲಿ ಅಪಾರ ಪರಿಣಿತರಾಗಿದ್ದರು. ಕಂಬಾರರು ತಮ್ಮ ಶಾಲೆಯ ರಜಾಕಾಲದಲ್ಲಿ ದೊಡ್ಡಮ್ಮನ ಊರು ಸುಲಧಾಳಕ್ಕೆ ಹೋಗಿ ಅವರಿಂದ ಕತೆಗಳನ್ನು ಕೇಳುತ್ತಿದ್ದರು. ದೊಡ್ಡಮ್ಮ ಅಲೌಕಿಕ ಜಗತ್ತಿನ ಅದ್ಭುತ ಕತೆಗಳನ್ನು ಹೇಳಿ ಇವರನ್ನು ಕಲ್ಪನಾಲೋಕದಲ್ಲಿ ವಿಹರಿಸುವಂತೆ ಮಾಡುತ್ತಿದ್ದರು. ಇದರಿಂದಾಗಿ ಚಂದ್ರಶೇಖರರು ತಮ್ಮ ದೊಡ್ಡಮ್ಮನ ಹತ್ತಿರ ಹೆಚ್ಚು ಕಾಲ ಕಳೆಯಲು ಇಷ್ಟಪಡುತ್ತಿದ್ದರು. ರಜೆಯಿಂದ ಮರಳಿದ ನಂತರ ಇವರ ಈ ದಾಹವನ್ನು ಹಿಂಗಿಸುವ ಕೆಲಸ ಅಮ್ಮನದಾಗಿತ್ತು. ಅಮ್ಮ ದೊಡ್ಡಮ್ಮರು ಹೇಳುತ್ತಿದ್ದ ಈ ಕತೆಗಳು ಜಾನಪದ ಅಂಶಗಳ ಜೊತೆಗೆ ಮಿಥ್‌ಗೆ ಸಂಬಂಧಿಸಿರುತ್ತಿದ್ದವು. ಇವು ಕಂಬಾರರಲ್ಲಿ ಜನಪದ ಕಥಾಲೋಕವನ್ನು ಸೃಷ್ಟಿಸಿದವು. ಸಾಹಿತ್ಯದಲ್ಲಿ ಜನಪದ ತಂತ್ರಗಳನ್ನು ಬಳಸಲು ನಾಟಕಗಳಲ್ಲಿ ಮಿಥ್ಗಳನ್ನು ಪ್ರಯೋಗಿಸಲು ಮೂಲ ಪ್ರೇರಣೆಯಾಗಿ ನಿಂತವು ಈ ಕತೆಗಳು.

ಕಂಬಾರರ ಸೋದರಮಾವ ರಾಮಪ್ಪನು ಒಬ್ಬ ತಾಂತ್ರಿಕ ಸಾಧಕನಾಗಿದ್ದನು. ಮಕ್ಕಳಿಲ್ಲದ ಈತನು ಚಂದ್ರಶೇಖರರನ್ನು ಪ್ರೀತಿಯಿಂದ ಬೆಳಸಿದನು. ಈತ ತನ್ನ ಮನೆಯಲ್ಲಿ ತಾಂತ್ರಿಕ ಸಾಧನೆಯಲ್ಲಿ ತೊಡಗಿರುತ್ತಿದ್ದನು. ಜೊತೆಗೆ ತನ್ನಂಥ ಸಮಾನ ಮನಸ್ಕರೊಂದಿಗೆ ತನ್ನ ಮನೆಯಲ್ಲಿ ಚರ್ಚೆ ನಡೆಸುತ್ತಿದ್ದನು.

ಈ ಅದ್ವಯವಾದಿಗಳು ಪಂಚಮಗಳ ಮೂಲಕ ದೇವರ ಸಾಕ್ಷಾತ್ಕಾರ ಮಾಡಿಕೊಳ್ಳುತ್ತಿದ್ದರು. ಹೆಣ್ಣು ಮತ್ತು ಹೆಂಡ ಅವರ ಸಾಧನೆಯ ಪರಿಕರಗಳಾಗಿರುತ್ತಿದ್ದವು. ಇಂಥವರಲ್ಲಿ ಕಾಮ ಕೇವಲ ದೈಹಿಕ ಸುಖವಾಗಿರದೆ ಅರಿವಿನ ಮುಖ್ಯ ಪ್ರಮೇಯವಾಗಿತ್ತು. ಹೊಲಗೇರಿಯಲ್ಲಿರುವ ತಮ್ಮ ಮಾವನ ಮನೆಗೆ ಹೋಗುತ್ತಿದ್ದ ಕಂಬಾರರಿಗೆ ತಮ್ಮ ಮಾವನ ಮೂಲಕ ತಾಂತ್ರಿಕ ಸಿದ್ಧಿಯ ಅಧೋಲೋಕದ ಪರಿಚಯವು ಆಯಿತು. ಕಂಬಾರರ ಸಾಹಿತ್ಯದಲ್ಲಿ ಕಾಮ ಪ್ರತಿಮೆಯ ಸ್ಥಾನ ಪಡೆದು ವಿರಾಜಿಸಲು ಅಧೋಲೋಕಕ್ಕೆ ನಮ್ಮನ್ನು ಕೊಂಡೊಯ್ಯುವಂತೆ ಮಾಡಲು ಈ ಸೋದರಮಾವನ ಪಾತ್ರ ಅಪಾರವಾದುದು.

ಕಂಬಾರಿಕೆ ವೃತ್ತಿ ಮಾಡುತ್ತಿದ್ದ ಬಸವಣ್ಣೆಪ್ಪನವರು ಮಗನಿಗೂ ಆ ವೃತ್ತಿ ಕಲಿಸಬೇಕೆಂದು ಬಯಸಿದರು. ಮಗನಿಗೆ ಅದನ್ನು ಕಲಿಸಲು ಪ್ರಯತ್ನಿಸಿದರು. ಆದರೆ ಮಗನಿಗೆ ಕಂಬಾರರ ತಿದಿ ಊದಲು ಬರಲಿಲ್ಲ. ಇದಕ್ಕಾಗಿ ತಂದೆ "ನನ್ನನ್ನು ಊರಿಡಿ ಅಟ್ಟಾಡಿಸಿದರೆಂದು"[೩] ಕಂಬಾರರು ಹೇಳಿಕೊಳ್ಳುತ್ತಾರೆ. ಈಗ ಕಂಬಾರಿಕೆ ಕಲಿಯದಿದ್ದರೂ ಮುಂದೆ ಜರ್ಮನಿಯ ಇಂಜಿನಿಯರ ಕಲಿತು ತನ್ನ ಮಗ ಕಂಬಾರಿಕೆಗೆ ಸಹಾಯಕವಾಗುವ ಹೊಸ ಯಂತ್ರ, ತಂತ್ರಗಳನ್ನು ಶೋಧಿಸಿ ಕಂಬಾರಿಕೆಯನ್ನು ಬೆಳೆಸಲಿ ಎಂಬ ಆಶಯ ತಂದೆಯವರದಾಗಿತ್ತು. ತಮ್ಮ ಜಾತಿ ಮತ್ತು ವೃತ್ತಿಯ ಬಗ್ಗೆ ಬಸವಣ್ಣೆಪ್ಪನವರಿಗೆ ಗೌರವವಿತ್ತು. ಅವರು ತಯಾರಿಸುತ್ತಿದ್ದ ಕೀಲಿಗಳು 'ಗೋಡಗೇರಿ ಕೀಲಿಗಳು' ಎಂಬ ಹೆಸರಿನಿಂದ ಪ್ರಖ್ಯಾತವಾಗಿದ್ದವು.

ಹೀಗೆ ಸಾಂಸ್ಕೃತಿಕವಾಗಿ, ನೈತಿಕವಾಗಿ ಶ್ರೀಮಂತವಾದ ಕುಟುಂಬದಲ್ಲಿ ಕಂಬಾರರು ಜನಿಸಿದರು. ಅವರ ಇಡೀ ಕುಟುಂಬ ಹಾಡು, ಕತೆ, ಅಭಿನಯ ಹೀಗೆ ಕಲೆಯ ವಿವಿಧ ರಂಗಗಳಲ್ಲಿ ಪರಿಣತಿಯನ್ನು ಹೊಂದಿತ್ತು. ಜೊತೆಗೆ ಕಂಬಾರರ ತಂದೆ ರಾಷ್ಟ್ರಾಭಿಮಾನಿಗಳು, ಸಮಾಜಕ್ಕೆ ನ್ಯಾಯ ಕೊಡುವ ಪಂಚರು, ಭೌದ್ಧಿಕವಾಗಿ ವಿಚಾರವಂತರು ಆಗಿದ್ದರು. ತಾಯಿ, ದೊಡ್ಡಮ್ಮ,ಅಕ್ಕಂದಿರು, ಪ್ರೀತಿ, ವಾತ್ಸಲ್ಯ, ಮಮತೆಗಳ ಸಾಕಾರಮೂರ್ತಿಗಳಾಗಿದ್ದರು. ತಮ್ಮ ಮಗನ ಕಲೆಗೆ ಪ್ರೋತ್ಸಾಹ ನೀಡುತ್ತಾ, ಅವನು ಶಿಕ್ಷಣ ಕಲಿತು ಉನ್ನತ ವ್ಯಕ್ತಿಯಾಗಬೇಕೆಂಬ ಆಸೆ ಈ ಕುಟುಂಬಕ್ಕಿತ್ತು. ಇಂತಹ ಕುಟುಂದಲ್ಲಿ ಬೆಳೆದ ಕಂಬಾರರು ಒಬ್ಬ ಕಲಾವಿದ, ಸಾಹಿತಿ, ಶಿಕ್ಷಣ ಪ್ರೇಮಿಯಾಗಿ ಹೊರಹೊಮ್ಮಿದರು. ಅದಕ್ಕೆ ಕಂಬಾರರು ತಮ್ಮ ಬರವಣಿಗೆ ವಿಚಾರ ಬಂದಾಗ 'ಅಪ್ಪ ನನಗೆ ಯೋಚನಾ ಕ್ರಮವನ್ನು ಕಲಿಸಿದರು'. ತಾಯಿ ನನಗೆ ಲಾಂಗ್ವೇಜ್ ಕಲಿಸಿದಳು. ನನಗೆ ಪ್ರತಿಮೆ ರೂಪಕಗಳ ಲೋಕವನ್ನು ಪರಿಚಿಸಿದವಳೇ ನನ್ನ ತಾಯಿ[೪] ಎಂದು ತಮ್ಮ ಕುಟುಂಬದ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಚಂದ್ರಶೇಖರರಿಗೆ ತಮ್ಮ ಜಾತಿಯ ಬಗ್ಗೆ, ತಾನು ಅ ಜಾತಿಯಲ್ಲಿ ಜನಿಸಿದ್ದರ ಬಗ್ಗೆ ಹೆಮ್ಮೆಯಿದೆ. ಶೋಷಿತರಾದ ಇವರು ತಮ್ಮ ಅನುಭವಗಳನ್ನು ಜೀವ ಸಮೃದ್ಧತೆಯ ಹಾಡುಗಳ ಮೂಲಕ ಕಟ್ಟಿಕೊಡುತ್ತಾರೆ.ಅವರಿಂದಲೇ ನಾನು ಈ ರೀತಿ ಉನ್ನತ ವ್ಯಕ್ತಿಯಾಗಿ ಬೆಳೆದ ಎಂಬ ಅಭಿಮಾನ ಅವರಲ್ಲಿದೆ. ಆದ್ದರಿಂದ ಕಂಬಾರರು 'ಕೆಳಜಾತಿಯೊಂದಕ್ಕೆ ಸೇರಿದ ಅನಾನುಕೂಲವೇ ನನಗೆ ಒಂದು ರೀತಿಯಲ್ಲಿ ವರವಾಗಿ ಪರಿಣಮಿಸಿದೆ'[೫] ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಶಾಲಾ ಶಿಕ್ಷಣ ವ್ಯವಸ್ಥೆ

ಗೋಡಗೇರಿ ಸಾಂಸ್ಕೃತಿಕವಾಗಿ ಶ್ರೀಮಂತವಾದ ಗ್ರಾಮವಾದರೂ, ಶೈಕ್ಷಣಿಕ ಪ್ರಗತಿಯಿಂದ ಹಿಂದುಳಿದ ಗ್ರಾಮ. ಈ ಊರಲ್ಲಿ ೧೮೬೦ ರಲ್ಲಿಯೇ ಪ್ರಾಥಮಿಕ ಶಾಲೆ ಪ್ರಾರಂಭವಾಗಿತ್ತು. ಆದರೆ ಶಾಲೆ ಕಲಿಯುವವರ ಸಂಖ್ಯೆ ಮಾತ್ರ ವಿರಳವಾಗಿತ್ತು. ಶಾಲೆ ಕಲಿಯಬೇಕಾದ ವಯಸ್ಸಿನ ಮಕ್ಕಳೆಲ್ಲಾ ದನಕಾಯುವ ಕೆಲಸಕ್ಕೆ ಹೋಗುತ್ತಿದ್ದರು. ಉಳಿದ ವೇಳೆ ಈಜು, ಮೋಜು, ಆಟ, ಉಡಾಳರಂತೆ ಊರು ಸುತ್ತುವ ಕಾಯಕಗಳಲ್ಲಿ ನಿರತರಾಗಿರುತ್ತಿದ್ದರು. ಕಂಬಾರರ ತಂದೆ ಬಸವಣ್ಣೆಪ್ಪವರು ತಮ್ಮೂರಿನ ಪ್ರಾಥಮಿಕ ಶಾಲೆಯಲ್ಲಿಯೇ ತಮ್ಮ ಅಕ್ಷರಭ್ಯಾಸವನ್ನು ಮಾಡಿದ್ದರು. ತಾನು ಕಲಿತ ಶಾಲೆಯಲ್ಲಿಯೇ ತಮ್ಮ ಮಗನು ಕಲಿಯಲಿ ಎಂಬ ಆಸೆ ತಂದೆಯದು. ಅದಕ್ಕಾಗಿ ಮಗನನ್ನು ಶಾಲೆಗೆ ಸೇರಿಸಿದರು. ಆದರೆ ಚಂದ್ರಶೇಖರರಿಗೆ ತಮ್ಮ ವಾರಿಗೆಯ ಸ್ನೇಹಿತರೆಲ್ಲ ದನ ಕಾಯುತ್ತಾ, ಈಜುತ್ತಾ, ಆಟ, ಆಡುತ್ತಾ ಮೋಜಿನಿಂದ ಕಾಲಕಳೆಯುವಾಗ ನಾನೇಕೆ ಶಾಲೆ ಕಲಿಯಬೇಕೆಂಬ ಪ್ರಶ್ನೆ ಕಂಬಾರರದು. ದನಕಾಯುವುದು ಕಂಬಾರರಿಗೆ ತುಂಬಾ ಇಷ್ಟವಾದ ಕೆಲಸವಾದ್ದರಿಂದ, ಅದಕ್ಕೆ ಅವಕಾಶ ಸಿಗುತ್ತಿಲ್ಲವೆಂಬ ಸಂಕಟ. ಜೊತೆಗೆ ಕಂಬಾರರೇ ಹೇಳುವಂತೆ 'ಶಾಲೆ ನನಗೆ ಇಷ್ಟವಾದುದಲ್ಲ'. ಒತ್ತಾಯದಿಂದ ಒಂದೆರಡು ಸಲ ನನ್ನ ಅಣ್ಣ ಕೈಕಾಲು ಕಟ್ಟಿ ಶಾಲೆಯಲ್ಲಿ ಚೆಲ್ಲಿ ಬಂದುದರಿಂದ ಅನಿವಾರ್ಯವಾಗಿ ಕಲಿಯಲೇ ಬೇಕಾಯಿತು[೬] ಶಾಲೆ ಕಲಿಯುವುದು ಅವರಿಗೆ ಇಷ್ಟದ ಕೆಲಸವಾಗಿರಲಿಲ್ಲ. ಇದರಿಂದಾಗಿ ಅವರು ತಂದೆಯ ಕಣ್ತಪ್ಪಿಸಿ ತಮ್ಮ ವಾರಿಗೆಯ ಸ್ನೇಹಿತರೊಂದಿಗೆ ದನ ಕಾಯಲು, ಘಟಪ್ರಭಾ ನದಿಗೆ ಈಜಲು ಹೋಗುತ್ತಿದ್ದರು. ೩ನೆ ತರಗತಿಯವರೆಗೆ ಕಂಬಾರರು ತಂದೆಯೊಂದಿಗೆ ಈ ಕಣ್ಣುಮುಚ್ಚಾಲೆ ಆಟದಲ್ಲಿ ತೊಡಗಿದ್ದರು. ೩ನೆ ತರಗತಿಯಲ್ಲಿದ್ದಾಗಲೇ ಇವರು ತಮಗರ್ಥವಾಗುವ ರೀತಿಯಲ್ಲಿ ಲಾವಣಿಗಳನ್ನು ರಚಿಸಿ ಶಾಲೆಯಲ್ಲಿ ಹಾಡುತ್ತಿದ್ದರು. ಆಗಲೇ ಶಾಲೆಯ ನಾಟಕಗಳಲ್ಲಿ ಪಾತ್ರವಹಿಸತೊಡಗಿದ್ದರು. ಇವರ ಈ ಹಾಡು, ಅಭಿನಯವನ್ನು ಮೆಚ್ಚಿ ಗುರುಗಳು ಭೇಷ್ ಎಂದು ಹೊಗಳತೊಡಗಿದರು. ಇದರಿಂದಾಗಿ ಶಾಲೆಯ ಬಗೆಗೆ ಆಸಕ್ತಿ ಬೆಳೆಸಿಕೊಂಡ ಕಂಬಾರರು ನಂತರ ತಪ್ಪದೆ ಶಾಲೆಗೆ ಹೋಗತೊಡಗಿದರು.

ಹೈಸ್ಕೂಲ್ ಶಿಕ್ಷಣ

ಮುಲ್ಕೀ ಪರೀಕ್ಷೆ ಪಾಸಾದ ನಂತರ ಕಂಬಾರರನ್ನು ಹೈಸ್ಕೂಲ್ ವಿದ್ಯಾಭ್ಯಾಸಕ್ಕಾಗಿ ಗೋಕಾಕದ ಮುನ್ಸಿಪಲ್ ಹೈಸ್ಕೂಲ್‌ಗೆ ಸೇರಿಸಲಾಯಿತು. ಮಗ ದಿನ ನಡೆದು ಹೋಗುವುದನ್ನು ನೋಡಲಾರದ ತಂದೆ ತಮ್ಮ ಸಂಬಂಧಿಕರ ಮನೆಯಲ್ಲಿ ವಸತಿ ವ್ಯವಸ್ಥೆಯನ್ನು ಮಾಡಿಸಿದರು. ಆಗ ಮುನ್ಸಿಪಲ್ ಹೈಸ್ಕೂಲ್‌ನಲ್ಲಿ ಖ್ಯಾತ ಕಾದಂಬರಿಕಾರ ಕೃಷ್ಣಮೂರ್ತಿ ಪುರಾಣಿಕರು ಗುರುಗಳಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಇವರು ಪ್ರತಿ ಭಾನುವಾರ ವಿದ್ಯಾರ್ಥಿಗಳ ಸಾಹಿತ್ಯಿಕ ಚರ್ಚಾಕೂಟಗಳನ್ನು ಏರ್ಪಡಿಸುತ್ತಿದ್ದರು. ಈ ಗೋಷ್ಠಿಯಲ್ಲಿ ತಾವು ರಚಿಸಿದ ಕವಿತೆ, ಕತೆ, ಪ್ರಬಂಧಗಳನ್ನು ಓದಲು ವಿದ್ಯಾರ್ಥಿಗಳಿಗೆ ಅವಕಾಶವಿರುತ್ತಿತ್ತು. ಗುರುಗಳು ವಿದ್ಯಾರ್ಥಿಗಳ ರಚನೆಯನ್ನು ಸಹನೆಯಿಂದ ಕೇಳಿ ಅವರಿಗೆ ಪ್ರೋತ್ಸಾಹ ನೀಡುತ್ತಿದ್ದರು.ಈಗಾಗಲೇ ಅನೇಕ ಕವಿತೆಗಳನ್ನು ರಚಿಸಿದ ಕಂಬಾರರು ಅವುಗಳನ್ನು ಓದುವ ಮೂಲಕ ಪುರಾಣಿಕರ ಪ್ರೀತಿಯ ಶಿಷ್ಯರಾದರು. ಅಲ್ಲದೆ ಕುಲಕರ್ಣಿ ದತ್ತು ಮೂಲಕ ಊರ ಗ್ರಂಥಾಲಯದಲ್ಲಿದ್ದ ಸುಮಾರು ೩೦೦

ಪುಸ್ತಕಗಳನ್ನು ಓದಿದ್ದರಿಂದ ಪುರಾಣಿಕರಿಗೆ ಹೆಚ್ಚು ಆತ್ಮೀಯರಾದರು. ಕಾದಂಬರಿಕಾರರಾದ ಪುರಾಣಿಕರ ಶಿಷ್ಯತನ ಮತ್ತು ಅವರ ಸಾಹಿತ್ಯ ರಚನೆಗೆ ನೀಡುತ್ತಿದ್ದ ಪ್ರೋತ್ಸಾಹ ಕಂಬಾರರ ಸಾಹಿತ್ಯ ರಚನೆಯ ಸಸಿ ಮತ್ತಷ್ಟು ಚಿಗುರಲು ಕಾರಣವಾಯಿತು.

ಇದೇ ವೇಳೆಗೆ ಇವರು ವಾಸ್ತವ್ಯ ಹೂಡಿದ್ದ ಸಂಬಂಧಿಕರ ಮನೆ ಸೇರಿ ಹೊಂದಿದ್ದರಿಂದ ಅವರ ಮನೆ ಬಿಡಬೇಕಾಯಿತು. ಜೊತೆಗೆ ಸ್ವಂತ ಖರ್ಚಿನಲ್ಲಿ ವಾಸ್ತವ್ಯ ದೊರಕಿಸಿಕೊಳ್ಳುವ ಶಕ್ತಿ ತಮ್ಮಲ್ಲಿಲ್ಲದ್ದರಿಂದ ಶಾಲೆ ಬಿಟ್ಟು ಊರಿಗೆ ತೆರಳಿದರು. ಆದರೆ ಶಿಷ್ಯನಲ್ಲಿರುವ ಪ್ರತಿಭೆಯನ್ನು ಗುರುತಿಸಿದ್ದ ಪುರಾಣಿಕರು ತಮ್ಮ ಶಿಷ್ಯನ ಪ್ರತಿಭೆ ಮಣ್ಣು ಪಾಲಾಗುವುದನ್ನು ಸಹಿಸದೆ ತಾವೇ ಶ್ರಮಪಟ್ಟು ಶಾಲೆಯ ಶುಲ್ಕವನ್ನು ಮಾಫಿ ಮಾಡಿಸಿದರು. ತಮ್ಮ ಗೆಳೆಯರಾಗಿದ್ದ ಮುಂಡಾಸ ಮಾಸ್ತರರ ಮೂಲಕ 'ಸಾವಳಗಿ ಸಿದ್ಧಲಿಂಗ ಸ್ವಾಮಿ'ಗಳನ್ನು ಭೇಟಿಮಾಡಿ ಅವರ ಶಾಖಾಮಠದಲ್ಲಿ ಕಂಬಾರರಿಗೆ ವಸತಿ ವ್ಯವಸ್ಥೆ ಕಲ್ಪಿಸಿ ಕಂಬಾರರನ್ನು ಮರಳಿ ಶಾಲೆಗೆ ಕರೆಯಿಸಿಕೊಂಡರು. ಹೀಗೆ ಶಿಷ್ಯನ ಬಗ್ಗೆ ಅಪಾರವಾದ ಪ್ರೀತಿ, ವಾತ್ಸಲ್ಯವನ್ನು ಹೊಂದಿದ ಪುರಾಣಿಕರು ಕಂಬಾರರಿಗೆ ಗುರುಗಳಾಗಿ ದೊರೆತರು.

ಇವರಿಗೆ ವಸತಿ ವ್ಯವಸ್ಥೆಯನ್ನು ಕಲ್ಪಿಸಿದ ಸಾವಳಗಿ ಸಿದ್ಧಲಿಂಗಸ್ವಾಮಿಗಳು ತಾಯಿ ಪ್ರೇಮವನ್ನು ಹೊಂದಿದ ವಾತ್ಸಲ್ಯಮಯಿಗಳು. ತಾವು ಸುಗ್ಗಿ ಕಾಲದಲ್ಲಿ ಭಿಕ್ಷೆ ಮಾಡಿಕೊಂಡು ಮರಳಿ ಊರಿಗೆ ಹೋಗುವಾಗ ಕಂಬಾರರ ಶಿಕ್ಷಣಕ್ಕಾಗಿ ಒಂದು ಚೀಲ ನವಣೆಯನ್ನು ಎತ್ತಿಟ್ಟು ಹೋಗುತ್ತಿದ್ದರು. ವಿದ್ಯಾರ್ಥಿಗಳ ಮೇಲೆ ಅತಿಯಾದ ಪ್ರೀತಿ ಹೊಂದಿದ್ದ ಸ್ವಾಮಿಗಳು ಅವರ ಪ್ರತಿಭೆಗೆ ಬೆಂಬಲ ನೀಡುತ್ತಿದ್ದರು. ಕಂಬಾರರ ಸಣ್ಣಕತೆ 'ಕಥಾವಳಿ'ಯಲ್ಲಿ ಬೆಳಕು ಕಂಡಾಗ ಸ್ವಾಮಿಗಳು ಅವರ ಬಗ್ಗೆ ಹೆಮ್ಮೆಪಟ್ಟರು. ಕಂಬಾರರು ಲಾವಣಿ ಬರೆದು ಸ್ವಾಮಿಗಳ ಮುಂದೆ ಹಾಡಿದಾಗ ಸ್ವಾಮಿಗಳು ಮಠಕ್ಕೆ ಹೋಗುವ ಬರುವ ಮಂದಿಯ ಮುಂದೆ ಆ ಲಾವಣಿಯನ್ನು ಹಾಡಿಸಿ ನಮ್ಮ ಹುಡುಗ ಎಂಥಾ ಚೆಂದ ಹಾಡು ಬರೆಯುತ್ತಾನೆಂದು ಹೊಗಳುತಿದ್ದರು. ಯೋಗಿಕೊಳ್ಳದ ಬಗ್ಗೆ ಮಾಹಿತಿ ಸಂಗ್ರಹಿಸಿ ಪ್ರಬಂಧ ಬರೆಯಲು ವಿದ್ಯಾರ್ಥಿಗಳಿಗೆ ಹೇಳಿ ಅದರಲ್ಲಿ ಅತ್ಯುತ್ತಮ ಪ್ರಬಂಧ ಬರೆದ ಕಂಬಾರರಿಗೆ ೫ ರೂಪಾಯಿಗಳನ್ನು ಪ್ರಥಮ ಬಹುಮಾನವಾಗಿ ನೀಡಿದರು. ಅದನ್ನು ತಮ್ಮ ಮಠದ ಜಾತ್ರೆಯಲ್ಲಿ ಕಂಬಾರರಿಂದ ಓದಿಸಿದರು.

ಮುಂದೆ ಎಸ್.ಎಸ್.ಎಲ್.ಸಿ ಮುಗಿದ ನಂತರ ದಾರಿಕಾಣದ ಕಂಬಾರರು ಮತ್ತೆ ಮಠಕ್ಕೆ ಹೋಗಿ ತಮ್ಮ ಕಾಲೇಜು ಕಲಿಯುವ ಹಂಬಲವನ್ನು ಸ್ವಾಮಿಗಳ ಹತ್ತಿರ ನಿವೇದನೆ ಮಾಡಿಕೊಂಡರು. ಕೆಲವು ಸಮಯ ಧ್ಯಾನದಲ್ಲಿ ನಿರತರಾದ ಸ್ವಾಮಿಗಳು ನಂತರ ಮಠದ ಗಂಟೆ ಡಣ್ ಎಂದು ಹೊಡೆದಾಗ 'ನಿನಗೆ ಆಶೀರ್ವಾದ ಆಗೇದ' ಎಂದು ಹೇಳಿ ಸ್ವಾಮಿಗಳು ೩೦೦ ರೂಪಾಯಿಗಳನ್ನು ಆಶೀರ್ವಾದ ಮಾಡಿಕೊಟ್ಟರು.

ಸಾವಳಗಿಯ ಸಿದ್ಧಲಿಂಗಸ್ವಾಮಿಗಳು ಧರ್ಮರಕ್ಷಣೆ ಪೋಷಣೆಯೊಂದಿಗೆ, ಶೈಕ್ಷಣಿಕ ಪ್ರಗತಿಗೂ ಶ್ರಮಿಸಿದರು. ಬಡತನದ ಕಾರಣದಿಂದಾಗಿ ನಶಿಸಿ ಹೋಗುತ್ತಿದ್ದ ಪ್ರತಿಭೆಗೆ ನೀರೆರೆದು ತಮ್ಮ ಮಾತೃವಾತ್ಸಲ್ಯದ ಮೂಲಕ ಅದನ್ನು ಬೆಳಸಿದರು. ಜಾತಿಮತವನ್ನು ಮೀರಿದ ಸ್ವಾಮಿಗಳ ಈ ಕಾರ್ಯ ಕಂಬಾರರಲ್ಲಿ ಜಾತಿಮತ

ಮೀರಿದ ಸಮನ್ವಯತೆಯ ಭಾವನೆಯನ್ನು, ಧಾರ್ಮಿಕ ಶ್ರದ್ಧೆಯನ್ನು, ದೇವರು ಧರ್ಮದಲ್ಲಿ ನಂಬಿಕೆಯನ್ನು ಬೆಳೆಸಿತು. ಸ್ವಾಮಿಗಳ ಈ ಋಣವನ್ನು ಮರೆಯದ ಕಂಬಾರರು ತಮ್ಮ ಸಾಹಿತ್ಯದ ಪ್ರತಿರಚನೆಯಲ್ಲಿಯೂ ಸಾವಳಗಿ ಶಿವಲಿಂಗನನ್ನು ಸ್ಮರಿಸುತ್ತಾರೆ. ಹಾಡಿ ಕೊಂಡಾಡುತ್ತಾರೆ.

ಕಾಲೇಜು ಶಿಕ್ಷಣ

ಎಸ್.ಎಸ್.ಎಲ್.ಸಿ ಮುಗಿದ ನಂತರ ಸಾವಳಗಿ ಸಿದ್ಧಲಿಂಗ ಸ್ವಾಮಿಗಳ ಆಶೀರ್ವಾದ ದೊರೆತಿದ್ದರಿಂದ ಕಾಲೇಜು ಸೇರಲು ಕಂಬಾರರು ತಯಾರಿ ನಡೆಸಿದರು. ಕಂಬಾರರ ತಂದೆ ಬಸವಣ್ಣೆಪ್ಪನವರಿಗೆ ಮಗ ಸೂಕ್ಷ್ಮ ತಾಂತ್ರಿಕತೆಗೆ ಹೆಸರಾಗಿದ್ದ ಜರ್ಮನ್ ಸೈನ್ಸ್ ಕಲಿತು ಜರ್ಮನ್ ಸೈಂಟಿಸ್ಟ್ ಅಥವಾ ಜರ್ಮನ್ ಇಂಜಿನೀಯರ್ ಆಗಬೇಕೆಂಬ ಆಸೆಯನ್ನು ಹೊಂದಿದ್ದರು. ಕಂಬಾರಿಕೆಯಿಂದ ತಮ್ಮ ವೃತ್ತಿಯಲ್ಲಿ ಹೆಸರು ಮಾಡಿದ್ದ ಬಸವಣ್ಣೆಪ್ಪನವರು ಮಗ ಜರ್ಮನ್ ಇಂಜನೀಯರ್ ಕಲಿತು ತಮ್ಮ ವೃತ್ತಿಗೆ ಸಂಬಂಧಿಸಿದ ಕೆಲವು ಕೌಶಲ್ಯ ತಂತ್ರಜ್ಞಾನಗಳನ್ನು ಅವಿಷ್ಕಾರ ಮಾಡಲಿ ಎಂಬ ಆಸೆ. ಈ ಆಸೆ ಈಡೇರುವ ಕಾಲ ಬಂದಿತೆಂದು ಸಂತೋಷದಿಂದ ಮಗನನ್ನು ಬೆಳಗಾಂವಿಗೆ ಕಳಿಸಿದರು. ಆದರೆ ಮಗ ಸೈನ್ಸ್ ಸೇರದೆ ಕಲಾವಿಭಾಗವನ್ನು ಆಯ್ಕೆಮಾಡಿಕೊಂಡ.

೧೯೫೫ರಲ್ಲಿ ಕಂಬಾರರು ಬೆಳಗಾವಿಯಲ್ಲಿ ಲಿಂಗರಾಜು ಕಾಲೇಜು ಪ್ರವೇಶಿಸಿದರು. ಹಳ್ಳಿಯಿಂದ ಬಂದ ಇವರನ್ನು ಬೆಳಗಾವಿಯ ನಗರ ವಾತಾವರಣ ತಬ್ಬಿಬ್ಬುಗೊಳಿಸಿತು. ಅದೇ ವರ್ಷ ಕಾಲೇಜಿನ ಮಿಸಲನಿಯಲ್ಲಿ ಪ್ರಕಟವಾಗಿದ್ದ ಕಂಬಾರರ ಪದ್ಯವನ್ನು ಓದಿದ ಪ್ರೊ.ಭೂಸನೂರಮಠರು ಇವರ ಕಾವ್ಯಶಕ್ತಿಗೆ ಬೆರಗಾಗಿ ಇವರನ್ನು ಕರೆಸಿ ಪ್ರೋತ್ಸಾಹದ ಮಾತುಗಳನ್ನಾಡಿದರು. ಭೂಸನೂರಮಠರ ಈ ಪ್ರೋತ್ಸಾಹ ಇವರ ಸಾಹಿತ್ಯ ತನ್ನ ರಭಸವನ್ನು ಹೆಚ್ಚಿಸಿಕೊಳ್ಳಲು ಅವಕಾಶ ಕಲ್ಪಿಸಿತು. ಕಾಲಕ್ರಮೇಣ ಗುರುಶಿಷ್ಯರ ಸಂಬಂಧ ಗಾಢವಾಗತೊಡಗಿತು. ಭೂಸನೂರಮಠರು ತಾವು ತೊಡಗಿದ್ದ 'ವಚನ ಸಾಹಿತ್ಯಸಂಗ್ರಹ' ಕಾರ್ಯದಲ್ಲಿ ತಮ್ಮ ಶಿಷ್ಯನನ್ನು ತೊಡಗಿಸಿಕೊಂಡರು. ವಚನಗಳನ್ನು ಓದಿ, ಅರ್ಥೈಸಿಕೊಂಡು ಪ್ರತಿಮಾಡುವುದು ಇಲ್ಲಿಯ ಕೆಲಸವಾಗಿತ್ತು. ಗುರುಗಳು ಈ ಕೆಲಸಕ್ಕೆ ತಮ್ಮ ಪ್ರೀತಿಯ ಶಿಷ್ಯನನ್ನು ನೇಮಿಸಿದರು. ಈ ಕಾರ್ಯದಿಂದಾಗಿ ಕಂಬಾರರಿಗೆ ವಚನದ ಅರ್ಥವನ್ನು ಅರಿಯುವುದರೊಂದಿಗೆ ಅವುಗಳ ಲಯ, ಧಾಟಿ, ದೇಶೀಯತೆ ಮೇಲೆ ಪ್ರಭುತ್ವ ಸಾಧಿಸಿ ತಮ್ಮ ಸಾಹಿತ್ಯದಲ್ಲಿ ಅವುಗಳನ್ನು ಅಳವಡಿಸಿಕೊಳ್ಳಲು ಕಂಬಾರರಿಗೆ ಸಾಧ್ಯವಾಯಿತು. ಭೂಸನೂರಮಠರು ಕಂಬಾರರ ಮೇಲಿಟ್ಟ ಪ್ರೀತಿ ಮತ್ತು ಅವರ ಸಾಹಿತ್ಯ ರಚನೆಗೆ ತೋರಿದ ಪ್ರೋತ್ಸಾಹ ಕಂಬಾರರ ಸಾಹಿತ್ಯದ ಮೇಲೆ ದಟ್ಟ ಪ್ರಭಾವವನ್ನು ಬೀರಿತು. ಅದಕ್ಕಾಗಿ ಕಂಬಾರರು ಇಂದಿಗೂ ತಮ್ಮ ಸಾಹಿತ್ಯದಲ್ಲಿ 'ಭೂಸನೂರಮಠರ ಶಿಷ್ಯ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.

ಕಾಲೇಜು ಮುಗಿಸಿ ಇಂಟರ್ ಸೇರಿದ ಕಂಬಾರರು ನಾಟಕದತ್ತ ತಮ್ಮ ಒಲವನ್ನು ಹರಿಸಿದರು. 'ಬೆಂಬತ್ತಿದ ಕಣ್ಣು' ನಾಟಕ ರಚಿಸಿದರು. ಇದು ಧಾರವಾಡ ಆಕಾಶವಾಣಿಯಲ್ಲಿ ಪ್ರಸಾರವಾಯಿತು. ೧೯೫೮ರಲ್ಲಿ ಬಿ.ಎ. ಮುಗಿಸಿದರು. ಆಗ ಅವರ ಪ್ರಥಮ ಕವನ ಸಂಕಲನ 'ಮುಗುಳು' ಬಿಡುಗಡೆಯಾಯಿತು.

ಇದು ನವೋದಯ ಸಾಹಿತ್ಯದ ಲಕ್ಷಣಗಳನ್ನು ಒಳಗೊಂಡಿದ್ದು ಸಾಹಿತ್ಯಲೋಕದಲ್ಲಿ ಖ್ಯಾತಿ ಗಳಿಸಿತು. ೧೯೬೨ರಲ್ಲಿ ಎಂ.ಎ ಮುಗಿಸಿದರು. ಆಗ 'ಹೇಳತೇನ ಕೇಳ' ಕೃತಿ ರಚಿಸಿದರು. ೧೯೭೫ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಿಂದ ಪ್ರೊ.ಭೂಸನೂರಮಠರ ಮಾರ್ಗದರ್ಶನದಲ್ಲಿ 'Origin and Development of karnataka folk theatre' ಎಂಬ ಮಹಾಪ್ರಬಂಧ ಮಂಡಿಸಿ ಡಾಕ್ಟರೇಟ್ ಪದವಿ ಪಡೆದರು.

ಕಲಾಸಿರಿವಂತಿಕೆಯ ಗ್ರಾಮ

ಗೋಡಗೇರಿ ಶೈಕ್ಷಣಿಕವಾಗಿ, ಅಭಿವೃದ್ಧಿಯ ದೃಷ್ಟಿಯಿಂದ ಹಿಂದುಳಿದಿದ್ದರೂ ಸಾಂಸ್ಕೃತಿಕವಾಗಿ ಅಪಾರ ಶ್ರೀಮಂತಿಕೆಯನ್ನು ಹೊಂದಿದ ಗ್ರಾಮ. ಗೋಡಗೇರಿಯ ರಸಿಕ ಜನ ಸಾಹಿತ್ಯ, ಸಂಗೀತ, ನಾಟಕ ಮುಂತಾದ ಕಲೆಗಳಲ್ಲಿ ಆಸಕ್ತಿ ಹೊಂದಿದ್ದು ಕಲೆಯ ಆರಾಧಕರಾಗಿದ್ದರು. ಇವರ ಈ ಕಲಾ ಪ್ರೇಮದಿಂದಾಗಿ ಪಾರಿಜಾತ ಕಂಪನಿ, ಲಾವಣಿ ತಂಡ, ಗೀಗಿಮೇಳ ಮುಂತಾದ ಕಲಾತಂಡಗಳು ತಮ್ಮ ಕಲಾಪ್ರದರ್ಶನಕ್ಕಾಗಿ ವರ್ಷಪೂರ್ತಿ ಈ ಊರಿಗೆ ಭೇಟಿ ಕೊಡುತ್ತಿದ್ದವು. ಅವುಗಳಲ್ಲಿ ಪ್ರಖ್ಯಾತವಾದದ್ದು 'ಕೌಜಲಗಿ ನಿಂಗವ್ವನ ಪಾರಿಜಾತ ತಂಡ'. 'ಪಾರಿಜಾತ ಧೃವತಾರೆ' ಎಂದು ಹೆಸರುಗಳಿಸಿದ್ದ 'ಕೌಜಲಗಿ ನಿಂಗವ್ವ'ನ ಪಾರಿಜಾತ ತಂಡ ಈ ಊರಿಗೆ ಪ್ರತಿವರ್ಷ ತಪ್ಪದ ಭೇಟಿ ನೀಡುತ್ತಿತ್ತು. ಕೌಜಲಗಿ ನಿಂಗವ್ವ ತನ್ನ ಸುಶ್ರಾವ್ಯ ಹಾಡು ಹಾಗೂ ಅಪ್ರತಿಮ ನಟನೆಯ ಮೂಲಕ ಆ ಊರ ಜನತೆಗೆ ದಂತಕತೆಯಾಗಿದ್ದಳು. ಕಂಬಾರರ ತಂದೆ ಬಸವಣ್ಣೆಪ್ಪನವರು ಬಂದು ಕುಳಿತ ನಂತರವೇ ನಿಂಗವ್ವ ತನ್ನ ಆಟವನ್ನು ಪ್ರಾರಂಭಿಸುತ್ತಿದ್ದಳು. ತಂದೆಯ ಜೊತೆ ಮಗನು ಅಲ್ಲಿ ಹಾಜರಾಗಿರುತ್ತಿದ್ದನು. ಇಲ್ಲಿಗೆ ಭೇಟಿ ಕೊಡುತ್ತಿದ್ದ ಲಾವಣಿ, ಗೀಗೀಮೇಳ, ಸಣ್ಣಾಟ ತಂಡಗಳು ಈ ಊರ ಜನತೆಯ ಮನ ಮೆಚ್ಚಿಸಲು ಪ್ರಯತ್ನಿಸುತ್ತಿದ್ದವು. ಈ ಊರ ರಸಿಕ ಜನತೆಯ ಮೆಚ್ಚುಗೆಯೇ ಈ ತಂಡಗಳ ಪಾಲಿಗೆ ದೊಡ್ಡ ಪ್ರಶಸ್ತಿಯಾಗಿರುತ್ತಿತ್ತು.

ಈ ಊರಲ್ಲಿ ಬಯಲಾಟಗಳು ಪ್ರಖ್ಯಾತಿಗಳಿಸಿದ್ದುವು. ಅದರಲ್ಲಿ 'ಸಂಗ್ಯಾಬಾಳ್ಯಾ ದೊಡ್ಡಾಟ' ಪ್ರಮುಖವಾಗಿತ್ತು. ಈ ಬಯಲಾಟ ಊರಿನವರಿಗೆ ಅಚ್ಚುಮೆಚ್ಚಿನದಾಗಿತ್ತು. ಚಂದ್ರಶೇಖರರಿಗೂ ಸಂಗ್ಯಾಬಾಳ್ಯಾ ಬಯಲಾಟ ನೋಡುವ ಹುಚ್ಚು ಇತ್ತು. ಆದರೆ ಇವರು ಹುಡುಗರಾದ್ದರಿಂದ ಆಟ ನೋಡಲು, ಆಟ ನಡೆಯುತ್ತಿದ್ದವರ ಮನೆಗೆ ಹೋಗಿ ಅಡಗಿ ಕುಳಿತುಕೊಂಡು ಆಟ ನೋಡುತ್ತಿದ್ದರು. ಸಂಗ್ಯಾಬಾಳ್ಯಾ ಆಟದಲ್ಲಿ ಬ್ರಿಟಿಷರ ಪಾತ್ರಗಳು ಬರುವುದರಿಂದ ಬ್ರಿಟಿಷರು ಈ ಆಟವನ್ನು ನಿಷೇಧಿಸಿದರು. ಈ ಆಟವನ್ನು ಆಡಬೇಕಾದರೆ ಗೋಕಾಕ, ಬೆಳಗಾವಿಗೆ ಹೋಗಿ ಕಲೆಕ್ಟರ್ ಅನುಮತಿಯನ್ನು ಪಡೆದು ಆಟ ಆಡಬೇಕಾಗಿತ್ತು. ಅನುಮತಿ ಸಿಗದಿದ್ದರೆ ಆಟ ಆಡುವಂತಿರಲಿಲ್ಲ. ಹಳ್ಳಿಯ ಜನ ಅನುಮತಿ ಸಿಗದ ವೇಳೆ ಕದ್ದುಮುಚ್ಚಿ ಬ್ರಿಟಿಷರಿಗೆ ತಿಳಿಯದಂತೆ ಆಟ ಆಡುತ್ತಿದ್ದರು.

ಇಂತಹ ಶ್ರೀಮಂತ ಕಲಾನಗರಿಯಲ್ಲಿ ಜನಿಸಿದ ಕಂಬಾರರು ಇಲ್ಲಿಯ ಕಲೆಗೆ ಮಾರುಹೋದರು. ಇಲ್ಲಿಯ ಶ್ರೀಕೃಷ್ಣಪಾರಿಜಾತ, ಲಾವಣಿ, ಗೀಗೀಮೇಳಗಳು ಕಂಬಾರರ ಮನಸ್ಸನ್ನು ಸೂರೆಗೊಂಡವು. ಹುಟ್ಟುತ್ತಲೇ ಈ ಜನಪದ ಕಲೆಗಳನ್ನು ನೋಡುತ್ತಾ, ಕೇಳುತ್ತಾ ಬೆಳೆದ ಕಂಬಾರರು ಕಲಾಸೃಷ್ಟಿಗೆ ಮುಂದಾದರು.

ತಮ್ಮ ೧೦ನೇ ವಯಸ್ಸಿನಲ್ಲಿಯೇ ತಮಗರ್ಥವಾಗುವಂತೆ ಚಿಕ್ಕಪುಟ್ಟ ಲಾವಣಿಗಳನ್ನು ಬರೆಯಲು ಪ್ರಾರಂಭಿಸಿದರು. ಕುಟುಂಬ, ಗ್ರಾಮದಿಂದ ಹಾಡುಗಾರಿಕೆ, ತಂದೆಯ ಅಭಿನಯ ಕಲೆಗಳು ಬಳುವಳಿಯಾಗಿ ಬಂದವು. ಪರಿಣಾಮವಾಗಿ ಕಂಬಾರರು ತಾವು ೩ನೇ ತರಗತಿಯಲ್ಲಿರುವಾಗಲೇ ಶಾಲೆಯ ನಾಟಕಗಳಲ್ಲಿ ಪಾತ್ರವಹಿಸತೊಡಗಿದರು. ತಮ್ಮ ಅಭಿನಯ ಚಾತುರ್ಯದಿಂದ ಜನತೆಯ ಮೆಚ್ಚುಗೆಗಳಿಸಿ ಆ ಕಾಲಕ್ಕೆ ಊರಗೌಡರಿಂದ ೪ ರೂಪಾಯಿ ಇನಾಮು ಪಡೆದರು. ಶಾಲೆಯ ಮೇಷ್ಟ್ರುಗಳು ಇವರನ್ನು ಭೇಷ್ ಎಂದು ಹೊಗಳತೊಡಗಿದರು. ಹಾಡಿನಲ್ಲಿಯೂ ಪ್ರತಿಭಾವಂತರಾದ ಚಂದ್ರಶೇಖರರು ತಾವು ಪ್ರಾಥಮಿಕ ಶಾಲೆಯಲ್ಲಿರುವಾಗಲೇ 'ಸಂಗ್ಯಾಬಾಳ್ಯಾ' ನಾಟಕದ ಹಾಡುಗಳನ್ನು ಹಾಡುತ್ತಿದ್ದರು. ಅವರ ಊರಿಗೆ ಭೇಟಿ ನೀಡುತ್ತಿದ್ದ ಲಾವಣಿ, ಗೀಗೀ ಮೇಳಗಳು ಹಾಡುತ್ತಿದ್ದ ಎಲ್ಲ ಹಾಡುಗಳನ್ನು ಇವರು ಬಾಯಿಪಾಠ ಮಾಡಿ ಹಾಡುತ್ತಿದ್ದರು. ಇವರ ಈ ಹಾಡುಗಾರಿಕೆಯನ್ನು ಕಂಡು ತಂದೆ, ಊರಜನ ಸಂತೋಷ ಪಡುವುದರೊಂದಿಗೆ ಅವರಿಗೆ ಪ್ರೋತ್ಸಾಹವನ್ನು ನೀಡುತ್ತಿದ್ದರು. ಈ ಗ್ರಾಮದ ಕಲಾಪ್ರೇಮ, ತಂದೆ ಮತ್ತು ಊರಜನ ಕೊಡುತ್ತಿದ್ದ ಪ್ರೋತ್ಸಾಹ ಇವರು ಮುಂದೆ ಜನಪದ ಶೈಲಿಯ ಹಾಡುಗಳನ್ನು ನಾಟಕಗಳನ್ನು ಬರೆಯಲು ಕಾರಣವಾಯಿತೆನ್ನಬಹುದು. ಕಂಬಾರರು 'ಸಂಗ್ಯಾಬಾಳ್ಯಾ ಅನಬೇಕೋ ನಾಡೊಳಗ' ಎಂಬ ನಾಟಕ ರಚಿಸಲು, ತಮ್ಮ ಎಲ್ಲ ಕಾವ್ಯಗಳಲ್ಲಿಯೂ ಲಾವಣಿ, ಗೀಗಿಮೇಳದಂಥ ಜಾನಪದ ದಾಟಿಗಳನ್ನು ತರಲು ಗೋಡಗೇರಿಯಲ್ಲಿರುವ ಕಲಾಪರಂಪರೆಯೇ ಪ್ರೇರಣೆ ಎನ್ನಬಹುದು.

ಸ್ವತಂತ್ರ ಚಳುವಳಿಗಾರರು

ಗೋಡಗೇರಿಯ ಜನ ರಾಷ್ಟ್ರಪ್ರೇಮಿಗಳಾಗಿದ್ದರು. ಕಂಬಾರರ ತಂದೆ ಬಸವಣ್ಣೆಪ್ಪನವರು ಸೇರಿದಂತೆ ಕೆಲವು ಜನ ೧೯೪೨ರ 'ಭಾರತ ಬಿಟ್ಟು ತೊಲಗಿ' ಚಳುವಳಿಯಲ್ಲಿ ಭಾಗವಹಿಸಿದ್ದರು. ಅದರಲ್ಲಿ ೩ ಜನ ಜೈಲು ಶಿಕ್ಷೆಗೂ ಗುರಿಯಾಗಿದ್ದರು. ಅದರೆ ಬಸವಣ್ಣೆಪ್ಪನವರು ಜೈಲು ಸೇರಿರಲಿಲ್ಲ. ಜೈಲು ಶಿಕ್ಷೆಗೆ ಗುರಿಯಾಗಿದವ್ದರು ಬ್ರಿಟಿಷರ ವಿರುದ್ಧ ಕಟ್ಟುಕತೆಗಳನ್ನು ಕಟ್ಟಿ ಜನರಲಿ ಬ್ರಿಟಿಷರ ಬಗ್ಗೆ ರೋಷ, ಭಯ ಉಂಟಾಗುವಂತೆ ಮಾಡುತ್ತಿದ್ದರು. ಚಳುವಳಿಗಳು ಕಂಬಾರರಲ್ಲಿ ರಾಷ್ಟ್ರಾಭಿಮಾನವನ್ನು ಹುಟ್ಟಿಸಿದರೆ, ಜೈಲುಶಿಕ್ಷೆ ಅನುಭವಿಸಿದವರು ಕಟ್ಟುತ್ತಿದ್ದ ಕತೆಗಳು ಬ್ರಿಟಿಷರ ಬಗ್ಗೆ ಅವರ ಆಡಳಿತದ ಬಗ್ಗೆ ದ್ವೇಷಭಾವನೆಯನ್ನು ಬೆಳಸಿದವು. ಕಂಬಾರರ ತಂದೆಯವರು ನಿತ್ಯ ಪತ್ರಿಕೆಗಳಲ್ಲಿ ಬರುತ್ತಿದ್ದ ಸ್ವಾತಂತ್ರ್ಯ ಚಳುವಳಿಗೆ ಸಂಬಂಧಿಸಿದ ವಿಷಯಗಳನ್ನು ಓದಿ ಜನತೆಗೆ ಹೇಳುತ್ತಿದ್ದರು. ಸ್ವಾತಂತ್ರ್ಯ ಚಳುವಳಿಗಾರರು. ತಂದೆಯ ರಾಷ್ಟ್ರಭಕ್ತಿ ಬಾಲಕ ಕಂಬಾರರಲ್ಲಿ ರಾಷ್ಟ್ರಾಭಿಮಾನವನ್ನು ಬೆಳೆಸಿದವು. ಆಗ ಕಂಬಾರರು ರಾಷ್ಟ್ರಪ್ರೇಮವನ್ನು ತಿಳಿಸುವ ಕೆಳಗಿನ ಲಾವಣಿಯನ್ನು ರಚಿಸಿದರು.

"ಖೊಟ್ಟಿಗಿಟ್ಟಿ ಅಲ್ಲ ತಗಿ ದಿಟ್ಟ ಮಾತು ಹೇಳತೀನಿ
ಕಿವಿಗೊಟ್ಟ ಕೇಳ್ರಿ ಕುಂತ ನಿಂತವರ
ಹಿಂಗಾ ಮಾರಿ ಮ್ಯಾಗ ಮೀಸಿ ಹೊತ್ತ ಗಂಡಸರಾ
ಸಣ್ಣದೊಡ್ಡವರಾ ಮತ್ತು ಹೆಂಗಸರಾ॥

ವ್ಯಾಸುಳ್ಳ ದೇಶ ತುಂಬಾ ಹೇಸಿ ಬೆಂಕಿ ಹಚ್ಚಿದರಾ
ಕೆಂಪು ಮೋತಿ ಇಂಗರೇಜಿ ಸರಕಾರ ॥ಗೀಗೀ॥
ಸತ್ತಾರೋ ಮಂದಿ ಸಾವಿರಾ
ಗುಂಡಿಗೆ ಸೆಡ್ಡ ಹೊಡೆದವರಾ
ಬೇವ ಹುಲ್ಲಿಗಿಂತ ಕಡೆ ಅಂದವರಾ ॥ಗೀಗೀ॥[೭]

ಈ ಲಾವಣಿ ಬಾಲಕ ಕಂಬಾರರಲ್ಲಿದ್ದ ರಾಷ್ಟ್ರಪ್ರೇಮ ಮತ್ತು ಇಂಗ್ಲೀಷರ ಬಗ್ಗೆ ಅವರಲ್ಲಿದ್ದ ರೋಷವನ್ನು ವ್ಯಕ್ತಪಡಿಸುತ್ತದೆ.

ಆರೂಢ ಅವಧೂತ ಪರಂಪರೆ

ಗೋಡಗೇರಿ ಆರೂಢ ಮತ್ತು ಅವಧೂತ ಪರಂಪರೆಗಳೆರಡರ ಆಶ್ರಯ ತಾಣವಾಗಿತ್ತು"[೮] ಪಾರೆಂಬಿ ಕರಿಯವ್ವ ಈ ಊರ ಗ್ರಾಮದೇವತೆ. ಊರ ಜನರೆಲ್ಲ ನಡೆದುಕೊಳ್ಳುವದು ಈ ತಾಯಿಗೆ. ಗದುಗಿನ ಮಲ್ಲಿಕಾರ್ಜುನ ಸ್ವಾಮಿಗಳು ಪ್ರತಿವರ್ಷ ಶ್ರಾವಣದಲ್ಲಿ ಈ ಗ್ರಾಮಕ್ಕೆ ಆಗಮಿಸಿ ಪುರಾಣ ಕಾರ್ಯಕ್ರಮ ನಡೆಸಿಕೊಡುತ್ತಿದ್ದರು. ಆಗ ಅಲ್ಲಮಪ್ರಭು ಸೇರಿದಂತೆ ಅನೇಕ ಶರಣ ಶರಣೆಯರ ಪುರಾಣ ಪ್ರವಚನ ನಡೆಯುತಿತ್ತು. ಜೊತೆಗೆ ಬೆಳಗಿನ ವೇಳೆ ಹಿರಿಯರಿಗಾಗಿ ನಿಜಗುಣರ ಶಾಸ್ತ್ರಪ್ರವಚನಗಳ ಏರ್ಪಾಡಾಗಿರುತ್ತಿತ್ತು. ಇವೆಲ್ಲವುಗಳಿಂದಾಗಿ ಗ್ರಾಮಸ್ಥರ ಮನಸ್ಸು ಆಧ್ಯಾತ್ಮದತ್ತ ಒಲಿದಿತ್ತು. ಈ ಪುರಾಣ ಪ್ರವಚನದಿಂದ ಜನರೆಲ್ಲ ದಾಸೋಹ, ಕಾಯಕ, ಸಮಾನತೆ ಮುಂತಾದ ಮತಿಯನ್ನು ಬೆಳಸಿಕೊಂಡರು.

ಈ ಆರೂಢ ಪರಂಪರೆಯಿಂದ ಕಂಬಾರರು ಅಲ್ಲಮಪ್ರಭು ಮತ್ತು ಇತರ ವಚನಕಾರರ ಬಗ್ಗೆ ಗೌರವಭಾವನೆಯನ್ನು ತಳೆದು ಅಲ್ಲಮಪ್ರಭುವಿನ ವೈಚಾರಿಕತೆಯ ಅನುಭವವನ್ನು ತಮ್ಮ ಸಾಹಿತ್ಯದಲ್ಲಿ ತಂದರು. ತಮ್ಮ ಸಾಹಿತ್ಯವನ್ನು

'ಮೊದಲಿಗೆ ಅಲ್ಲಮಪ್ರಭುವಿಗೆ ಶರಣಾರ್ಥಿ
ಕೂಡಿ ಕುಂತ ಜನಕ್ಕೆಲ್ಲ ನಮ್ಮನಮನ'

ಎಂಬ ಸಾಲುಗಳೊಂದಿಗೆ ಆರಂಭಿಸುತ್ತಾರೆ. ಇವರ ಸಾಹಿತ್ಯದಲ್ಲಿ ಗೋಡಗೇರಿಯ ದೇವಿ ಪಾರೆಂಬಿ ಕರಿಯವ್ವನಿಗೂ ಅಗ್ರಸ್ಥಾನ. ಈಕೆ ಕರಿಮಾಯಿ, ಕರಿಯವ್ವ, ಪಾರೆಂಬಿ ಕರಿಯವ್ವ, ಕುಮುದವ್ವ ಎಂಬ ವಿವಿಧ ನಾಮಗಳಿಂದ ಇವರ ಸಾಹಿತ್ಯದಲ್ಲಿ ಪ್ರವೇಶಿಸುತ್ತಾಳೆ. "ಇಂಥ ಬಂಗಾರದ ತಾಯಿ ಆದಿಗೆ ಆದಿ ಹಡೆದವ್ವ ಕಡೆಯ ಕಡೆ ಗೊತ್ತಿರದವ್ವ ಇದಿಮಾಯಿ" ಎಂದು ಅವಳನ್ನು ಸ್ಮರಿಸಿ ಅವಳೇ ನನಗೆ ಬರೆಯುವ ಬುದ್ಧಿಕೊಟ್ಟಳೆಂದು ಹೇಳಿ ಅವಳನ್ನು ಕೃತಜ್ಞತೆಯಿಂದ ಸ್ಮರಿಸುತ್ತಾರೆ. ಇವರೊಂದಿಗೆ ಹಂಪಿಯ ವಿರೂಪಾಕ್ಷನಿಗೂ ಅವರ ಭಕ್ತಿ ಅರ್ಪಿತವಾಗುತ್ತದೆ. ತಮ್ಮ ವಿದ್ಯೆಗೇ ಸಹಾಯ ಮಾಡಿದ ಸಾವಳಗಿ ಶಿವಲಿಂಗನನ್ನು ಧನ್ಯತೆಯಿಂದ ಪ್ರಾರ್ಥಿಸುತ್ತಾರೆ.

ಗೋಡಗೇರಿಯಲ್ಲಿ ಅವಧೂತ ಪರಂಪರೆಯ ಸನ್ಯಾಸಿಗಳು ಆಶ್ರಯ ಪಡೆದಿದ್ದರು. ಸ್ವತಃ ಕಂಬಾರರ ಸೋದರಮಾವ ರಾಮಪ್ಪ ವಾಮಾಚಾರದ ತಾಂತ್ರಿಕ ಸಾಧಕನಾಗಿದ್ದನು. ಈತ ತನ್ನ ಮನೆಯಲ್ಲಿ

ಹೆಂಡದೊಂದಿಗೆ ತಾಂತ್ರಿಕ ಸಾಧನೆಯಲ್ಲಿ ತೊಡಗಿರುತ್ತಿದ್ದನು. ಅವಧೂತ ಸಾಧುಗಳು ಈತನ ಮನೆಯಲ್ಲಿ ಈತನ ಜೊತೆಯಲ್ಲಿ ಚರ್ಚೆಯಲ್ಲಿ ತೊಡಗಿರುತ್ತಿದ್ದರು. ರಾತ್ರಿವೇಳೆ ಕ್ರಿಯಾತ್ಮಕರಾಗಿ ತಮ್ಮ ತಾಂತ್ರಿಕ ಸಾಧನೆಗಳಲ್ಲಿ ನಿರತರಾಗಿರುತ್ತಿದ್ದರು. ಇವರ ಈ ತಾಂತ್ರಿಕ ಸಾಧನೆಗಳು ಕಂಬಾರರನ್ನು ಅಧೋಲೋಕಕ್ಕೆ ಕರೆದೊಯ್ಯುತ್ತಿದ್ದವು. ಈ ಅದ್ವಯವಾದಿಗಳಿಂದ ಪ್ರಭಾವಿತರಾದ ಕಂಬಾರರು ತಮ್ಮ ಸಾಹಿತ್ಯದಲ್ಲಿ ಅಧೋಲೋಕದ ಪರಿಚಯ ಮಾಡುತ್ತಾರೆ. ಅವಧೂತರಿಗೆ ದೈವಿ ಸಾಕ್ಷಾತ್ಕಾರ ಒದಗಿಸುವ ಕಾಮ ಕಂಬಾರರ ಸಾಹಿತ್ಯದಲ್ಲಿ ಸಮೃದ್ಧವಾಗಿ ಬಳಕೆಯಾಯಿತು. ಇವರು 'ಸಿಂಗಾರೆವ್ವ ಮತ್ತು ಅರಮನೆ' ಕಾದಂಬರಿಯಲ್ಲಿ ಬರುವ ಹುಚ್ಚಯ್ಯನ ಪಾತ್ರ ಮತ್ತು 'ಶಿಖರಸೂರ್ಯ' ಕಾದಂಬರಿಯಲ್ಲಿ ಬಳಸುವ ರಸವಿದ್ಯೆ, ವಿಷವಿದ್ಯೆ ಮುಂತಾದವುಗಳು ಇವರ ಅಧೋಲೋಕದ ಪರಿಚಯದಿಂದ ಹುಟ್ಟಿದವು ಎನ್ನಬಹುದು. ಈ ಅವಧೂತ ಪಂಥದ ಪರಿಚಯ ಕಂಬಾರರಲ್ಲಿ ವಿಸ್ಮಯ, ನಿಗೂಢತೆ ಸೃಷ್ಟಿಗೆ ಕಾರಣವಾದವೆನ್ನಬಹುದು.

ರಾಷ್ಟ್ರೀಯ ಸ್ವಯಂಸೇವಾ ಸಂಘ

೧೯೪೪ರಲ್ಲಿ ಗೋಡಗೇರಿಯನ್ನು ಪ್ರವೇಶಿಸಿದ ರಾಷ್ಟ್ರೀಯ ಸ್ವಯಂ ಸೇವಾ ಸಂಘ ಊರ ಜನತೆಯಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಜಾಗೃತಗೊಳಿಸಿತು. ಈ ಸಂಘ ಪ್ರತಿದಿನ ಪ್ರಭಾತಪೇರಿ ಲಾಟಿ ತಿರುವುದು ಮುಂತಾದ ಚಟುವಟಿಕೆಗಳಿಂದ ಕ್ರಿಯಾಶೀಲವಾಗಿತ್ತು. ಆರ್. ಎಸ್.ಎಸ್. ನಾಯಕ್ ಜಗನ್ನಾಥರಾವ್ ಜೋಶಿ ಗೋಡಗೇರಿಗೆ, ಗೋಲ್ವಾಲ್ಕರ್ ಗುರೂಜಿ ಬೆಳಗಾವಿಗೆ ಭೇಟಿಕೊಟ್ಟಿದ್ದರು. ಇದರಿಂದ ಪ್ರಭಾವಿತರಾದ ಚಂದ್ರಶೇಖರರು ದಿನವೂ ತಪ್ಪದೇ ಪ್ರಭಾತ್ ಪೇರಿ, ಲಾಠಿ ತಿರುವಿಕೆಯಲ್ಲಿ ಭಾಗವಹಿಸುತ್ತಿದ್ದರು. ಅಲ್ಲಿಯ ಭಾಷಣಗಳಲ್ಲಿ ಹೇಳುತ್ತಿದ್ದ 'ಈ ಬ್ರಿಟಿಷರಿಂದಾಗಿ ದಿನಾ ನಮ್ಮ ಭಾರತಾಂಬೆ ಕಣ್ಣೀರು ಸುರಿಸುತ್ತಾಳೆ'[೯], 'ಹೆಡೆಗವಾರ ಅವರು ದಿನಾ ಭಾರತಾಂಬೆಯ ಬಗ್ಗೆ ಎಷ್ಟು ಚಿಂತನೆ ಮಾಡುತ್ತಿದ್ದರೆಂದರೆ ನಿಮಿಷಕ್ಕೆ ಅವರಲ್ಲಿ ಒಂದು ಹನಿ ರಕ್ತ ಸುಡುತ್ತಿತ್ತು.'[೧೦] ಎಂಬ ಮಾತುಗಳು ಕಂಬಾರರಲ್ಲಿ ಬ್ರಿಟಿಷರ ಬಗ್ಗೆ ರೋಷ ಹುಟ್ಟಿಸಿದವು. ಇದರಿಂದಾಗಿ ಕಂಬಾರರು ಆರ್.ಎಸ್.ಎಸ್‌ದ ಸ್ವಯಂಸೇವಕರಾದರು. ಆದರೆ ಈ ಸಂಸ್ಥೆ ಗಾಂಧೀಜಿಯವರು ಸತ್ತ ದಿನವೂ ಶೋಕಾಚರಣೆ ಮಾಡದೆ ಪ್ರಭಾತಪೇರಿ, ಲಾಠಿ ತಿರುವಿಕೆ ಕಾರ್ಯಗಳನ್ನು ಮುಂದುವರೆಸಿತು. ಇದು ಕಂಬಾರರಲ್ಲಿ ಆರ್.ಎಸ್.ಎಸ್ ಬಗ್ಗೆ ಮುಜುಗರ ಉಂಟುಮಾಡಿತು. ಇದರಿಂದಾಗಿ ಕಂಬಾರರು ಅಂದೇ ಆರ್.ಎಸ್.ಎಸ್. ತೊರೆದರು.

ಸಾಮಾಜಿಕ ವ್ಯವಸ್ಥೆ

ಗೋಡಗೇರಿ ಹುಕ್ಕೇರಿ ತಾಲೂಕಿಗೆ ಸೇರಿದ್ದರೂ. ಸಮೀಪದ ಗೋಕಾಕ, ಬೆಳಗಾವಿಗಳೊಂದಿಗೆ ತನ್ನ ಆಡಳಿತಾತ್ಮಕ. ವ್ಯವಹಾರಿಕ ಸಂಬಂಧವನ್ನು ಹೊಂದಿತ್ತು. ಪ್ರತಿಯೊಂದು ಊರಿನಲ್ಲಿರುವಂತೆ ಈ ಊರಿನಲ್ಲಿಯೂ ಶ್ರೀಮಂತ–ಬಡವ, ಮೇಲ್ಜಾತಿ–ಕೆಳಜಾತಿ, ಮೇಲ್ವರ್ಗ–ಕೆಳವರ್ಗ ಎಂಬ ಭೇಧಭಾವಗಳಿದ್ದವು. ಆದರೆ ಈ ಭೇದಭಾವಗಳಿಗಿಂತ ಸಾಮಾಜಿಕ ಹೊಂದಾಣಿಕೆ ಇಲ್ಲಿ ಪ್ರಾಶಸ್ತ್ಯ ಪಡೆದಿತ್ತು. ಇಲ್ಲಿರುವ ಪ್ರತಿಯೊಂದು ಕುಟುಂಬದವರು ಅಣ್ಣ ತಮ್ಮಂದಿರಂತೆ ಬಾಳುತ್ತಿದ್ದರು. ಇಲ್ಲಿ ಒಬ್ಬರ ಕಷ್ಟಕ್ಕೆ ಮತ್ತೊಬ್ಬರು ಸ್ಪಂದಿಸುವ, ಅವರಿಗೆ ಸಹಾಯ ಮಾಡುವ, ಅನುಕಂಪದ ಮನೋಭಾವವಿತ್ತು. ದುಡಿದು ಗಳಿಸಿದ್ದನ್ನು

ಹಂಚಿ ಉಣ್ಣುವ ಔದಾರ್ಯತೆ ಈ ಊರಲ್ಲಿತ್ತು. ಕೃಷಿ ಪ್ರಧಾನ ಉದ್ಯೋಗವಾಗಿದ್ದು ಅದನ್ನು ಆಶ್ರಯಿಸಿದ ಇತರ ಕುಲಕಸುಬುಗಳನ್ನು ಜನ ಮಾಡುತ್ತಿದ್ದರು.

ಈ ಊರಿನ ತಂಟೆ ತಕರಾರುಗಳನ್ನು ಪರಿಹರಿಸಲು ಇಲ್ಲಿ ಪಂಚಾಯ್ತಿ ವ್ಯವಸ್ಥೆಯೂ ಇತ್ತು. ಇದು ಈ ಊರಿನ ಕೋರ್ಟಾಗಿತ್ತು. ಊರಿನ ಎಲ್ಲ ತಂಟೆ ತಕರಾರುಗಳು ಇಲ್ಲಿಯೇ ಬಗೆಹರಿಯುತ್ತಿದ್ದವು, ಹೊರತು ಪರ ಊರಿಗೆ ಹೋಗಿ ಕೋರ್ಟ್ ಕಟಕಟೆ ಹತ್ತುತ್ತಿರಲಿಲ್ಲ. ಈ ಪಂಚಾಯ್ತಿಯಲ್ಲಿ ಇಬ್ಬರು ಲಿಂಗಾಯತರು, ಒಬ್ಬ ಹರಿಜನ, ಒಬ್ಬ ಮುಸ್ಲಿಂ, ಒಬ್ಬ ಕಂಬಾರ ಹೀಗೆ ವಿವಿಧ ಜಾತಿಗೆ ಸೇರಿದ ಐದು ಜನ ಪಂಚರಿದ್ದರು. ಊರಿನ ಎಲ್ಲಾ ಜಾತಿಯ ಜನರಿಗೆ ಅವಕಾಶ ಕಲ್ಪಿಸಿ ಜಾತಿಮತದ ಬೇಧ ತೊರೆದು ಹೊಂದಿ ಬಾಳುವ ಸೌಹಾರ್ದತೆಯ ತತ್ವವನ್ನು ಈ ಪಂಚಾಯ್ತಿ ಅಳವಡಿಸಿಕೊಂಡಿತ್ತು. ಐದು ಜನ ಪಂಚರಲ್ಲಿ ಕಂಬಾರರ ತಂದೆ ಬಸವಣ್ಣೆಪ್ಪನವರು ಒಬ್ಬರಾಗಿದ್ದರು.

ಗೋಡಗೇರಿಯ ಈ ಸೌಹಾರ್ದಯುತ ಪಂಚಾಯ್ತಿ ಕಂಬಾರರ ಮನಸ್ಸನ್ನು ಆಕರ್ಷಿಸಿತ್ತು. ಅಲ್ಲಿಯ ನ್ಯಾಯ ನಿಷ್ಠುರತೆ, ತಮ್ಮ ಊರಿನ ವ್ಯಾಜ್ಯಗಳು, ಕೋರ್ಟ್ ಕಟಕಟೆ ಹತ್ತಿ ಮತ್ತೊಬ್ಬರೇಕೆ ಪರಿಹರಿಸಬೇಕು? ತಮ್ಮತಮ್ಮಲ್ಲೇ ಪರಿಹರಿಸಿಕೊಂಡರಾಗದೇ? ಎಂಬ ಅವರ ಸ್ವಾಭಿಮಾನ, ಬಡವ – ಬಲ್ಲಿದ, ಮೇಲ್ಜಾತಿ–ಕೆಳಜಾತಿ ಎಂಬ ಭೇದ–ಭಾವವಿಲ್ಲದೆ ನೀಡುತ್ತಿದ್ದ ನ್ಯಾಯ ಪರ ತೀರ್ಮಾನಗಳು, ಬಡವರಿಗೂ ಭಾರವಾಗದಂತೆ ಅವರು ವಿಧಿಸುತ್ತಿದ್ದ ದಂಡಗಳು ಕಂಬಾರರ ಮನಸ್ಸಿನ ಮೇಲೆ ಪ್ರಭಾವ ಬೀರಿದವು. ಕಂಬಾರರ ಸಾಹಿತ್ಯದಲ್ಲಿನ ಸೌಹಾರ್ದತೆ, ತಮ್ಮ ನೆಲದ ಬಗೆಗಿನ ಅಭಿಮಾನ, ಅಖಂಡತೆಯ ಕಲ್ಪನೆಗಳಿಗೆ ಈ ಪಂಚಾಯ್ತಿಯೇ ಕಾರಣವಾಯಿತೆನ್ನಬಹುದು ಅವರ 'ಕರಿಮಾಯಿ' ಕಾದಂಬರಿಯಲ್ಲಿ ಅನೈತಿಕ ಸಂಬಂಧ ಹೊಂದಿದ್ದ ತನ್ನ ತಂದೆ ಮತ್ತು ಹೆಂಡತಿಯನ್ನು ಕೊಂದ ನಿಂಗೂನನ್ನು ಗುಡಸೀಕರ ಕೋರ್ಟಿಗೆ ಒಯ್ದು ತನ್ನ ವಕೀಲಕಿ ಮೂಲಕ ಪರಿಹರಿಸಬೇಕೆಂದು ಪ್ರಯತ್ನಿಸುವಾಗ ಅದಕ್ಕೆ ಅವಕಾಶ ಕೊಡದೆ ಊರಗೌಡ ತಮ್ಮೂರಲ್ಲಿ ಅದನ್ನು ಪರಿಹರಿಸುವದು, 'ಸಿಂಗಾರೆವ್ವ ಮತ್ತು ಅರಮನೆ' ಕಾದಂಬರಿಯಲ್ಲಿ ದೇಸಾಯಿ ಅರಮನೆಗೆ ಪೋಲಿಸರು ಬರುವುದನ್ನು ವಿರೋಧಿಸುವದು ಕಂಬಾರರ ಗೋಡಗೇರಿ ಪಂಚಾಯ್ತಿಯ ಪ್ರತಿಬಿಂಬ ಎನ್ನಬಹುದು. ಜೊತೆಗೆ ಗೋಡಗೇರಿಯ ಸಮಾಜದಲ್ಲಿದ್ದ ಸಮಾನತೆ, ಹೊಂದಾಣಿಕೆ, ಪ್ರೀತಿ, ವಾತ್ಸಲ್ಯ, ಅನುಕಂಪ, ಔದಾರ್ಯ ಮುಂತಾದ ಮಾನವೀಯ ಗುಣಗಳು ಕಂಬಾರರಲ್ಲಿ ಆಳವಾಗಿ ಬೇರೂರುವುದರೊಂದಿಗೆ ಅವರ ಸಾಹಿತ್ಯವನ್ನು ಪ್ರವೇಶಿಸಿದವು.

ಕ್ರಿಯಾತ್ಮಕ ಗ್ರಾಮ

ಗೋಡಗೇರಿ ಸದಾ ಕ್ರೀಯಾಶೀಲವಾದ ಗ್ರಾಮ. ಆ ಗ್ರಾಮದಲ್ಲಿ ನಡೆಯುತ್ತಿದ್ದ ಪ್ರತಿಯೊಂದು ಘಟನೆ, ಸನ್ನಿವೇಶವನ್ನು ಕುರಿತು ಹಾಡು ಕತೆಗಳನ್ನು ಕಟ್ಟುವಷ್ಟು ಕ್ರಿಯಾತ್ಮಕ ವ್ಯಕ್ತಿಗಳಾಗಿದ್ದರು ಇಲ್ಲಿಯ ಜನ ಈ ಗುಣ ಊರ ಹಿರಿಯರಿಗೆ ಮಾತ್ರ ಸೀಮಿತವಾಗಿರದೆ ಬಾಲಕರು ಸಹ ಇದರಲ್ಲಿ ಪ್ರಾವೀಣ್ಯರಾಗಿದ್ದರು.

ಗೋಡಗೇರಿಯ ಹತ್ತಿರ ಹರಿಯುವ ಘಟಪ್ರಭಾ ನದಿಯು ಅಲ್ಲಿ ಉತ್ತರಾಭಿಮುಖವಾಗಿ ತಿರುಗುತ್ತದೆ. ಮಳೆಗಾಲದಲ್ಲಿ ಈ ನದಿಗೆ ಮಹಾಪೂರ ಬರುತ್ತದೆ. ಆ ವೇಳೆಯಲ್ಲಿ ಅಲ್ಲಿ ಕೊಲೆಗಳು ಹೆಚ್ಚಾಗುತ್ತಿದ್ದವು.

ವ್ಯಕ್ತಿಗಳ ಬಗ್ಗೆ ದ್ವೇಷ ಇರುವವರು ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿ ಆ ಹೆಣದ ಗುರುತು ಸಿಗದಂತೆ ಮಾಡಿ ನದಿಗೆ ಎಸೆದು ಬಿಡುತ್ತಿದ್ದರು. ಆ ಹೆಣ ತಿರುವಿನಲ್ಲಿ ಬಂದು ನಿಂತಾಗ ಗೋಡಗೇರಿಯ ಕ್ರಿಯೇಟಿವ್ ಆದ ಜನ ಆ ಹೆಣ ಯಾರದ್ದು? ಯಾಕೆ ಕೊಲೆಯಾಯಿತು? ಯಾರು ಮಾಡಿದರು? ಎಂಬುದರ ಬಗ್ಗೆ ರೋಚಕವಾದ ಕತೆಗಳನ್ನು ಕಟ್ಟಿ ಹೇಳುತ್ತಿದ್ದರು. ಆ ವೇಳೆ ಊರಲ್ಲಿ ಭಯದ ವಾತಾವರಣ ಏರ್ಪಡುತ್ತಿತ್ತು. ಜೊತಗೆ ಆ ಹೆಣಗಳು ಬ್ರಿಟಿಷ ಕೆಲಸಗಾರರಿಗೆ ಸೇರಿದ್ದರೆ ಬ್ರಿಟಿಷರು ತನಿಖೆಗೆ ಬರುತ್ತಿದ್ದರು. ಇದರಿಂದ ಇವರಲ್ಲಿ ಇನ್ನಷ್ಟು ಭಯ ಹೆಚ್ಚುತಿತ್ತು."[೧೧] ಇಂತಹ ಕತೆ ಕಟ್ಟುವ ಕೆಲಸಗಳಲ್ಲಿ ಕಂಬಾರರು ಭಾಗಿಯಾಗಿರುತ್ತಿದ್ದರು. ಜೊತೆಗೆ ಕೊಲೆ ವಿಚಾರ ಬಂದಾಗ ತಮ್ಮೂರ ಬಗ್ಗೆ ಹೆಮ್ಮೆ ಪಡುತ್ತಿದ್ದರು.

ಸ್ವಾತಂತ್ರ ಚಳುವಳಿಯಲ್ಲಿ ಭಾಗವಹಿಸಿದ್ದ ಗೋಡಗೇರಿಯ ಜನ ಜೈಲು ಸೇರಿದ್ದರು. ಜೈಲಿನಿಂದ ವಾಪಸ್ಸಾದ ನಂತರ ಅವರು ತಾವು ಬ್ರಿಟಿಷರನ್ನು ಹೇಗೆ ಎದುರಿಸುತ್ತಿದ್ದೆ, ಅವರೊಡನೆ ಯಾವ ರೀತಿ ಕಾದಾಡುತ್ತಿದ್ದೆವು ಎಂಬುದರ ಬಗ್ಗೆ ಕಟ್ಟುಕತೆಗಳನ್ನು ಕಟ್ಟಿ ಹೇಳುತ್ತಿದ್ದರು."[೧೨]

ಬ್ರಿಟಿಷರು ಇವರ ಕ್ರಿಯಾತ್ಮಕತೆಯನ್ನು ಹೆಚ್ಚಿಸಿದ್ದರು. ಗೋಡಗೇರಿಯ ಬಿ.ಎ.ಕಲಿಯುತ್ತಿದ್ದ ಒಬ್ಬ ಹುಡುಗ ಬ್ರಿಟಿಷರ ಹೆಂಗಸೊಬ್ಬಳು ಬಂದು ತನ್ನ ಕೈಹಿಡಿದುಕೊಂಡಳೆಂದು, ತನ್ನನ್ನು ಮದುವೆಯಾಗು ಎಂದು ಕೇಳಿದಳೆಂದು ತಾನು ಆಕೆಯನ್ನು ನಿರಾಕರಿಸಿದೆನೆಂದು ಕಟ್ಟುಕತೆ ಕಟ್ಟಿ ಊರ ಜನರಿಗೆ ಹೇಳುತ್ತಿದ್ದ."[೧೩]

ಈ ಗೋಡಗೇರಿ ಜನ ಕತೆಗಳನ್ನು ಸೃಷ್ಟಿಸುವಂತೆ ಪದ್ಯ ಸೃಷ್ಟಿಸುವುದರಲ್ಲಿಯೂ ನಿಪುಣರು. ಇವರು ಸಂಭಾಷಣೆಗಳನ್ನು ಮಾಡುವುದು ಹಾಡುಗಳಲ್ಲಿಯೇ. ನಾವು ಗದ್ಯದಲ್ಲಿ ಪ್ರಶ್ನೆ ಕೇಳಿದರೆ ಅವರು ಪದ್ಯದಲ್ಲಿಯೇ ಉತ್ತರ ನೀಡುವಂತಹ ಕ್ರಿಯಾತ್ಮಕತೆ ಉಳ್ಳವರು ಇಲ್ಲಿಯ ಜನ.

ಕ್ರಿಯಾತ್ಮಕ ವ್ಯಕ್ತಿಗಳು

ಕ್ರಿಯಾತ್ಮಕ ಗ್ರಾಮವಾದ ಗೋಡಗೇರಿಯು ಅನೇಕ ಕ್ರೀಯಾತ್ಮಕ ವ್ಯಕ್ತಿಗಳನ್ನು ಹೊಂದಿತ್ತು. ಇವರು ಸಣ್ಣ ವಿಷಯವನ್ನು ತೆಗೆದುಕೊಂಡು ಅದ್ಭುತ ರೀತಿಯಲ್ಲಿ ಕತೆ ನಿರ್ಮಿಸಿ ಜನರನ್ನು ಆಶ್ಚರ್ಯಗೊಳಿಸುವ ವ್ಯಕ್ತಿತ್ವ ಹೊಂದಿದ್ದರು. ಅವರಲ್ಲಿ ಪ್ರಮುಖರಾದವರು ಗುಡಶ್ಯಾ ಮತ್ತು ಕುಲಕರ್ಣಿ ದತ್ತು.

ಗುಡಶ್ಯಾ

ಗುಡಶ್ಯಾ ತನಗೆ ಸಿಕ್ಕ ಸಣ್ಣ ವಿಷಯವನ್ನು ಕ್ಷಣದಲ್ಲಿ ನಾಟಕವನ್ನಾಗಿ ಪರಿವರ್ತಿಸಿ ಹೇಳುವ ಅಪ್ರತಿಮ ಕೌಶಲ್ಯಗಾರ. ಕಂಬಾರರ ತಂದೆ ಪೇಪರನ್ನು ಓದಿ ಹೇಳುತ್ತಿರುವಾಗ, ಅಲ್ಲಿ ಬಂದ ವಿಷಯವನ್ನು ಅವಲಂಬಿಸಿ ನಾಟಕ ರಚನೆ ಮಾಡಿಬಿಡುತ್ತಿದ್ದ. ಒಮ್ಮೆ ಕಂಬಾರರ ತಂದೆ ಜಿನ್ನಾ ಸಾಹೇಬರು ಗಾಂಧಿಜೀಯವರನ್ನು ಭೇಟಿಯಾದರು ಎಂಬ ಸುದ್ಧಿಯನ್ನು ಓದುತ್ತಿರುವಂತೆ ಗುಡಶ್ಯಾ ಅದನ್ನು ಒಂದು ನಾಟಕವನ್ನಾಗಿ ಪರಿವರ್ತಿಸಿ ಕಂಬಾರರಿಗೆ ಹೇಳಿದನಂತೆ."[೧೪]

ಕುಲಕರ್ಣಿ ದತ್ತು

ಕುಲಕರ್ಣಿ ದತ್ತು ಕಂಬಾರರ ಮೇಲೆ ಬಹಳ ಪ್ರೀತಿ ಇಟ್ಟ ವ್ಯಕ್ತಿ. ಈತ ಗೋಡಗೇರಿ ಗ್ರಂಥಾಲಯದಲ್ಲಿದ್ದ ೩೦೦ ಪುಸ್ತಕಗಳನ್ನು ತಂದು ಕಂಬಾರರ ಹತ್ತಿರ ಓದಿಸಿ ಅವನ್ನೆಲ್ಲಾ ತಾನೇ ಓದಿದೆನೆಂದು ಜಂಭ ಕೊಚ್ಚಿಕೊಳ್ಳುತ್ತಿದ್ದನಂತೆ. ಈತ ತನ್ನ ಹತ್ತಿರವಿದ್ದ 'ವೀವೇಕ ಚಿಂತಾಮಣಿ' ಗ್ರಂಥವನ್ನು ತನಗೆ ಸರಿ ಬಂದಂತೆ ಓದಿ ತನಗೆ ಸರಿ ಎನಿಸಿದ ರೀತಿಯಲ್ಲಿ ಅದರ ಅರ್ಥ ಹೇಳುತ್ತಿದ್ದ. ಆತ 'ದತ್ತು ನಾಮ' ಎಂಬ ಹೆಸರಿನ ಆತ್ಮ ಚರಿತ್ರೆಯನ್ನು ಬರೆದುಕೊಂಡಿದ್ದ. ಅದರಲ್ಲಿ ಗೋಡಗೇರಿಯ ಪಾಪ ಹೆಚ್ಚಾಗಿ ಅದನ್ನು ಉದ್ಧಾರ ಮಾಡಲು ಶಿವಪಾರ್ವತಿಯರು ದತ್ತುನನ್ನು ಭೂಮಿಗೆ ಕಳಿಸಿದರೆಂದು ಬರೆದುಕೊಂಡಿದ್ದ. ಭಾಮಿನಿ ಷಟ್ಪದಿಯಲ್ಲಿ ಈ ಗ್ರಂಥ ಬರೆದಿದ್ದು ಅದನ್ನು ಚೆನ್ನಾಗಿ ಹಾಡುತ್ತಿದ್ದ. ಇವನ ಜಾಣತನಕ್ಕೆ ಬೆರಗಾಗಿದ್ದ ಊರ ಗೌಡರು ಒಮ್ಮೆ ಕಂಬಾರರ ತಂದೆಯನ್ನು "ಅದೇನು ನೀ ಗಾಂಧಿ, ಗಾಂಧಿ ಎನ್ನುತ್ತೀಯಲ್ಲಾ ಆ ಗಾಂಧಿ ನಮ್ಮ ಕುಲಕರ್ಣಿಗಿಂತಲೂ ಶ್ಯಾಣ್ಯಾ ಅದಾನೇನ್ಲೆ"[೧೫] ಎಂದು ಕೇಳಿದ್ದರಂತೆ.

ಹೀಗೆ ಸತ್ತ ಹೆಣಗಳ ಬಗ್ಗೆ ಕತೆ ಕಟ್ಟುವ, ತಮಗೆ ಗೊತ್ತಿರುವ ಅಲ್ಪ ವಿಷಯವನ್ನು ರಂಜನೀಯ ಕತೆಯನ್ನಾಗಿ ಪರಿವರ್ತಿಸುವ ಕ್ರಿಯಾತ್ಮಕ ಗ್ರಾಮ, ಕ್ರಿಯಾತ್ಮಕ ವ್ಯಕ್ತಿಗಳ ನಡುವೆ ಕಂಬಾರರು ಬೆಳೆದರು. ಈ ಪರಿಸರ ಅವರನ್ನು ಚಿಕ್ಕ ವಯಸ್ಸಿನಲ್ಲಿಯೇ ಕಾವ್ಯ, ಲಾವಣಿ, ಕತೆ ರಚಿಸುವ ಕ್ರಿಯಾತ್ಮಕ ವ್ಯಕ್ತಿಯನ್ನಾಗಿ ಮಾಡಿತು. ಮುಂದೆ ಬೆಳೆದಂತೆ ಅವರು ತಮ್ಮ ಈ ಕ್ರಿಯಾತ್ಮಕತೆಯನ್ನು ಮತ್ತಿಷ್ಟು ಜಾಗೃತಗೊಳಿಸಿ ಶ್ರೇಷ್ಠ ಸಾಹಿತ್ಯ ರಚನೆಕಾರರಾದರು. ಅವರೂರಿನ ಕ್ರಿಯಾತ್ಮಕ ವ್ಯಕ್ತಿಗಳಾದ ಗುಡಶ್ಯಾ, ದತ್ತು ಬಗ್ಗೆ ಗೌರವ ಹೊಂದಿದ್ದ ಕಂಬಾರರು ತಮ್ಮ ಕಾದಂಬರಿಯ ಪಾತ್ರಗಳಿಗೆ ಅವರ ಹೆಸರನ್ನು ಕೊಟ್ಟಿದ್ದಾರೆ.

ರಾಜಕೀಯ ಪ್ರಜ್ಞೆ

ಗೋಡಗೇರಿಯ ಜನ ರಾಜಕೀಯವಾಗಿ ಪ್ರಜ್ಞಾವಂತರಾಗಿದ್ದವರು. ರಾಜಕಾರಣಿಗಳು ಮಾಡುವ ಅನ್ಯಾಯವನ್ನು ಇವರು ಸಹಿಸರು. ಗೋಡಗೇರಿಯ ಜನ "ನಿಮ್ಮ ಪಕ್ಷಗಳು ನಮಗೆ ದ್ರೋಹ ಮಾಡುತ್ತಿದ್ದು ಆದ್ದರಿಂದ ನಾವು ಓಟು ಹಾಕುವುದಿಲ್ಲ"[೧೬] ಎಂದು ಹೇಳಿ ೩ ಬಾರಿ ಚುನಾವಣೆಯಲ್ಲಿ ಮತದಾನ ಮಾಡದೆ ಚುನಾವಣೆ ಬಹಿಷ್ಕರಿಸಿದರಂತೆ. ಹೀಗೆ ರಾಷ್ಟ್ರಾಭಿಮಾನದೊಂದಿಗೆ ರಾಜಕೀಯ ಜವಾಬ್ದಾರಿ ಹೊಂದಿದ ಜನ ಇವರೆನ್ನಬಹುದು.

ವೃತ್ತಿ ಜೀವನ

೧೯೬೨ರಲ್ಲಿ ಸ್ನಾತಕೋತ್ತರ ವಿದ್ಯಾಭ್ಯಾಸ ಮುಗಿಸಿದ ಕಂಬಾರರು ಅದೇ ವರ್ಷ ತಾವು ಕಲಿತ ಬೆಳಗಾವಿಯ 'ಲಿಂಗರಾಜ್' ಕಾಲೇಜಿಗೆ ಅಧ್ಯಾಪಕರಾಗಿ ಸೇರಿಕೊಂಡರು. ಇದು ಕಂಬಾರರ ಜೀವನದ ಮಹತ್ವದ ಕ್ಷಣ. ಇದುವರೆಗೆ ತಾವು ಕಲಿತ ಕಾಲೇಜಿನಲ್ಲಿ ಕಲಿತು ಪ್ರತಿಷ್ಠಿತ ವ್ಯಕ್ತಿಗಳಾದವರನ್ನು ಆ ಕಾಲೇಜಿನ ಕಾರ್ಯಕ್ರಮಗಳಿಗೆ ಅತಿಥಿಗಳಾಗಿ ಕರೆದು, ಅವರನ್ನು ಮುಖ್ಯಸ್ಥರು ನಮ್ಮ ಶಾಲೆಯಲ್ಲಿ ಕಲಿತ ಇವರು ಇಂಥ ದೊಡ್ಡ ಸ್ಥಾನದಲ್ಲಿದ್ದಾರೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದರು. ಆಗ ಆ ವ್ಯಕ್ತಿಗಳನ್ನು ಬೆರಗುಗಣ್ಣುಗಳಿಂದ ಮಹಾತ್ಮರೆನ್ನುವಂತೆ ನೋಡುತ್ತಿದ್ದರು ಕಂಬಾರರು. ಇಂದು ಆ ಸ್ಥಾನ ತನಗೆ ದೊರೆತದ್ದರಿಂದ ಕಂಬಾರರಿಗೆ ಜೀವನದಲ್ಲಿ ಮರೆಯದ ಸಂತೋಷವನ್ನುಂಟು ಮಾಡಿತು.

ನಂತರ ೧೯೬೪-೧೯೬೭ರ ವರೆಗೆ ಸಾಗರದ 'ಲಾಲ್‌ಬಹುದ್ದೂರ್‌ಶಾಸ್ತ್ರಿ' ಕಾಲೇಜಿನಲ್ಲಿ ಅಧ್ಯಾಪಕರಾಗಿ ಕಾರ್ಯನಿರ್ವಹಿಸಿದರು. ೧೯೬೮ರಲ್ಲಿ ಎ.ಕೆ. ರಾಮಾನುಜಂರ ಕರೆಯ ಮೇರೆಗೆ ಪುಲ್‌ಬ್ರೈಟ್ ಸ್ಕಾಲರ್‌ಶಿಪ್‌ನಲ್ಲಿ ಅಮೇರಿಕಾದ ಶಿಕಾಗೊ ವಿ.ವಿಗೆ ಹೋದರು. ೧೯೬೮-೬೯ರಲ್ಲಿ ಸ್ಕಾಲರ್‌ಶಿಪ್ ಪಡೆದರು. ೧೯೬೯-೭೦ರ ವರೆಗೆ ಅಲ್ಲಿ ಅಧ್ಯಾಪಕರಾಗಿ ಕಾರ್ಯನಿರ್ವಹಿಸಿದರು. ೧೯೭೦ ರಿಂದ ೧೯೯೧ರ ವರೆಗೆ ಬೆಂಗಳೂರ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿ ಕಾರ್ಯನಿರ್ವಹಿಸಿದರು. ೧೯೯೨ರಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾಲಯದ ನಿರ್ಮಾಣದ ಜವಾಬ್ದಾರಿ ಹೊತ್ತು ಕಾರ್ಯ ನಿರ್ವಹಿಸಿದರು. ಜೊತೆಗೆ ೨ ಅವಧಿಗೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಕಾರ್ಯನಿರ್ವಹಿಸಿದರು.

ಸಾಹಿತಿಗಳ ಸಂಪರ್ಕ

ಚಂದ್ರಶೇಖರ ಕಂಬಾರರು ತಮ್ಮ ೧೧ನೇ ವಯಸ್ಸಿನಲ್ಲಿಯೇ ಸಾಹಿತ್ಯ ರಚನಾಕಾರ್ಯದಲ್ಲಿ ತೊಡಗಿದರು. ಆಗಲೇ ಅವರು ಚಿಕ್ಕ ಚಿಕ್ಕ ಕವನಗಳನ್ನು, ಲಾವಣಿಗಳನ್ನು ರಚಿಸುತ್ತಿದ್ದರು. ಅವರ ಈ ಸಾಹಿತ್ಯ ರಚನಾಕಾರ್ಯ ಹೆಚ್ಚು ಬಿರುಸುಗೊಂಡಿದ್ದು ಸಾಹಿತಿಗಳೊಂದಿಗೆ ಸಂಪರ್ಕ ಏರ್ಪಟ್ಟಾಗ ಇವರ ಸಂಪರ್ಕಕ್ಕೆ ಬಂದ ಪ್ರತಿಯೊಬ್ಬ ಸಾಹಿತಿಗಳು ಇವರ ಸಾಹಿತ್ಯವನ್ನು ಓದಿ, ಮೆಚ್ಚಿ, ಪ್ರೋತ್ಸಾಹ ನೀಡಿದರು. ಅವರ ಈ ಪ್ರೋತ್ಸಾಹ ಇವರ ಸಾಹಿತ್ಯ ರಚನೆಗೆ ಹೆಚ್ಚಿನ ಬಲವನ್ನು ತಂದಿತು.

ಕಂಬಾರರು ಹೈಸ್ಕೂಲ್ ಮೆಟ್ಟಿಲೇರಿದಾಗಲೇ ಅವರಿಗೆ ಗುರುಗಳಾಗಿ ದೊರೆತವರು ಸಾಹಿತಿ 'ಕೃಷ್ಣಮೂರ್ತಿ ಪುರಾಣಿಕರು'. ಸುಮಾರು ೭೦ ಕಾದಂಬರಿಗಳನ್ನು ಬರೆದಿರುವ 'ಬೀಳಗಿ'ಯ ಕೃಷ್ಣಮೂರ್ತಿ ಪುರಾಣಿಕರು ಗೋಕಾಕದ ಹೈಸ್ಕೂಲ್‌ನಲ್ಲಿ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಸಾಹಿತ್ಯಾಭಿಮಾನಿಯಾಗಿದ್ದ ಇವರು ವಿದ್ಯಾರ್ಥಿಗಳ ಚರ್ಚಾಗೋಷ್ಠಿ ಏರ್ಪಡಿಸಿ ವಿದ್ಯಾರ್ಥಿಗಳ ಸಾಹಿತ್ಯ ರಚನೆಗೆ ಪ್ರೋತ್ಸಾಹ ನೀಡುತ್ತಿದ್ದರು. ಕಂಬಾರರಲ್ಲಿಯ ಪ್ರತಿಭೆಯನ್ನು ಗುರುತಿಸಿದ ಪುರಾಣಿಕರು ಇವರ ಸಾಹಿತ್ಯ ರಚನೆಗೆ ಪ್ರೋತ್ಸಾಹ ನೀಡಿದರು. ಬಡತನದಿಂದಾಗಿ ಕಂಬಾರರು ಶಾಲೆ ಬಿಡಲು ಮುಂದಾದಾಗ ಪುರಾಣಿಕರು ಕಂಬಾರರಲ್ಲಿರುವ ಪ್ರತಿಭೆ ಮುರುಟಿ ಹೋಗಬಾರದೆಂದು ಬಯಸಿ ಫೀ ಮಾಫಿ ಮಾಡಿಸಿ, ಸಾವಳಗಿ ಮಠದಲ್ಲಿ ಆಶ್ರಯಕಲ್ಪಿಸಿ ಇವರ ಓದು, ಸಾಹಿತ್ಯ ರಚನೆಗೆ ಅವಕಾಶ ಕಲ್ಪಿಸಿದರು.

ಚಂದ್ರಶೇಖರ ಕಂಬಾರರು 'ಕುವೆಂಪು' ಮತ್ತು 'ಮಧುರಚೆನ್ನ'ರ ಅಭಿಮಾನಿಗಳಾಗಿದ್ದರು. ಅವರ ಪ್ರಭಾವವು ಕಂಬಾರರ ಮೇಲಾಯಿತು. ನಂತರ ಇವರ ಸಂಪರ್ಕಕ್ಕೆ ಬಂದವರು 'ಬಸವರಾಜ ಕಟ್ಟೀಮನಿ'ಯವರು. ಪ್ರಗತಿಶೀಲ ಸಾಹಿತ್ಯದ ಶ್ರೇಷ್ಠ ಕಾದಂಬರಿಕಾರರಾದ ಬಸವರಾಜ ಕಟ್ಟೀಮನಿಯವರ ಊರು ಮಲಾಮರಡಿ, ಕಂಬಾರರ ದೊಡ್ಡಮ್ಮನ ಊರು ಸುಲಧಾಳದ ಹತ್ತಿರದಲ್ಲಿಯೇ ಇತ್ತು. ಹೀಗಾಗಿ ಅವರೊಂದಿಗೆ ಆತ್ಮೀಯತೆಯನ್ನು ಬೆಳಸಿಕೊಂಡಿದ್ದ ಕಂಬಾರರು ತಮ್ಮ ಕವಿತೆಗಳನ್ನು ಕಟ್ಟೀಮನಿಯವರಿಗೆ ತೋರಿಸುತ್ತಿದ್ದರು. ಕಂಬಾರರ ಕವಿತೆಗಳನ್ನು ನೋಡಿ, ಓದಿ, ಮೆಚ್ಚಿ, ಪ್ರೋತ್ಸಾಹ ನೀಡುತ್ತಿದ್ದ ಬಸವರಾಜರು ತಮ್ಮ ಸಾಹಿತ್ಯ ಮಿತ್ರರರಿಗೆ ಇವರ ಪರಿಚಯ ಮಾಡಿಕೊಟ್ಟರು. ಕಟ್ಟೀಮನಿಯವರಿಂದ ಅನೇಕ ಸಾಹಿತ್ಯಮಿತ್ರರ ಪರಿಚಯವಾಗಿ ಅವರೊಂದಿಗೆ ಸಾಹಿತ್ಯದ ಚರ್ಚೆ ಮಾಡಲು, ಸಾಹಿತ್ಯದಲ್ಲಿ ಹೊಸತನತರಲು ಕಂಬಾರರಿಗೆ ಸಾಧ್ಯವಾಯಿತು.

ಬೆಳಗಾವಿ ಲಿಂಗರಾಜ್ ಕಾಲೇಜಿಗೆ ಸೇರಿದಾಗ ಇವರಿಗೆ ಗುರುಗಳಾಗಿ ದೊರೆತವರು ಸಾಹಿತ್ಯದ ಸಂಶೋಧಕ, ಸಂಪಾದಕ ಎಸ್.ಎಸ್.ಭೂಸನೂರಮಠರು. ಕಂಬಾರರ ಕವಿತೆಯನ್ನು ಓದಿ ಅವರನ್ನು ಕರೆಸಿ ಅವರ ಸಾಹಿತ್ಯ ರಚನೆಗೆ ಪ್ರೋತ್ಸಾಹ ನೀಡಿದರು. ಇವರಿಂದಾಗಿ ಕಂಬಾರರ ಸಾಹಿತ್ಯ ಹೊಸ ರೀತಿಯ ಹಾದಿ ಹಿಡಿದು ಸುಗಮವಾಗಿ ಸಾಗಲು ಸಾಧ್ಯವಾಯಿತು. ಭೂಸನೂರಮಠರು ತಮ್ಮ 'ವಚನ ಸಾಹಿತ್ಯ ಸಂಗ್ರಹ' ಕೃತಿಯ ರಚನಾಕಾರ್ಯದಲ್ಲಿ ಕಂಬಾರರ ಸಹಾಯ ಪಡೆದರು. ಈ ವಚನಗಳ ಅರ್ಥೈಸುವಿಕೆ ಕಾರ್ಯ ಕಂಬಾರರಲ್ಲಿ ವಚನಗಳ ಭಾಷೆ, ಲಯ, ದೇಶೀಯತೆಯ ಗುಣಗಳನ್ನು ಸವಿಸ್ತಾರವಾಗಿ ಅರಿತು ದೇಶೀಯತೆಯನ್ನು ತಮ್ಮ ಸಾಹಿತ್ಯದಲ್ಲಿ ಅಳವಡಿಸಿಕೊಳ್ಳಲು ಸಹಾಯಕವಾಯಿತು.

ಇಂಟರ್‌ನಲ್ಲಿ ಓದುತ್ತಿದ್ದಾಗ ಕಂಬಾರರು 'ಬೆಂಬತ್ತಿದ್ದ ಕಣ್ಣು' ನಾಟಕ ರಚಿಸಿದರು. ಅಧ್ಯಾಪಕರಾಗಿದ್ದ ತರುಣ ಸಾಹಿತಿ ಸುಮತೀಂದ್ರ ನಾಡಿಗರು ಆ ವೇಳೆಗಾಗಲೇ ಇವರಿಗೆ ಪರಿಚಯವಾಗಿ ಇಬ್ಬರಲ್ಲಿಯೂ ಆತ್ಮೀಯತೆ ಏರ್ಪಟ್ಟಿತ್ತು. ಅವರು ಕಂಬಾರರ ಈ ನಾಟಕ 'ಧಾರವಾಡ ಆಕಾಶವಾಣಿ'ಯಲ್ಲಿ ಪ್ರಸಾರವಾಗುವಂತೆ ಮಾಡಿದರು. ಜೊತೆಗೆ ಸುಮತೀಂದ್ರ ನಾಡಿಗರು ಶ್ರೀನಿವಾಸಮೂರ್ತಿ ಮೊದಲಾದ ಅಧ್ಯಾಪಕ ಮಿತ್ರರೊಂದಿಗೆ ಸೇರಿ ತಾವೇ ಈ ನಾಟಕವನ್ನು ಅಭಿನಯಿಸಿದರು. ಈ ನಾಟಕ ಆಕಾಶವಾಣಿಯಲ್ಲಿ ಪ್ರಸಾರವಾದದ್ದರಿಂದ ಕಂಬಾರರಿಗೆ ಪ್ರಚಾರ ದೊರೆಯಿತು. ಸುಮತೀಂದ್ರ ನಾಡಿಗರು ತಮ್ಮ ಮನೆಗೆ 'ಶಿವರಾಮ ಕಾರಂತರು' ಬಂದಾಗ ಸ್ನೇಹಿತನಂತೆ ಹಚ್ಚಿಕೊಂಡಿದ್ದ ಕಂಬಾರರನ್ನು ಕರೆಯಿಸಿ ಕಾರಂತರ ಪರಿಚಯ ಮಾಡಿಸಿಕೊಟ್ಟರು. ಆಗ ಕಾರಂತರ ಮುಂದೆ ಕಂಬಾರರು ತಮ್ಮ ಕವಿತೆಗಳನ್ನು ಓದಿ, ಕಾರಂತರಿಂದ ಮೆಚ್ಚುಗೆ ಪಡೆದರು. ಕಂಬಾರರಿಗೆ 'ಗೋಪಾಲಕೃಷ್ಣ ಅಡಿಗ'ರ ಸಂಪರ್ಕ ಏರ್ಪಟ್ಟಿದ್ದು ನಾಡಿಗರಿಂದಲೇ. ನಾಡಿಗರ ಮೂಲಕ ಕಂಬಾರರು ಅಡಿಗರಿಗೆ ಪರಿಚಯವಾಗಿ ಮುಂದೆ ಅಡಿಗರೊಂದಿಗೆ ನಿರಂತರ ಪತ್ರವ್ಯವಹಾರ ಮಾಡುವಷ್ಟರ ಮಟ್ಟಿಗೆ ಅವರ ಸ್ನೇಹ ಬೆಳೆಯಿತು.

೧೯೫೭ರ 'ಧಾರವಾಡ ಸಾಹಿತ್ಯಸಮ್ಮೇಳನ'ದಲ್ಲಿ ಕಂಬಾರರಿಗೆ ತಮ್ಮ ಮೆಚ್ಚಿನ ಕವಿ 'ಕುವೆಂಪು'ರವರ ದರ್ಶನವಾಯಿತು. ೧೯೫೮ರಲ್ಲಿ ಕಂಬಾರರ 'ಮುಗುಳು' ಕವನ ಸಂಕಲನ ಪ್ರಕಟವಾಯಿತು. ಇದರ ಮೇಲೆ ಕುವೆಂಪುರವರ ಪ್ರಭಾವವಿದ್ದರೂ ಅನುಕರಣೆ ಎನಿಸಿಲ್ಲ. ೧೯೬೨ರಲ್ಲಿ 'ಹೇಳತೇನ ಕೇಳ' ಕವಿತೆ ಪ್ರಕಟಿಸಿದರು. ಇದು ನವ್ಯಕಿಂತ ಭಿನ್ನವಾದ ಆಧುನಿಕ ಲಾವಣಿ ರೂಪದಲ್ಲಿ ರಚಿತವಾದ ಕಾವ್ಯ. ಇದು ಕಂಬಾರರಿಗೆ ಹೆಚ್ಚು ಖ್ಯಾತಿ ತಂದುಕೊಟ್ಟ ಕವಿತೆ. ಈ ಕಾವ್ಯ ಪ್ರಕಟವಾಗುವ ವೇಳೆಗೆ ಕಂಬಾರರಿಗೆ ಸಾಹಿತಿ 'ಕೀರ್ತಿನಾಥ ಕುರ್ತಕೋಟಿ'ಯವರ ಪರಿಚಯವಾಗಿತ್ತು. ಅವರು ಈ ಕವನವನ್ನು ಮನೋಹರ ಗ್ರಂಥಮಾಲೆಯ ಮಾಲೀಕರಾದ ಜಿ.ಬಿ.ಜೋಶಿಯವರ ಬಳಿ ಹಾಡಲು ಕೇಳಿಕೊಂಡರು. ಮಗನನ್ನು ಕಳೆದುಕೊಂಡ ದುಃಖದಲ್ಲಿದ್ದ ಜಿ.ಬಿ.ಜೋಶಿಯವರು ಕಂಬಾರರ ಹಾಡನ್ನು ಕೇಳಿ ಉಲ್ಲಾಸಿತರಾದರು.

ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಸ್ನಾತಕೋತ್ತರ ಶಿಕ್ಷಣ ಅಭ್ಯಾಸಮಾಡುತ್ತಿದ್ದಾಗ ಸಮಾನ ಮನಸ್ಕ ಸಾಹಿತ್ಯಗೆಳೆಯರ ಪರಿಚಯವಾಯಿತು. ಪ್ರೊ.ಬಿ.ಟಿ.ದೇಸಾಯಿ, ಪ್ರೊ.ಗಿರಡ್ಡಿ ಗೋವಿಂದರಾಜ, ಪ್ರೊ.ಸಿದ್ಧಲಿಂಗ ಪಟ್ಟಣಶೆಟ್ಟಿ ಮುಂತಾದವರು ಇವರ ಸಾಹಿತ್ಯ ಬಳಗದಲ್ಲಿ ಸೇರಿದ್ದರು. ಈ ಬಳಗ ಸಾಹಿತ್ಯ ಚರ್ಚೆಗಳಲ್ಲಿ ತೊಡಗುತ್ತಿದ್ದುದ್ದರಿಂದ ಕಂಬಾರರ ಸಾಹಿತ್ಯರಚನೆಗೆ ಸಹಾಯಕವಾಯಿತು.

ಕಂಬಾರರು ೧೯೬೨ರಲ್ಲಿ ಲಿಂಗರಾಜ್ ಕಾಲೇಜಿನಲ್ಲಿ ಅಧ್ಯಾಪಕವೃತ್ತಿ ಆರಂಭಿಸಿದಾಗ ಕಂಬಾರರಿಗೆ ಮತ್ತೆ ಭೂಸನೂರಮಠರ ಸ್ನೇಹ ದೊರೆಯುವುದರೊಂದಿಗೆ 'ಎ.ಕೆ.ರಾಮಾನುಜಂ'ರ ಪರಿಚಯವಾಯಿತು. ಇವರಿಬ್ಬರಲ್ಲಿ ಆತ್ಮೀಯತೆ ಏರ್ಪಟ್ಟಿತು. ರಾಮಾನುಜಂರು ಜಗತ್ತಿನ ಜಾನಪದ ಸಮಗ್ರ ಅಧ್ಯಯನದ ಉದ್ದೇಶ ಹೊಂದಿದ್ದು ಆ ನಿಟ್ಟಿನಲ್ಲಿ 'ಜನಪದ ಕತೆಗಳ' ಸಂಗ್ರಹಣ ಕಾರ್ಯದಲ್ಲಿ ತೊಡಗಿದ್ದರು. ತಮ್ಮ ಈ ಸಂಗ್ರಹಣ ಕಾರ್ಯಕ್ಕೆ ರಾಮಾನುಜಂರು ಕಂಬಾರರ ಸಹಾಯವನ್ನು ಕೇಳಿದಾಗ ಕಂಬಾರರು ಅವರಿಗಾಗಿ ಸಾವಿರಾರು ಜನಪದ ಕತೆಗಳನ್ನು ಸಂಗ್ರಹಿಸಿಕೊಟ್ಟರು. ಈ ಕಾರ್ಯದಿಂದಾಗಿ ಕಂಬಾರರಿಗೆ 'ಜನಪದಸಾಹಿತ್ಯ'ದ ಪೂರ್ಣ ಪರಿಚಯ ಲಭಿಸಿತು. ಪರಿಣಾಮವಾಗಿ ಗೋಡಗೇರಿಯಲ್ಲಿದ್ದ 'ಡೊಳ್ಳಿನ ಹಾಡುಗಳ' ಕಡತದ ಪ್ರತಿಮಾಡುವ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದರು.

೧೯೬೪–೬೭ರ ವರೆಗೆ ಕಂಬಾರರು ಸಾಗರದ ಲಾಲ್‌ಬಹುದ್ದೂರ್‌ಶಾಸ್ತ್ರಿ ಕಾಲೇಜಿನಲ್ಲಿ ಅಧ್ಯಾಪಕರಾಗಿ ಕಾರ್ಯನಿರ್ವಹಿಸಿದರು. ಆಗ 'ಗೋಪಾಲಕೃಷ್ಣ ಅಡಿಗ'ರು ಅಲ್ಲಿ ಪ್ರಿನ್ಸಿಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದರು. ಆಗ ಜನಪದ ಶೈಲಿಯ ಕಂಬಾರರ ಸಾಹಿತ್ಯಕ್ಕೆ ಅಡಿಗರ ಒಡನಾಟದಿಂದ ನವ್ಯದ ಸ್ಪರ್ಶವೂ ಉಂಟಾಯಿತು. ಜನಪದ ಮತ್ತು ನವ್ಯ ಎರಡು ಶೈಲಿಗಳನ್ನು ಮೈಗೂಡಿಸಿಕೊಂಡ 'ಋಷ್ಯಶೃಂಗ' ನಾಟಕ ರಚಿತವಾಯಿತು. ಈ ಋಷ್ಯಶೃಂಗ ನಾಟಕ 'ರಾಷ್ಟ್ರೀಯ ಭಾಷೆಗಳಲ್ಲಿ ರಚನೆಗೊಂಡ ಪ್ರಥಮ ಆಧುನಿಕ ಬಯಲಾಟ' ಎಂಬ ಮನ್ನಣೆಗೆ ಪಾತ್ರವಾಯಿತು. ಸಾಗರದಲ್ಲಿದ್ದಾಗಲೇ 'ಉತ್ತರ ಕರ್ನಾಟಕದ ಜಾನಪದ ರಂಗಭೂಮಿ' ಎಂಬ ಸಂಶೋಧನಾ ಪ್ರಬಂಧ ೧೯೬೫ರಲ್ಲಿ ಪ್ರಕಟವಾಯಿತು. ಕಡಿದಾಳು ಶಾಮಣ್ಣ ಮತ್ತ ಪೂರ್ಣಚಂದ್ರತೇಜಸ್ವಿ ನೇತೃತ್ವದ 'ಸಹ್ಯಾದ್ರಿ' ಪ್ರಕಾಶನದಿಂದ ಈ ಕೃತಿ ಪ್ರಕಟವಾಯಿತು.

'ಹೇಳತೇನಕೇಳ' ಪ್ರಭಾವದಿಂದಾಗಿ ಕಂಬಾರರಿಗೆ ಸಮಾಜವಾದಿಗಳಾದ ಶಾಂತವೇರಿ ಗೋಪಾಲಗೌಡ, ಕೆ.ವಿ.ಸುಬ್ಬಣ್ಣ, ಬಿ.ವ್ಹಿ.ಕಾರಂತ, ಕಾಗೋಡು ತಿಮ್ಮಪ್ಪ, ಜೆ.ಎಚ್.ಪಟೇಲ, ಬಂಗಾರಪ್ಪ, ಕೋಣಂದೂರು ಲಿಂಗಪ್ಪ ಮುಂತಾದವರ ಪರಿಚಯವಾಯಿತು. ಗೋಪಾಲಗೌಡರು ಮೂಡ್‌ಕೆಟ್ಟಾಗ, ಕೇಳಬೇಕೆನಿಸಿದಾಗ ಕಂಬಾರರ ಮನೆಗೆ ಬಂದು ಹಾಡು ಕೇಳಿಸಿಕೊಳ್ಳುತ್ತಿದ್ದರಂತೆ. ಗೋಪಾಲಗೌಡರು ಸಭೆಸಮಾರಂಭಗಳಲ್ಲಿ ಇವರ ಕವನ ಕೋಟ್ ಮಾಡಿ "ಒಬ್ಬ ತರುಣ ಕವಿ ವಸಾಹತುಶಾಹಿಯನ್ನು ನಾಶಮಾಡುವುದನ್ನು ಹೇಗೆ ತಂದಿದ್ದಾರೆ."[೨] ಎಂದು ಹೊಗಳುತ್ತಿದ್ದರೆಂದು ಕಂಬಾರರು ಹೇಳಿಕೊಳ್ಳುತ್ತಾರೆ. ಲೋಹಿಯಾ ಬಂದಾಗ ಗೋಪಾಲಗೌಡರು ಅವರನ್ನು ಕಂಬಾರರ ಮನೆಗೆ ಕರೆದುಕೊಂಡು ಬಂದು ಕಾವ್ಯ ಓದಿಸಿ, ಹಾಡಿಸಿ, ಚರ್ಚಿಸಿ ಬೆನ್ನು ತಟ್ಟಿಸಿ ಕರೆದುಕೊಂಡು ಹೋಗಿದ್ದರಂತೆ[೮] ಸಾಹಿತಿಗಳೊಂದಿಗೆ ಸಮಾಜವಾದಿಗಳ, ರಾಜಕಾರಣಿಗಳ ಸಂಪರ್ಕ ಕಂಬಾರರನ್ನು ಉನ್ನತಮಟ್ಟದ ಸಾಹಿತಿಯನ್ನಾಗಿ ಮಾಡಿತು.

೧೯೬೮ ರಿಂದ ೭೦ರ ವರೆಗೆ ಕಂಬಾರರನ್ನು ಶಿಕಾಗೋ ವಿಶ್ವವಿದ್ಯಾಲಯಕ್ಕೆ ಎ.ಕೆ. ರಾಮಾನುಜಂರು ಕನ್ನಡ ಕಲಿಸುವುದಕ್ಕಾಗಿ ಕರೆಸಿಕೊಂಡರು. ಕನ್ನಡ ಕಲಿಸಲು ತೆರಳಿದ ಕಂಬಾರರು ಅಲ್ಲಿಂದ ನಾಟಕದ ಬಗ್ಗೆ ಕಲಿತುಕೊಂಡು ಬಂದರು. ಆಗ ಅಮೆರಿಕಾದಲ್ಲಿ ನಟರು ಮತ್ತು ಪ್ರೇಕ್ಷಕರು ಕೂಡಿಯೇ ನಾಟಕ ಕಟ್ಟಿ ಪ್ರಯೋಗಿಸುವ 'ಲಿವಿಂಗ್ ಥಿಯೇಟರ್' ಪದ್ಧತಿ ಪ್ರಚಲಿತದಲ್ಲಿತ್ತು. ಅಲ್ಲಿಂದ ಈ ಬಗೆಯ ಅನುಭವಗಳನ್ನು

ಕಲಿತುಕೊಂಡು ಸ್ವದೇಶಕ್ಕೆ ಮರಳಿದರು. ಬಂದ ತಕ್ಷಣ ಇವೆಲ್ಲ ಅನುಭವಗಳನ್ನು ಕ್ರೋಢೀಕರಿಸಿಕೊಂಡ 'ನಾಸಿರ್ಸ್' ನಾಟಕ ಬೆಳಕಿಗೆ ಬಂದಿತು.

೧೯೭೦ರಲ್ಲಿ ಬೆಂಗಳೂರ ವಿಶ್ವವಿದ್ಯಾಲಯದ ಅಧ್ಯಾಪಕರಾಗಿ ನೇಮಕಗೊಂಡರು. ಆಗ ಭಾರತೀಯ ಕಥೆ, ಅಮೇರಿಕಾದ ಆಲೋಚನೆಗಳನ್ನು ಒಳಗೊಂಡ ನಾಟಕ 'ಜೋಕುಮಾರಸ್ವಾಮಿ'ಯನ್ನು ಬರೆದರು. ಹಾಡು ಕುಣಿತಗಳನ್ನು ಒಳಗೊಂಡ ಜೋಕುಮಾರಸ್ವಾಮಿ ನಾಟಕ ಕನ್ನಡ ರಂಗಭೂಮಿಯನ್ನು ಹೊಸದಿಕ್ಕಿನತ್ತ ಕೊಂಡ್ಯೊಯುವ ನಾಟಕವಾಗಿ ಪರಿಣಮಿಸಿತು. ಕಾರಂತರ ನಿರ್ದೇಶನದಲ್ಲಿ ಪ್ರಯೋಗಗೊಂಡ ಜೋಕುಮಾರಸ್ವಾಮಿ ತನ್ನ ಹೊಸ ಬಗೆಯ ರಚನಾ ವಿನ್ಯಾಸ ಮತ್ತು ಯಶಸ್ವಿ ಪ್ರಯೋಗಗಳಿಂದ ಕಂಬಾರರಿಗೆ ಕೀರ್ತಿಯನ್ನು ದೊರಕಿಸಿಕೊಟ್ಟಿತು. ನಂತರ ನಗರ ಬದುಕಿನ ತಲ್ಲಣಗಳನ್ನು ಚಿತ್ರಿಸುವ 'ಹರಕೆಯ ಕುರಿ' ನಾಟಕ ರಚಿಸಿದರು. ತರುವಾಯ 'ಚಾಳೇಶ', 'ಸಿರಿಸಂಪಿಗೆ', 'ಜೈಸಿದ್ದ ನಾಯಕ', 'ಮಹಾಮಾಯಿ' ಮುಂತಾದ ೨೧ ನಾಟಕಗಳನ್ನು, 'ಚಕೋರಿ' ಮಹಾಕಾವ್ಯವನ್ನು 'ಅಣ್ಣತಂಗಿ', 'ಕರಿಮಾಯಿ', 'ಸಿಂಗಾರೆವ್ವ ಮತ್ತು ಅರಮನೆ', 'ಜೀಕೆ.ಮಾಸ್ತರರ ಪ್ರಣಯ ಪ್ರಸಂಗ', 'ಶಿಖರಸೂರ್ಯ'ಗಳೆಂಬ ೫ ಕಾದಂಬರಿಗಳನ್ನು ರಚಿಸಿದ್ದಾರೆ. ೮ ಕವನ ಸಂಕಲನಗಳು ಪ್ರಕಟವಾಗಿದ್ದುಈವರೆಗಿನ 'ಹೇಳತೇನಕೇಳ' ಎಂಬ ಸಮಗ್ರ ಕವನಸಂಕಲನ ಪ್ರಕಟವಾಗಿದೆ.

ವಸಾಹತು ಮತ್ತು ನಗರ ಸಂಸ್ಕೃತಿಯ ದರ್ಶನ

ಕಂಬಾರರ ಸಾಹಿತ್ಯದಲ್ಲಿ ಬಹುಮುಖ್ಯ ಪಾತ್ರವಹಿಸುವುದು ದೇಸೀ ಸಂಸ್ಕೃತಿ. ಕಂಬಾರರು ತಮ್ಮ ಸಂಸ್ಕೃತಿಯ ಬಗ್ಗೆ ಅಪಾರ ಗೌರವ ಕಾಳಜಿಯನ್ನು ಹೊಂದಿದ್ದು, ನಮ್ಮದಲ್ಲದ ಅನ್ಯ ಸಂಸ್ಕೃತಿಯ ಬಗ್ಗೆ ಅವರಲ್ಲಿ ತಾತ್ಸಾರ ಭಾವನೆ ಇದೆ. ಇದಕ್ಕೆ ಕಾರಣ ಅವರು ಬಾಲಕರಾಗಿದ್ದಾಗ ವಸಾಹತುಶಾಹಿ ಅವರಲ್ಲಿ ಹುಟ್ಟಿಸಿದ ಭಯ ಅನ್ಯಸಂಸ್ಕೃತಿಗಳ ಬಗೆ ಕಂಬಾರರಲ್ಲಿ ಭಯ, ಜಿಗುಪ್ಸೆ, ಹುಟ್ಟಲು ಬಾಲ್ಯದಲ್ಲಿ ನಡೆದ ಘಟನೆಗಳೇ ಕಾರಣ ಎನ್ನಬಹುದು.

ಕಂಬಾರರು ಚಿಕ್ಕವರಿದ್ದಾಗ ಗೋಡಗೇರಿಗೆ ಅನೇಕ ಕಲಾತಂಡಗಳು ಭೇಟಿ ನೀಡಿ ಕಲಾಪ್ರದರ್ಶನ ನೀಡುತ್ತಿದ್ದವು. ಆಗ 'ಸಂಗ್ಯಾಬಾಳ್ಯ' ಬಯಲಾಟ ಹೆಚ್ಚು ಪ್ರಸಿದ್ಧಿಯನ್ನು ಪಡೆದಿತ್ತು. ಈ ಆಟದಲ್ಲಿ ಬ್ರಿಟಿಷರ ಪಾತ್ರಗಳು ಬರುತ್ತಿದ್ದವು. ಅದಕ್ಕಾಗಿ ಬ್ರಿಟಿಷರು ಈ ಆಟವನ್ನು ನಿಷೇಧಿಸಿದರು. ಕಂಪನಿ ಅನುಮತಿ ಪಡೆದು ಬಂದರೆ ಮಾತ್ರ ಈ ಆಟ ಆಡಲು ಅವಕಾಶವಿತ್ತು. ಅನುಮತಿ ಸಿಗದಿದ್ದರೆ ಆಟ ನಿಲ್ಲಿಸಬೇಕಾಗಿತ್ತು. ಹಳ್ಳಿಗರು ಅನುಮತಿ ಸಿಗದಾಗ ಕದ್ದುಮುಚ್ಚಿ ಆಟ ಆಡುತ್ತಿದ್ದರು. ಹಳ್ಳಿಗರಲ್ಲಿದ್ದ ಬ್ರಿಟಿಷರ ಬಗೆಗಿನ ಭಯ ಕಂಬಾರರಲ್ಲಿ ಬ್ರಿಟಿಷರ ಬಗ್ಗೆ ಭಯ ಮತ್ತು ರೋಷವನ್ನು ಹುಟ್ಟಿಸಿದವು.

ಕಂಬಾರರು ಬಾಲಕರಿದ್ದಾಗ ಸ್ವಾತಂತ್ರ್ಯ ಚಳುವಳಿಗಳು ನಡೆಯುತ್ತಿದ್ದವು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದವರನ್ನು ಬ್ರಿಟಿಷರು ಕ್ರೂರವಾಗಿ ಶಿಕ್ಷಿಸುತ್ತಿದ್ದರು ಮತ್ತು ಗಲ್ಲು ಶಿಕ್ಷೆಗೆ ಗುರಿ ಮಾಡುತ್ತಿದ್ದರು. ಜೈಲುಶಿಕ್ಷೆಗೆ ಗುರಿಯಾದ ಈ ಊರಿನ ೩ ಜನರು ಬ್ರಿಟಿಷರೊಂದಿಗೆ ತಾವು ಕಾದಾಡಿದ ಬಗ್ಗೆ, ಬ್ರಿಟಿಷರ ಆಕ್ರಮಣದ ಬಗ್ಗೆ ಕಟ್ಟುಕತೆಗಳನ್ನು ಕಟ್ಟಿ ಜನರಿಗೆ ಹೇಳುತ್ತಿದ್ದರು. ಈ ಕಟ್ಟುಕತೆಗಳನ್ನು ಕೇಳುತ್ತಿದ್ದ

ಕಂಬಾರರು ಬ್ರಿಟಿಷರು ಮತ್ತು ಬ್ರಿಟಿಷರ ಆಡಳಿತದ ಬಗ್ಗೆ ಭಯ ಮತ್ತು ದ್ವೇಷಭಾವನೆಯನ್ನು ಬೆಳಸಿಕೊಂಡರು. ಇದು ಅವರಲ್ಲಿ ವಸಾಹತು ವಿರೋಧಿ ಧೋರಣೆ ಬೆಳೆಯಲು ಸಹಾಯಕವಾಯಿತು.

ಬೆಳಗಾವಿಯಲ್ಲಿ ಇಂಗ್ಲೀಷರ ಮಿಲಟರಿ ಬೀಡುಬಿಟ್ಟಿತು. ಗೋಕಾಕದಲ್ಲಿಯೂ ಮಿಲಿಟರಿ ನೆಲೆಯಿತ್ತು. ಕಂಬಾರರು ನಡೆದುಕೊಂಡು ಗೋಕಾಕ ಹೈಸ್ಕೂಲ್‌ಗೆ ತೆರಳುತ್ತಿದ್ದಾಗ, ಬ್ರಿಟಿಷರು ಸ್ನಾನಕ್ಕಾಗಿ ನಿರ್ಮಾಣಮಾಡಿಕೊಂಡ ಹೊಂಡದ ಹತ್ತಿರ ಅವರು ಆಗ ತಾನೇ ಸ್ನಾನ ಮಾಡಿಬಿಟ್ಟು ಹೋದ ಸೋಪಿನ ತುಂಡು ಬಿದ್ದಿತು. ಕಂಬಾರರು ಮತ್ತು ಅವರ ಗೆಳೆಯರು ಆ ಸೋಪಿನ ತುಂಡನ್ನ ತೆಗೆದುಕೊಂಡು ಮೊದಲು ತಿಕ್ಕಿ ನೊರೆ ಬರೆಸಿ ಪರಿಮಳ ಆಘ್ರಾಣಿಸಿ ನೋಡಿ ನಂತರ ಅವರ ಮೇಲಿನ ಸಿಟ್ಟಿನಿಂದ ಅದನ್ನು ಕಲ್ಲಿಗೆ ತಿಕ್ಕಿ ತಿಕ್ಕಿ ನಾಶಮಾಡಿದರಂತೆ.[೧೯] ಇದಕ್ಕೆ ಕಾರಣ ನಮ್ಮ ಸ್ವಾತಂತ್ರ್ಯವನ್ನು ಕಸಿದುಕೊಂಡ ಮತ್ತು ನಮ್ಮ ಮಣ್ಣಿನ ಮಕ್ಕಳ ಆಟವಾದ 'ಸಂಗ್ಯಾಬಾಳ್ಯ' ಆಡಲು ಅವರ ಅನುಮತಿ ಪಡೆಯಬೇಕೆಂಬ ನಿಯಮ ಸೃಷ್ಟಿಸಿದ ಬ್ರಿಟಿಷರು ಆ ಸೋಪನ್ನು ಉಪಯೋಗಿಸುತ್ತಿದ್ದುದು.

ಕಂಬಾರರಲ್ಲಿ ನಗರ ಸಂಸ್ಕೃತಿಯ ಬಗ್ಗೆ ಭಯ ಮತ್ತು ದ್ವೇಷಗಳು ಹುಟ್ಟಿದು ಅವರು ಬಾಲಕರಿದ್ದಾಗಲೇ. ಗೋಡಗೇರಿಯ ಕೆಲವು ಜನ ಹೊಟ್ಟೆಪಾಡಿಗಾಗಿ ಮುಂಬೈಗೆ ಹೋಗಿದ್ದರು. ಅವರು ಮರಳಿ ಬರುವಾಗ ದರೋಡೆ, ಕಳ್ಳತನ ಮುಂತಾದ ದುರ್ಗುಣಗಳನ್ನು ಕಲಿತುಕೊಂಡು ಬರುತ್ತಾರೆಂಬ ನಂಬಿಕೆ ಹಳ್ಳಿಯವರದ್ದು. ಅದೇ ರೀತಿ ಕೆಲವು ಜನ ಕಳ್ಳತನ ದರೋಡೆ ಕಲಿತು ಬಂದಿದ್ದರು. ಅವರಲ್ಲಿ ಈಟಿ. ಈರಭದ್ರ ಪ್ರಮುಖನಾಗಿದ್ದ, ಒಮ್ಮೆ ಕಂಬಾರರು ಒಂದು ಪೆನ್ನು ಕೇಳಿದಾಗ ಕಣ್ಣುಮುಚ್ಚಿ ಕಣ್ಣು ತೆಗೆಯುವಷ್ಟರಲ್ಲಿ ೪ ಪೆನ್ನುಗಳನ್ನು ಕಂಬಾರರಿಗೆ ಕೊಟ್ಟನು. ಜೊತೆಗೆ ಇವರು ಸಿಗರೇಟು, ಬೀಡಿ ಸೇದುವುದು ಮುಂತಾದ ಕೆಟ್ಟ ಚಟಗಳನ್ನು ಕಲಿತು ಬಂದಿರುತ್ತಿದ್ದರು. ಗೋಡಗೇರಿಯ ಜನ ಇವರನ್ನು 'ಮುಂಬೈ ಭಾಂಪ್ಯಾ' ಎನ್ನುತ್ತಿದ್ದರು. ಹಳ್ಳಿಯ ಜನ ಇವರ ಮೇಲೆ ಹಾಡುಗಳನ್ನು ಕಟ್ಟಿ ಬೀಸುವ, ಕುಟ್ಟುವ ಕಾರ್ಯಮಾಡುವಾಗ ಹಾಡುತ್ತಿದ್ದರು. ತಾಯಿ, ಅಕ್ಕಂದಿರು ಬೀಸುವಾಗ ಇಂತಹ ಹಾಡುಗಳನ್ನು ಕೇಳುತ್ತಿದ್ದ ಕಂಬಾರರು ನಗರ ಸಂಸ್ಕೃತಿಯ ಬಗ್ಗೆ ಕೀಳುಮನೋಭಾವನೆಯನ್ನು ಬೆಳೆಸಿಕೊಂಡರು.[೨೦]

ಕಂಬಾರರು ಕಾಲೇಜು ಶಿಕ್ಷಣಕ್ಕಾಗಿ ಬೆಳಗಾವಿಗೆ ಹೋದಾಗ ಬೆಳಗಾವಿ ನಗರ ಬ್ರಿಟಿಷ ನೆಲೆಯಾಗಿದ್ದರಿಂದ ಅದರ ಬಗ್ಗೆ ಅವರಲ್ಲಿ ಭಯದ ವಾತಾವರಣ ಮನೆಮಾಡಿತ್ತು. ಪ್ರಕೃತಿಯ ನಡುವೆ ಸ್ವಚ್ಛಂದತೆಯಿಂದ ಬೆಳೆದ ಕಂಬಾರರಿಗೆ ಬೆಳಗಾವಿಯಂಥ ನಗರದ ಶಿಷ್ಟ ವಾತಾವರಣ ದಿಗ್ಭ್ರಮೆ ಹುಟ್ಟಿಸಿತು. ನಗರದ ಆಡಂಬರದ ಜೀವನ ಕಂಬಾರರು ತಮ್ಮ ಬಗ್ಗೆ ತಾವೇ ಕೀಳರಿಮೆ ಬೆಳೆಸಿಕೊಳ್ಳುವಂತೆ ಮಾಡಿತು. ಇದು ಸಹ ಕಂಬಾರರಿಗೆ ನಗರಸಂಸ್ಕೃತಿಯ ಬಗ್ಗೆ ತಾತ್ಸಾರ ಭಾವನೆಯನ್ನು ತಂದಿತೆನ್ನಬಹುದು.

೧೯೭೦ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಅಧ್ಯಾಪಕರಾದ ನಂತರ ಕಂಬಾರರು ಬೆಂಗಳೂರು ನಿವಾಸಿಗಳಾದರು. ಬೆಂಗಳೂರು ಸಂಪೂರ್ಣ ಆಧುನಿಕತೆಯನ್ನು ಮೈಗೂಡಿಸಿಕೊಂಡ ನಗರ. ಇಲ್ಲಿ ಪ್ರೀತಿ, ವಾತ್ಸಲ್ಯ, ಔದಾರ್ಯತೆ, ಅನುಕಂಪ ಮುಂತಾದ ಯಾವ ಮಾನವೀಯ ಗುಣಗಳಿಗೂ ಸ್ಥಾನವಿಲ್ಲ. ಇಲ್ಲಿ ಮಾನವನದು ಕೃತಕ, ಕೃತಿಮ ಜೀವನ. ಅಲ್ಲಿ ಮಾನವ ಕೇವಲ ದುಡಿಯುವ ಯಂತ್ರವೇ ಹೊರತು

ಮನುಷ್ಯತ್ವವುಳ್ಳ ವ್ಯಕ್ತಿಯಲ್ಲ. ಇಲ್ಲಿ ಉಪಭೋಗಿಯಾದ ಮನುಷ್ಯ ಸ್ವಾರ್ಥದ ಬೆನ್ನು ಹತ್ತಿದ್ದಾನೆ. ಪ್ರಕೃತಿ, ಸಮುದಾಯ, ಸಮಾಜ ಎಂಬ ಭಾವನೆ ಈ ನಗರದಲ್ಲಿಲ್ಲ. ಹಳ್ಳಿಯ ಜೀವನದ ಸುಖ ಉಂಡ ಕಂಬಾರರಿಗೆ ಈ ವಾತಾವರಣ ಸಹ್ಯವಾಗದ್ದು. ಇದರಿಂದ ಕಂಬಾರರಿಗೆ ಈ ನಗರ ಜೀವನದ ಬಗ್ಗೆ ಜಿಗುಪ್ಸೆ ಇದೆ. ಇದು ಕಂಬಾರರ ಸಾಹಿತ್ಯದ ಮೇಲೆ ಪ್ರಭಾವ ಬೀರುತ್ತಿದೆ.

ಚಂದ್ರಶೇಖರ ಕಂಬಾರರು ಹೀಗೆ ಪ್ರೀತಿ ವಾತ್ಸಲ್ಯಗಳಿಂದ ಕೂಡಿದ ಹಾಡು, ಕತೆ, ಅಭಿನಯಗಳನ್ನು ರೂಢಿಸಿಕೊಂಡ ಕುಟುಂಬದಲ್ಲಿ ಹುಟ್ಟಿದ್ದಾರೆ. ಪ್ರಾಕೃತಿಕವಾಗಿ, ಸಾಂಸ್ಕೃತಿಕವಾಗಿ, ನೈತಿಕವಾಗಿ ಶ್ರೀಮಂತವಾದ ಗೋಡಗೇರಿಯಲ್ಲಿ ಬೆಳೆದಿದ್ದಾರೆ. ಉದಾತ್ತ ವ್ಯಕ್ತಿತ್ವದ, ಶಿಷ್ಯನ ಶ್ರೇಷ್ಠತೆಯಲ್ಲಿ ಸಂತೋಷ ಪಡುವ ಅಪರೂಪದ ಗುರುಗಳು ಕಂಬಾರರಿಗೆ ದೊರೆತಿದ್ದಾರೆ. ಜಾತಿಮತದ ಭೇದ ತೊರೆದು ವಿದ್ಯಾದಾನ ಮಾಡುವಂತಹ ಧಾರ್ಮಿಕ ಗುರುಗಳ ಆಶ್ರಯ ಕಂಬಾರರಿಗೆ ಲಭಿಸಿದೆ. ಜೊತೆಗೆ ಅನೇಕ ಸಾಹಿತಿಗಳ 'ಸಮಾಜವಾದಿಗಳ ಸಂಪರ್ಕ ಕಂಬಾರರಿಗೆ ದೊರೆತಿದೆ. ಇವೆಲ್ಲವುಗಳಿಂದಾಗಿ ಕಂಬಾರರು ಬಡತನದ ಕುಟುಂಬದಲ್ಲಿ ಹುಟ್ಟಿದರೂ ಸಾಂಸ್ಕೃತಿಕವಾಗಿ ಶ್ರೀಮಂತವಾದ ಪರಿಸರದಲ್ಲಿ ಬೆಳೆದಿರುವುದರಿಂದ ಅವರೊಬ್ಬ ಶ್ರೇಷ್ಠ ಸಾಹಿತಿ, ಹಾಡುಗಾರ, ನಟ, ನಿರ್ದೇಶಕ, ಕನ್ನಡ ವಿಶ್ವವಿದ್ಯಾಲಯದ ಸ್ಥಾಪಕ, ಕುಲಪತಿಯಾಗಿ' ಹೊರಹೊಮ್ಮಲು ಸಾಧ್ಯವಾಯಿತು.

ಅಡಿಟಿಪ್ಪಣಿ

೧. ಉಧೃತ, ಡಾ.ಎಚ್.ನಾಗವೇಣಿ, 'ರಂಗಸಂಪನ್ನರು ಡಾ.ಚಂದ್ರಶೇಖರ ಕಂಬಾರ', ಪುಟ.೧೦; ೨೦೦೪.

೨. ಉಧೃತ, ಅದೇ ಪುಟ. ೧೦; ೨೦೦೪.

೩. ಉಧೃತ, ಅದೇ ಪುಟ. ೯; ೨೦೦೪.

೪. ಉಧೃತ, ಅದೇ ಪುಟ. ೯–೧೦; ೨೦೦೪.

೫. ಉಧೃತ, ಸಿರಿಸಂಪಿಗೆ ಕಂಬಾರ ೬೦, ಪುಟ.೧೭೩. ೧೯೯೭–ಎಚ್.ಎಸ್.ಶಿವಪ್ರಕಾಶ(ಸಂ).

೬. ಉಧೃತ, ಡಾ.ಎಚ್.ನಾಗವೇಣಿ, ರಂಗಸಂಪನ್ನರು – ಡಾ.ಚಂದ್ರಶೇಖರ ಕಂಬಾರ ಪುಟ.೭; ೨೦೦೪.

೭. ಉಧೃತ, ಡಾ.ಎಚ್.ನಾಗವೇಣಿ, ರಂಗಸಂಪನ್ನರು – ಡಾ.ಚಂದ್ರಶೇಖರ ಕಂಬಾರ ಪುಟ.೧೧–೧೨;೨೦೦೪.

೮. ಹೆಚ್ಚಿನ ವಿವರಗಳಿಗಾಗಿ ಡಾ. ವೀರೇಶ ಬಡಿಗೇರ – ಪ್ರಥಮ ಶ್ರೀಕಾಳಿ ಪ್ರಶಸ್ತಿ ಪುರಸ್ಕೃತ ಚಂದ್ರಶೇಖರ ಕಂಬಾರ – ೨೦೦೨.

೯. ಉಧೃತ, ಡಾ.ಎಚ್.ನಾಗವೇಣಿ, ರಂಗಸಂಪನ್ನರು – ಡಾ.ಚಂದ್ರಶೇಖರ ಕಂಬಾರ ಪುಟ.೧೨;೨೦೦೪.

೧೦. ಉಧೃತ, ಅದೇ ಪುಟ.೧೨.

೧೧. ಹೆಚ್ಚಿನ ವಿವರಗಳಿಗಾಗಿ ನೋಡಿ, ಸಿರಿಸಂಪಿಗೆ ಕಂಬಾರ ೬೦, ಪುಟ.೧೬೪; ೧೯೯೭ ಎಚ್.ಎಸ್.ಶಿವಪ್ರಕಾಶ (ಸಂ).

೧೨. ಹೆಚ್ಚಿನ ವಿವರಗಳಿಗಾಗಿ ನೋಡಿ, ಅದೇ ಪುಟ ೧೬೪ – ೧೬೫.

೧೩. ಹೆಚ್ಚಿನ ವಿವರಗಳಿಗಾಗಿ ನೋಡಿ, ಅದೇ ಪುಟ. ೧೬೪.

೧೪. ಹೆಚ್ಚಿನ ವಿವರಗಳಿಗಾಗಿ ನೋಡಿ, ಅದೇ ಪುಟ. ೧೬೫.

೧೫. ಉಧೃತ, ಸಿರಿಸಂಪಿಗೆ ಕಂಬಾರ ೬೦, ಪುಟ.೧೬೬;೧೯೯೭ (ಸಂ) ಎಚ್.ಎಸ್.ಶಿವಪ್ರಕಾಶ.

೧೬. ಉಧೃತ, ಸಿರಿಸಂಪಿಗೆ ಕಂಬಾರ ೬೦, ಪುಟ.೧೬೯;೧೯೯೭ ಎಚ್.ಎನ್.ಶಿವಪ್ರಕಾಶ(ಸಂ).

೧೭. ಉಧೃತ, ಡಾ.ಎಚ್.ನಾಗವೇಣಿ, 'ರಂಗಸಂಪನ್ನರು ಡಾ.ಚಂದ್ರಶೇಖರ ಕಂಬಾರ', ಪುಟ.೨೦;೨೦೦೪.

೧೮. ಹೆಚ್ಚಿನ ವಿವರಗಳಿಗಾಗಿ ನೋಡಿ, ಅದೇ ಪುಟ.೨೦.

೧೯. ಹೆಚ್ಚಿನ ವಿವರಗಳಿಗಾಗಿ ನೋಡಿ, ಸಿರಿಸಂಪಿಗೆ ಕಂಬಾರ ೬೦, ಪುಟ.೧೬೭;೧೯೯೭ – ಎಚ್.ಎಸ್.ಶಿವಪ್ರಕಾಶ (ಸಂ).

೨೦. ಹೆಚ್ಚಿನ ವಿವರಗಳಿಗಾಗಿ ನೋಡಿರಿ; ಡಾ.ಎಚ್.ನಾಗವೇಣಿ ರಂಗಸಂಪನ್ನರು ಡಾ.ಚಂದ್ರಶೇಖರ ಕಂಬಾರ ಪುಟ.೧೦;೨೦೦೪.

* * *

ಅಧ್ಯಾಯ ೪

ಕಂಬಾರರ ಕಾದಂಬರಿಗಳು

ಕರಿಮಾಯಿ

ಒಂದು ಗ್ರಾಮ ಅನ್ಯಸಂಸ್ಕೃತಿಯ ಆಕ್ರಮಣದಿಂದ ಕ್ರಮೇಣ ತನ್ನ ಸ್ವರೂಪವನ್ನು ಕಳೆದುಕೊಳ್ಳುವುದನ್ನು ಚಿತ್ರಿಸಿರುವ ವಿಶಿಷ್ಟ ಕಾದಂಬರಿ ಕರಿಮಾಯಿ. ಪ್ರೀತಿ, ಸಹಕಾರ, ಸೌಹರ್ದತೆ, ಶಾಂತಿ, ನೆಮ್ಮದಿಯಿಂದ ಬಾಳುತ್ತಿದ್ದ ಗ್ರಾಮ. ನಗರೀಕರಣದ ಪ್ರವೇಶದಿಂದ ಯಾವ ರೀತಿಯ ಸಮಸ್ಯೆಗಳನ್ನು ಎದುರಿಸುವಂತಾಯಿತು?. ಆಗ ಆ ಗ್ರಾಮದಲ್ಲುಂಟಾದ ತಲ್ಲಣಗಳೇನು? ಎಂಬುದನ್ನು ಕಂಬಾರರು ಈ ಕಾದಂಬರಿಯಲ್ಲಿ ಕಟ್ಟಿಕೊಡುತ್ತಾರೆ.

'ಶಿವಾಪುರ' ಮತ್ತು ಶಿವಾಪುರದ ಆರಾಧ್ಯದೇವತೆ 'ಕರಿಮಾಯಿ'ಯ ಪರಿಚಯದೊಂದಿಗೆ 'ಕರಿಮಾಯಿ' ಕಾದಂಬರಿ ಪ್ರಾರಂಭವಾಗುತ್ತದೆ. ಶಿವಾಪುರವು ಪ್ರೀತಿ, ದ್ವೇಷ, ಕೊಲೆ, ಹಾದರ ಮುಂತಾದ ಎಲ್ಲ ಗುಣಗಳನ್ನು ಮೈಗೂಡಿಸಿಕೊಂಡು ನೆಮ್ಮದಿಯಿಂದ ಬಾಳುತ್ತಿದ್ದ ಗ್ರಾಮ. ಇಡೀ ಪ್ರಪಂಚದ ಭೂಪಟ್ಟದಲ್ಲಿ ಶಿವಾಪುರವನ್ನು ಗುರುತಿಸುವಷ್ಟು ಪಂಡಿತರಾಗಿದ್ದವರು ಈ ಊರ ಜನ. ಬೆಳಗಾವಿ ಹತ್ತಿರ ಶಿವಾಪುರವಿರುವುದರಿಂದ ಭೂಪಟದಲ್ಲಿ ಬೆಳಗಾವಿಯಿಂದ ಸ್ವಲ್ಪ ದೂರ ಬೆರಳಿಟ್ಟು ಅದನ್ನೆ ಶಿವಾಪುರ ಎಂದು ಗುರುತಿಸುತ್ತಿದ್ದರೂ ಅದು ಪ್ರಪಂಚದ ಯಾವುದೇ ಭಾಗವಾಗಿದ್ದರೂ ಅವರ ಪಾಲಿಗೆ ಅದು ಶಿವಾಪುರವೇ ಆಗಿರುತಿತ್ತು. ಇಂತಹ ಶಿವಾಪುರ ಗ್ರಾಮದ ರಕ್ಷಕ ದೇವತೆ 'ಕರಿಮಾಯಿ' ಅಥವಾ 'ಪಾರೆಂಬಿ ಕರ್ರೆವ್ವ'. ಈ ಕರಿಮಾಯಿಯ ಪವಾಡದ ಬಗ್ಗೆ ಶಿವಾಪುರದಲ್ಲಿ ಅನೇಕ ಕತೆಗಳು ಪ್ರಚಲಿತವಿದ್ದು, ಅದರಲ್ಲಿ ಅವಳ ಹುಟ್ಟಿಗೆ ಸಂಬಂಧಿಸಿದ ಕತೆಯೂ ಒಂದಾಗಿದ್ದು ಅದು ಮುಂದಿನಂತಿದೆ.

ಲೋಕದಲ್ಲಿ ಸಂಕಟಗಳು ಹೆಚ್ಚಾಗಿ ಶಿವಾಪುರದ 'ತಾಯಿ' ಈ ಸಂಕಟಗಳನ್ನು ನಿವಾರಿಸು ಎಂದು ಶಿವನಲ್ಲಿ ಮೊರೆ ಇಡುತ್ತಾಳೆ. ಆಗ ಶಿವನು ಸುರಿಸಿದ ಬೆವರು ಹನಿಯಿಂದ ಕರ್ರೆವ್ವ ಹುಟ್ಟುತ್ತಾಳೆ. ಕರ್ರೆವ್ವ ಹುಟ್ಟಿದ ವೇಳೆಯಲ್ಲಿ ಭೂಲೋಕದಲ್ಲಿ ದೇವರಿಗೂ ದೈತ್ಯರಿಗೂ ಯುದ್ಧ ನಡೆಯುತ್ತಿರುತ್ತದೆ. ಆ ಯುದ್ಧ ತಡೆಯಲು ಕರಿಯವ್ವ ಹೊರಟಾಗ ಬಾವಿಯಿಂದ 'ಹೆಣ್ಣಿರಲಿ ಗಂಡಿರಲಿ ಯಾರಾದರೂ ನನ್ನನ್ನು ಕಾಪಾಡಿರಿ' ಎಂಬ ಕೂಗು ಕೇಳಿಸುತ್ತದೆ. ಆಗ ಕರ್ರೆವ್ವ ಬಾವಿಯಲ್ಲಿ ಬಾಗಿ ನೋಡಿದಾಗ ದೇವದಾನವರುಗಳ ನಡುವೆ ನಡೆದ ಯುದ್ಧದಲ್ಲಿ ಜಪತಪಗಳಲ್ಲಿ ನಿರತನಾಗಿರುತ್ತಿದ್ದ ಜಡೆಮುನಿ ಬಾವಿಯಲ್ಲಿ ಬಿದ್ದಿರುತ್ತಾನೆ. ಕರಿಮಾಯಿ ಅವನನ್ನು ರಕ್ಷಿಸಲು ಮುಂದಾಗುತ್ತಾಳೆ. ಆಗ ಅವಳ ಹತ್ತಿರ ಅವನನ್ನು ಮೇಲೆತ್ತಲು ಏನೂ

ಇಲ್ಲದ್ದರಿಂದ ತಾನುಟ್ಟ ಸೀರೆಯನೇ ಬಿಚ್ಚಿ ಬಾವಿಗೆ ಬಿಟ್ಟು 'ಕಣ್ಣುಮುಚ್ಚಿ ದಟ್ಟಿ ಓಡಿ ನಾ ತಗಿ ಅಂಬೋ ತನಕ ಕಣ್ಣು ತಗೀಬೇಡ. ತಗಿದರೆ ಸಿಗದೇನೆಂದು' ಎಚ್ಚರಿಕೆ ನೀಡುತ್ತಾಳೆ. ಆದರೆ ಮೇಲೇರಿ ಬಂದ ಜಡೆಮುನಿ ಕಣ್ಣು ತೆಗೆದು ಅವಳ ನಗ್ನ ದೇಹವನ್ನು ನೋಡಿ ಮೋಹಿತನಾಗುತ್ತಾನೆ. ಆಗ ಕರ್ರೆವ್ವ ತನ್ನ ಬಳಿಯಿದ್ದ ಕಠಾರಿಯಿಂದ ನೆಲದ ಮೇಲೆ ಏಳು ಗೆರೆಗಳನ್ನು ಎಳೆದು 'ದಾಟಿ ಬಂದರೆ ಮೀಟಿ ಬಿಗೆದೇನು' ಎಂದು ಎಚ್ಚರಿಕೆ ಕೊಡುತ್ತಾಳೆ. ಆಗ ಜಡೆಮುನಿ ಆ ಗೆರೆಗಳಲ್ಲಿ ತನ್ನ ರಕ್ತಹರಿಸಿ ಗೆರೆಗಳನ್ನು ದಾಟಿ ಬರುತ್ತಾನೆ. ಇವನ ಪ್ರೇಮ ಅರಿತ ಕರ್ರೆವ್ವ ಅವನನ್ನು ಮದುವೆಯಾಗುತ್ತಾಳೆ.

ದೇವದಾನವರಿಬ್ಬರು ಇವರ ಮದುವೆಯಿಂದ ಸಿಟ್ಟಾಗಿ ಅವರನ್ನು ಕೊಲ್ಲಲು ಮುಂದಾಗುತ್ತಾರೆ. ಕರ್ರೆವ್ವ ಇಲ್ಲದ ವೇಳೆ ಜಡೆಮುನಿಯನ್ನು ಕೊಲ್ಲುತ್ತಾರೆ. ಆಗ ತುಂಬು ಗರ್ಭಿಣಿಯಾದ ಕರ್ರೆವ್ವ ತನ್ನ ಗರ್ಭವನ್ನು ಉಳಿಸಿಕೊಳ್ಳಲು ದೂರ ಓಡಿ ಹೋದಾಗ ಅಲ್ಲಿಯೂ ದೇವ ದೈತ್ಯರುಗಳು ಅವಳ ಬೆನ್ನು ಹತ್ತುತ್ತಾರೆ. ದಣಿದ ಕರ್ರೆವ್ವ ವಿಶ್ರಾಂತಿಗೆಂದು ಮರದ ಕೆಳಗೆ ಕುಳಿತಾಗ ಆ ಮರದಲ್ಲಿದ್ದ ಮಾವಿನಹಣ್ಣು ನೋಡಿದ ಕರ್ರೆವ್ವ ಬಸಿರ ಸಹಜ ಬಯಕೆಯಿಂದ ಮಾವಿನ ಹಣ್ಣಿಗೆ ಆಸೆಪಟ್ಟು ಕಲ್ಲುಗಳ ಮೇಲೆ ಕಲ್ಲನ್ನಿಟ್ಟು ಮಾವಿನಹಣ್ಣು ಹರಿದುಕೊಳ್ಳಲು ಮುಂದಾಗುತ್ತಾಳೆ. ಆಗ ಅಲ್ಲಿಗೆ ಬಂದ ದೇವದಾನವರು ಅವಳ ಗರ್ಭಕ್ಕೆ ಬಿಲ್ಲುಬಾಣಗಳಿಂದ ಗುರಿಯಿಟ್ಟು ಕೊಲ್ಲಲು ಮುಂದಾದಾಗ ಏನು ಮಾಡಬೇಕೆಂದು ಅರಿಯದ ಕರಿಮಾಯಿ ಕಿಟಾರನೆ ಕಿರಚಿಕೊಳ್ಳುತ್ತಾಳೆ. ಆಗ ಇವಳ ಕೂಗು ಕೇಳಿಸಿಕೊಂಡ ಶಿವ ನಂದಿಯನ್ನು, ಪಾರ್ವತಿ ಹುಲಿಯನ್ನು, ಜೊತೆಗೆ ಅಸಾಮಾನ್ಯ ಸಾಮರ್ಥ್ಯ ಹೊಂದಿದ ಅನೇಕ ಆಯುಧಗಳನ್ನು ಕರಿಮಾಯಿಗೆ ದಯಪಾಲಿಸುತ್ತಾರೆ. ಆದರೆ ಅವರು ಇಷ್ಟರಲ್ಲಿಯೇ ಗರ್ಭಕ್ಕೆ ಗುರಿಯಿಟ್ಟು ಹೊಡೆದಿರುವುದರಿಂದ ಗರ್ಭ ಕೆಳಗೆ ಬಿದ್ದಿರುತ್ತದೆ. ಕರ್ರೆವ್ವ ಕೆಳಗೆ ಬಿದ್ದ ಗರ್ಭವನ್ನು ಉಡಿಯಲ್ಲಿಯೇ ಕಟ್ಟಿಕೊಂಡು, ಶಿವಪಾರ್ವತಿಯರು ಕೊಟ್ಟ ಆಯುಧಗಳಿಂದ ದೇವದಾನವರುಗಳನ್ನು ಸಂಹಾರ ಮಾಡುತ್ತಾಳೆ. ನಂತರ ದುಃಖದಿಂದ 'ನನ್ನ ಗಂಡಮಕ್ಕಳನ್ನು ವಾಪಸ್ಸು ಕೊಡುವೆಯೋ? ಇಲ್ಲವೆ ನಿನ್ನನ್ನೇ ಮುಕ್ಕಲ್ಯೋ?' ಎಂದು ಶಿವನಿಗೆ ಸವಾಲು ಹಾಕುತ್ತಾಳೆ. ಹೆದರಿದ ಶಿವ ಅವಳ ಗಂಡ ಮಕ್ಕಳನ್ನು ಅವಳಿಗೆ ಮರಳಿಸುತ್ತಾನೆ. ಕರ್ರೆವ್ವ ಗಂಡ ಮಕ್ಕಳೊಂದಿಗೆ ನೆಮ್ಮದಿಯಿಂದ ಬಾಳಿ ನಂತರ ಶಿವಾಪುರದ ಆರಾಧ್ಯ ದೇವತೆಯಾಗಿ ಶಿವಪುರದಲ್ಲಿ ನೆಲೆನಿಲ್ಲುತ್ತಾಳೆ. ತನ್ನ ಮಕ್ಕಳನ್ನು ಉಡಿಯಲ್ಲಿ ಕಟ್ಟಿಕೊಂಡು ರಕ್ಷಿಸಿದಂತೆ ಕರ್ರೆವ್ವ ನಮ್ಮನ್ನು ರಕ್ಷಿಸುತ್ತಾಳೆ ಎಂಬ ನಂಬಿಕೆ ಶಿವಾಪುರದ ಜನರದು. ಆ ದೇವಿಯ ಕೊರಳಲ್ಲಿ ಕವಡೆಯ ಸರವಿದ್ದು ದುರುಳ ದೇವತೆಗಳ ಬಗ್ಗೆ ಇನ್ನೂ ಭಯವಿದ್ದ ಕರ್ರೆವ್ವ ತನ್ನ ಮಕ್ಕಳನ್ನು ಅವರಿಂದ ರಕ್ಷಿಸಲು ಸೂರ್ಯಾಸ್ತದವರೆಗೂ ಅವರನ್ನು ಆಡಲು ಬಿಟ್ಟು ನಂತರ ಅವರನ್ನು ಕವಡೆಗಳನ್ನಾಗಿ ಪರಿವರ್ತಿಸಿ ಸರ ಮಾಡಿ ಕತ್ತಿನಲ್ಲಿ ಧರಿಸುತ್ತಾಳೆಂದು, ಆ ಸರದಲ್ಲಿರುವ ಕವಡೆಗಳೆಲ್ಲ ಅವಳ ಮಕ್ಕಳೆಂದು ಜನ ಭಾವಿಸುತ್ತಾರೆ. ಶಿವಾಪುರದ ಜನ ಅವಳ ಗಂಡ ಸತ್ತ ದಿನವನ್ನು 'ರಂಡೆ, ಹುಣ್ಣಿಮೆ'ಯೆಂದು, ಗಂಡ ಮಕ್ಕಳನ್ನು ಮರಳಿ ಪಡೆದ ದಿನವನ್ನು 'ಮುತ್ತೈದೆ ಹುಣ್ಣಿಮೆ'ಯೆಂದು ಆಚರಿಸುತ್ತಿರುತ್ತಾರೆ.

ಶಿವಾಪುರದ ಪ್ರತಿಯೊಬ್ಬ ಜನರು ನಮ್ಮ ಸುಖ, ದುಃಖ, ಒಳತು, ಕೆಡಕುಗಳಿಗೆ ಕರ್ರೆವ್ವನೇ ಕಾರಣ ಎಂದು ನಂಬಿರುತ್ತಾರೆ. ಎದ್ದಾಗ ಕೂತಾಗ ಮಲಗಿದಾಗ ದೇವಿಯ ಹೆಸರನ್ನು ಸ್ಮರಿಸುತ್ತಾರೆ. 'ಇಂತಹ ಕರಿಮಾಯಿಯೇ ನನಗೆ ಬರೆಯುವ ಬುದ್ಧಿಯನ್ನು ಕೊಟ್ಟಳು' ಎಂದು ಕಾದಂಬರಿಕಾರರು ಹೇಳುತ್ತಾರೆ.

ಶಿವಾಪುರಕ್ಕೆ ಕರಿಮಾಯಿಯ ರೀತಿಯಲ್ಲಿ ರಕ್ಷಣೆ ಒದಗಿಸಿ ಶಿವಾಪುರ ಗ್ರಾಮದ ಜನತೆ ನೆಮ್ಮದಿಯಿಂದ ಬಾಳುವಂತೆ ಮಾಡಿದ ವ್ಯಕ್ತಿ ಊರಗೌಡ ಪರಮಗೌಡ. ಗೌಡ ಬ್ರಿಟಿಷ್ ಸರಕಾರದ ಪ್ರತಿನಿಧಿಯಾಗಿ ಆಡಳಿತ ನಡೆಸುತ್ತಿದ್ದರು, ಉಳಿಗಮಾನ್ಯ ವ್ಯವಸ್ಥೆಯ ಪ್ರತೀಕಗಳಾದ ದರ್ಪ, ಸ್ವಾರ್ಥ, ಕ್ರೌರ್ಯ, ಅಹಂಕಾರಗಳಾವುದನ್ನು ಹೊಂದದೆ ಪ್ರೀತಿ, ಅಂತಃಕರಣ, ವಾತ್ಸಲ್ಯಗಳನ್ನು ಮೈಗೂಡಿಸಿಕೊಂಡಿದ್ದ ವ್ಯಕ್ತಿ. ಇದರಿಂದ ಊರಜನ ಇವನ ಬಗ್ಗೆ ಘನತೆ ಗೌರವಗಳನ್ನು ಹೊಂದಿದ್ದರು. ಈತನ ನ್ಯಾಯಯುತ, ಶ್ರದ್ಧೆಯ ಆಳಿಕೆಗಳಿಂದ ಗ್ರಾಮದಲ್ಲಿ ಯಾವುದೇ ರೀತಿಯ ಅನ್ಯಾಯಗಳು ನಡೆಯದೆ ಗ್ರಾಮದ ಜನ ನೆಮ್ಮದಿಯಿಂದ ಬಾಳುತ್ತಿದ್ದರು. ಇಂತಹ ಗೌಡನಿಗೆ ಆಡಳಿತದಲ್ಲಿ ಬಲಗೈಬಂಟನಾಗಿದ್ದವನು ದತ್ತುಕುಲಕರ್ಣಿ. ಈತ ತನ್ನ ಮನೆತನಕ್ಕೆ ಸೇರಿದ 'ಚಿಂತಾಮಣಿ' ಗ್ರಂಥವನ್ನು ಜನರ ಮುಂದೆ ಓದಿ ತನಗೆ ತಿಳಿದಂತೆ ಅರ್ಥ ಹೇಳುತ್ತಿದ್ದ. ಈತ ಬಾಬರ್ ದೊರೆಯ 'ಬಾಬರನಾಮಾ' ಗ್ರಂಥದಿಂದ ಪ್ರಭಾವಿತನಾಗಿ ಆತನಂತೆ ತನ್ನ ಆತ್ಮಚರಿತ್ರೆಯನ್ನು 'ದತ್ತಾತ್ರೇಯನಾಮಾ' ಎಂಬ ಹೆಸರಿನಲ್ಲಿ ಭಾಮಿನಿ ಷಟ್ಪದಿಯಲ್ಲಿ ರಚಿಸಿದನು. ಅದರಂತೆ ಶಿವಾಪುರದಲ್ಲಿ ಕಲಿಗಾಲ ಪ್ರವೇಶದಿಂದ ಭಕ್ತಿನಾಶವಾಗಿ ಪಾಪ ಹೆಚ್ಚಾದಾಗ ಕರಿಮಾಯಿ ಶಿವನ ಬಳಿ ಹೋಗಿ 'ನಿನ್ನ ಅವತಾರ ತೋರಿಸಿ ಪಾಪದಿಂದ ನನ್ನ ಊರನ್ನು ಪಾರು ಮಾಡು' ಎಂದು ಮೊರೆಯಿಡುತ್ತಾಳೆ. ಆಗ 'ಶಿವ ಶಿವಾಪುರದಲ್ಲಿ ಜನಿಸಿ ಭಕ್ತಿಯನ್ನು ಬೆಳಗಿ ಬಾ' ಎಂದು ಭೂಲೋಕಕ್ಕೆ ಕಳಿಸಿದ ದತ್ತಾತ್ರೇಯನೆಂಬ ಗಣನೇ ಈ ದತ್ತು ಕುಲಕರ್ಣಿ. ಗೌಡನ ಆತ್ಮೀಯ ಸ್ನೇಹಿತನಾದ ಈತ ಗೌಡನಂತೆ ಒಳ್ಳೆಯ ಗುಣದ ವ್ಯಕ್ತಿಯಾಗಿದ್ದ. ತಾಯಿ ಕರಿಮಾಯಿಯ ರಕ್ಷಣೆ ಮತ್ತು ಗೌಡ ದತ್ತಪ್ಪರಂತಹ ಒಳ್ಳೆಯ ಜನರ ಆಳ್ವಿಕೆಯಿಂದ ಶಿವಾಪುರದಗ್ರಾಮ ನೆಮ್ಮದಿಯ ತಾಣವಾಗಿತ್ತು.

ಗುಡಸ್ಯಾ ಎಂಬುವವನು ಇದೇ ಗ್ರಾಮದ ವ್ಯಕ್ತಿಯಾಗಿದ್ದು ಬೆಳಗಾವಿಯಲ್ಲಿ ಎಲ್.ಎಲ್.ಬಿ. ಕಲಿತು ಗಾಂಧೀಜಿಯ ತತ್ವಗಳಿಂದ ಪ್ರಭಾವಿತನಾಗಿ ಶಿವಾಪುರವನ್ನು ಬೆಳಗಾವಿಯಂತೆ ಸುಂದರ ನಗರವನ್ನಾಗಿ ಮಾಡುತ್ತೇನೆ. ಊರನ್ನು ಸುಧಾರಣೆ ಮಾಡುತ್ತೇನೆ ಎಂಬ ಉದ್ದೇಶದಿಂದ ಶಿವಾಪುರಕ್ಕೆ ಮರಳುತ್ತಾನೆ. ಗುಡಸ್ಯಾಗೋಳ ಎಂಬ ತನ್ನ ಅಡ್ಡ ಹೆಸರನ್ನು 'ಗುಡಸೀಕರ್' ಎಂದು ಬದಲಾಯಿಸಿಕೊಳ್ಳುತ್ತಾನೆ. ಇದೇ ವೇಳೆಗೆ 'ಗ್ರಾಮ ಪಂಚಾಯತಿ'ಯನ್ನು ಪ್ರಾರಂಭಿಸಬೇಕೆಂದು ಶಿವಾಪುರಕ್ಕೆ ಸರಕಾರದಿಂದ ಆಜ್ಞೆ ಬರುತ್ತದೆ. ಆಗ ಊರಗೌಡ ಮತ್ತು ಹಿರಿಯರು ಸೇರಿ ಪಂಚಾಯತಿ ರಚಿಸಿ ಊರಲ್ಲಿಯೇ ಹೆಚ್ಚು ಕಲಿತು ವಿದ್ಯಾವಂತನಾದ ಗುಡಸೀಕರನಿಂದ ಗ್ರಾಮಕ್ಕೆ ಒಳ್ಳೇದಾಗಬಹುದೆಂದು ನಿರೀಕ್ಷಿಸಿ ಗ್ರಾಮ ಪಂಚಾಯತಿಯ ಅಧ್ಯಕ್ಷನನ್ನಾಗಿ ನೇಮಿಸುತ್ತಾರೆ. ಆದರೆ ಜನರ ಭಾವನೆ ಸುಳ್ಳಾಗಿ ಗ್ರಾಮಪಂಚಾಯತಿಯ ರಚನೆ ಮತ್ತು ಗುಡಸೀಕರನ ಅಧ್ಯಕ್ಷತೆ ನೆಮ್ಮದಿಯಿಂದ ಬದುಕುತ್ತಿದ್ದ ಶಿವಾಪುರ ಗ್ರಾಮ ಕೋಲಾಹಲದ ತಾಣವಾಗಿ ಪರಿವರ್ತನೆಯಾಗಲು ಕಾರಣವಾಗುತ್ತದೆ.

ಗ್ರಾಮ ಪಂಚಾಯತಿಯ ಅಧ್ಯಕ್ಷತೆವಹಿಸಿಕೊಂಡ ಗುಡಸೀಕರ ತನ್ನ ಮನೆ ಮುಂದೆ ಇಂಗ್ಲೀಷ್‌ನಲ್ಲಿ 'ಜಿ.ಎಚ್.ಗುಡಸೀಕರ, ಬಿ.ಎ.ಎಲ್.ಎಲ್.ಬಿ. ಗ್ರಾಮ ಪಂಚಾಯಿತಿ ಸರಪಂಚ ಬೆಳಗಾಂ ಡಿಸ್ಟ್ರಿಕ್ಟ್' ಎಂಬ ಬೋರ್ಡನ್ನು ಬರೆಸಿ ಹಾಕಿಕೊಳ್ಳುತ್ತಾನೆ. ಶಿವಾಪುರವನ್ನು ಬೆಳಗಾವಿಯಂತೆ ನಗರೀಕೃತ ಪ್ರದೇಶವನ್ನಾಗಿ ಮಾಡಲು ಮುಂದಾಗುತ್ತಾನೆ. ಬೆಳಗಾವಿಯ ರಸ್ತೆಗಳು ತುಪ್ಪಬಿದ್ದರೂ ನೆಕ್ಕುವಂತೆ ಸ್ವಚ್ಛವಾಗಿರುತ್ತವೆ. ನಾವು ಪ್ರತಿಯೊಬ್ಬರು ಹಣ ಹಾಕಿ ಕಸ ಹೊಡೆಯಲು ವ್ಯಕ್ತಿಗಳನ್ನು ನೇಮಿಸಿ ಗ್ರಾಮವನ್ನು ಸ್ವಚ್ಛವಾಗಿಡೋಣ

ಎನ್ನುತ್ತಾನೆ. ಆದರೆ ಗ್ರಾಮದ ಜನ ಪ್ರತಿಯೊಬ್ಬರು ಹಣ ಹಾಕಿ ಕಸ ಗುಡಿಸುವುದಕ್ಕಿಂತ ತಮ್ಮ ತಮ್ಮ ಮನೆಯ ಅಂಗಳಗಳನ್ನು ತಾವೇ ಗುಡಿಸಿಕೊಂಡರಾಗದೆ ಎಂದು ಅವನನ್ನು ಪ್ರಶ್ನಿಸುತ್ತಾರೆ. ನಮ್ಮ ಮನೆಯ ಕೆಲಸಗಳನ್ನು ನಾವೇ ಮಾಡಿಕೊಳ್ಳಬೇಕು, ಅದಕ್ಕಾಗಿ ಪರರನ್ನೇಕೆ ಅವಲಂಬಿಸಬೇಕೆಂಬ ಸದುದ್ದೇಶ ಈ ಗ್ರಾಮಸ್ಥರದು. ಬೆಳಗಾವಿಯ ನಗರ ಜೀವನದ ಪ್ರಭಾವಕ್ಕೆ ಒಳಗಾಗಿದ್ದ ಗುಡಸೀಕರ ಪ್ರತಿಯೊಂದು ವಿಷಯದಲ್ಲಿಯೂ ಅದನ್ನು ತನ್ನ ಹಳ್ಳಿಯಲ್ಲಿ ಅಳವಡಿಸಲು ಪ್ರಯತ್ನಿಸುತ್ತಾನೆ.

ಶಿವಾಪುರದ ನಿಂಗೂನ ತಂದೆ ಮತ್ತು ಅವನ ಹೆಂಡತಿಯ ನಡುವೆ ಅನೈತಿಕ ಸಂಬಂಧ ಏರ್ಪಟ್ಟಿರುತ್ತದೆ. ಇದು ನಿಂಗೂನಿಗೆ ಗೊತ್ತಾಗಿ ತನ್ನ ಹೆಂಡತಿ ಮತ್ತು ತಂದೆಯನ್ನು ತೋಟದ ಮನೆಯಲ್ಲಿ ಕೊಲೆಮಾಡಿ ಬಂದು ನಂತರ ನಡೆದ ಸಂಗತಿಯನ್ನು ಊರಗೌಡನಿಗೆ ತಿಳಿಸುತ್ತಾನೆ. ನಿಂಗೂ ಅಮಾಯಕ ಮತ್ತು ತನಗಾದ ಅನ್ಯಾಯದಿಂದ ಕೊಲೆ ಮಾಡಿದ್ದಾನೆ. ಇದರಲ್ಲಿ ಅವನದೇನು ತಪ್ಪಿಲ್ಲ ಮತ್ತು ತಪ್ಪು ಮಾಡದ ಅವನಿಗೆ ಯಾವ ಶಿಕ್ಷೆಯೂ ಆಗಬಾರದು ಮತ್ತು ಪೋಲೀಸರಿಗೆ ವಿಷಯ ಮುಟ್ಟಿ ಅವರು ಊರು ಪ್ರವೇಶ ಮಾಡಿದರೆ ಊರ ಮರ್ಯಾದೆ ಮಣ್ಣು ಪಾಲಾಗುತ್ತದೆ. ಈ ವಿಷಯವನ್ನು ಪೋಲೀಸರಿಗೆ ತಿಳಿಸದೆ ಇಲ್ಲಿಯೇ ಮುಗಿಸಿ ಅಂತ್ಯಕ್ರಿಯೆ ಮಾಡಿ ಮುಗಿಸೋಣ ಎಂದು ಪರಗೌಡ ಹೇಳುತ್ತಾನೆ. ಆದರೆ ಗುಡಸೀಕರ ಇದು ಕೊಲೆ, ಈ ವಿಷಯವನ್ನು ಪೋಲೀಸರಿಗೆ ತಿಳಿಸೋಣ, ಪೋಲೀಸರು ಕೇಸು ಮಾಡಿದ ನಂತರ ನಾನು ಕೋರ್ಟಿನಲ್ಲಿ ನಿಂಗೂನ ಪರ ವಾದಿಸಿ ನಿಂಗೂನನ್ನು ಬಿಡಿಸಿಕೊಂಡು ಬರುತ್ತೇನೆ ಎಂದು ಹೇಳುತ್ತಾನೆ. ಗೌಡ 'ನೀನು ನಿಂಗೂನನ್ನು ಉಳಿಸುವ ಮನಸ್ಸಿದ್ದರೆ ಇಲ್ಲಿಯೇ ಉಳಿಸು' ಅದಕ್ಕಾಗಿ ನಿನ್ನ ವಕೀಲಕಿ ಬಳಸುವ ಅವಶ್ಯಕತೆ ಇಲ್ಲ. ಬೆಳಗಾವಿಯ ನ್ಯಾಯ ತಂದು ಇಲ್ಲಿ ಹೇರಿ ನಿಂಗೂನನ್ನು ಕೋರ್ಟಿಗೆ ಎಳೆದು ಬಡವನಾದ ಅವನನ್ನು ಕೊಲ್ಲಬೇಡ. ಇದುವರೆಗೂ ನಮ್ಮೂರಿಗೆ ಪೋಲೀಸ, ಕೋರ್ಟುಗಳ ಪ್ರವೇಶವಾಗಿಲ್ಲ, ಈಗಲೂ ಪ್ರವೇಶವಾಗುವದುಬೇಡ. ಮನುಷ್ಯ ತಪ್ಪು ಮಾಡುವುದು ಸಹಜ. ಅದನ್ನು ತಿದ್ದಿಕೊಳ್ಳಲು ಅವಕಾಶಮಾಡಿಕೊಡಬೇಕು. ಶಿಕ್ಷೆ ಕೊಡುವುದಿದ್ದರೆ ಇಲ್ಲಿಯೇ ಕೊಡು 'ನಮ್ಮೂರಿನ ಸಮಸ್ಯೆಯನ್ನು ನಾವೇ ಬಗೆಹರಿಸಿಕೊಳ್ಳೋಣ' ಎಂದು ಬುದ್ಧಿಮಾತು ಹೇಳುತ್ತಾನೆ. ಆದರೆ ನಗರದಲ್ಲಿ ಜೀವನ ಮಾಡಿ ಅದರ ಪ್ರಭಾವಕ್ಕೆ ಒಳಗಾಗಿದ್ದ ಗುಡಸೀಕರ ಅದನ್ನು ಇಲ್ಲಿಯು ಅಳವಡಿಸಬೇಕು ಮತ್ತು ತಾನು ಕೋರ್ಟ್‌ನಲ್ಲಿ ವಕೀಲನಾಗಿ ವಾದಮಾಡಬೇಕು ಎಂಬ ಉದ್ದೇಶದಿಂದ ಬೆಳಗಾವಿಗೆ ಹೋಗಿ ಪೋಲಿಸ್ ಸ್ಟೇಷನ್ನಿನಲ್ಲಿ ನಿಂಗೂವಿನ ಮತ್ತು ಗೌಡನ ವಿರುದ್ಧ ಕಂಪ್ಲೇಟು ಕೊಟ್ಟು ಪೋಲಿಸರು ಊರು ಪ್ರವೇಶಿಸುವಂತೆ ಮಾಡುತ್ತಾನೆ.

ಈ ವಿಷಯ ಮೊದಲೇ ತಿಳಿದ ಗೌಡ ನಿಂಗೂನಿಗೆ ಅನ್ಯಾಯವಾಗಿ, ಆತ ಜೈಲು ಸೇರಬಾರದೆಂದು ಹೆಣಗಳಿದ್ದ ಗುಡಿಸಲುಗಳಿಗೆ ಬೆಂಕಿ ಹಚ್ಚಿ ಫೌಜದಾರರು ಬಂದು ವಿಚಾರಿಸಿದಾಗ ಊರಲ್ಲಿ ಯಾವುದೇ ಕೊಲೆ ನಡೆದಿಲ್ಲ, ಅದು ಬೆಂಕಿ ಆಕಸ್ಮಿಕ ಎನ್ನುವಂತೆ ನಿರೂಪಿಸಲು ಯೋಚಿಸುತ್ತಾನೆ. ಆದರೆ ಈ ವಿಷಯ ಗುಡಸೀಕರನಿಗೆ ಗೊತ್ತಾದುದ್ದರಿಂದ, ಗುಡಸೀಕರ ಮತ್ತು ಪೋಲಿಸರು ಬರುವ ವೇಳೆಗೆ ಜನರಿಂದ ಹೆಣವನ್ನು ಬೇರೆ ಕಡೆಗೆ ಸಾಗಿಸಿ ಸ್ವಚ್ಛಗೊಳಿಸಿ ಏನು ನಡೆದಿಲ್ಲವೆಂಬಂತೆ ಕರಿಬೇಟಿ ಹಬ್ಬದಲ್ಲಿ ಭಾಗಿಯಾಗಿರುತ್ತಾನೆ. ಪೋಲಿಸರು ಬಂದಾಗ ಜ್ವರದಿಂದ ಘಟಿವಾಳಪ್ಪ ಸತ್ತನೆಂದು, ಹೋರಿ ಗೌರಿಯ ಗರ್ಭಕ್ಕೆ ಇರಿದು ಅವಳು ಸತ್ತಳೆಂದು ಜನರಿಂದ ಸುಳ್ಳು ಹೇಳಿಸಿ ನಿಂಗೂನನ್ನು ಉಳಿಸುತ್ತಾನೆ. ಹೀಗೆ

ಊರ ಬಗ್ಗೆ ಅಭಿಮಾನ, ಗೌರವವನ್ನು ಹೊಂದಿದ್ದ ಗೌಡ ಅಮಾಯಕ ನಿಂಗೂನನ್ನು ಮತ್ತು ಊರ ಮರ್ಯಾದೆಯನ್ನು ಕಾಪಾಡುತ್ತಾನೆ. ಇಡೀ ಊರಜನ ಗೌರವದಿಂದ ಕಾಣುತ್ತಿದ್ದ ಗೌಡನನ್ನು ವಿಚಾರಣೆಗೆ ಬಂದ ಫೌಜದಾರ ಏಕವಚನದಲ್ಲಿ ಅವಮರ್ಯಾದೆಯಿಂದ ಮಾತನಾಡಿಸುತ್ತಾನೆ. ಇದು ಗೌಡನ ಬಗ್ಗೆ ಅಭಿಮಾನ ಹೊಂದಿದ ಜನರಲ್ಲಿ ಗುಡಸೀಕರನ ಬಗ್ಗೆ ಆಕ್ರೋಶ ಹುಟ್ಟುವಂತೆ ಮಾಡುತ್ತದೆ. ಗುಡಸೀಕರ ಪೋಲೀಸರನ್ನು ಕರೆಸಿದಾಗ ಗೌಡ ಕೊಲೆ ನಡೆದಿಲ್ಲವೆಂದು ಸಾಬೀತುಪಡಿಸಿ ಕಳಿಸಿದ್ದರಿಂದ ಗುಡಸೀಕರನ ಅಭಿಮಾನಿಗಳು ಗೌಡನ ಬಗ್ಗೆ ದ್ವೇಷಭಾವನೆ ಬೆಳೆಸಿಕೊಳ್ಳುತ್ತಾರೆ. ಊರಲ್ಲಿಯ ಕುಸ್ತಿ ಹುಡುಗರು ಗೌಡನ ಪಕ್ಷ ವಹಿಸಿದರೆ ಅರೆಬರೆ ಶಾಲೆ ಕಲಿತ ಹುಡುಗರು ಗುಡಸೀಕರನ ಪಕ್ಷ ವಹಿಸುತ್ತಾರೆ. ಹೀಗೆ ನಿಂಗೂ ಮಾಡಿದ ಕೊಲೆಯಿಂದಾಗಿ ಊರು ಎರಡು ಗುಂಪುಗಳಾಗಿ ಒಡೆದು ಒಬ್ಬರ ವಿರುದ್ಧ ಒಬ್ಬರು ಕತ್ತಿ ಮಸೆಯುವಂತಾಗುತ್ತದೆ.

ಇದೇ ವೇಳೆಗೆ ಹೋಳಿ ಹುಣ್ಣಿಮೆ ಬರುತ್ತದೆ. ಪ್ರತಿವರ್ಷ ಹುಣ್ಣಿಮೆಯಲ್ಲಿ ಊರಲ್ಲಿ ಲಗುಮವ್ವನ ಹಾಡು ಮತ್ತು ಬಯಲಾಟಗಳು ನಡೆಯುತ್ತಿರುತ್ತವೆ. ಅವು ಗೌಡನ ನೇತೃತ್ವದಲ್ಲಿ ನಡೆಯುತ್ತಲಿದ್ದು ಆಗ ಗೌಡನಿಗಾಗಿ ಪ್ರತ್ಯೇಕ ಆಸನದ ವ್ಯವಸ್ಥೆ ಮಾಡಿದ್ದು, ಗೌಡ ಬಂದು ಕುಳಿತು ಆಟ ಪ್ರಾರಂಭಿಸಲು ಅಪ್ಪಣೆ ಕೊಟ್ಟ ನಂತರವೇ ಆಟ ಪ್ರಾರಂಭವಾಗುತ್ತಿರುತ್ತವೆ. ಲಗಮ್ಮವ್ವನ ಹಾಡು ನಡೆಯುವಾಗ ಗುಡಸೀಕರ ಗೌಡನಿಗಿಂತ ಮುಂಚೆ ಹೋಗಿ ಗೌಡನಿಗಾಗಿ ಹಾಕಿದ ಕುರ್ಚಿಯಲ್ಲಿ ಕುಳಿತು ಗೌಡ ಬಂದು ನಿಂತಾಗ ಅವನಿಗೆ ಸ್ವಲ್ಪವೂ ಗೌರವ ತೋರಿಸದೆ ಅವನನ್ನು ಅವಮರ್ಯಾದೆ ಮಾಡುತ್ತಾನೆ. ಮುಂದೆ ಕಾರಹುಣ್ಣಿಮೆಯಲ್ಲಿ ಗೌಡನ ನೇತೃತ್ವದಲ್ಲಿ ಬಯಲಾಟ ನಡೆಯುವುದರಿಂದ ಆತನ ವಿರೋಧಿ ಗುಂಪು ಅವನಿಗೆ ಪ್ರತಿಯಾಗಿ ತಾವು ನಾಟಕ ಆಡಲು ನಿರ್ಧರಿಸುತ್ತಾರೆ. ಅದಕ್ಕಾಗಿ 'ಸೀತಾಪಹರಣ' ನಾಟಕದ ತಾಲೀಮು ನಡೆಸುತ್ತಾರೆ. ಬಯಲಾಟಗಳು ದೇವಸ್ಥಾನದ ಕಟ್ಟೆಯ ಮೇಲೆ ನಡೆದರೆ ತಾವು ಅದಕಿಂತ ಭಿನ್ನವಾಗಿ ನಾಟಕ ನಡೆಸಬೇಕೆಂದು ಬೆಳಗಾವಿಯಿಂದ ಸ್ಟೇಜ್, ಲೌಡ್ ಸ್ಪೀಕರ್ ತರಿಸಿ ನಾಟಕ ಆಡಿಸುವ ವ್ಯವಸ್ಥೆ ಮಾಡಿಸುತ್ತಾರೆ. ಗುಡಸೀಕರ ನಾಟಕದಲ್ಲಿನ ಹೆಣ್ಣು ಪಾತ್ರ ನಿರ್ವಹಿಸಲು ಬೆಳಗಾವಿಯಿಂದ ಚಿಮಣಾಳನ್ನು ಕರೆಸುತ್ತಾನೆ. ಹೀಗೆ ಆಧುನಿಕ ಉಪಕರಣಗಳ ಭರಾಟೆಯಲ್ಲಿ ನಾಟಕದ ಸಿದ್ಧತೆ ನಡೆದಾಗ ಗೌಡನಿಗಾದ ಅವಮಾನದಿಂದ ಕುದಿಯುತ್ತಿದ್ದ ನಿಂಗೂ ನಾಟಕದ ದಿನ ಪಾತ್ರದಾರಿಗಳಿಗೆ ಎಲೆಯಡಿಕೆಯಲ್ಲಿ ಮತ್ತು ಬರುವ ಗಿಡಮೂಲಿಕೆ ಇಟ್ಟು ತಿನಿಸಿ ಅವರ ನಾಟಕ ಪ್ರಾರಂಭದಲ್ಲಿಯೇ ಹಾಳಾಗುವಂತೆ ಮಾಡಿ ಗುಡಶೀಕರ್‌ನ ಮೇಲೆ ಸೇಡು ತೀರಿಸಿಕೊಳ್ಳುತ್ತಾನೆ.

ನಾಟಕದ ಪಾತ್ರಕ್ಕಾಗಿ ಬಂದಿದ್ದ ಚಿಮಣಾ ಮತ್ತವಳ ಜೊತೆ ಬಂದಿದ್ದ ಬಸವರಾಜ ಶಿವಾಪುರದಲ್ಲಿಯೇ ಉಳಿಯುತ್ತಾರೆ. ಗುಡಸೀಕರ ಚಿಮಣಾಳಿಗಾಗಿ ಚಹಾ ಅಂಗಡಿ ಹಾಕಿ ಕೊಡುತ್ತಾನೆ. ಅವಳು ಚಹಾದೊಂದಿಗೆ ಬ್ರ್ಯಾಂಡಿಯನ್ನು ತನ್ನ ಅಂಗಡಿಯಲ್ಲಿ ಮಾರಲು ಪ್ರಾರಂಭಿಸುತ್ತಾಳೆ. ಲಗುಮವ್ವನ ಸರಾಯಿ ಅಂಗಡಿಯಲ್ಲಿ ಸರಾಯಿ ಕುಡಿದು ತಮ್ಮ ದಣಿವನ್ನು ನೀಗಿಸಿಕೊಳ್ಳುತ್ತಿದ್ದ ಜನ ಚಿಮಣಾಳ ರೂಪಕ್ಕೆ ಮರುಳಾಗಿ ಅವಳ ಅಂಗಡಿಗೆ ಬಂದು ಅವಳ ಬ್ರ್ಯಾಂಡಿಯ ಚಟಕ್ಕೆ ಬೀಳುತ್ತಾರೆ. ಕರಿಮಾಯಿ ಗುಡಿಯ ಪೂಜಾರಿಯು ಸಹ ಚಿಮಣಾಳ ಬ್ರ್ಯಾಂಡಿಯ ಚಟಕ್ಕೆ ಬಲಿಯಾಗುತ್ತಾನೆ. ಚಿಮಣಾಳ ಜೊತೆ ಬಂದ ಬಸವರಾಜ ಗುಡಸೀಕರನೊಂದಿಗೆ ಸ್ನೇಹ ಬೆಳೆಸಿ ಅವನ ಆಪ್ತಕಾರ್ಯದರ್ಶಿಯಂತೆ ವರ್ತಿಸಲು ಪ್ರಾರಂಭಿಸುತ್ತಾನೆ.

ಅವನ ಆಧುನಿಕ ರೀತಿಯ ಉಡುಪು, ವರ್ತನೆ ಮತ್ತು ಅವನ ಬಳಿಯಿದ್ದ ಟೇಪ್‌ರಿಕಾರ್ಡರ್‌ಗೆ ಮರುಳಾಗಿ ಜನ ಅವನನ್ನು ಕುತೂಹಲದಿಂದ ನೋಡುತ್ತಿರುತ್ತಾರೆ. ಇದೇ ವೇಳೆಗೆ ಗುಡಸ್ಯಾ ಮತ್ತು ಚಿಮಣಾಳ ನಡುವೆ ಅನೈತಿಕ ಸಂಬಂಧ ಏರ್ಪಡುತ್ತದೆ.

ಒಂದು ದಿನ ನೀರು ತರಲು ಕೆರೆಗೆ ಹೋದ ಚಿಮಣಾ ಕೆರೆಯಲ್ಲಿ ಈಸಾಡಲು ಹೋಗಿ ಕಾಲು ಜಾರಿ ಬೀಳುತ್ತಾಳೆ. ಅವಳ ಚೀರಾಟ ಕೇಳಿ ಬಂದ ಶಿವಲಿಂಗಗೌಡ ಅವಳನ್ನು ಕೆರೆಯಿಂದ ರಕ್ಷಿಸುತ್ತಾನೆ. ಆಗ ಅವನನ್ನು ನೋಡಿ ಮೋಹಗೊಂಡ ಚಿಮಣಾ ಹೊಲದಲ್ಲಿ ಆತ ಕೆಲಸ ಮಾಡುವಾಗ ಹೋಗಿ ಅವನನ್ನು ಸೇರುತ್ತಾಳೆ. ಚಿಮಣಾ ಗರ್ಭಿಣಿಯಾದಾಗ ಅದನ್ನು ನಿವಾರಿಸಲು ಬಸವರಾಜು ನಿಂಗೂನಿಂದ ಮದ್ದು ತಂದು ಕೊಡುತ್ತಾನೆ. ಚಿಮಣಾ ಅದನ್ನು ಹೊಲಕ್ಕೆ ತೆಗೆದುಕೊಂಡು ಹೋಗಿ ಸೇವಿಸಿ ನೋವಿನಿಂದ ನರಳುತ್ತಿರುವಾಗ ಅಲ್ಲಿಗೆ ಬಂದ ಗೌಡ ಅವಳನ್ನು ರಕ್ಷಿಸಿ ಸಮಾಧಾನ ಪಡಿಸುತ್ತಾನೆ. ಇದೇ ಸಮಯಕ್ಕಾಗಿ ಕಾಯುತ್ತಿದ್ದ ಬಸವರಾಜಗೌಡ ಚಿಮಣಾಳೊಂದಿಗೆ ಅನೈತಿಕ ಸಂಬಂಧ ಹೊಂದಿದ್ದಾನೆಂದು ಹೇಳಿ ಪೋಲಿಸರ ಮುಖಾಂತರ ಅವಳಿಗೆ ಆಸ್ತಿ ಕೊಡಿಸಲು ಪ್ರಯತ್ನಿಸುತ್ತಾನೆ. ಆಸ್ತಿ ಕೇಳಲು ಚಿಮಣಾ ಗೌಡನ ಮನೆಗೆ ಹೋದಾಗ ದತ್ತು ಮತ್ತು ಊರಜನ ಚಿಮಣಾಳದೆ ತಪ್ಪೆಂದು ನಿರ್ಧರಿಸಿ ಅವಳಿಗೆ ಬಹಿಷ್ಕಾರ ಹಾಕಿ ಅವಳನ್ನು ಊರಿಂದ ಹೊರಗೆ ಇಡುತ್ತಾರೆ. ಈ ಮೂಲಕ ಊರ ಜನ ತಮ್ಮ ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ಒಕ್ಕೊರಲಿನಿಂದ ಪ್ರತಿಭಟಿಸಿ ಗ್ರಾಮದ ಅಖಂಡತೆಯ ಶಕ್ತಿಯನ್ನು ಸಾಬೀತುಪಡಿಸುತ್ತಾರೆ.

ಗುಡಸೀಕರನ ಜೊತೆ ಸ್ನೇಹ ಬೆಳೆಸಿದ ಬಸವರಾಜ ಸ್ನೇಹಿತನ ತಂಗಿ ಗಿರಿಜಾಳ ಮೇಲೆ ಕಣ್ಣು ಹಾಕಿ ಅವಳನ್ನು ತನ್ನ ಪ್ರೇಮದ ಬಲೆಯಲ್ಲಿ ಬೀಳಿಸಿಕೊಳ್ಳುತ್ತಾನೆ.

ಇದೇ ವೇಳೆಗೆ ಊರಲ್ಲಿ ಪಂಚಾಯ್ತಿ ಚುನಾವಣೆಗಳು ಬರುತ್ತವೆ. ಆಗ ಗುಡಸೀಕರ ಮತ್ತು ಪರಮಗೌಡ ಪ್ರತಿಸ್ಪರ್ಧಿಗಳಾಗಿ ಚುನಾವಣೆಗೆ ನಿಲ್ಲುತ್ತಾರೆ. ಗುಡಸೀಕರನ ಗುರುತು ತಕ್ಕಡಿಯಾದರೆ, ಗೌಡನ ಗುರುತು ಮರ. ಇವರಿಬ್ಬರ ನಡುವೆ ಚುನಾವಣೆಯ ಪ್ರಚಾರ ಬಿರುಸಿನಿಂದ ನಡೆಯುತ್ತವೆ. ಪ್ರಜಾಪ್ರಭುತ್ವ ವ್ಯವಸ್ಥೆಯ ಚುನಾವಣೆಯ ಬಗ್ಗೆ ಏನೂ ಅರಿಯದ ಶಿವಾಪುರದ ಮುಗ್ಧ ಜನ ಗುಡಸೀಕರ ಗೋಡೆಯ ಮೇಲೆ ಉಚಿತವಾಗಿ ತಕ್ಕಡಿ ಚಿತ್ರ ತೆಗೆಸುವುದು ಗೊತ್ತಾಗಿ ದುಂಬಾಲು ಬಿದ್ದು ತಮ್ಮ ಮನೆಯ ಗೋಡೆಗಳ ಮೇಲೆ ತಕ್ಕಡಿ ತೆಗೆಸಿಕೊಳ್ಳುತ್ತಾರೆ. ಗೌಡನ ಗುರುತು ಮರ ಎಂದು ಗೊತ್ತಾದಾಗ ಅದನ್ನು ತಮ್ಮ ಗೋಡೆಗಳ ಮೇಲೆ ತೆಗೆಸುತ್ತಾರೆ. ನಗರದ ಚುನಾವಣೆಯ ಪ್ರಚಾರದ ಪರಿಚಯವಿದ್ದ ಬಸವರಾಜ ಅದನ್ನು ಶಿವಾಪುರದಲ್ಲಿ ಪ್ರಯೋಗಿಸಲು ಮುಂದಾಗುತ್ತಾನೆ. ಬೀಡಿ ಸೇದುತ್ತಿದ್ದ ಜನತೆಗೆ ಸಿಗರೇಟ ತರಿಸಿಕೊಡುತ್ತಾನೆ. ಬೆಳಗಾಂವಿಯಿಂದ ಬ್ರಾಗಳನ್ನೂ ತರಿಸಿ ಅವನ್ನು ಗುಡಸೀಕರನ ತಂಗಿ ಗಿರಿಜಾಳ ಮೂಲಕ ಊರ ಮಹಿಳೆಯರಿಗೆ ಹಂಚುತ್ತಾನೆ. ಅವರೆಲ್ಲರಿಂದ ಗುಡಸೀಕರನ ಪಕ್ಷಕ್ಕೆ ಓಟು ಹಾಕುವುದಾಗಿ 'ಕರಿಮಾಯಿ' ಹೆಸರಿನಲ್ಲಿ ಆಣಿ ಮಾಡಿಸಿಕೊಳ್ಳುತ್ತಾನೆ. ಪ್ರಚಾರಕ್ಕಾಗಿ ಬೆಳಗಾವಿಯಿಂದ ಬ್ಯಾಂಡ್‌ಸೆಟ್, ಲೌಡ್‌ಸ್ಪೀಕರ್ ಮತ್ತು ಕುಣಿಯುವ ಚಿಮಣಾಗಳನ್ನು ಕರೆಸುತ್ತಾನೆ. ಹೀಗೆ ನಗರದ ರೀತಿಯಲ್ಲಿ ಗುಡಸೀಕರನ ಗುಂಪು ವೈಭವದಿಂದ ಪ್ರಚಾರಕ್ಕೆ ತೊಡಗುತ್ತದೆ. ಇವರ ಮುಂದೆ ಗೌಡನ ಪಕ್ಷದ ಪ್ರಚಾರ ಸಪ್ಪೆ ಎನಿಸುತ್ತದೆ.

ಆದರೆ ಕರಿಮಾಯಿ ಪೂಜಾರಿಯ ಮೈಯಲ್ಲಿ ಬಂದು 'ಆಸರದ ಆಲದ ಮರದ ಬೇರುಗಳು ನೀರಿಲ್ಲದೆ ಒಣಗ್ಯಾವ ನೀರು ಹಾಕುವುದನ್ನು ಮರಿಬೇಡಿರೆಂದು ಅಪ್ಪಣೆ ಕೊಡುತ್ತಾಳೆ. ಮರಕ್ಕೆ ನೀರು ಹಾಕುವುದೆಂದರೆ ಮರದ ಚಿನ್ಹೆಯ ಗೌಡನ ಪಕ್ಷಕ್ಕೆ ಮತಹಾಕುವದೆಂದು ಅರ್ಥಮಾಡಿಕೊಂಡ ಶಿವಾಪುರದ ಜನ ಗೌಡನ ಪಕ್ಷಕ್ಕೆ ಮತನೀಡಲು ತೀರ್ಮಾನಿಸುತ್ತಾರೆ. ಬಸವರಾಜ ಚುನಾವಣಾ ಪ್ರಚಾರಕ್ಕಾಗಿ ಬಳಸಿದ ತಂತ್ರಗಳು ಶಿವಪುರದಂತಹ ಹಳ್ಳಿಗೆ ನಗರ ಜೀವನ ಮತ್ತು ಆಧುನಿಕ ಉಪಕರಣಗಳ ಪರಿಚಯ ಮಾಡಿಕೊಡುತ್ತವೆಯೋ ಹೊರತು ಜನರು ಕರಿಮಾಯಿಯ ಮೇಲಿಟ್ಟ ಭಕ್ತಿ ಮತ್ತು ಗೌಡನ ಬಗೆಗಿನ ಗೌರವವನ್ನು ಕಿಂಚಿತ್ತು ಕಡಿಮೆಮಾಡುವುದಿಲ್ಲ.

ಬಸವರಾಜ ಗುಡಸೀಕರನನ್ನು ಇಷ್ಟಪಟ್ಟ ದುರ್ಗಿಯನ್ನು ಪಡೆಯಲು ಆಸೆಪಟ್ಟು ಅವಳನ್ನು ಕರಿಮಾಯಿಯ ದೇವಸ್ಥಾನದಲ್ಲಿ ಗುಡಸೀಕರನಂತೆ ಸೇರುತ್ತಾನೆ. ಊರ ಜನರಿಗೆ ಪವಿತ್ರ ಸ್ಥಳವಾಗಿದ್ದ ಕರಿಮಾಯಿ ದೇವಸ್ಥಾನವನ್ನು ನಗರದಿಂದ ಬಂದ, ದೇವದೊಂದಿಗೆ ಯಾವ ಭಾವನಾತ್ಮಕ ಸಂಬಂಧವನ್ನು ಹೊಂದಿರದ, ಸಂಪ್ರದಾಯ ಸಂಸ್ಕೃತಿಗಳ ಬಗ್ಗೆ ಗೌರವಿಲ್ಲದ ಬಸವರಾಜ ಅದನ್ನು ತನ್ನ ದೈಹಿಕ ಭೋಗದ ನೆಲೆಯನ್ನಾಗಿ ಮಾಡಿಕೊಳ್ಳುತ್ತಾನೆ. ಬಸವರಾಜ ದುರ್ಗಿಯರ ಭೋಗದ ಗುದ್ದಾಟದಲ್ಲಿ ಕರಿಮಾಯಿಯ ಮೂರ್ತಿ ಬೆನ್ನುಮೇಲಾಗಿ ಬಿದ್ದು ಭಕ್ತರಿಗೆ ವರ ನೀಡುವ ದೇವಿಯ ಬಲಗೈ ಮುರಿದುಕೊಳ್ಳುತ್ತದೆ. ದೇವಿಯ ಮೂರ್ತಿಯ ಭಿನ್ನವಾಗುವಿಕೆ ಮುಂದೆ ನಡೆಯುವ ಅನಾಹುತದ ಮೂನ್ಸೂಚನೆ ನೀಡುತ್ತದೆ.

ಕರಿಮಾಯಿ ಬೆನ್ನು ಮೇಲಾಗಿ ಬಿದ್ದು ಬಲಗೈ ಮುರಿದುಕೊಂಡಿದ್ದಾಗಲೇ ಜನ ಕರಿಮಾಯಿಯ ಕೆಂಡದ ಹಬ್ಬ ನಡೆಸಲು ಸಿದ್ಧತೆ ನಡೆಸಿರುತ್ತಾರೆ. ಕರಿಮಾಯಿ ಮುರಿದ ಕೈಯಿಂದ ದೇವಸ್ಥಾನ ಮೈಲಿಗೆಯಾದದ್ದನ್ನು ಗುರುತಿಸಿದ ಗೌಡ, ಲಗಮವ್ವರು ಮತ್ತೆ ಶುಚಿಗೊಳಿಸಿ ಪೂಜೆಗೆ ಸಿದ್ಧತೆ ಮಾಡುತ್ತಾರೆ. ಕೆಂಡದ ಹಬ್ಬ ನಡೆದಾಗ ಉತ್ಸವ ನೋಡುತ್ತ ನಿಂತಿದ್ದ ಬಸವರಾಜನನ್ನು ಕರೆವ್ವ ಧರಧರ ಎಳೆದು ತಂದು ಕೆಂಡದ ಹೊಂಡದಲ್ಲಿ ಉರುಳಾಡಿಸುತ್ತಾಳೆ. ಹೀಗೆ ತನ್ನ ಗುಡಿಯನ್ನು ಅಪವಿತ್ರ ಮಾಡಿದವನಿಗೆ ಶಿಕ್ಷೆ ನೀಡುತ್ತಾಳೆ. ನಂತರ ಕರಿಮಾಯಿಯದು ರಂಡೆ ಹುಣ್ಣಿಮೆಯ ದಿನ ವಿಜೃಂಭಣೆಯಿಂದ ಜಾತ್ರೆ ನಡೆಯುತ್ತಿರುವಾಗ ಬಸವರಾಜ ಉತ್ಸವದ ದಿನ ದೇವಸ್ಥಾನದ ಹತ್ತಿರದ ಜೇನುಹುಟ್ಟಿಗೆ ಕಲ್ಲೆಸೆಯುತ್ತಾನೆ. ಆಗ ದೇವಸ್ಥಾನದಲ್ಲಿ ಕೋಲಾಹಲ ಏರ್ಪಟ್ಟು ಉತ್ಸವದಲ್ಲಿ ಭಾಗಿಯಾಗಿದ್ದ ಜನರೆಲ್ಲ ಚೆಲ್ಲಾಪಿಲ್ಲಿಯಾಗುತ್ತಾರೆ. ಗ್ರಾಮದ ನಡತೆಯನ್ನು ರೂಢಿಸಿಕೊಳ್ಳದಿದ್ದರೂ ದೇವಿಯ ಬಗ್ಗೆ ಗೌರವ ಹೊಂದಿದ್ದ ಗುಡಸೀಕರ ದೇವಿಯ ಆಭರಣಗಳನ್ನು ರಕ್ಷಿಸುವ ದೃಷ್ಟಿಯಿಂದ ಅವಳ ಬಂಗಾರದ ಮುಖ ಮತ್ತು ಆಭರಣಗಳನ್ನು ಸುರಕ್ಷಿತವಾಗಿ ತಂದು ಮನೆಯ ತಿಜೋರಿಯಲ್ಲಿಡುತ್ತಾನೆ. ಆದರೆ ಇದನ್ನು ನೋಡಿದ ಬಸವರಾಜ ದೇವಿಯ ಆಭರಣಗಳನ್ನು ಕಳವು ಮಾಡಿ ಗುಡಸೀಕರನ ತಂಗಿ ಗಿರಿಜಾಳೊಂದಿಗೆ ರಾತ್ರಿ ಊರಿನಿಂದ ಪಲಾಯನಗೈಯುತ್ತಾನೆ. ಮರುದಿನ ದೇವಿಯ ಆಭರಣ ಕಳುವಾಗಿರುವ ಸುದ್ದಿ ಊರಿಗೆಲ್ಲ ಗೊತ್ತಾಗುತ್ತದೆ. ದೇವಿಗೆ ನಮ್ಮ ಮೇಲೆ ಕರುಣೆ ಇದ್ದರೆ ಬರುವ ಹುಣ್ಣಿಮೆ ಒಳಗಾಗಿ ಆಭರಣಗಳು ಮರಳಿ ಬರಲಿ ಎಂದು ದೇವಿಯನ್ನು ಬೇಡಿಕೊಳ್ಳುತ್ತಾರೆ. ಆದರೆ ಆಭರಣಗಳು ಮರಳಿ ಸಿಗುವುದಿಲ್ಲ.

ದೇವಿಯ ಆಭರಣ ಕಳುವಾದ ಚಿಂತೆ ಮತ್ತು ಗ್ರಾಮಕ್ಕೆ ಬಂದ ದುಸ್ಥಿತಿಯನ್ನು ಕಂಡ ಗೌಡ ಕೊರಗಿಕೊರಗಿ ಹಣ್ಣಾಗುತ್ತಾನೆ. ಊರುಬಿಟ್ಟು ಹೋದ ದತ್ತು ಮಗ ಶಿವಲಿಂಗ ಮರಳಿ ಬರದಾದಾಗ

ಅವನ ಚಿಂತೆಯಲ್ಲಿಯೇ ಗೌಡತಿ ಸಾಯುತ್ತಾಳೆ. ಗರ್ಭಿಣಿಯಾದ ಚಿಮಣಾ ಊರಿನಿಂದ ಬಹಿಷ್ಕಾರಗೊಂಡು ಊರ ಹೊರಗೆ ನೆಲೆಸಿದ್ದು ಹೆರಿಗೆ ನೋವಿನಿಂದ ನರಳುತ್ತಿರುವಾಗ ಊರಜನ ಅವಳ ಸಹಾಯಕ್ಕೆ ಮುಂದಾಗುತ್ತಾರೆ. ಚಿಮಣಾ ಹೆಣ್ಣು ಮಗುವಿಗೆ ಜನ್ಮಕೊಡುತ್ತಾಳೆ. ಚಿಮಣಾಳ ಮಗಳ ಜನನದೊಂದಿಗೆ ಕಾದಂಬರಿ ಮುಕ್ತಾಯವಾಗುತ್ತದೆ.

ಕಾದಂಬರಿಯಲ್ಲಿ ಸ್ವಾತಂತ್ರ್ಯ ಚಳುವಳಿಯ ವಿಷಯವು ಪ್ರಸ್ತಾಪವಾಗುತ್ತದೆ. ಕೊಳವಿ ಮುದಕಪ್ಪನೆಂಬ ಸ್ವಾತಂತ್ರ್ಯ ಹೋರಾಟಗಾರ, ಬ್ರಿಟಿಷ್‌ರಿಂದ ಕಣ್ಣುತಪ್ಪಿಸಿ ಸುರಕ್ಷತೆ ಅರಸಿ ಶಿವಾಪುರಕ್ಕೆ ಬರುತ್ತಾನೆ. ಗೌಡ ಬ್ರಿಟಿಷ್ ಸರಕಾರದ ಪ್ರತಿನಿಧಿಯಾಗಿ ಆಡಳಿತ ನಡೆಸುತ್ತಿದ್ದರು, ಸ್ವಾತಂತ್ರ್ಯ ಚಳುವಳಿಯ ಬಗ್ಗೆ ಯಾವ ಅರಿವು, ದೇಶ ಸೇವೆಯ ಕಲ್ಪನೆ ಇರದಿದ್ದರೂ ಕೂಡಾ ಸ್ವಾತಂತ್ರ್ಯ ಹೋರಾಟಗಾರ ಮತ್ತು ಸಂಬಂಧಿಯಾದ ಕೊಳವಿ ಮುದುಕಪ್ಪನಿಗೆ ಗೌಡ ಆಶ್ರಯ ನೀಡುತ್ತಾನೆ. ಗೌಡನೊಂದಿಗೆ ಕೊಳವಿ ಮುದಕಪ್ಪ ಇರುವುದನ್ನು ನೋಡಿದ ಬಸವರಾಜ, ಗೌಡನನ್ನು ಇದರಿಂದ ಮಾತ್ರ ಜೈಲು ಸೇರುವಂತೆ ಮಾಡಬಹುದೆಂದು ಬೆಳಗಾವಿಗೆ ಹೋಗಿ ಗೌಡನ ಹೆಸರಿನ ಕಂಪ್ಲೇಂಟ್ ಕೊಡುತ್ತಾನೆ. ಮುದಕಪ್ಪನನ್ನು ಅರಸುತ್ತಾ ಬಂದ ಪೋಲಿಸರು ಮುದಕಪ್ಪ ಅವಿತಿದ್ದ ಕರಿಮಾಯಿ ಗುಡಿ ಪ್ರವೇಶಿಸಿ ಅವನನ್ನು ಕರಿಮಾಯಿ ಗುಡಿಯಲ್ಲಿಯೇ ಗುಂಡು ಹಾರಿಸಿ ಕೊಲ್ಲುತ್ತಾರೆ. ಶಾಲೆಯಲ್ಲಿ ಗಾಂಧೀಜಿಯ ತತ್ವಗಳನ್ನು ಅಳವಡಿಸಿಕೊಂಡು ಗ್ರಾಮೋದ್ಧಾರ, ದೇಶ ಸೇವೆಯ ಆಸೆ ಹೊತ್ತು ಶಿವಾಪುರಕ್ಕೆ ಬಂದ ಗುಡಸೀಕರ ತನ್ನ ಸ್ವಾರ್ಥಕ್ಕಾಗಿ ಕೊಳವಿ ಮುದುಕಪ್ಪನ ಸಾವಿಗೆ ಕಾರಣನಾಗುತ್ತಾನೆ. ಹೀಗೆ ದೇಶಸೇವೆಯ ಆಸೆಹೊತ್ತ ಗುಡಶೀಕರ ದೇಶದ್ರೋಹದ ಕೆಲಸ ಮಾಡಿದರೆ, ಇದ್ಯಾವುದರ ಪರಿಕಲ್ಪನೆ ಇರದ ಪರಮಗೌಡ ತನಗರಿವಿಲ್ಲದೆಯೇ ದೇಶ ಸೇವೆಯ ಕೆಲಸವನ್ನು ಮಾಡುತ್ತಾನೆ.

ನಗರ ಜನ ಗ್ರಾಮೀಣ ಜನತೆಯ ಯಾವ ಭಾವನೆಗಳಿಗೂ ಬೆಲೆಕೊಡದೆ ಯಾವ ರೀತಿ ಅವರನ್ನು ತಿರಸ್ಕಾರದಿಂದ ಕಾಣುತ್ತಾರೆ ಎಂಬುದನ್ನು ಕರಿಮಾಯಿ ಕಾದಂಬರಿ ಚಿತ್ರಿಸುತ್ತದೆ. ಜೊತೆಗೆ ಗ್ರಾಮೀಣ ಜನ ಆಧುನಿಕತೆಯ ಬೆರಗು ಬಿನ್ನಾಣಗಳಿಗೆ ಬೆರಗಾಗಿ ಅತ್ತ ವಾಲುತ್ತಿದ್ದರೂ ತಮ್ಮ ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ಒಗ್ಗಟ್ಟಿನಿಂದ ಅದನ್ನು ಪ್ರತಿಭಟಿಸಿ ಹೇಗೆ ಅಖಂಡತೆ ಮೆರೆಯುತ್ತಾರೆಂಬುದನ್ನು ಇಲ್ಲಿ ಕಾಣಬಹುದು.

ಜೀಕೆ. ಮಾಸ್ತರರ ಪ್ರಣಯ ಪ್ರಸಂಗ.

ಸಮಾಜದ ಪ್ರತಿಷ್ಠಿತ, ಗೌರವಾನ್ವಿತ ವ್ಯಕ್ತಿ ತನ್ನ ಸುಪ್ತಬಯಕೆ ಈಡೇರಿಸಿಕೊಳ್ಳುವ, ತನಗಾದ ಅವಮಾನಕ್ಕೆ ಸೇಡು ತೀರಿಸಿಕೊಳ್ಳುವ ಕಾತುರದಲ್ಲಿ ತನ್ನ ವ್ಯಕ್ತಿತ್ವವನ್ನೇ ಕಳೆದುಕೊಳ್ಳುವ, ನಂತರ ತನಗಾದ ಮೋಸದಿಂದ ತನ್ನ ತಪ್ಪಿನ ಅರಿವಾಗಿ ಮತ್ತೆ ತನ್ನ ಒಳ್ಳೆಗುಣಗಳನ್ನು ಮೈಗೂಡಿಸಿಕೊಂಡು ಆದರ್ಶವ್ಯಕ್ತಿಯಾಗಿ ಮೆರೆಯುವುದನ್ನು ಚಿತ್ರಿಸುವ ವಿಶಿಷ್ಟ ಚಿಕ್ಕ ಕಾದಂಬರಿ 'ಜೀಕೆ. ಮಾಸ್ತರರ ಪ್ರಣಯ ಪ್ರಸಂಗ'. ವ್ಯಕ್ತಿಯ ಮೂಲ ಮಾನವೀಯ ಗುಣಗಳ ಮುಂದೆ ಆತನ ಆಮಿಷಗುಣಗಳು ಸೋಲುವುದನ್ನು ಈ ಕಾದಂಬರಿ ನಿರೂಪಿಸುತ್ತದೆ.

ಗುಂಜ್ಯಾಳ ಕರಿಬಸಯ್ಯ ತಾಲೂಕು ಸ್ಥಳದಲ್ಲಿರುವ ಮುನ್ಸಿಪಲ್ ಹೈಸ್ಕೂಲಿನ ಮಾಸ್ತರರಾಗಿದ್ದವರು. ತಾಲೂಕಿಗೆಲ್ಲ ಜೀಕೆ. ಎಂದೇ ಖ್ಯಾತರಾದ ಇವರು ರಾಜಕಾರಣಿ ಅಥವಾ ಭಾಷಣಕಾರರಲ್ಲದಿದ್ದರೂ,

ಅವರಿಗಿಂತ ಹೆಚ್ಚು ಕೀರ್ತಿ, ಗೌರವಗಳನ್ನು ತಮ್ಮ ಊರಲ್ಲಿ ಗಳಿಸಿದ್ದರು. ತಮ್ಮ ಪ್ರಾಮಾಣಿಕ ದುಡಿಮೆ, ನಿಷ್ಠೆ, ಕೆಲಸದ ಮೇಲಿನ ಶ್ರದ್ಧೆಯಿಂದ ಹೈಸ್ಕೂಲನ್ನು ಬೆಳೆಸಿ ಜ್ಯೂನಿಯರ್ ಕಾಲೇಜಾಗಿ ಪರಿವರ್ತಿಸಿದರು. ಅಲ್ಲಿಯ ಮುನ್ಸಿಪಾಲ್ಟಿಯ ಬಹುಪಾಲು ಸದಸ್ಯರು ಇವರ ಶಿಷ್ಯರಾಗಿದ್ದರಿಂದ ಹೈಸ್ಕೂಲ್ ಕಾಲೇಜಾಗಿ ಪರಿವರ್ತನೆಯಾದಾಗ ಎಲ್ಲ ಸದಸ್ಯರು ಸರ್ವಾನುಮತದಿಂದ ಇವರನ್ನು ಕಾಲೇಜಿನ ಪ್ರಿನ್ಸಿಪಾಲರನ್ನಾಗಿ ನೇಮಿಸಿದರು. ಅಧಿಕಾರವಹಿಸಿಕೊಂಡ ಇವರು ದಕ್ಷತೆಯಿಂದ ಕಾರ್ಯನಿರ್ವಹಿಸಿದ್ದರಿಂದ ತಾಲೂಕಿಗೆಲ್ಲ ಅವರ ಕೀರ್ತಿ ಹಬ್ಬಿತು. ಕೀರ್ತಿಗೆ ತಕ್ಕಂತೆ ವ್ಯಕ್ತಿತ್ವವನ್ನು ಹೊಂದಿದ ಜೀಕೆ.ಮಾಸ್ತರರು ಆಧುನಿಕ ಸೂಟು ಬೂಟುಗಳಿಗೆ ಮರುಳಾಗದೆ ಸಂಪ್ರದಾಯದ ಗರಿಗರಿ ಧೋತ್ರ, ಬಿಳಿಶರ್ಟು, ಮೇಲೆ ಕೋಟು ಧರಿಸುತ್ತಿದ್ದು ಪ್ರಿನ್ಸಿಪಾಲರಾದರೂ, ಅವರು ತಮ್ಮ ಸಂಪ್ರಾದಾಯದ ಉಡುಪನ್ನು ಬದಲಾಯಿಸಲಿಲ್ಲ. ಕಡಿಮೆ ಮಾತಿನ, ಆತ್ಮವಿಶ್ವಾಸದ ಮಾಸ್ತರರು ತಮ್ಮ ಶಿಸ್ತು, ಸಂಯಮ ಮತ್ತು ಹಳೆಯ ಆಚರಣೆಗಳಲ್ಲಿಟ್ಟಿರುವ ನಂಬಿಕೆಯೇ ತಮ್ಮ ಘನವ್ಯಕ್ತಿತ್ವಕ್ಕೆ ಕಾರಣ ಎಂದು ಭಾವಿಸಿದ್ದರು.

ಜಗತ್ತು ಬರಬರುತ್ತಾ ಭ್ರಷ್ಟತೆಯತ್ತ ಸಾಗುತ್ತಿದೆ ಎಂಬ ಚಿಂತೆ ಜೀಕೆ.ಮಾಸ್ತರರನ್ನು ಕಾಡುತ್ತಿದ್ದು, ಜಗತ್ತು ಭ್ರಷ್ಟವಾಗದಂತೆ ತಡೆಯುವದು ಅಧ್ಯಾಪಕರಾದ ತಮ್ಮ ಪವಿತ್ರ ಕರ್ತವ್ಯ ಎಂದು ಅವರು ಭಾವಿಸಿದ್ದರು. ಈ ಭ್ರಷ್ಟತೆಗೆ ಆಧುನಿಕ ವಿದ್ಯಾರ್ಥಿಗಳೇ ಕಾರಣ ಎಂಬ ಭಾವನೆ ಅವರ ಮನಸ್ಸಿನಲ್ಲಿದ್ದಿದ್ದರಿಂದ ಅವರು ಆಧುನಿಕ ವಿದ್ಯಾರ್ಥಿಗಳನ್ನು ತಿರಸ್ಕಾರದಿಂದ ಕಾಣುತ್ತಿದ್ದರು. ಚಾತುರ್ವರ್ಣದ ಬಗ್ಗೆ ನಂಬಿಕೆ ಇಟ್ಟಿದ್ದ ಮಾಸ್ತರರಲ್ಲಿ, ಗಾಂಧೀಜಿಯ ಅಸ್ಪೃಶ್ಯತೆ ವಿರೋಧಿ ನಿಲುವಿನ ಬಗ್ಗೆ ತಿರಸ್ಕಾರ ಭಾವನೆ ಇತ್ತು. ಕೆಳಜಾತಿಯ ವಿದ್ಯಾರ್ಥಿಗಳ ಬಗ್ಗೆ ಕೀಳು ಭಾವನೆ ಇದ್ದರೂ ಅವರಿಗೆ ಸಿಗಬೇಕಾದ ಸೌಲಭ್ಯಗಳನ್ನು ಪ್ರಾಮಾಣಿಕತೆಯಿಂದ ದೊರಕಿಸಿಕೊಡುವ ಧಾರಾಳ ಗುಣ ಮಾಸ್ತರರದಾಗಿತ್ತು.

ಜೀಕೆ. ಮಾಸ್ತರರು ಪಾಠದಲ್ಲಿಯೂ ಪ್ರಾವೀಣ್ಯತೆ ಗಳಿಸಿದ್ದರು. ಅವರು ತಮ್ಮ ನಗಾರಿಯಂತಹ ಧ್ವನಿಯಿಂದ ಪಾಠಮಾಡುತ್ತಿದ್ದರೆ ಇಡೀ ದೃಶ್ಯವೇ ಕಣ್ಣಮುಂದೆ ಕಟ್ಟುವಂತೆ ಭಾಸವಾಗುತ್ತಿತ್ತು. ಆದರೆ ಶೃಂಗಾರ, ವಿರಹ, ಕರುಣದಂತಹ ಮೃದುಭಾವನೆಗಳನ್ನು ಸಹ ತಮ್ಮ ನಗಾರಿಯಂತಹ ಧ್ವನಿಯಿಂದ ಪಾಠ ಮಾಡುತ್ತಿದ್ದುದರಿಂದ ವಿದ್ಯಾರ್ಥಿಗಳಿಗೆ ಕಸಿವಿಸಿಯಾಗುತ್ತಿತ್ತು. ಆದರೂ ಇವರು ಅದೇ ರೀತಿ ಪಾಠ ಮಾಡುತ್ತಿದ್ದರು. ಜೀಕೆ. ಮಾಸ್ತರರ ಪಾಠಕ್ಕಿಂತ ಹೆಚ್ಚಾದ ಅವರ ಪ್ರಾಮಾಣಿಕತೆ, ಕರ್ತವ್ಯನಿಷ್ಠೆ, ಸಮಯಪ್ರಜ್ಞೆ, ಸದ್ಗುಣಗಳಿಂದ ಊರಿಗೆ ಬೇಕಾದ ವ್ಯಕ್ತಿಯಾಗಿದ್ದರು.

ಸಾರ್ವಜನಿಕ ಜೀವನದಲ್ಲಿ ಅಳವಡಿಸಿಕೊಂಡಿದ್ದ ಕರ್ತವ್ಯನಿಷ್ಠೆ, ಶಿಸ್ತುಗಳನ್ನು ಅವರು ತಮ್ಮ ಖಾಸಗಿ ಜೀವನದಲ್ಲಿಯೂ ಅಳವಡಿಸಿಕೊಂಡಿದ್ದರು. ಶಿವಭಕ್ತರಾಗಿದ್ದ ದಂಪತಿಗಳು ಪ್ರತಿವರ್ಷ ಶ್ರಾವಣದಲ್ಲಿ ತಪ್ಪದೆ ಸಾವಳಗಿ ಶಿವಲಿಂಗೇಶ್ವರರ ಮಠಕ್ಕೆ ಭೇಟಿ ಕೊಡುತ್ತಿದ್ದರು. ದೇವರನ್ನು ಸಹ ಹೆದರಿಸುವಂತಹ ಕಟ್ಟುನಿಟ್ಟು ಅವರ ವ್ರತಾಚರಣೆಯಲ್ಲಿರುತ್ತಿತ್ತು. ಒಮ್ಮೆ ಇವರ ಮಗ ವೀರಭದ್ರಯ್ಯ ಹೊಟ್ಟೆನೋವಿನಿಂದ ಬಳಲುತ್ತಿದ್ದರೂ ವ್ರತಾಚರಣೆಯಲ್ಲಿ ತೊಡಗಿದ್ದ ಮಾಸ್ತರರು ತಮ್ಮ ವ್ರತಕ್ಕೆ ಭಂಗವಾದೀತೆಂದು ಮಗನನ್ನು ಆಸ್ಪತ್ರೆಗೆ ಒಯ್ಯುವ ಪ್ರಯತ್ನವನ್ನು ಮಾಡಲಿಲ್ಲ. ಪತ್ನಿ ಗಿರಿಜಮ್ಮ ಪತಿಯ ಕಣ್ಣುತಪ್ಪಿಸಿ ಹೋಗಿ ಮಗನಿಗೆ ಆಸ್ಪತ್ರೆಗೆ ಹೋಗಿ ಬರುವಂತೆ ಸನ್ನೆ ಮಾಡಿ ಹೇಳಿ ಬರುತ್ತಾರೆ. ಆದರೆ ಮಗ ಆಸ್ಪತ್ರೆಗೆ ಹೋಗುವುದಿಲ್ಲ. ಬಹಳ ಹೊತ್ತಿನ ತರುವಾಯ ಇವರ ಮನೆಗೆ ಬಂದ ಯಾರೋ ಅಧ್ಯಾಪಕರು ಇವನನ್ನು ಆಸ್ಪತ್ರೆಗೆ

ಒಯ್ದರೂ ಮಾಸ್ತರರ ಮಗ ಬದುಕಿ ಉಳಿಯಲಿಲ್ಲ. ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡ ಕಟ್ಟುನಿಟ್ಟು, ಶಿಸ್ತಿನಿಂದ ಮಗ ಬಲಿಯಾದರೂ ಮಾಸ್ತರರಲ್ಲಿ ಯಾವ ಬದಲಾವಣೆಯೂ ಆಗದೆ, ಅವರು ಅದನ್ನು ತಮ್ಮ ಕರ್ಮಫಲವೆಂದು ತಿಳಿದು ಮುಂಚಿನಂತೆ ವ್ರತಗಳನ್ನು ನಿಷ್ಠೆಯಿಂದ ಆಚರಿಸಿಕೊಂಡು ಹೋಗುತ್ತಿದ್ದರು. ಆದರೆ ಮಗನ ಸಾವಿನಿಂದ ಕಂಗೆಟ್ಟ ತಾಯಿ ವ್ರತಾಚರಣೆಯಲ್ಲಿ ನಂಬಿಕೆಯನ್ನು ಕಳೆದುಕೊಂಡು, ಮಾನಸಿಕ ಅಸ್ವಸ್ಥಳಾಗಿ ಸದಾ ಒಂದಿಲ್ಲೊಂದು ಕಾಯಿಲೆಯಿಂದ ನರಳುತ್ತಿದ್ದಳು. ತನ್ನ ಅನಾರೋಗ್ಯ ಮತ್ತು ಮಕ್ಕಳಿಲ್ಲದ್ದರಿಂದ ಮಾಸ್ತರರಿಗೆ ಇನ್ನೊಂದು ಮದುವೆಯಾಗೆಂದು ಸಹ ಹೇಳುತ್ತಿದ್ದಳು. ಆದರೆ ತಮ್ಮ ಕಾಲೇಜಿನ ಕಾರ್ಯದಲ್ಲಿ ಮಗ್ನರಾಗಿರುತ್ತಿದ್ದ ಮಾಸ್ತರರಿಗೆ ಮಕ್ಕಳಿಲ್ಲದ ಕೊರಗು ಅಷ್ಟೇನು ಭಾದಿಸಿರಲಿಲ್ಲ. ಆದರೆ ಹೆಂಡತಿಯ ಈ ಅನಾರೋಗ್ಯ, ಮಾನಸಿಕ ಅಸ್ವಸ್ಥತೆ ಮತ್ತು ಜೀವನದಲ್ಲಿನ ಜಿಗುಪ್ಸೆಗಳು ಮುಂದೆ ಮಾಸ್ತರರ ಜೀವನದಲ್ಲಿ ನಡೆಯುವ ಕಹಿ ಘಟನೆಗೆ ಕಾರಣವಾಗುತ್ತದೆ.

ಜೀಕೆ.ಮಾಸ್ತರರ ನೇತೃತ್ವದಲ್ಲಿ ಸ್ಥಾಪನೆಯಾದ ಕಾಲೇಜು, ಸ್ಥಾಪನೆಯಾದ ಹತ್ತು ವರ್ಷದಲ್ಲಿಯೇ ಡಿಬೆಟ್, ರಿಸಲ್ಟು, ರ್‍ಯಾಂಕ್, ಸ್ಪೋರ್ಟ್ಸ್ ಹೀಗೆ ಎಲ್ಲ ವಿಧದಲ್ಲಿಯೂ ಅಸಮಾನ್ಯ ಪ್ರತಿಭೆ ಪ್ರದರ್ಶಿಸಿ ಅನೇಕ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿತು. ಆ ಕಾಲೇಜಿನ ಯಶಸ್ಸು ಕುರಿತು ಪತ್ರಿಕೆಗಳಲ್ಲಿ ಲೇಖನಗಳು ಪ್ರಕಟಗೊಂಡು ಅದರಲ್ಲಿ ಜೀಕೆ.ಮಾಸ್ತರರನ್ನು 'ಆಧುನಿಕ ದ್ರೋಣಾಚಾರ್ಯ'ರೆಂದು ಹೊಗಳಿದ್ದರು. ಜೀಕೆ.ಮಾಸ್ತರರ ಕೀರ್ತಿಯಿಂದ ಜನ ಅವರು ಯಾವುದೇ ಯೋಜನೆ ಹಾಕಿದರೂ, ಅದಕ್ಕಾಗಿ ಎಷ್ಟೇ ಹಣ ಕೇಳಿದರೂ ಯಾರೂ ಇಲ್ಲ ಎನ್ನುತ್ತಿರಲ್ಲಿ. ಇದೇ ಧೈರ್ಯದಿಂದ ಮಾಸ್ತರರು ಕಾಲೇಜಿನ ದಶಮಾನೋತ್ಸವ ಕಾರ್ಯಕ್ರಮ ಹಮ್ಮಿಕೊಂಡರು. ಇದರ ಯಶಸ್ವಿ ಮುನ್ನಡೆಗಾಗಿ ದಶಮಾನೋತ್ಸವ ಪೂರ್ವಭಾವಿ ಸಮಿತಿಯ ಮೀಟಿಂಗ್‌ನ್ನು ಕರೆಯುತ್ತಾರೆ. ದಶಮಾನೋತ್ಸವಕ್ಕಾಗಿ ಕರೆದ ಈ ಮೀಟಿಂಗು ಸಂಪ್ರದಾಯನಿಷ್ಠ, ನೈತಿಕತೆಯ ರೂವಾರಿ, ಶಿಸ್ತುಬದ್ಧ ಜೀಕೆ.ಮಾಸ್ತರರ ಮನಸ್ಸು ಚಂಚಲತೆ ಹೊಂದಿ, ದ್ವೇಷಭಾವನೆಗಳನ್ನು ಬೆಳಸಿಕೊಂಡು, ಅವರ ಜೀವನ ಹಳಿತಪ್ಪಿದ ರೈಲಿನಂತೆ ಕೆಟ್ಟದಾರಿ ಹಿಡಿಯಲು ಬುನಾದಿಯಾಗುತ್ತದೆ.

ಈ ದಶಮಾನೋತ್ಸವ ಸಮಿತಿಯ ಮೀಟಿಂಗಿಗೆ ಕಾಲೇಜಿನ 'ಯುನಿಯನ್ ಲೀಡರ್'ರಾದ ಗಿರಿಯಪ್ಪನನ್ನು ಕರೆಯಲಾಗುತ್ತದೆ. ಗಿರಿಯಪ್ಪ ಮೇಲೆ ನೋಡಲು ಸಭ್ಯನಂತಿದ್ದರೂ ಹೊರಗಡೆ ಹುಡುಗಿಯರನ್ನು ಕಾಡಿಸುವ, ಬೇರೆ ತರಗತಿಗಳಿಗೆ ನುಗ್ಗಿ ದಾಂಧಲೆ ಮಾಡುವ ಅನಾಗರಿಕತೆಯನ್ನು ರೂಢಿಸಿಕೊಂಡಿದ್ದ. ಜೊತೆಗೆ ಕಾಲೇಜಿನ ಪಿಕ್‌ನಿಕ್‌ಗೆ ಹೋದಾಗ ರೋಜಾ ಎಂಬ ಹುಡುಗಿಯೊಡನೆ ಕೆಲಸಮಯ ಮಾಯವಾಗಿ ನಂತರ ಅವರಿಬ್ಬರ ಹೆಸರು ಕಾಲೇಜಿನ ಗೋಡೆಯ ಮೇಲೆ ವಿರಾಜಿಸುವಂತೆ ಮಾಡಿದ್ದ. ಇದರಿಂದ ಜೀಕೆ.ಮಾಸ್ತರರಿಂದ ಅನೇಕಬಾರಿ ತರಾಟೆಗೂ ಒಳಗಾಗಿದ್ದ. ಇಂತಹ ಗಿರಿಯಪ್ಪ ಮೀಟಿಂಗಿಗೆ ಕರೆದಾಗ ಪ್ಯಾಂಟ್‌ಶರ್ಟ ಧರಿಸಿ, ಕುತ್ತಿಗೆಗೆ ಕೈವಸ್ತ್ರ ಕಟ್ಟಿಕೊಂಡು ಬಂದು ಯಾವುದೇ ಅಧ್ಯಾಪಕರಿಗೂ, ಪ್ರಿನ್ಸಿಪಾಲರಿಗೂ ನಮಸ್ಕಾರ ಮಾಡದೇ, ಯಾವುದೇ ರೀತಿಯ ಸಭ್ಯತೆ ವಿನಯವನ್ನು ತೋರಿಸದೇ ರಾಜಾರೋಷವಾಗಿ ಕುರ್ಚಿ ಮೇಲೆ ಕುಳಿತುಕೊಂಡ. ಇದುವರೆಗೂ ಪ್ರಿನ್ಸಿಪಾಲರ ಅನುಮತಿ ಇಲ್ಲದೆ ಕುರ್ಚಿ ಮೇಲೆ ಕುಳಿತುಕೊಳ್ಳಲು ಅಧ್ಯಾಪಕರುಗಳೇ ಹೆದರುತ್ತಿರುವಾಗ ಗಿರಿಯಪ್ಪ ಈ ರೀತಿ ಕುಳಿತಿದ್ದು ಜೀಕೆ.ಮಾಸ್ತರರನ್ನು ತಬ್ಬಿಬ್ಬು ಮಾಡಿತು. ಮೀಟಿಂಗ್‌ನಲ್ಲಿ ಅತಿಥಿಗಳ ಆಯ್ಕೆ ವಿಚಾರ ಬಂದಾಗ ಅಧ್ಯಾಪಕರು ಸಾಹಿತಿಗಳನ್ನು

ಕರೆಯೋಣವೆಂದಾಗ, ಗಿರಿಯಪ್ಪ ಚಲನಚಿತ್ರ ನಟರನ್ನು ಕರೆಯೋಣ ಎಂದು ಆಕ್ಷೇಪ ಎತ್ತುತ್ತಾನೆ. ಯೂನಿಯನ್ ಉದ್ಘಾಟನೆಯನ್ನು ದಶಮಾನೋತ್ಸವದ ಕಾರ್ಯಕ್ರಮದೊಂದಿಗೆ ಮಾಡೋಣ, ಇದರಿಂದ ಹಣ, ಸಮಯ, ಎರಡರ ಉಳಿತಾಯವಾಗುತ್ತದೆ ಎಂದು ಜೀಕೆ.ಮಾಸ್ತರರು ಹೇಳಿದಾಗ, ಇದು ಸಾಧ್ಯವಿಲ್ಲ, ಇದನ್ನು ಹುಡುಗರು ಒಪ್ಪುವುದಿಲ್ಲ, ಎಲ್ಲ ನಿರ್ಧಾರಗಳನ್ನು ನೀವೇ ತೆಗೆದುಕೊಳ್ಳುವಂತಿದ್ದರೆ ನಮ್ಮನ್ನೇಕೆ ಮೀಟಿಂಗ್‌ಗೆ ಕರೆಯಬೇಕೆಂದು ತಕರಾರು ತೆಗೆದು ಗಿರಿಯಪ್ಪ ಮಾಸ್ತರರಿಗೆ ಅವಮಾನ ಮಾಡುವ ರೀತಿಯಲ್ಲಿ ಮೀಟಿಂಗ್‌ನಿಂದ ಹೊರನಡೆಯುತ್ತಾನೆ. ಮೊದಲೇ ಆಧುನಿಕ ವಿದ್ಯಾರ್ಥಿಗಳ ನಡತೆ, ಉಡುಪಿನ ಬಗ್ಗೆ ತಾತ್ಸಾರ ಭಾವನೆ ಹೊಂದಿದ್ದ ಮಾಸ್ತರರಿಗೆ, ಗಿರಿಯಪ್ಪನ ಈ ಅಸಭ್ಯವರ್ತನೆ ಮತ್ತು ಅವನು ಮಾಡಿದ ಅವಮಾನ ಅವನ ಬಗ್ಗೆ ದ್ವೇಷಭಾವನೆ ಬೆಳೆಯುವಂತೆ ಮಾಡುತ್ತವೆ.

'ಉರಿಯುತ್ತಿದ್ದ ಬೆಂಕಿಗೆ ತುಪ್ಪ ಸುರಿಯುವಂತೆ' ಗಿರಿಯಪ್ಪನ ಬಗ್ಗೆ ದ್ವೇಷ ತಾಳಿದ್ದ ಮಾಸ್ತರರು ಕಾಲೇಜಿನ ಅಯೋಗ್ಯ, ಅಜ್ಞಾನಿ ಅಧ್ಯಾಪಕನೆಂದು ಹೆಸರುಗಳಿಸಿದ್ದ ಎಮ್ಮಿ ಮಾಸ್ತರರನ್ನು ವಿಚಾರಿಸಿದಾಗ, ಗಿರಿಯಪ್ಪ ಬಹಳ ಲುಚ್ಚಾ ಎಂದೂ, ಅವನು ಕ್ರಿಶ್ಚಿಯನ್ ಹುಡುಗಿ ರೋಜಾಳನ್ನು ಇಟ್ಟು ಕೊಂಡಿರುವುದಾಗಿಯೂ ಎಮ್ಮಿ ಹೇಳುತ್ತಾನೆ. ಇದರಿಂದ ರೋಜಾಳ ಬಗ್ಗೆ ಕುತೂಹಲ ತಾಳಿದ ಮಾಸ್ತರರು ವಿದ್ಯಾರ್ಥಿಗಳ ಹಾಜರಿ ತೆಗೆದುಕೊಳ್ಳುವಾಗ ರೋಜಾ ಎಂಬ ಹೆಸರು ಬಂದಾಗ ಅವಳ ಹೆಸರು ಕೂಗಿ ಅವಳನ್ನು ದಿಟ್ಟಿಸಿ ನೋಡುತ್ತಾರೆ. ಕಾಳಿದಾಸನ ವಿಕ್ರಮೋರ್ವಶಿಯನ್ನು ಹೇಳುವಾಗ ಊರ್ವಶಿಯ ರೂಪಲಾವಣ್ಯವನ್ನು ಅತ್ಯಂತ ತಾರಕಸ್ವರದಲ್ಲಿ ಹೇಳುತ್ತಾ ಕದ್ದು ಕದ್ದು ಅವಳನ್ನು ನೋಡುತ್ತಾರೆ. ಹುಡುಗರು ಇವರನ್ನು ನೋಡಿದ್ದರಿಂದ ರೋಜಾ ಮೂರ್ಛೆ ಹೋಗುತ್ತಾಳೆ. ಮೂರ್ಛೆ ಹೋದ ಅವಳ ಸುತ್ತ ಎಲ್ಲರೂ ನೆರೆದಾಗ ಅವಳ ಹತ್ತಿರ ಹೋಗಿ ನೋಡಿದ ಮಾಸ್ತರರು ಅವಳ ಸೌಂದರ್ಯಕ್ಕೆ, ಅವಳ ಮುಗ್ಧ ಸರಳ ಮುಖಭಾವಕ್ಕೆ ಮಾರು ಹೋಗುತ್ತಾರೆ.

ಮೂರ್ಛೆಯಿಂದ ಮನೆಗೆ ಹೋದ ರೋಜಾ ನಾಲ್ಕೈದು ದಿನಗಳ ನಂತರ ಕಾಲೇಜಿಗೆ ವಾಪಸ್ಸು ಬಂದಾಗ, ಎಲ್ಲರೆದುರಿಗೆ ಮೂರ್ಛೆ ಹೋಗಿದ್ದರಿಂದ ಅವಳಿಗೆ ಸಂಕೋಚವಾಗಿದ್ದಿರಬಹುದು ಅದನ್ನು ದೂರ ಮಾಡೋಣ ಎಂಬ ನೆಪದಿಂದ ಅವಳನ್ನು ರೂಮಿಗೆ ಕರೆಸುತ್ತಾರೆ. ಆಧುನಿಕ ಉಡುಪುಧರಿಸಿ. ರೂಮು ಪ್ರವೇಶಿಸಿದ ರೋಜಾಳನ್ನು ತಾತ್ಸಾರದಿಂದ ನೋಡಿ ಅವಳ ಯೋಗಕ್ಷೇಮ ವಿಚಾರಿಸುತ್ತಾರೆ. ಆದರೆ ಅವಳು ನಕ್ಕಾಗ ಅವಳ ಮಾದಕ ನಗುವಿಗೆ ಮರುಳಾದ ಮಾಸ್ತರರು ಅವಳ ಬಗ್ಗೆ ಆಕರ್ಷಿತರಾಗುತ್ತಾರೆ. ಕ್ಲಾಸ್ ರೂಮಿನಲ್ಲಿ ಹುಡುಗರು ಒಬ್ಬರ ಮೇಲೊಬ್ಬರು ಪ್ಲಾಸ್ಟಿಕ್ ಹಾವು ಎಸೆಯುತ್ತಾ ಗದ್ದಲ ಎಬ್ಬಿಸಿದಾಗ ಅಲ್ಲಿಗೆ ಹೋದ ಮಾಸ್ತರರು ಅದನ್ನು ಹುಡುಗರಿಂದ ಇಸಿದುಕೊಂಡು ಮನೆಗೆ ಬರುತ್ತಾರೆ. ಅದನ್ನು ಹೆಂಡತಿಯ ಮೇಲೆ ಎಸೆದು ಅವಳನ್ನು ಅಂಜಿಸುತ್ತಾರೆ. ಇಷ್ಟರಲ್ಲಿ ರೋಜಾಳ ಬಗ್ಗೆ ಮೋಹಿತರಾಗಿದ್ದ ಮಾಸ್ತರರು, ಆ ಹಾವು ರೋಜಾಳ ಮೇಲೆ ಬಿದ್ದಂತೆ, ಅವಳು ಅದರಿಂದ ಅಂಜಿದಂತೆ, ಅದರಿಂದ ಅವಳ ಬಟ್ಟೆ ಅಸ್ತವ್ಯಸ್ತವಾದಂತೆ ಆಗುವುದನ್ನು ಮನಸ್ಸಿನಲ್ಲಿಯೇ ಕಲ್ಪಿಸಿಕೊಳ್ಳುತ್ತಾರೆ. ಆದರೆ ಅಲ್ಲಿಯೇ ಇದ್ದ ತಮ್ಮ ವಯಸ್ಸಾದ ಹೆಂಡತಿಯನ್ನು ನೋಡಿ ತಾವು ಈ ರೀತಿ ಕಲ್ಪಿಸಿಕೊಂಡಿದ್ದರ ಬಗ್ಗೆ ಆಶ್ಚರ್ಯಪಟ್ಟು ಅದು ತಪ್ಪು ಎಂದುಕೊಳ್ಳುತ್ತಾರೆ. ಮಾಸ್ತರರು ರೋಜಾಳ ಬಗ್ಗೆ ಆಕರ್ಷಿತರಾಗಿದ್ದರೂ, ಹೆಂಡತಿಯ ಮೇಲಿನ ಅವರ ಪ್ರೇಮ ಅವರ ಸಭ್ಯ, ನೈತಿಕತೆಯ ನಡುವಳಿಕೆ ಅವರು ತಪ್ಪು ದಾರಿಗೆ ಹೋಗದಂತೆ ತಡೆಯುತ್ತಿರುತ್ತದೆ.

ಹೀಗೆ ಮಾಸ್ತರರು ತಮ್ಮ ಮನಸ್ಸನ್ನು ಹತೋಟಿಗೆ ತಂದುಕೊಳ್ಳುತ್ತಿರುವಾಗಲೇ ರೋಜಾ ಮತ್ತೆ ಅವರ ಛೇಂಬರಿಗೆ ಬಂದು ತನಗೆ ತಿಳಿಯದ ಪಠ್ಯಭಾಗವನ್ನು ವಿವರಿಸಿ ಹೇಳಬೇಕೆಂದು ಕೇಳಿಕೊಳ್ಳುತ್ತಾಳೆ. ಆಗ ಅವಳನ್ನು ನೋಡಿ ಅವರ ಮನಸ್ಸು ಮತ್ತೆ ಚಾಂಚಲ್ಯಕ್ಕೊಳಗಾಗಿ ಸುಲಭವಾಗಿ ವಿವರಿಸಬಹುದಾಗಿದ್ದ ಪಾಠವನ್ನು ಸುತ್ತಿಬಳಸಿ ಹೇಳುತ್ತಾರೆ.

ದಶಮಾನೋತ್ಸವದ ಹಿಂದಿನ ದಿನ ಹುಡುಗರು ಸಮಾರಂಭದ ಸಿದ್ಧತೆಯಲ್ಲಿ ತೊಡಗಿದ್ದಾಗ ರೋಜಾಳನ್ನು ನೋಡುವ ಉದ್ದೇಶದಿಂದ ಅಲ್ಲಿಗೆ ಹೋದ ಮಾಸ್ತರರು ಹುಡುಗಿಯರ ಬಳಿ ಇದ್ದ ಗಿರಿಯಪ್ಪನನ್ನು ಅಲ್ಲಿಂದ ದೂರ ಕಳಿಸುತ್ತಾರೆ. ಹುಡುಗಿಯರು ಕೇಳಿದರೆ ಸಹಾಯ ಮಾಡುವ ಆಸೆಯಿಂದ ಸ್ವಲ್ಪ ಹೊತ್ತು ಅಲ್ಲಿಯೇ ನಿಲ್ಲುತ್ತಾರೆ. ನಂತರ ಮಧ್ಯಾಹ್ನ ಬಂದು ಅಧ್ಯಕ್ಷೀಯ ಭಾಷಣ ಬರೆಯುತ್ತಿರುವಾಗ ಓಡಿ ಬಂದ ಎಮ್ಮಿ ಮಾಸ್ತರರು 'ಗಿರಿಯಪ್ಪ ರೋಜಾಳಿಗೆ ಮುತ್ತು ಕೊಟ್ಟನೆಂದು' ಹೇಳುತ್ತಾನೆ. ಇದನ್ನು ವಿಚಾರಿಸಲು ಮಾಸ್ತರರು ತೆರಳಿದರೆ ಅಷ್ಟರಲ್ಲಿಯೇ ರೋಜಾ ಮನೆಗೆ ಹೋಗಿರುತ್ತಾಳೆ. ಗಿರಿಯಪ್ಪನನ್ನು ಕರೆದು ಈ ಬಗ್ಗೆ ವಿಚಾರಿಸಿದಾಗ ಅದು ನನ್ನ ಖಾಸಗಿ ವಿಷಯ ಅದಕ್ಕೆ ನೀನು ಕೈ ಹಾಕಬಾರದೆಂದು ಹೇಳಿ ಕಾಲರ್ ಜಾಡಿಸಿಕೊಂಡು ಅಲ್ಲಿಂದ ಹೊರಟು ಹೋಗುತ್ತಾನೆ. ಮೊದಲೇ ಅವನ ಬಗ್ಗೆ ಕೋಪ ಹೊಂದಿದ್ದ ಜಿ.ಕೆ. ಮಾಸ್ತರರು ಆತ ಎಲ್ಲರೆದುರಿಗೆ ತಮಗೆ ಅವಮಾನ ಮಾಡಿದ್ದರಿಂದ ಅವನನ್ನು ಕಾಲೇಜಿನಿಂದ ಡಿಸ್‌ಮಿಸ್ ಮಾಡುತ್ತಾರೆ.

'ಬಡವನ ಕೋಪ ದವಡೆಗೆ ಮೂಲ' ಎಂಬಂತೆ ಜೀಕೆ.ಮಾಸ್ತರರು ಕೋಪದಿಂದ ತೆಗೆದುಕೊಂಡ ಈ ನಿರ್ಧಾರ ಅವರಿಗೆ ಮುಳುವಾಗಿ ಪರಿಣಮಿಸುತ್ತದೆ. ಕಾಲೇಜಿನ ಯುನಿಯನ್ ಲೀಡರ್‌ನನ್ನು ಕಾಲೇಜಿನಿಂದ ಡಿಸ್‌ಮಿಸ್ ಮಾಡಿದ್ದರಿಂದ ಮರುದಿನದ ದಶಮಾನೋತ್ಸವದ ಸಮಾರಂಭಕ್ಕೆ ಎಲ್ಲ ವಿದ್ಯಾರ್ಥಿಗಳು ಗೈರು ಹಾಜರಾಗುತ್ತಾರೆ. ಕೇವಲ ಊರ ಹಿರಿಯರು ಮಾತ್ರ ಬಂದಿದ್ದರು ಮಾಸ್ತರು ದಿನದ ಕಾರ್ಯಕ್ರಮವನ್ನು ಅರ್ಧದಿನಕ್ಕೆ ಮೊಟುಕುಗೊಳಿಸಿ ಕಾರ್ಯಕ್ರಮವನ್ನು ನಿಭಾಯಿಸಿ ಮುಗಿಸುತ್ತಾರೆ. ಸಮಾರಂಭ ಮುಗಿದ ತಕ್ಷಣ ತಮಗಾದ ಅವಮಾನ ಮತ್ತು ಹುಡುಗರಿಗೆ ಪಾಠ ಕಲಿಸುವ ಉದ್ದೇಶದಿಂದ ರಾಜೀನಾಮೆ ಪತ್ರ ಬರೆದುಕೊಡಲು ಸಿದ್ಧರಾಗುತ್ತಾರೆ.

ರಾಜೀನಾಮೆ ಪತ್ರ ಬರೆಯುವ ವೇಳೆಗೆ ಅಲ್ಲಿಗೆ ಹಾಜರಾದ ರೋಜಾ ಗಿರಿಯಪ್ಪ ತನ್ನನ್ನು ಪ್ರೀತಿ ಮಾಡುತ್ತಿರುವುದಾಗಿ ಆತ ತನಗೆ ನಾಲ್ಕೈದು ಪ್ರೇಮ ಪತ್ರ ಬರೆದಿದ್ದಾನೆಂದು, ತಾನು ಅದಕ್ಕೆ ಯಾವುದೇ ಉತ್ತರ ಬರೆದಿಲ್ಲವೆಂದು, ತಾನು ಮತ್ತೊಬ್ಬರಿಗೆ ಬರೆದ ಪ್ರೇಮಪತ್ರ ಅವನಿಗೆ ಸಿಕ್ಕಿದ್ದರಿಂದ ಅವನು ನಿಜವೇನೆಂದು ತನ್ನನ್ನು ಕೇಳಿದಾಗ ತಾನು ನಿಜವೆಂದು ಉತ್ತರ ಕೊಟ್ಟಾಗ ಕೋಪಗೊಂಡ ಆತ ತನ್ನನ್ನು ಹಿಡಿಯಲು ಬಂದಾಗ ತಾನು ಓಡಿಹೋದೆನೆಂದು, ಇಷ್ಟೇ ನಡೆದ ಘಟನೆ. ಆತ ತನಗೆ ಮುತ್ತು ಕೊಟ್ಟಿಲ್ಲವೆಂದು ಹೇಳುತ್ತಾಳೆ. ಇದರಿಂದ ಕುತೂಹಲಗೊಂಡ ಮಾಸ್ತರರು ಅವಳು ಯಾರನ್ನು ಪ್ರೀತಿಸುತ್ತಿದ್ದಾಳೆಂದು ಕೇಳಿದಾಗ ಅವಳು ತನ್ನ ಹತ್ತರವಿದ್ದ ಪ್ರೇಮಪತ್ರವನ್ನು ಮಾಸ್ತರರಿಗೆ ಕೊಡುತ್ತಾಳೆ. ಪ್ರೇಮಪತ್ರದಲ್ಲಿ ಜೀಕೆ.ಮಾಸ್ತರರ ಹೆಸರಿದ್ದು ತಾನು ಅವರನ್ನು ಪ್ರೀತಿಸುತ್ತಿರುವುದಾಗಿಯೂ, ತನಗೂ ಅವರಿಗೂ ವಯಸ್ಸಿನ ಅಂತರವಿದ್ದು ಮತ್ತು ಅವರಿಗೆ ಮದುವೆಯಾಗಿದ್ದರಿಂದ ಅವರ ಪ್ರೇಮದಿಂದ ತಪ್ಪಿಸಿಕೊಳ್ಳಲು ಮೂರುವರ್ಷದಿಂದ ಪ್ರಯತ್ನಪಟ್ಟರೂ ಅದು ಸಾಧ್ಯವಾಗಲಿಲ್ಲವೆಂದು ರೋಜಾ

ಬರೆದಿರುತ್ತಾಳೆ. ಇದರಿಂದ ಮಾಸ್ತರರ ಮನಸ್ಸು ಚಂಚಲಗೊಂಡಾಗ ಅದೇ ವೇಳೆ ಕರೆಂಟು ಹೋಗುತ್ತದೆ. ಆಗ ಮಾಸ್ತರರು ಬೆಳಕಿಗಾಗಿ ಕೈಯಾಡಿಸುತ್ತಾ ರೋಜಾಳನ್ನು ತಬ್ಬಿಕೊಂಡು ಮುತ್ತಿಡುತ್ತಾರೆ. ರೋಜಾ ಅಲ್ಲಿಂದ ತಪ್ಪಿಸಿಕೊಂಡು ಓಡುತ್ತಾಳೆ. ತನ್ನನ್ನು ಅವಮಾನ ಮಾಡಿದ ಗಿರಿಯಪ್ಪ ಪ್ರೀತಿಸುತ್ತಿದ್ದ ಹುಡುಗಿ ಅವನನ್ನು ಬಿಟ್ಟು ನನ್ನನ್ನು ಪ್ರೀತಿಸುತ್ತಿದ್ದಾಳೆಂದು ತಿಳಿದ ಮಾಸ್ತರರು ಹಿಗ್ಗಿ ತಾನೇ ಗೆದ್ದೆನೆಂದು ತೊಡೆ ತಟ್ಟಿ ಕೊಳ್ಳುತ್ತಾರೆ. ಗಿರಿಯಪ್ಪನ ಮೇಲಿನ ದ್ವೇಷ ಮಾಸ್ತರರು ತಮ್ಮ ಘನತೆ ವ್ಯಕ್ತಿತ್ವವನ್ನು ಮರೆತು, ರೋಜಾಳಂತಹ ಚಿಕ್ಕಹುಡುಗಿಯತ್ತ ತಮ್ಮ ಮನಸ್ಸನ್ನು ಹರಿಬಿಡಲು ಕಾರಣವಾಗುತ್ತದೆ.

ರೋಜಾಳು ತಮ್ಮನ್ನು ಪ್ರೀತಿಸುತ್ತಿರುವಳೆಂದು ತಿಳಿದ ಮಾಸ್ತರರು ತಮ್ಮ ನಡುವಳಿಕೆಯನ್ನು ಬದಲಿಸಿಕೊಳ್ಳುತ್ತಾರೆ. ಆಧುನಿಕ ಉಡುಪಿನ ವಿರೋಧಿಗಳಾಗಿದ್ದ ಇವರು ತಮ್ಮ ಸಂಪ್ರದಾಯದ ಉಡುಗೆ ತೊಡುಗೆ ಬಿಟ್ಟು ಪ್ಯಾಂಟ್, ಶರ್ಟ್ ಧರಿಸಲು ತೊಡಗುತ್ತಾರೆ. ತಮ್ಮ ಗಂಭೀರತೆ ಬದಿಗೊತ್ತಿ ವಾಚಾಳಿತನ ಬೆಳೆಸಿಕೊಳ್ಳುತ್ತಾರೆ. ತರಗತಿಗಳಲ್ಲಿ ಜೋಕುಗಳನ್ನು ಹೇಳಿ ವಿದ್ಯಾರ್ಥಿಗಳನ್ನು ನಗಿಸಿ ರೋಜಾಳ ಗಮನವನ್ನು ತಮ್ಮತ್ತ ಸೆಳೆಯಲು ಪ್ರಯತ್ನಿಸುತ್ತಾರೆ.

ಇದೇ ವೇಳೆಗೆ ಕಾಲೇಜಿನ ಹುಡುಗರು ಕೂಡಲಸಂಗಮಕ್ಕೆ ಒಂದು ದಿನದ ಪಿಕ್‌ನಿಕ್‌ಗೆ ತಯಾರಾದಾಗ ಮಾಸ್ತರರು ತಾವು ಅವರೊಂದಿಗೆ ತೆರಳುತ್ತಾರೆ. ಹುಡುಗರಿಗೆ ಇವರು ಬರುವುದು ಮನಸ್ಸಿರದಿದ್ದರೂ ಅನಿವಾರ್ಯವಾಗಿ ಅವರನ್ನು ಕರೆದುಕೊಂಡು ಹೋಗುತ್ತಾರೆ. ಮಾಸ್ತರರು ಐಬಿಯಲ್ಲಿ ಸ್ನಾನ ಮಾಡಿ ಬರುವುದರೊಳಗಾಗಿ ವಿದ್ಯಾರ್ಥಿಗಳು ನದಿಗೆ ಈಜಲು ಹೋಗಿರುತ್ತಾರೆ. ಅಲ್ಲಿ ಗಿರಿಯಪ್ಪ ನದಿಯಲ್ಲಿ ಈಜುತ್ತಾ ನೀರಿನಲ್ಲಿ ವಿವಿಧ ಬಗೆಯ ಕಸರತ್ತು ಮಾಡುತ್ತಾ ರೋಜಾ ಸೇರಿದಂತೆ ಎಲ್ಲ ಹುಡುಗಿಯರ ಗಮನವನ್ನು ತನ್ನತ್ತ ಸೆಳೆಯುತ್ತಿರುತ್ತಾನೆ. ಅಷ್ಟರಲ್ಲಾಗಲೇ ಅಲ್ಲಿಗೆ ಬಂದ ಜೀಕೆ.ಮಾಸ್ತರರು ರೋಜಾಳ ಗಮನವನ್ನು ತಮ್ಮತ್ತ ಸೆಳೆಯಲು ಗಿರಿಯಪ್ಪನನ್ನು 'ಈಜುವುದು ಬಿಟ್ಟು ಮೇಲೆ ಬಾ' ಎಂದು ಕರೆಯುತ್ತಾರೆ. ಅವನು ಮೇಲೆ ಬರದಾಗ ತಾವು ಅವನಿಗಿಂತ ಚೆನ್ನಾಗಿ ಈಸಿ ರೋಜಾಳ ಗಮನವನ್ನು ತಮ್ಮತ್ತ ಸೆಳೆಯಬೇಕೆಂಬ ಆಸೆಯಿಂದ ಅವನೊಂದಿಗೆ ಈಜಲು ಪ್ರತಿಸ್ಪರ್ಧೆಗೆ ಇಳಿಯುತ್ತಾರೆ. ಆದರೆ ವಯಸ್ಸಾದ ಇವರು ಅವನೊಂದಿಗೆ ಪ್ರತಿಸ್ಪರ್ಧಿಸಲು ಸಾಧ್ಯವಾಗದೆ ಕೈಕಾಲು ಸೋತು ಮುಳುಗುವ ಹಂತ ತಲುಪಿದಾಗ ಗಿರಿಯಪ್ಪ ಅವರನ್ನು ಮೇಲೆ ತಂದು ಬದುಕಿಸುತ್ತಾನೆ. ಅವನೊಂದಿಗೆ ಪೈಪೋಟಿಗೆ ಇಳಿದು ಸೋತದ್ದು ಅವರಿಗೆ ಮತ್ತಷ್ಟು ಅವಮಾನವಾಗಿ ಅವನ ಬಗ್ಗೆ ಮತ್ತಷ್ಟು ದ್ವೇಷಭಾವನೆ ಬೆಳೆಸಿಕೊಳ್ಳಲು ಕಾರಣವಾಗುತ್ತದೆ. ನಂತರ ಮಾಸ್ತರರು ಅವನ ಹೆಸರು ಕಿವಿಗೆ ಬಿದ್ದ ತಕ್ಷಣ ಉರಿಯತೊಡುಗುತ್ತಾರೆ.

ಆ ವೇಳೆಗೆ ಪರೀಕ್ಷೆಗಳು ಮುಗಿದು ರೋಜಾ ಊರಿಗೆ ಹೋಗುತ್ತಾಳೆ. ಬಿ.ಎ.ಯ ಸಂಸ್ಕೃತ ಪೇಪರಿನ ಉತ್ತರ ಪತ್ರಿಕೆಗಳು ತಮ್ಮ ಹತ್ತಿರ ಮೌಲ್ಯಮಾಪನಕ್ಕೆ ಬರುತ್ತವೆಂದು ಮಾಸ್ತರರು ಹೇಳಿದಾಗ ರೋಜಾ ಕಾಲೇಜಿಗೆ ಬರುತ್ತಾಳೆ. ತಮ್ಮ ಮನೆ ನಿರ್ಜನವಾದ ಪ್ರದೇಶದಲ್ಲಿರುವುದರಿಂದ ಮತ್ತು ತಮ್ಮ ಹೆಂಡತಿ ಅನಾರೋಗ್ಯದಿಂದಿರುವುದರಿಂದ ತಮ್ಮ ಸ್ಟಡಿರೂಮಿಗೆ ಬರುವುದಿಲ್ಲ. ಆಗ ರೋಜಾಳ ಹತ್ತಿರ ಆರಾಮಾಗಿ ತಾವು ಮಾತನಾಡಬಹುದೆಂದು ಯೋಚಿಸಿದ ಮಾಸ್ತರರು ಉತ್ತರ ಪತ್ರಿಕೆಗಳು ಮನೆಯಲ್ಲಿವೆ ಎಂದು ಹೇಳಿ ಸಂಜೆ ಏಳರ ನಂತರ ಮನೆಗೆ ಅವಳನ್ನು ಕರೆಸಿಕೊಳ್ಳುತ್ತಾರೆ. ಮನೆಗೆ ಬಂದ ರೋಜಾ ಮಾಸ್ತರರ ಹತ್ತಿರ ನಗುನಗುತ್ತಾ ಮಾತಾನಾಡಿದಾಗ ನಿನಗೆ ಬೇಕಾದಷ್ಟು ಮಾರ್ಕ್ಸ್ ಹಾಕಿಕೊಳ್ಳು ಎಂದು ಮಾಸ್ತರರು

ಪೇಪರನ್ನು ರೋಜಾಳ ಕೈಗೆ ಕೊಡುತ್ತಾರೆ. ರೋಜಾ ತನ್ನ ಪತ್ರಿಕೆಯ ಜೊತೆ ತನ್ನ ಗೆಳತಿಯದೆಂದು ಹೇಳಿ ಗಿರಿಯಪ್ಪನ ಪೇಪರಿಗೂ ಹೆಚ್ಚು ಮಾರ್ಕ್ಸ್ ಹಾಕಿಕೊಳ್ಳುತ್ತಾಳೆ. ಮಾಸ್ತರರು ಮದುವೆಯ ವಿಚಾರ ಎತ್ತಿದಾಗ ರಿಜಲ್ಟ್ ದಿನ ಹುಬ್ಬಳ್ಳಿಯ ಅಶೋಕ ಹೋಟಲಿಗೆ ಬರಬೇಕೆಂದು, ಆಗ ಅಲ್ಲಿ ಮದುವೆಯ ವಿಚಾರ ಮಾತಾನಾಡುವುದಾಗಿಯೂ ಹೇಳುತ್ತಾಳೆ. ರೋಜಾ ಹೋದ ನಂತರ ಮಾಸ್ತರರು ಅವಳ ಬಗ್ಗೆ ಕನಸು ಕಾಣುತ್ತಾ ಮಲಗುತ್ತಾರೆ. ಬೆಳಗಾಗೆದ್ದು ಹೆಂಡತಿಗೆ ಔಷಧ ಕುಡಿಸಲು ಹೋದಾಗ ರೋಜಾ ಮಾಸ್ತರರಿಗೆ ಬರೆದಿದ್ದ ಪ್ರೇಮಪತ್ರವನ್ನು ಓದಿದ್ದ ಗಿರಿಜಮ್ಮ ಆ ಪತ್ರವನ್ನು ಕೈಯಲ್ಲಿಯೇ ಹಿಡಿದುಕೊಂಡು ಹಾಗೆಯೇ ಸತ್ತಿರುತ್ತಾಳೆ. ಮಾಸ್ತರ ಈ ಚಂಚಲತೆ, ತನ್ನ ಅನಾರೋಗ್ಯ ಮತ್ತು ಮಕ್ಕಳ ಆಸೆಯಿಂದ ಗಂಡನಿಗೆ ಇನ್ನೊಂದು ಮದುವೆಯಾಗೆಂದು ಒತ್ತಾಯ ಮಾಡುತ್ತಿದ್ದ ಗಿರಿಜಮ್ಮನಂಥ ತ್ಯಾಗಮನೋಭಾವದ ಹೆಣ್ಣುಮಗಳು ತನಗೆ ಗೊತ್ತಿಲ್ಲದಂತೆ ಗಂಡ ತನಗೆ ದ್ರೋಹ ಮಾಡುತ್ತಿರುವುದನ್ನು ತಿಳಿದು ಅವಳು ಬಲಿಯಾಗುವಂತೆ ಮಾಡುತ್ತದೆ.

ರೋಜಾಳನ್ನು ಭೇಟಿಯಾಗಲು ಹುಬ್ಬಳ್ಳಿಗೆ ಹೋದ ಮಾಸ್ತರರು ಅಶೋಕ ಹೋಟೆಲಿನಲ್ಲಿ ರೂಮು ಹಿಡಿದು ಅವಳು ಬರದಾಗ ರಿಜಲ್ಟ್ ತಿಳಿಯಲು ಯುನಿವರ್ಸಿಟಿಗೆ ಹೋಗುತ್ತಾರೆ. ಅಲ್ಲಿ ರಿಜಲ್ಟ್ ಕೇಳಿದಾಗ ರೋಜಾ ಮತ್ತು ಗಿರಿಯಪ್ಪ ಫಸ್ಟ್ ಕ್ಲಾಸಿನಲ್ಲಿ ಪಾಸಾದ ವಿಷಯ ತಿಳಿಯುತ್ತದೆ. ಇವರಿಬ್ಬರು ಫಸ್ಟಕ್ಲಾಸಿನಲ್ಲಿ ಪಾಸಾಗುವ ವಿಧ್ಯಾರ್ಥಿಗಳೇ ಅಲ್ಲ. ರೋಜಾ ತನ್ನ ಗೆಳತಿಯದೆಂದು ಹೇಳಿ ಮಾರ್ಕ್ಸ್ ಹಾಕಿದ್ದು ಗಿರಿಯಪ್ಪನ ಪೇಪರಿಗೆಂದೂ, ಅವಳು ಗಿರಿಯಪ್ಪನನ್ನು ಪ್ರೀತಿಸುತ್ತಿರುವಳೆಂದೂ ಅವಳು ತಮಗೆ ಮೋಸಮಾಡಿರುವಳೆಂದೂ, ಮಾಸ್ತರರಿಗೆ ಧೃಡವಾಗುತ್ತದೆ. ಆಗ ಮರಳಿ ಹುಬ್ಬಳ್ಳಿಯ ಅಶೋಕ ಹೋಟೆಲ್‌ಗೆ ಹೋದಾಗ ರೂಮಿನಲ್ಲಿ ಗಿರಿಯಪ್ಪ ಮತ್ತು ರೋಜಾ ಇದ್ದುದನ್ನು ನೋಡಿ ಮೂರ್ಛೆ ಹೋಗುತ್ತಾರೆ. ಅವರಿಬ್ಬರು ಇವರನ್ನು ಉಪಚರಿಸುತ್ತಾರೆ. ಗಿರಿಯಪ್ಪ ನಿಮ್ಮನ್ನು ಬುಟ್ಟಿಗೆ ಹಾಕಿಕೊಂಡರೆ ನೂರು ರೂಪಾಯಿ ಕೊಡುವುದಾಗಿ ಬೆಟ್ ಕಟ್ಟಿದ್ದ, ನಿಮಗೆ ಕೊಟ್ಟ ಪ್ರೇಮಪತ್ರಗಳನ್ನು ಅವನೇ ಬರೆದುಕೊಡುತ್ತಿದ್ದ ಎಂದು ರೋಜಾ ತನ್ನ ತಪ್ಪೊಪ್ಪಿಕೊಳ್ಳುತ್ತಾಳೆ. ಗಿರಿಯಪ್ಪ ನೀವು ಯಾವಾಗಲೂ ನನ್ನನ್ನು ದ್ವೇಷಭಾವನೆಯಿಂದ ನೋಡುತ್ತಿದ್ದುದರಿಂದ ನಿಮ್ಮನ್ನು ಆಟ ಆಡಿಸಲು ಹಾಗೆ ಮಾಡಿದ್ದೆನೆಂದು ಹೇಳುತ್ತಾನೆ. ಇಬ್ಬರೂ ತಪ್ಪೊಪ್ಪಿಕೊಂಡು ಮಾಸ್ತರರ ಕ್ಷಮೆ ಕೇಳುತ್ತಾರೆ. ಆದರೆ ತಾವು ಮೋಸಕ್ಕೆ ಬಲಿಯಾಗಿ ಮಾರ್ಕ್ಸ್ ಹಾಕಿ ಭೃಷ್ಟರಾದದ್ದು, ತಮ್ಮ ಹೆಂಡತಿಯ ಸಾವಿಗೆ ಕಾರಣವಾದದ್ದನ್ನು ನೆನಪಿಸಿಕೊಂಡ ಮಾಸ್ತರರು ನೊಂದು ತಮ್ಮ ಬಗ್ಗೆ ತಾವೇ ಅಸಹ್ಯ ಪಟ್ಟುಕೊಂಡು ಅಲ್ಲಿಂದ ಹೊರನಡೆಯುತ್ತಾರೆ. ಅಲ್ಲಿಂದ ಸ್ಟೇಷನ್ನಿಗೆ ತೆರಳಿ ಅಲ್ಲಿ ನಡುಗುತ್ತಾ ಕುಳಿತ ಒಬ್ಬ ವ್ಯಕ್ತಿಗೆ ಕೋಟು ಹಾಕಿ ಗಾಡಿ ಹತ್ತುತ್ತಾರೆ. ಆ ವ್ಯಕ್ತಿ ಗಾಡಿಗೆ ಸಿಕ್ಕು ಸತ್ತಿದ್ದರಿಂದ ಮತ್ತು ಆ ವ್ಯಕ್ತಿಯ ಮೈ ಮೇಲೆ ಮಾಸ್ತರರ ಕೋಟು ಇದ್ದುದ್ದರಿಂದ ಮಾಸ್ತರು ಸತ್ತರೆಂದು ತಿಳಿದು ಕಾಲೇಜಿನಲ್ಲಿ ಸಂತಾಪ ಸೂಚಕ ಸಭೆ ಏರ್ಪಡಿಸಿ ಕಾಲೇಜಿಗೆ ಅವರ ಹೆಸರಿಡುತ್ತಾರೆ.

ಅನಾಥರಾದ ಗಿರಿಯಪ್ಪ ಮತ್ತು ರೋಜಾ ಮದುವೆಯಾಗಬೇಕೆಂದು ಬಯಸಿದರೂ ಗಿರಿಯಪ್ಪನಿಗೆ ಯಾವ ಕೆಲಸ ಸಿಗದ್ದರಿಂದ, ಅವರಿಬ್ಬರು ಮದುವೆಯಾಗದೆ ಇರುತ್ತಾರೆ. ರೋಜಾ ತಮ್ಮ ಕುಲಕಸುಬಾದ ವೇಶ್ಯಾವೃತ್ತಿಗೆ ಮರಳಿ ಪ್ರವೇಶಿಸುತ್ತಾಳೆ. ಇಬ್ಬರೂ ತಮ್ಮ ಈ ಪರಿಸ್ಥಿತಿಗೆ ಜೀಕೆ.ಮಾಸ್ತರರ ಶಾಪವೇ

ಕಾರಣವೆಂದು ಮಾತನಾಡುತ್ತಾ ನಡೆಯುತ್ತಾ ಹೊರಟಿರುತ್ತಾರೆ. ಆಗ ಅವರನ್ನು ನೋಡಿದ ಮಾಸ್ತರರು ಅವರನ್ನು ಕೂಗುತ್ತಾರೆ. ತಾನು ಸತ್ತಿಲ್ಲವೆಂದು ಹೇಳಿ ಅದಕ್ಕೆ ಕಾರಣವಾದ ಪ್ರಸಂಗ ತಿಳಿಸಿ ರೋಜಾ ಗಿರಿಯಪ್ಪರ ಪರಿಸ್ಥಿತಿಗೆ ಮರಗುತ್ತಾರೆ. ಶಿವ ನಿನ್ನ ರೂಪದಲ್ಲಿ ನನ್ನ ಕನಸಿನಲ್ಲಿ ಬಂದಿದ್ದ ಎಂದು ಹೇಳಿ ಅವತ್ತು ಅವರನ್ನು ಕ್ಷಮಿಸದ್ದಕ್ಕೆ ಪಶ್ಚಾತಾಪ ಪಡುತ್ತಾರೆ. ಮಕ್ಕಳನ್ನು ಕಳೆದುಕೊಂಡ ತಂದೆಗೆ ಮಕ್ಕಳು ಸಿಕ್ಕಷ್ಟೇ ಸಂತೋಷವಾಗಿ ಅವರಿಬ್ಬರ ಮದುವೆಗೆ ಸಹಾಯ ಮಾಡಲು ನಿರ್ಧರಿಸಿ, ತಮ್ಮ ಹಳ್ಳಿಯ ಮುನ್ಸಿಪಾಲ್ಟಿಯ ಛೇರ್ಮನನಿಗೆ ಹಳೆಯ ತಾರೀಖು ಹಾಕಿ ಗಿರಿಯಪ್ಪನಿಗೆ ಕೆಲಸಕೊಡಬೇಕೆಂದು ಪತ್ರ ಬರೆದು ಅದನ್ನು ಗಿರಿಯಪ್ಪನ ಕೈಗೆ ಕೊಟ್ಟು ಅದರಿಂದ ನಿನಗೆ ಖಂಡಿತ ಕೆಲಸ ಸಿಗುತ್ತದೆ ಎಂದು ಭರವಸೆ ಕೊಡುತ್ತಾರೆ. ತಮ್ಮ ಹತ್ತಿರವಿದ್ದ ಹಣ ಮತ್ತು ಮನೆಯನ್ನು ಗಿರಿಯಪ್ಪ, ರೋಜಾರ ಹೆಸರಿಗೆ ಬರೆದು ಉಯಿಲು ಮಾಡಿದ ಪತ್ರವನ್ನು ಅವರಿಬ್ಬರ ಕೈಗೂ ಕೊಟ್ಟು ಅವರನ್ನು ಹಾರೈಸಿ ಟ್ರೇನು ಹತ್ತಿ ಮಹತ್ತಾದದ್ದನ್ನು ಅರಸುತ್ತಾ ಮರೆಯಾಗುತ್ತಾರೆ.

ಪ್ರತಿಯೊಬ್ಬ ಮನುಷ್ಯನಲ್ಲಿಯೂ ಒಳ್ಳೆಯ ಮತ್ತು ಕೆಟ್ಟಗುಣಗಳೆರಡು ಇದ್ದು, ಆ ಗುಣಗಳನ್ನು ಅಳವಡಿಸಿಕೊಂಡು ತನ್ನ ವ್ಯಕ್ತಿತ್ವರೂಪಿಸಿಕೊಳ್ಳುವುದು ಆ ವ್ಯಕ್ತಿಯ ಕೈಯಲ್ಲಿಯೇ ಇರುತ್ತದೆ. ವ್ಯಕ್ತಿ ಸ್ವಲ್ಪ ಯಾಮಾರಿದರೂ ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳುವ ಪ್ರಸಂಗ ಎದುರಾಗುತ್ತದೆ ಎಂಬುದನ್ನು 'ಜೀಕೆ.ಮಾಸ್ತರರ ಪ್ರಣಯಪ್ರಸಂಗ' ಕಾದಂಬರಿ ತಿಳಿಸುತ್ತದೆ. ಜೊತೆಗೆ ಹುಡುಗಾಟ ಎಂತಹ ಅನಾಹುತಕ್ಕೂ ದಾರಿಯಾಗಬಹುದೆಂಬುದನ್ನು ಈ ಕಾದಂಬರಿ ನಿರೂಪಿಸುತ್ತದೆ.

ಸಿಂಗಾರೆವ್ವ ಮತ್ತು ಅರಮನೆ.

'ಸಿಂಗಾರೆವ್ವ ಮತ್ತು ಅರಮನೆ' ಕಾದಂಬರಿ ತಲತಲಾಂತರದಿಂದ ಕ್ರೌರ್ಯ, ಸ್ವಾರ್ಥ, ದರ್ಪ, ಊಳಿಗಮಾನ್ಯ ವ್ಯವಸ್ಥೆಯನ್ನು ರೂಢಿಸಿಕೊಂಡು ಬಂದ ಅರಮನೆ, ಅದೇ ಮನೆತನದ ಚಟಗಾರ ನಿರ್ವೀರ್ಯ ವ್ಯಕ್ತಿಯ ದೌರ್ಬಲ್ಯತೆಯಿಂದ ನಾಶವಾಗುವುದುನ್ನು ಚಿತ್ರಿಸುತ್ತದೆ. ಜೊತೆಗೆ ನಿರ್ವೀರ್ಯ ವ್ಯಕ್ತಿಯನ್ನು ಕಟ್ಟಿಕೊಂಡು ತನ್ನ ತಾಯ್ತನದ ಆಸೆ ಈಡೇರದೆ ಅತೃಪ್ತಳಾದ ಹೆಣ್ಣು ಮಕ್ಕಳಿಗಾಗಿ ಹಂಬಲಿಸುವ ಮತ್ತು ಆ ಮಗುವಿನ ಮೂಲಕ ನಾಶವಾಗುತ್ತಿರುವ ಅರಮನೆಯನ್ನು ಉಳಿಸಬೇಕೆಂಬ ಬಯಕೆಯಿಂದ ಅವಳು ತನ್ನ ಬದುಕನ್ನು ಪಣಕ್ಕಿಟ್ಟು ಮಾಡುವ ಹೋರಾಟವನ್ನು ಈ ಕಾದಂಬರಿ ಕಟ್ಟಿಕೊಡುತ್ತದೆ.

ಕೃತಿಕಾರ ಮತ್ತು ನಿರೂಪಕಿಯ ಸಂಭಾಷಣೆಯ ಮೂಲಕ ಇಡೀ ಕಾದಂಬರಿಯ ಕತೆ ಅನಾವರಣಗೊಳ್ಳುತ್ತದೆ. ಶಿವಾಪುರದ ಅರಮನೆ ಹರಾಜಾಗುತ್ತಿರುವುದನ್ನು ತಿಳಿಸಿದ ಮಿತ್ರ, ಆ ಅರಮನೆಯನ್ನು ಕುರಿತು ಒಂದು ಕಾದಂಬರಿಯನ್ನು ಬರೆಯಲು ಕೃತಿಕಾರರಿಗೆ ಹೇಳುತ್ತಾನೆ. ಅರಮನೆಯ ಬಗ್ಗೆ ಹೆಚ್ಚಿನ ಮಾಹಿತಿ ತನಗೆ ಗೊತ್ತಿಲ್ಲವೆಂದು ಕೃತಿಕಾರರು ಹೇಳಿದಾಗ, ಶಿವನಿಂಗವ್ವನನ್ನು ಕೇಳು ಅವಳು ಅರಮನೆಯ ಬಗ್ಗೆ ಫಸ್ಟ್‌ಹ್ಯಾಂಡ್ ಇನ್‌ಫಾರ್ಮೇಷನ್ ಕೊಡುತ್ತಾಳೆ ಎಂಬ ಸಲಹೆಯನ್ನು ಕೊಡುತ್ತಾನೆ. ಅವನ ಸಲಹೆಯ ಮೇರೆಗೆ ಶಿವಾಪುರಕ್ಕೆ ತೆರಳಿದ ಕಾದಂಬರಿಕಾರರು ತಮ್ಮ ಮಿತ್ರ ಶಿರಸೈಲನೊಂದಿಗೆ ಅರಮನೆಗೆ ಹೋಗಿ ಶಿನಿಂಗವ್ವನ ಪರಿಚಯ ಮಾಡಿಕೊಳ್ಳುತ್ತಾರೆ. ಅವಳಿಗೆ ಇಷ್ಟವಾದ ಸೆರೆ, ಹುರಿದ ಮೀನು, ಬೀಡಿಕಟ್ಟು ಕೊಟ್ಟು ಅವಳ ಬಾಯಿಂದ ಅರಮನೆಯ ಬಗ್ಗೆ ಮಾಹಿತಿ ಕೇಳುತ್ತಾ ಹೋದಂತೆ ಇಡೀ ಕಾದಂಬರಿಯ ಕತೆ ನಮ್ಮೆದುರು ಬಿಚ್ಚಿಕೊಳ್ಳುತ್ತಾ ಹೋಗುತ್ತದೆ.

ಶಿವಾಪುರದ್ದು ಹದಿನಾಲ್ಕೂರಿನ ಇಪ್ಪತ್ತೆರಡು ಸಾವಿರ ಎಕರೆ ದೇಶಗತಿ ಹೊಂದಿದ ಅರಮನೆ. ಇಲ್ಲಿನ ದೇಸಾಯಿಯನ್ನು 'ಮಹಾರಾಜ'ನೆಂದೇ ಜನ ಸಂಭೋದಿಸುತ್ತಿದ್ದರು. ಅರಮನೆ ದೇಸಾಯರು ಶೂರರು ಮತ್ತು ಅಪಾರ ಸಂಪತ್ತನ್ನು ಹೊಂದಿದ್ದು, ಅವುಗಳ ಬಗ್ಗೆ ಊರಲ್ಲಿ ಜನಪದ ಕತೆಗಳು ಹುಟ್ಟಿಕೊಂಡಿದ್ದವು. ಕೆಂಪು ಹೆಂಚಿನ ಹೊದಿಕೆ ಹೊಂದಿದ ಶ್ರೀಮಂತ ಅರಮನೆ ಶಿವಾಪುರದ್ದು. ಮೊದಲ ಆ ಜಾಗದಲ್ಲಿ ಪತ್ರಿಬನವಿದ್ದು ಅರಮನೆಕಟ್ಟಲು ಉತ್ಕೃಷ್ಟವಾದ ಜಾಗವೆಂದು ಪತ್ರಿಗಿಡಗಳನ್ನು ಕಡೆದು ಅರಮನೆ ಕಟ್ಟಲು ಮುಂದಾದಾಗ, ಒಬ್ಬ ಜಂಗಮ ಅದನ್ನು ವಿರೋಧಿಸುತ್ತಾನೆ. ಆಗ ಅವನನ್ನು ಅರಮನೆಯ ತಳಪಾಯಕ್ಕೆ ಬಲಿಕೊಡುತ್ತಾರೆ. ಆಗ ಆತ ಅರಮನೆ ಪತ್ರಿವನವಾಗಲೆಂದು ಶಾಪಕೊಟ್ಟನೆಂದು ಪ್ರತೀತಿ ಇದೆ. ಜೊತೆಗೆ ಆ ಊರ ದೇವತೆ ಕುಮುದವ್ವನ ಜಾತ್ರೆಯನ್ನು ಪರವೂರಿನಿಂದ ಜಾತ್ರೆಗೆ ಬೇಕಾದ ವಸ್ತುಗಳನ್ನು ಕದ್ದು ತಂದು ಮಾಡುತ್ತಿದ್ದರು. ಆದರೆ ಆ ಊರಲ್ಲಿ ಮಾತ್ರ ಕಳ್ಳತನವಾಗುತ್ತಿರಲಿಲ್ಲ. ಇದಕ್ಕೆ ತಮ್ಮೂರಿನ ದೇಸಾಯರೇ ಕಾರಣ. ಊರಲ್ಲಿ ತಮ್ಮ ಮನೆ ಬಿಟ್ಟು ಬೇರಾವ ಶ್ರೀಮಂತ ಮನೆಗಳಿಲ್ಲವಾದ್ದರಿಂದ ಜನಗಳು ಊರಲ್ಲಿ ಕದ್ದರೆ ತಮ್ಮ ಅರಮನೆಯಲ್ಲಿಯೇ ಕದಿಯಬಹುದೆಂದು ತಿಳಿದು ದೇಸಾಯರು ಪರವೂರಿನಿಂದ ಕದ್ದುತಂದು ಜಾತ್ರೆ ಮಾಡಬೇಕೆಂದು ದೇವಿ ಹೇಳಿದ್ದಾಳೆಂದು ಸುಳ್ಳು ಸುದ್ದಿ ಹಬ್ಬಿಸಿರಬಹುದೆಂದು ಕಾದಂಬರಿಕಾರರು ಅಭಿಪ್ರಾಯಪಡುತ್ತಾರೆ.

ಈ ಅರಮನೆಯವರು ಸ್ವಾರ್ಥ, ಕ್ರೌರ್ಯ, ದರ್ಪದಿಂದ ಆಡಳಿತ ಮಾಡಿದವರು. ಆ ಮನೆತನದ ಕೊನೆಯ ವ್ಯಕ್ತಿಯೇ ಸರಗಂ ದೇಸಾಯಿ. ಅವನ ತಂದೆ ಮಹಾಲಂಪಟನೂ ಕ್ರೂರಿಯೂ ಆಗಿದ್ದು, ಆತನ ಸೋದರಿಯರು ಮತ್ತು ಅವರ ಗಂಡಂದಿರು ಸೇರಿ ಮೋಜಿಗಾಗಿ ಆಸ್ತಿಯನ್ನು ಮಾರುವುದರೊಂದಿಗೆ ಸಾಲವನ್ನು ಮಾಡಿದ್ದರು. ಜೊತೆಗೆ ತಮ್ಮ ಚಟದಿಂದ ಅನೇಕ ರೋಗಗಳನ್ನು ಇವರು ಅಂಟಿಸಿಕೊಂಡಿದ್ದರು. ಈ ಪರಿಸ್ಥಿತಿಯಲ್ಲಿ ಹುಟ್ಟಿದ ಸರಗಂ ದೇಸಾಯಿಗೆ ಸಾಲ ಮತ್ತು ರೋಗಗಳು ಅವನ ಜನುಮದೊಂದಿಗೆಯೇ ಅಂಟಿಕೊಂಡು ಬಂದಿದ್ದವು. ಸರಗಂ ದೇಸಾಯಿ ಸಾಕಷ್ಟು ಆಸ್ತಿಯನ್ನು ಮಾರಿ ತನ್ನ ಹಿರಿಯರು ಮಾಡಿದ್ದ ಸಾಲವನ್ನು ತೀರಿಸಿದ್ದ. ಇವನಿಗೆ ಅತಿಯಾದ ನಾಟಕದ ಹುಚ್ಚಿದ್ದು, ಆ ಊರಲ್ಲಿ ನಾಟಕ, ಬಯಲಾಟ ನಡೆಯುತ್ತಿದ್ದರೆ ಅದರ ಪೂರ್ತಿ ಖರ್ಚನ್ನು ತಾನೇ ವಹಿಸಿಕೊಳ್ಳುತ್ತಿದ್ದ. ನಾಟಕದಲ್ಲಿ ತನಗೆ ಒಪ್ಪದಿದ್ದರೂ ರಾಜನ ಪಾತ್ರ ಮಾಡುತ್ತಿದ್ದ, ಅದಕ್ಕಾಗಿ ಪ್ರತಿಸಲವೂ ರಾಜನ ಪಾತ್ರಕ್ಕೆ ಬೇಕಾದ ಉಡುಪನ್ನು ಹೊಲಿಸುತ್ತಿದ್ದ. ಭಾರೀ ಹಣ ಖರ್ಚುಮಾಡಿ ಭುಜ, ಕಿರೀಟಗಳನ್ನು ಮಾಡಿಸಿಕೊಂಡಿದ್ದ. ನಾಟಕದ ಪ್ರತಿಯೊಂದು ಹಾಡನ್ನು ಹಾಡುವಾಗ 'ಸರಿಗಮಪದನಿಸ ಸನಿದಪಮಗರಿಸ' ಎಂದು ಪ್ರಾರಂಭಿಸುತ್ತಿದ್ದರಿಂದ 'ಅಪ್ಪಾಸಾಹೇಬ ದೇಸಾಯಿ' ಎಂದಿದ್ದ ಅವನ ಹೆಸರನ್ನು ಬಿಟ್ಟು ಜನ ಅವನನ್ನು 'ಸರಗಂ ದೇಸಾಯಿ' ಎಂದೇ ಕರೆಯುತ್ತಿದ್ದರು. ಇಂತಹ ದೇಸಾಯಿ ಔದಾರಿಯೂ ಆಗಿದ್ದು, ಯಾರೇ ಸಹಾಯ ಕೇಳುತ್ತಾ ಬಂದರೂ ಅವರಿಗೆ ಇಲ್ಲ ಎನ್ನದೆ ಸಹಾಯಮಾಡುತ್ತಿದ್ದ. ಆದರೆ ಅವರಪ್ಪನ ಕ್ರೂರತೆಯಿಂದ ಜನ ಇವನ ಔದಾರ್ಯವನ್ನು ಹೊಗಳದೆ ಈತ ಇಲೆಕ್ಷನ್‌ಗೆ ನಿಂತು ಧಾರಾಳವಾಗಿ ಹಣ ಖರ್ಚು ಮಾಡಿದರೂ ಜನ ಅವನನ್ನು ಸೋಲಿಸಿದರು. ಹಾಗಿದ್ದರೂ ಆತ ಊರಜನರ ಬಗ್ಗೆ ಯಾವುದೇ ರೀತಿ ಕೋಪ ಬೆಳೆಸಿಕೊಳ್ಳದೆ ಯಾರೇ ಸಹಾಯ ಕೇಳುತ್ತಾ ಬಂದರೂ ಸಹಾಯ ಮಾಡುತ್ತಾ ತನ್ನ ಬಯಲಾಟ, ನಾಟಕ, ಕುಡಿತಗಳಲ್ಲಿ ಮಗ್ನನಾಗಿ ತನ್ನ ಪಾಡಿಗೆ ತಾನಿರುತ್ತಿದ್ದ. ಇವನ ಈ ನಾಟಕದ ಹುಚ್ಚು ಮತ್ತು

ಔದಾರ್ಯತೆಯಿಂದಾಗಿ ಅರಮನೆಯ ಆಸ್ತಿ ಇನ್ನಷ್ಟು ಕರಗುತ್ತಾ, ಸಾಲ ಹೆಚ್ಚುತ್ತಾ ಹೋಗುತ್ತಿರುತ್ತದೆ. ಇಂತಹ ಸಂದರ್ಭದಲ್ಲಿ ಸರಗಂದೇಸಾಯಿ ಕೈ ಹಿಡಿದು ಅರಮನೆಯ ರಾಣಿಯಾಗಿ ಬಂದವಳೇ 'ಸಿಂಗಾರೆವ್ವ'.

'ಸಿಂಗಾರೆವ್ವ' ನಂದಗಾಂವಿಯ ಒಡೆತನ ಹೊಂದಿದ್ದ 'ಪಂಡರಿಗೌಡ'ನ ಏಕೈಕ ಮಗಳು. ಪಂಡರಿಗೌಡ ಮಹಾ ಆಸೆಬುರುಕನಾಗಿದ್ದು, ಹಣ, ಆಸ್ತಿಗಾಗಿ ಎಂತಹ ಕೆಲಸವನ್ನು ಮಾಡಲೂ ಹೇಸುತ್ತಿರಲಿಲ್ಲ. ಇಂತಹ ಪಂಡರಿಗೌಡನ ಕುತಂತ್ರಬುದ್ಧಿಗೆ ಜನ ಹೆದರುತ್ತಿದ್ದರು. ಪಂಡರಿಗೌಡ ಮಕ್ಕಳಾಗದ್ದರಿಂದ ಒಬ್ಬೊರಮೇಲೊಬ್ಬರಂತೆ ನಾಲ್ಕು ಜನರನ್ನು ಮದುವೆಯಾಗಿದ್ದ. ನಾಲ್ಕು ಜನರಿಗೂ ಮಕ್ಕಳಾಗದಾಗ ಅವರು ತನಗೆ ಮೋಸ ಮಾಡುತ್ತಿದ್ದಾರೆಂದು, ತಮ್ಮ ಕರ್ತವ್ಯ ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ಅವರನ್ನು ಶಿಕ್ಷೆಗೆ ಗುರಿಮಾಡುತ್ತಿದ್ದ. ಗೌಡನ ಇಳಿ ವಯಸ್ಸಿನಲ್ಲಿ ಆತನ ಎರಡನೇ ಹೆಂಡತಿ ನಿಂಗವ್ವಗೌಡತಿಗೆ ಸಿಂಗಾರೆವ್ವ ಹುಟ್ಟುತ್ತಾಳೆ. ನಾಲ್ಕು ಜನ ತಾಯಂದಿರ ಮುದ್ದಿನ ಮಗಳಾಗಿ ಸಿಂಗಾರೆವ್ವ ಬೆಳೆಯುತ್ತಾಳೆ.

ಪಂಡರಿಗೌಡನ ತಂಗಿಯನ್ನು ಶಿರಹಟ್ಟಿಗೆ ಮದುವೆ ಮಾಡಿಕೊಟ್ಟಿದ್ದು, ಅವಳ ಗಂಡ ತೀರಿಕೊಂಡು ಅವಳ ಒಬ್ಬನೇ ಮಗ ಅಸ್ತಮಾದಿಂದ ನರಳುತ್ತಿರುತ್ತಾನೆ. ಅವನನ್ನು ನೋಡಿಕೊಂಡು ಬರಲು ಶಿರಹಟ್ಟಿಗೆ ಹೋದ ಗೌಡ ಅವನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಟ್ಟರೆ ಆತ ಸತ್ತ ನಂತರ ಇಡೀ ಆಸ್ತಿ ತನ್ನದಾಗುತ್ತದೆ ಎಂದು ಯೋಚಿಸಿ ತನ್ನ ತಂಗಿಯನ್ನು ಮದುವೆಗೆ ಒಪ್ಪಿಸುತ್ತಾನೆ. ಊರಿಗೆ ಬಂದು ಸವದತ್ತಿಯ ಯಲ್ಲಮ್ಮನ ಗುಡ್ಡಕ್ಕೆ ಹೋಗುವುದಾಗಿ ಮನೆಯವರಿಗೆ ಹೇಳಿ ಅವಸರದಿಂದ ಗಾಡಿ ಕಟ್ಟಿಸಿ ಅವರನ್ನು ಶಿಹಟ್ಟಿಗೆ ಹೊರಡಿಸುತ್ತಾನೆ. ಐದನೆ ಇಯತ್ತೆ ಓದುತ್ತಿದ್ದ ಸಿಂಗಾರೆವ್ವ ಇದ್ಯಾವುದರ ಪರಿವೇ ಇಲ್ಲದೆ ತನ್ನ ಗೆಳತಿ ಶಿನಿಂಗವ್ವನನ್ನು ಕರೆದುಕೊಂಡು ಸಂತೋಷದಿಂದ ಹೋಗುತ್ತಾಳೆ. ಅಲ್ಲಿ ಹೋಗುವದರೊಳಗಾಗಿ ವರ ಸತ್ತಿದ್ದರೂ ಯಾರಿಗೂ, ಸ್ವತಃ ತನ್ನ ತಂಗಿಗೂ ಹೇಳದೆ ಅವಸರದಿಂದ ಹೆಣದೊಂದಿಗೆ ಮದುವೆ ಮಾಡಿಸಿ ಮದುಮಕ್ಕಳ ಪೋಟೋಗಳನ್ನು ತೆಗೆಸುತ್ತಾನೆ. ಇದಕ್ಕೆ ವಿರೋಧ ಮಾಡಿದ ಸಿಂಗಾರೆವ್ವನ ತಾಯಂದಿರನ್ನು ಬೆದರಿಸಿ ಅವರ ಬಾಯಿ ಮುಚ್ಚಿಸುತ್ತಾನೆ. ದಿಬ್ಬಣ ನಂದಗಾಂವಿ ಮುಟ್ಟಿದ ನಂತರ ವರಸತ್ತ ವಿಚಾರ ಮನೆಯವರಿಗೆ ತಿಳಿಯುತ್ತದೆ. ನಂತರ ಶಿರಹಟ್ಟಿಯ ಗೌಡನ ಉಳಿದ ಹೆಂಡಂದಿರು ಇದು ಮೋಸದ ಮದುವೆ, ಆಸ್ತಿ ತಮಗೆ ಸೇರಬೇಕೆಂದು ನ್ಯಾಯ ಹೂಡಿದಾಗ ಪೋಟೋಗಳ ಮೂಲಕ ಇದೇ ಖರೇ ಮದುವೆ ಎಂದು ಕೋರ್ಟಿನಲ್ಲಿ ಸಾಬೀತುಪಡಿಸಿ, ಜಯಗಳಿಸಿ ಆಸ್ತಿಯನ್ನು ಪಡೆಯುತ್ತಾನೆ. ಆದರೆ ಕೋರ್ಟಿನ ಖರ್ಚಿಗಾಗಿ ಹೆಚ್ಚು ಹಣವನ್ನು ವ್ಯಯಿಸಿರುತ್ತಾನೆ.

ಚಿಕ್ಕವಯಸ್ಸಿನಲ್ಲಿಯೇ ಗಂಡನನ್ನು ಕಳೆದುಕೊಂಡ ಸಿಂಗಾರೆವ್ವನ ಮರುಮದುವೆಯ ಬಗ್ಗೆ ಮಾತುಗಳೆದ್ದಾಗ ಪಂಡರಿಗೌಡ ನೋಡುವುದು ಶಿವಾಪುರದ ಸರಗಂದೇಸಾಯಿಯನ್ನು. ಅರಮನೆಗೆ ಶ್ರೀಮಂತದೇಸಾಯಿ, ಅತ್ತೆಯನ್ನು ಬಿಟ್ಟರೆ ಮನೆಯಲ್ಲಿ ಯಾರೂ ಇಲ್ಲ ಎಂದು ಹೇಳಿ ಮನೆಯವರನ್ನು ಒಪ್ಪಿಸಿ ಸಿಂಗಾರೆವ್ವನನ್ನು ಮೂರ್ಛೆರೋಗದ, ಚಟಗಾರ, ನಿರ್ವೀರ್ಯ ಸರಗಂದೇಸಾಯಿಗೆ ಮದುವೆ ಮಾಡಿಕೊಡುತ್ತಾನೆ. ವರ ಬದುಕಿದ್ದ ಎಂಬುದನ್ನು ಬಿಟ್ಟರೆ ಸಿಂಗಾರೆವ್ವನ ಮೊದಲಿನ ಗಂಡನಿಗೂ ಇವನಿಗೂ ಯಾವುದೇ ವ್ಯತ್ಯಾಸ ಇರುವುದಿಲ್ಲ. ಮೂರ್ಛೆರೋಗದ ವರ ಬೇಗ ಸಾಯುತ್ತಾನೆ. ಇಡೀ ಆಸ್ತಿ ತನ್ನದಾಗುತ್ತದೆ ಎಂಬ ದುರಾಲೋಚನೆಯಿಂದ ಪಂಡರಿಗೌಡನು ಮಗಳನ್ನು ಸರಗಂದೇಸಾಯಿಗೆ ಕೊಟ್ಟು ಮದುವೆ ಮಾಡುತ್ತಾನೆ. ಇಂತಹ ವ್ಯಕ್ತಿಯನ್ನು ಮದುವೆಯಾಗಿ ಸಿಂಗಾರೆವ್ವ ಶಿವಾಪುರದ ಅರಮನೆಯನ್ನು ಸೇರುತ್ತಾಳೆ. ಸಿಂಗಾರೆವ್ವನ

ತವರುಮನೆಯಲ್ಲಿ ದಾಸಿಯಾಗಿ ಕೆಲಸ ಮಾಡುತ್ತಿದ್ದ ಸಿಂಗಾರೆವ್ವನ ಗೆಳತಿ ಶಿನಿಂಗವ್ವ ಸಿಂಗಾರೆವ್ವನನ್ನು ಗಂಡನ ಮನೆಗೆ ಕಳಿಸಲು ಬಂದಿರುತ್ತಾಳೆ. ಸಿಂಗಾರೆವ್ವನನ್ನು ಕಳಿಸಿ ಹೊರಟ ತಾಯಂದಿರು ಕೆಲವು ದಿನ ಇಲ್ಲಿಯೇ ಇರು ಎಂದು ಶಿನಿಂಗವ್ವನನ್ನು ಸಿಂಗಾರೆವ್ವನೊಂದಿಗೆ ಬಿಟ್ಟು ಹೋಗುತ್ತಾರೆ. ಆಗ ಅವಳೊಂದಿಗೆ ಶಿನಿಂಗವ್ವ ಶಿವಾಪುರದ ಅರಮನೆಯಲ್ಲಿಯೇ ಉಳಿದು ಮುಂದೆ ಅರಮನೆಯ ಅವನತಿಯನ್ನು ಕಣ್ಣಾರೆ ಕಂಡು ಅರಮನೆಯ ಎಲ್ಲ ಘಟನೆಗಳಿಗೂ ಸಾಕ್ಷಿಯಾಗುತ್ತಾಳೆ.

ಸಿಂಗಾರೆವ್ವ ಆ ಅರಮನೆ ಪ್ರವೇಶಿಸಿದಾಗ ಅರಮನೆಯ ಪರಿಸ್ಥಿತಿ ಉತ್ತಮವಾಗಿರಲಿಲ್ಲ. ಹಿರಿಯರ ಮೋಜಿನ ಜೀವನದಿಂದ ಎಷ್ಟೋ ಆಸ್ತಿಮಾರಿ ಸಾಲವಾಗಿತ್ತು. ಮತ್ತೆ ಸರಗಂದೇಸಾಯಿ ತನ್ನ ಚಟಕ್ಕೆ ಮತ್ತಷ್ಟು ಆಸ್ತಿಯನ್ನು ಮಾರಿದ್ದ. ತನ್ನ ನಾಟಕದ ಶೋಕಿ, ಚಿಮಣಾರನ್ನು ನೋಡುವ ಹುಚ್ಚು ಮತ್ತು ಊರಜನರಿಗೆ ಸಹಾಯ ಮಾಡುವ ತನ್ನ ಔದಾರ್ಯ ಗುಣದಿಂದ ಪರಮಶೆಟ್ಟಿಯ ಹತ್ತಿರ ಸಾಲಮಾಡಿದ್ದ. ಅವನು ಆ ಸಾಲಕ್ಕಾಗಿ ಅರಮನೆಯನ್ನು ಬರೆಸಿಕೊಳ್ಳುವ ಯತ್ನದಲ್ಲಿದ್ದ. ದೊಡ್ಡ ಅರಮನೆಯಲ್ಲಿ ಇಬ್ಬರು ಗಂಡಾಳು ಇಬ್ಬರು ಹೆಣ್ಣಾಳು ಎಂದು ಕೇವಲ ನಾಲ್ಕು ಜನ ಮಾತ್ರ ಕೆಲಸದ ಆಳುಗಳಿದ್ದರು. ಅತ್ತೆ ವಯಸ್ಸಾದವಳಾಗಿದ್ದು ಯಾವುದೇ ಅಧಿಕಾರ ಚಲಾಯಿಸಿ, ಜವಾಬ್ದಾರಿ ನಿರ್ವಹಿಸದೆ ಕೋಣೆಯಲ್ಲಿ ಕಾಲಕಳೆಯುತ್ತಿದ್ದಳು. ಇಂತಹ ಪರಿಸ್ಥಿತಿಯಲ್ಲಿ ಅರಮನೆ ಪ್ರವೇಶಿಸಿದ ಸಿಂಗಾರೆವ್ವ ಅರಮನೆಯ ಜವಾಬ್ಧಾರಿ ಹೊತ್ತು ನಿರ್ವಹಿಸುವ, ಅದನ್ನು ಉಳಿಸಿಕೊಳ್ಳುವ ಪ್ರಯತ್ನಕ್ಕೆ ಮುಂದಾಗುತ್ತಾಳೆ.

ಸಿಂಗಾರೆವ್ವ ಮುಂಚಿನಿಂದಲೂ ತಾಯ್ತನದ ಆಸೆ ಹಂಬಲವುಳ್ಳವಳು. ಶಿನಿಂಗವ್ವನೊಂದಿಗೆ ಸಂಸಾರದ ಆಟ ಆಡುತ್ತಾ ತಾಯಿಯ ಪಾತ್ರ ಅಭಿನಯಿಸುತ್ತಿದ್ದಳು. ಮನೆಯಲ್ಲಿ ಹಸು ಕರುಹಾಕಿದಾಗ ಅದನ್ನು ಮುದ್ದಾಡಿ ತಾಯಿಯಂತೆ ಪ್ರೀತಿಸುತ್ತಿದ್ದಳು. ಇಂಥ ತಾಯ್ತನದ ಹಂಬಲ ಹೊತ್ತು ಬಂದ ಸಿಂಗಾರೆವ್ವನಿಗೆ ದೊರೆತಿದ್ದು ಮೂರ್ಛೆರೋಗದ, ಹೆಂಗಸರ ತೊಡೆಯನ್ನು ಕಂಡ ತಕ್ಷಣ ಬೇಹೋಶ್ ಆಗಿ ಬೀಳುತ್ತಿದ್ದ ನಿರ್ವೀರ್ಯ ಗಂಡ ಸರಗಂದೇಸಾಯಿ. ತಾನು ತಾಯಿಯಾಗಬೇಕು, ಈ ಅರಮನೆಯ ವಂಶವನ್ನು ಮುಂದುವರೆಸಬೇಕೆಂಬ ಆಸೆ ಹೊತ್ತ ಸಿಂಗಾರೆವ್ವ ಗಂಡನನ್ನು ಸರಿದಾರಿಗೆ ತರಲು ಪ್ರಯತ್ನಿಸುತ್ತಾಳೆ. ಅತ್ತೆ ನಿಂಗವ್ವ ಗಂಡು ಮಗುವನ್ನು ಹೆತ್ತು ಕೊಟ್ಟರೆ ಚಿನ್ನದ ನಡುಪಟ್ಟಿಯನ್ನು ನಿನಗೆ ಕೊಡುವೆನು, ಬೇಗ ಗಂಡುಮಗುವನ್ನು ಹೆತ್ತು ಕೊಡು ಎಂದು ದುಂಬಾಲು ಬಿದ್ದಿರುತ್ತಾಳೆ. ಇದೇ ವೇಳೆಗೆ ಅರಮನೆಗೆ ಬಂದ ಸಿಂಗಾರೆವ್ವನ ತಂದೆ ಮದುವೆಗಾಗಿ ಮಾಡಿದ ಸಾಲ ತೀರಿಸಲು ಹಣ ಕೇಳುತ್ತಾನೆ. ಸಿಂಗಾರೆವ್ವ ಇಲ್ಲವೆಂದಾಗ ನಿನ್ನ ಗಂಡ ಸತ್ತಾಗ ನಾವೇ ನಿನಗೆ ಆಧಾರ, ಹಣ ಕೊಡು ಎನ್ನುತ್ತಾನೆ. ಇದರಿಂದ ಕೋಪಗೊಂಡ ಸಿಂಗಾರೆವ್ವ 'ನನ್ನ ಗಂಡ ಸಾಯುವ ಮಾತಾಡುತ್ತೀರಲ್ಲ ನಾನು ಗಂಡು ಮಗನನ್ನು ಹೆತ್ತು ಅರಮನೆ ಉಳಿಸಿಕೊಳ್ಳುತ್ತೇನೆ, ಎಂದಿಗೂ ಆಸ್ತಿ ನಿಮ್ಮ ಪಾಲಾಗಲು ಬಿಡುವುದಿಲ್ಲ' ಎಂದು ತಂದೆಯನ್ನು ಬೈಯ್ದು ಕಳಿಸುತ್ತಾಳೆ. ಇದೇ ವೇಳೆಗೆ ತನ್ನ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಆಳು ಮಗಳು ಬಸಿರಾದಾಗ ಅವಳ ಹೊಟ್ಟೆಯನ್ನು ಮುಟ್ಟಿ ಸಂಭ್ರಮಪಟ್ಟು ಅವಳಿಗೆ ಬಯಕೆಯ ಬುತ್ತಿಯನ್ನು ಮಾಡಿ ಕಳಿಸುತ್ತಾಳೆ. ಆದರೆ ಅದೇ ದಿನ ಅವಳ ಗರ್ಭ ಇಳಿದು ಇದಕ್ಕೆ ಬಂಜೆ ಸಿಂಗಾರೆವ್ವ ಅವಳ ಹೊಟ್ಟೆಯನ್ನು ಮುಟ್ಟಿದ್ದೇ ಕಾರಣ ಎಂದು ಜನ ಆಡಿಕೊಳ್ಳುತ್ತಾರೆ. ಇದರಿಂದ ನೊಂದು ಅಳುತ್ತಾ ಕುಳಿತಾಗ ಬಂದ ಜಂಗಮ ಹುಚ್ಚಯ್ಯ ನಿನಗೆ ಮಕ್ಕಳಾಗುತ್ತವೆಂದು ಭವಿಷ್ಯ ನುಡಿಯುತ್ತಾನೆ. ಆದರೆ ಅದಕ್ಕಾಗಿ ಅಮವಾಸೆ ದಿನ ಒಬ್ಬಳೇ ನಿಂತು

ಪೂಜೆ ಮಾಡಿಸಬೇಕೆಂದಾಗ ನಿರಾಕರಿಸುತ್ತಾಳೆ. ಆದರೆ ಅಮವಾಸೆಯ ದಿನ ಮಧ್ಯಾಹ್ನ ಅರಮನೆಗೆ ಬಂದ ಪಂಡರಿಗೌಡ 'ನೀನು ಗಂಡನಮಗನನ್ನು ಹಡೆದಿರುವೆಯೋ? ಇಲ್ಲವೋ? ಎಂದು ನೋಡಿಕೊಂಡು ಹೋಗಲು ಬಂದೆ' ಎಂದು ಅವಳಿಗೆ ಅಪಹಾಸ್ಯ ಮಾಡಿ ತನಗೆ ಗಂಡು ಮಗು ಹುಟ್ಟಿರುವುದಾಗಿಯೂ ಅದನ್ನು ದತ್ತು ತೆಗೆದುಕೊಳ್ಳಬೇಕೆಂದು ಹೇಳುತ್ತಾನೆ. ಇದರಿಂದ ಕ್ರೋಧಗೊಂಡ ಸಿಂಗಾರೆವ್ವ ತಂದೆಯೊಂದಿಗೆ ಜಗಳಾಡಿ ಅವನನ್ನು ಅರಮನೆಯಿಂದ ಹೊರಕಳಿಸುತ್ತಾಳೆ.

ಆಸ್ತಿ ಹಣದ ಆಸೆಯಿಂದ ತನ್ನ ಜೀವನ ಹಾಳು ಮಾಡಿದ ತಂದೆಗೆ ಆಸ್ತಿ ಹೋಗಬಾರದು, ತಾನು ಮಗನನ್ನು ಹೆತ್ತು ಆಸ್ತಿ ಉಳಿಸಿಕೊಳ್ಳಬೇಕೆಂಬ ನಿರ್ಧಾರಕ್ಕೆ ಬಂದ ಸಿಂಗಾರೆವ್ವ, ಜಂಗಮ ಹುಚ್ಚಯ್ಯ ಹೇಳಿದಂತೆ ಅಮವಾಸೆಯ ರಾತ್ರಿ ಯಾರಿಗೂ ಹೇಳದೆ ಶಿನಿಂಗವ್ವನೊಂದಿಗೆ ಸೇರಿ ಪೂಜೆ ತಯಾರಿ ಮಾಡಿಸುತ್ತಾಳೆ. ಪೂಜೆ ನಡೆಯುವ ವೇಳೆಗೆ ಸರಗಂ ದೇಸಾಯಿ ಅಲ್ಲಿಗೆ ಬಂದಿದ್ದರಿಂದ ಅವನಿಗೆ ಪೂಜೆ ವಿಷಯ ಗೊತ್ತಾಗಬಾರದೆಂದು ಹುಚ್ಚಯ್ಯನನ್ನು ಅವಸರದಿಂದ ಹಾಸಿಗೆ ಸುರುಳಿಯಲ್ಲಿ ಸುತ್ತುತ್ತಾರೆ. ದೇಸಾಯಿ ಹೊರಗೆ ಹೋದ ನಂತರ ಹಾಸಿಗೆಯ ಸುರುಳಿಯನ್ನು ಬಿಚ್ಚಿದಾಗ ಹುಚ್ಚಯ್ಯ ಅಲ್ಲಿಯೇ ಸತ್ತಿರುತ್ತಾನೆ. ಇದರಿಂದ ಸಿಂಗಾರೆವ್ವ ಮತ್ತು ಶಿನಿಂಗವ್ವ ಗಾಬರಿಯಾಗುತ್ತಾರೆ. ದಿಕ್ಕು ತೋಚದ ಶಿನಿಂಗವ್ವ ಹೊಲಗೇರಿಗೆ ಓಡಿ ಹೋಗಿ ಹೆಣಸಾಗಿಸಲು ಒಬ್ಬ ಆಳುಮಗನನ್ನು ಕರೆತರುತ್ತಾಳೆ. ಹಾಗೆ ಶಿನಿಂಗವ್ವ ಹೆಣ ಸಾಗಿಸಲು ಕರೆದುಕೊಂಡು ಬಂದ ವ್ಯಕ್ತಿಯೇ ಸಿಂಗಾರೆವ್ವನ ತವರು ಮನೆಯ ಆಳುಮಗ ಮರ‍್ಯಾ.

ಮರ‍್ಯಾ ಸಿಂಗಾರೆವ್ವನ ತವರುಮನೆಯಲ್ಲಿ ಜೀತದಾಳಾಗಿ ದುಡಿಯುತ್ತಿದ್ದ. ಸಿಂಗಾರೆವ್ವನ ತಂದೆ ಪಂಡರಿಗೌಡ ಮರ‍್ಯಾನ ತಂದೆ ತೀರಿಕೊಂಡಾಗ ಅವನ ಹೊಲವನ್ನು ಅನ್ಯಾಯದಿಂದ ತನ್ನ ಹೆಸರಿಗೆ ಮಾಡಿಕೊಂಡು ಮರ‍್ಯಾನ ತಾಯಿಯೊಂದಿಗೆ ಅನೈತಿಕ ಸಂಬಂಧ ಹೊಂದಿದ್ದ. ಮರ‍್ಯಾನನ್ನು ತನ್ನ ಮನೆಯ ಜೀತದಾಳಾಗಿ ಮಾಡಿಕೊಂಡು, ಅವನೆಷ್ಟೇ ಶ್ರಮಪಟ್ಟು ದುಡಿದರೂ ತೃಪ್ತಿಪಡದೆ ಅವನನ್ನು ಹೊಡೆದು ಬಡಿದು ಅವಮಾನದ ರೀತಿಯಲ್ಲಿ ನಡೆಸಿಕೊಳ್ಳುತ್ತಿದ್ದ. ಇದರಿಂದ ಮರ‍್ಯಾ ಗೌಡನ ಬಗ್ಗೆ ದ್ವೇಷಭಾವನೆ ಬೆಳೆಸಿಕೂಂಡಿದ್ದ. ಒಂದು ದಿನ ಗೌಡ ಮತ್ತು ಮರ‍್ಯಾನ ತಾಯಿ ಹೊಲದಲ್ಲಿ ಜೊತೆಯಲ್ಲಿಯೇ ಇರುವುದನ್ನು ಕಂಡ ಮರ‍್ಯಾ ಅವರನ್ನು ಕೊಲ್ಲಲು ಮುಂದಾಗುತ್ತಾನೆ. ಗೌಡ ತಪ್ಪಿಸಿಕೊಂಡು ಓಡಿಹೋದರೆ ಮರ‍್ಯಾನ ತಾಯಿ ಅವನ ಮಚ್ಚಿನ ಏಟಿಗೆ ಬಲಿಯಾಗುತ್ತಾಳೆ. ತಾಯಿಯ ಹೆಣವನ್ನು ಹೆಗಲ ಮೇಲೆ ಹೊತ್ತುಕೊಂಡು ಊರೊಳಗೆ ಬಂದ ಮರ‍್ಯಾ ಗೌಡನನ್ನು ಕೊಲ್ಲಲು ಮುಂದಾದಾಗ ಗೌಡ ಓಡಿ ಹೋಗಿ ವಾಡೆ ಸೇರಿ ಬಾಗಿಲು ಭದ್ರಪಡಿಸಿಕೊಂಡು ಒಳಗೆ ಕೂಡುತ್ತಾನೆ. ನಂತರ ಪೋಲೀಸರಿಗೆ ಕಂಪ್ಲೇಂಟು ಕೊಟ್ಟು ಮರ‍್ಯಾನನ್ನು ಜೈಲಿಗೆ ಸೇರಿಸುತ್ತಾನೆ. ಅಲ್ಲಿಂದ ಪಾರಾಗಿ ಹೋದ ಮರ‍್ಯಾನ ಬಗ್ಗೆ ಯಾವುದೇ ಸುಳಿವುಗಳು ಸಿಕ್ಕಿರುವದಿಲ್ಲ. ಇದರಿಂದ ಜನ ಮರ‍್ಯಾ ಸತ್ತುಹೋಗಿದ್ದಾನೆಂದು ಭಾವಿಸಿರುತ್ತಾರೆ. ಆದರೆ ಮರ‍್ಯಾ ಈಗ ಧುತ್ತನೆ ಸಿಂಗಾರೆವ್ವನ ಮುಂದೆ ಪ್ರತ್ಯಕ್ಷವಾಗುತ್ತಾನೆ.

ಪಂಡರಿಗೌಡ ಮರ‍್ಯಾನಿಗೆ ಮಾಡಿದ ಅನ್ಯಾಯ ಸಿಂಗಾರೆವ್ವನ ಜೀವನಕ್ಕೆ ಮುಳುವಾಗಿ ಪರಿಣಮಿಸುತ್ತದೆ. ಪಂಡರಿಗೌಡನ ಬಗ್ಗೆ ದ್ವೇಷಭಾವನೆ ಹೊಂದಿದ ಮರ‍್ಯಾನಿಗೆ ಸಿಂಗಾರೆವ್ವ ಸತ್ತ ಹುಚ್ಚಯ್ಯನ ಹೆಣದೊಂದಿಗೆ ಸಿಗುವದು ಆತನ ಪಾಲಿಗೆ ವರವಾಗಿ ಪರಿಣಮಿಸುತ್ತದೆ. ಅವಳ ತಂದೆಯ ಮೇಲಿನ ಸೇಡು ಅವಳ ಮೇಲೆ ತೀರಿಸಿಕೊಳ್ಳಲು ಯತ್ನಿಸುವ ಮರ‍್ಯಾ ಸಿಂಗಾರೆವ್ವ ತನ್ನೊಂದಿಗೆ ದೈಹಿಕ ಸಂಬಂಧ ಹೊಂದಿದರೆ

ಮಾತ್ರ ಹೆಣವನ್ನು ಸಾಗಿಸುವುದಾಗಿಯೂ, ಇಲ್ಲದಿದ್ದರೆ ಪೋಲೀಸರಿಗೆ ತಿಳಿಸುವುದಾಗಿಯೂ ಹೆದರಿಸುತ್ತಾನೆ. ಸಿಂಗಾರೆವ್ವ ಇದಕ್ಕೆ ಒಪ್ಪದಾಗ ಅವಳನ್ನು ಬಲಾತ್ಕರಿಸಲು ಮುಂದಾಗುತ್ತಾನೆ. ಸಿಂಗಾರೆವ್ವ ಮೂರ್ಛೆ ಹೋಗುತ್ತಾಳೆ. ನಂತರ ಸತ್ತ ಹುಚ್ಚಯ್ಯನ ಹೆಣವನ್ನು ಕುಮುದವ್ವನ ಗುಡಿಯಲ್ಲಿ ಕುಂದಿರಿಸಿ ಬರುತ್ತಾನೆ. ಜನ ಮಳೆಗಾಗಿ ಸಮಾಧಿ ಕುಳಿತ ಹುಚ್ಚಯ್ಯ ದೇವರಪಾದ ಸೇರಿದನೆಂದು ಮಾತಾಡಿಕೊಳ್ಳುತ್ತಿರುವಾಗಲೇ ಮಳೆ ಬರುತ್ತದೆ. ಜನ ಅವನೊಬ್ಬ ಪವಾಡ ಪುರುಷನೆಂದು ಕತೆಕಟ್ಟಿ ಅದ್ದೂರಿಯಿಂದ ಅವನ ಅಂತ್ಯಸಂಸ್ಕಾರ ನೆರವೇರಿಸುತ್ತಾರೆ.

ಕಣ್ಮುಂದೆ ನಡೆದ ಸಾವು ಮತ್ತು ಮರ್ಯಾನ ವರ್ತನೆಯಿಂದ ಸಿಂಗಾರೆವ್ವ ಹಾಸಿಗೆಹಿಡಿಯುತ್ತಾಳೆ. ಮಗಳನ್ನು ನೋಡಲು ಪಂಡರಿಗೌಡ ಮತ್ತು ನಿಂಗವ್ವಗೌಡ್ತಿ ಬಂದು, ಮಗಳ ಕೆಮ್ಮಿಗೆ ಇಣಚಿ ರಕ್ತವನ್ನು ಕೊಡಬೇಕೆಂದು ತಾಯಿ ಹೇಳಿದಾಗ, ಇದನ್ನು ತಿಳಿದ ಮರ್ಯಾ ಸಿಂಗಾರೆವ್ವನಿಗಾಗಿ ಇಣಚಿಯನ್ನು ಹಿಡಿದು ತಂದು ಕೊಡುತ್ತಾನೆ. ಮಗಳ ಈ ಪರಿಸ್ಥಿತಿಯಲ್ಲಿಯೂ ಗೌಡ ಮಗಳ ಹತ್ತಿರವಿದ್ದ ಬಂಗಾರದ ಬಳೆಯನ್ನು ಇಸಿದುಕೊಳ್ಳು ಎಂದು ಹೆಂಡತಿಗೆ ಹೇಳಿದಾಗ ಗೌಡತಿ ಹೂಂ ಎಂದು ಒಪ್ಪಿದರೂ ಮಗಳನ್ನು ಕೇಳುವುದಿಲ್ಲ. ಜೊತೆಗೆ ಶಿನಿಂಗವ್ವನಿಂದ ಗೌಡ ಮಗಳಿಗೆ ತನ್ನ ಮಗನನ್ನು ದತ್ತು ತೆಗೆದುಕೊಳ್ಳಲು ಹೇಳಿದ ಮಾತುಕೇಳಿ ತಾಯಿ ಗೌಡನ ಮೇಲೆ ಕೋಪಗೊಳ್ಳುತ್ತಾಳೆ. ಇದೇ ವೇಳೆಗೆ ಬೇಟೆಗೆ ಹೋದ ಸರಗಂ ದೇಸಾಯಿಯ ಸ್ನೇಹ ಸಂಪಾದಿಸಿ ಮರ್ಯಾ ಅರಮನೆ ಪ್ರವೇಶಿಸುತ್ತಾನೆ. ಸರಗಂ ದೇಸಾಯಿಯ ಕಣ್ಣು ತಪ್ಪಿಸಿ ಸಿಂಗಾರೆವ್ವನನ್ನು ಬಲಾತ್ಕರಿಸುತ್ತಾನೆ. ಇವನ ಈ ವರ್ತನೆಯಿಂದ ಬೇಸತ್ತ ಸಿಂಗಾರೆವ್ವ ಅವನನ್ನು ಕೊಲ್ಲಲು ಶಿನಿಂಗವ್ವನಿಂದ ಮದ್ದು ತರಿಸುತ್ತಾಳೆ. ಮದ್ದನ್ನು ಊಟದಲ್ಲಿ ಸೇರಿಸಲು ಹೇಳಿದಾಗ ಶಿನಿಂಗವ್ವ ಮದ್ದನ್ನು ಒಲಿಗೆ ಸುರಿದು ಊಟ ಬಡಿಸುತ್ತಾಳೆ ಆದರೆ ಅವನಿಂದ ಗರ್ಭಿಣಿಯಾದದ್ದನ್ನು ತಿಳಿದ ಸಿಂಗಾರೆವ್ವ ಊಟದಲ್ಲಿ ವಿಷವಿದೆ ಎಂದು ತಿಳಿದು ಅವನಿಗೆ ಬಡಿಸಿದ ಊಟ ಚೆಲ್ಲುತ್ತಾಳೆ. ಮರ್ಯಾನಿಂದಾಗುವ ಹಿಂಸೆಯನ್ನು ತಾಳದೆ ಅವನನ್ನು ಕೊಲ್ಲಲು ಯತ್ನಿಸಿದ ಸಿಂಗಾರೆವ್ವ ಅವನಿಂದ ತಾಯಿಯಾಗುವ ತನ್ನ ಆಸೆ ಈಡೇರಿದ್ದರಿಂದ ಅವನನ್ನು ಬದುಕಿಸಿ ಅಂಥ ಕ್ರೂರಿಗೂ ಜೀವದಾನ ಮಾಡಿ ಮಾನವೀಯತೆ ಮೆರೆಯುತ್ತಾಳೆ. ಶಿನಿಂಗವ್ವನಿಂದ ಸಿಂಗಾರೆವ್ವ ತಾಯಿಯಾಗುವ ವಿಷಯವನ್ನು ತಿಳಿದ ಸಿಂಗಾರೆವ್ವನ ಅತ್ತೆ ಸಂತೋಷಗೊಂಡು ತಾನು ಇದುವರೆಗೂ ಜತನದಿಂದ ಕಾಪಾಡಿಕೊಂಡು ಬಂದಿದ್ದ ಬಂಗಾರದ ನಡುಪಟ್ಟಿಯನ್ನು ಮೊಮ್ಮಗನನ್ನು ಹೆತ್ತುಕೊಡುವ ಸೊಸೆಗೆ ತೊಡಿಸಿ ಸಂಭ್ರಮಪಡುತ್ತಾಳೆ. ತನ್ನ ಕೊನೆಯ ಆಸೆ ಈಡೇರಿತೆಂದು ಸಂತೋಷಪಟ್ಟ ಮುದುಕಿ ಅಂದು ರಾತ್ರಿ ಮಲಗಿದ್ದಲ್ಲಿಯೇ ಸಾಯುತ್ತಾಳೆ. ಆದರೆ ಮುದುಕಿ ಕಂಡ ಕನಸು ಮುದುಕಿಯೊಂದಿಗೆಯೇ ಮಣ್ಣುಗೂಡುವಂತೆ ಮರುದಿನವೇ ಸಿಂಗಾರೆವ್ವನ ಗರ್ಭ ಇಳಿಯುತ್ತದೆ.

ಮುದುಕಿ ಸತ್ತನಂತರ ಮುದುಕಿಯ ದಿನಕಾರ್ಯಕ್ಕೆ ಸಿದ್ಧತೆ ಮಾಡಬೇಕೆಂದರೆ ದೇಸಾಯಿಯ ಹತ್ತಿರ ಹಣವಿರುವುದಿಲ್ಲ. ಅದಕ್ಕಾಗಿ ಪರಮಶೆಟ್ಟಿಯನ್ನು ಕೇಳಿದಾಗ ಆತ ಇದುವರೆಗೆ ದೀಡುಲಕ್ಷ ಸಾಲ ಕೊಟ್ಟಿದ್ದೇನೆ. ಈಗ ಕೊಡುವುದಿಲ್ಲ, ಏನಾದರೂ ಆಧಾರ ಕೊಟ್ಟರೆ ಮಾತ್ರ ಕೊಡುವುದಾಗಿ ಹೇಳುತ್ತಾನೆ. ಅದಕ್ಕಾಗಿ ದೇಸಾಯಿ ಹೆಂಡತಿಯ ಹತ್ತಿರ ಬಳೆ ಕೇಳಿದಾಗ ಮೊದಲು ಸಿಂಗಾರೆವ್ವ ಕೊಡಲು ನಿರಾಕರಿಸಿ, ನಂತರ ಕೊಟ್ಟರೂ ದೇಸಾಯಿ ತೆಗೆದುಕೊಳ್ಳುವುದಿಲ್ಲ. ದಿನಕಾರ್ಯಕ್ಕೆ ಬಂದ ಗೌಡ ವಿಷಯ ತಿಳಿದು ತಾನು ಪರಮಶೆಟ್ಟಿಯಿಂದ ಹಣ ಇಸಿದುಕೊಂಡು ಬರಲು ಹೊರಟು ಮಧ್ಯದಲ್ಲಿ ಮರ್ಯಾನನ್ನು ನೋಡಿ ಅವನನ್ನು

ಅರಮನೆಯಿಂದ ಹೊರಹಾಕಲು ಮಗಳಿಗೆ ಧಮಕಿ ಹಾಕುತ್ತಾನೆ. ಕಾರ್ಯಕ್ಕೆ ಹಣ ಸಿಗದಾಗ ಮರ್‍ಯಾ ಯಾರಿಗೂ ಗೊತ್ತಾಗದಂತೆ ಸಿಂಗಾರೆವ್ವನ ಬಳೆ ಕದ್ದು ಪರಮಶೆಟ್ಟಿಯ ಹತ್ತಿರ ಒತ್ತೆಯಿಟ್ಟು ದಿನಕಾರ್ಯಕ್ಕಾಗಿ ಸಾವಿರು ರೂಪಾಯಿ ತಂದುಕೊಡುತ್ತಾನೆ. ಆ ಹಣದಲ್ಲಿ ಮುದಕಿಯ ಕಾರ್ಯ ನೆರವೇರಿಸುತ್ತಾರೆ. ಬಳೆ ಕಳೆದ ವಿಷಯ ತಿಳಿದ ಗೌಡ ಮರ್‍ಯಾ ಕದ್ದಿದ್ದಾನೆಂದು ಪೋಲಿಸರಿಗೆ ಕಂಪ್ಲೇಂಟ್ ಕೊಟ್ಟು ಪೋಲಿಸರನ್ನು ಕರೆಸಿದಾಗ ಸರಗಂದೇಸಾಯಿ ನಮ್ಮ ಅರಮನೆಗೆ ಪೋಲಿಸರ ಪ್ರವೇಶ ಬೇಡವೆಂದು ನಿರಾಕರಿಸುತ್ತಾನೆ. ಗೌಡನಿಂದ ರಾದ್ಧಾಂತವಾದ ವಿಷಯ ತಿಳಿದ ಮರ್‍ಯಾ ಪರಮಶೆಟ್ಟಿಯನ್ನು ಬೇಡಿಕೊಂಡು ಬಳೆ ತಂದು ಸಿಂಗಾರೆವ್ವನಿಗೆ ಕೊಡುತ್ತಾನೆ.

ಇದೇ ಸಮಯವೆಂದು ತಿಳಿದ ಪರಮಶೆಟ್ಟಿ ಮತ್ತು ಪಂಡರಿಗೌಡರು ಅರಮನೆಯನ್ನು ತಮ್ಮ ಹೆಸರಿಗೆ ಬರೆಸಿಕೊಳ್ಳಲು ಹೊಂಚು ಹಾಕುತ್ತಿರುತ್ತಾರೆ. ಸಾಲ ತೀರಿಸಲು ಹೊಲ ಬರೆಸಿಕೊಳ್ಳುವ ನೆಪದಲ್ಲಿ ಮೋಸದಿಂದ ದೇಸಾಯಿಗೆ ಶೆಟ್ಟಿ ಬೆಳಗಾವಿಗೆ ಹೋಗೋಣವೆಂದು ಹೇಳಿದ ದಿನ ಮರ್‍ಯಾ ದೇಸಾಯಿಗೆ ಸೆರೆ ಕುಡಿಸಿ ನಿಶೆಯಾಗುವಂತೆ ಮಾಡಿ ಬೆಳಗಾವಿಗೆ ಹೋಗುವುದನ್ನು ತಪ್ಪಿಸಿ ಅರಮನೆಯನ್ನು ಉಳಿಸುವ ಪ್ರಯತ್ನ ಮಾಡುತ್ತಾನೆ. ಕ್ರೂರಿಯಾದ ಮರ್‍ಯಾ ಸಿಂಗಾರೆವ್ವನ ಮೇಲಿನ ಮೋಹದಿಂದ ಅರಮನೆ ಉಳಿಸಿಕೊಳ್ಳುವ ಅವಳ ಆಸೆಗೆ ಸಹಾಯ ಮಾಡುತ್ತಾನೆ. ಮೂರ್ಛೆರೋಗದ ಅಳಿಯ ಬೇಗ ಸತ್ತು ಆಸ್ತಿಯೆಲ್ಲ ತನ್ನ ಪಾಲಾಗುತ್ತದೆಂದು ಮಗಳನ್ನು ಕೊಟ್ಟ ಗೌಡ, ಅಳಿಯ ಸಾಯದಾದಾಗ ಮಗನನ್ನು ದತ್ತುಕೊಟ್ಟಾದರೂ ಆಸ್ತಿಯನ್ನು ನುಂಗಬೇಕೆಂದು ಪ್ರಯತ್ನಿಸುವಾಗ ಸಿಂಗಾರೆವ್ವ ಅದಕ್ಕೆ ಅವಕಾಶಕೊಡದೆ ಅರಮನೆಯನ್ನು ರಕ್ಷಿಸಲು ಪ್ರಯತ್ನಿಸುತ್ತಾಳೆ. ಕಡೆಗೆ ಗೌಡ ಅರಮನೆಯ ಕಾಗದ ಪತ್ರವನ್ನು ದೇಸಾಯಿಗೆ ಗೊತ್ತಿಲ್ಲದಂತೆ ಕದಿಯುತ್ತಾನೆ. ಇದನ್ನು ತಿಳಿದ ಮರ್‍ಯಾ ಗೌಡನನ್ನು ಕೊಂದು ಹುಚ್ಚಯ್ಯನ ಸಮಾಧಿ ಇರುವ ಗುಡಿಸಲಿನಲ್ಲಿ ಗೌಡನ ಹೆಣವನ್ನು ಇಡುತ್ತಾನೆ. ಸೀಗೆ ಹುಣ್ಣಿಮೆಯ ಚರಗಕ್ಕೆಂದು ಹೊಲಕ್ಕೆ ಹೋದ ಸಿಂಗಾರೆವ್ವ ಸೀಗೆ ಮೆಳೆಯಿಂದ ಆಕರ್ಷಿತಳಾಗಿ ಶಿನಿಂಗವ್ವನೊಂದಿಗೆ ಸಮಾಧಿ ಸ್ಥಳಕ್ಕೆ ಹೋದಾಗ ಅಲ್ಲಿ ಮರ್‍ಯಾ ಪ್ರತ್ಯಕ್ಷನಾಗಿ ಗೌಡನ ಶವವನ್ನು ತೋರಿಸುತ್ತಾನೆ. ಆಗ ಕೋಪಗೊಂಡ ಸಿಂಗಾರೆವ್ವ ಅವನನ್ನು ದುಗಿಸಿ ಗುಡಿಸಲಿಗೆ ಬೆಂಕಿ ಹಚ್ಚಿ ಓಡಿ ಬರುತ್ತಾಳೆ. ಮರ್‍ಯಾಸತ್ತನೆಂದು ಭಾವಿಸುತ್ತಾಳೆ. ಆದರೆ ಮರ್‍ಯಾ ಮತ್ತೆ ಪ್ರತ್ಯಕ್ಷನಾದಾಗ ಅವನನ್ನು ನೋಡಿ ಭಯದಿಂದ ಮೂರ್ಛೆ ಹೋದ ಸಿಂಗಾರೆವ್ವ ಅನಾರೋಗ್ಯಕ್ಕೆ ತುತ್ತಾಗುತ್ತಾಳೆ. ಮರ್‍ಯಾ ಸಾಯುವ ಸ್ಥಿತಿಯಲ್ಲಿದ್ದ ಸಿಂಗಾರೆವ್ವನಿಗೆ ಮದ್ದು ತಂದುಕೊಟ್ಟು ಬದುಕಿಸುತ್ತಾನೆ. ಶಿನಿಂಗವ್ವನಿಂದ ಈ ವಿಚಾರ ತಿಳಿದ ಸಿಂಗಾರೆವ್ವ ಮರ್‍ಯಾನ ಬಗ್ಗೆ ಮೃದುಭಾವನೆ ಬೆಳೆಸಿಕೊಳ್ಳುತ್ತಾಳೆ.

ಇದೇ ವೇಳೆಗೆ ದೀಪಾವಳಿ ಬಂದು ಬಯಲಾಟ ಮಾಡಲು ಊರಲ್ಲಿ ಸಿದ್ಧತೆ ನಡೆಯುತ್ತದೆ. ದೇಸಾಯಿ ಮತ್ತೆ ಚಿಮಣಾಳನ್ನು ಕಂಡು ಬೇಹೋಶ್ ಆಗಿ ಬೀಳುವುದನ್ನು ತಪ್ಪಿಸಲು ನಿರ್ಧರಿಸಿದ ಸಿಂಗಾರೆವ್ವ ದೇಸಾಯಿಗೆ ನೀವು ಚಿಮಣಾಳ ಹತ್ತಿರ ಹೋಗುವುದು ಬೇಡ, ನಾನೇ ನಿಮಗೆ ವಿಲಾಸಿನಿಯಂತೆ ಮೈತೋರಿಸುತ್ತೇನೆಂದು ಬೇಡಿಕೊಳ್ಳುತ್ತಾಳೆ. ಎರಡು ದಿನ ಅವಳ ಮಾತು ಕೇಳಿ ಮನೆಗೆ ಬಂದ ದೇಸಾಯಿ ಮೂರನೇ ದಿನ ಮತ್ತೆ ಚಿಮಣಾಳನ್ನು ಕಂಡು ಬೇಹೋಶ್ ಆಗಿ ಬಿದ್ದಾಗ ಮರ್‍ಯಾ ಅವನನ್ನು ಹೊತ್ತು ತರುತ್ತಾನೆ. ಇದರಿಂದ ಕ್ರೋಧಗೊಂಡ ಸಿಂಗಾರೆವ್ವ ದೇಸಾಯಿಯನ್ನು ಜಾಡಿಸಿ ಒದ್ದು ಇವನಿಂದ ತನ್ನ ತಾಯ್ತನದ ಕನಸು ಈಡೇರುವುದಿಲ್ಲ, ಅರಮನೆಗೆ ಉಳಿಗಾಲವಿಲ್ಲವೆಂದು ಭಾವಿಸಿದ ಸಿಂಗಾರೆವ್ವ ತನ್ನ

ಕನಸನ್ನು ಈಡೇರಿಸಿಕೊಳ್ಳಲು ಮರ್‍ಯಾನನ್ನು ಸೇರಿ ಗರ್ಭಿಣಿಯಾಗುತ್ತಾಳೆ. ಅತ್ತೆಯಿಂದ ಸಿಂಗಾರೆವ್ವ ಗರ್ಭಿಣಿಯಾದ ವಿಷಯ ತಿಳಿದ ದೇಸಾಯಿ ಅತ್ತೆ ಊರಿಗೆ ಹೋಗುವವರೆಗೂ ಸುಮ್ಮನಿದ್ದು ನಂತರ ಸಿಂಗಾರೆವ್ವನನ್ನು ಹಾದರಗಿತ್ತಿ ಎಂದು ಕರೆದು 'ಆ ಮಗುವಿನ ಹುಟ್ಟಿಗೆ ಯಾರು ಕಾರಣ' ಎಂದು ಕೇಳುತ್ತಾನೆ. ಸಿಂಗಾರೆವ್ವ ಅದಕ್ಕೆ ಕಾರಣವಾದ ವ್ಯಕ್ತಿಯ ಹೆಸರು ಹೇಳದೆ 'ನೀವು ಬೇಹೋಶ್ ಆಗಿ ಬೀಳುವ ಚಟದಿಂದಲೇ ನಾನು ಇಂತಹ ಕೆಲಸ ಮಾಡಿದೆ' ಎಂದು ದೇಸಾಯಿಯನ್ನು ಮೂದಲಿಸುತ್ತಾಳೆ. ನಂತರ ದೇಸಾಯಿ ಮತ್ತೆ ಅವಳಲ್ಲಿಗೆ ಹೋಗಿ ನೀನು ಈ ಅರಮನೆಯಲ್ಲಿರಬೇಕಾದರೆ ಈ ಬಸಿರನ್ನು ತೆಗೆಯಬೇಕು ಎನ್ನುತ್ತಾನೆ. ಆಕೆ ನಿರಾಕರಿಸಿದಾಗ ಸಿಟ್ಟಿನಿಂದ ಅವಳ ಗರ್ಭಕ್ಕೆ ಗುದ್ದಿ ಬರುತ್ತಾನೆ. ಅವನ ಈ ವರ್ತನೆಯಿಂದ ಕೆಲ ಹೊತ್ತು ಹೊಟ್ಟೆನೋವಿನಿಂದ ನರಳಿದ ಸಿಂಗಾರೆವ್ವ ಅವನ ಬಗ್ಗೆ ಕ್ರೋಧ ತಾಳುತ್ತಾಳೆ.

ಇದೇ ವೇಳೆ ಇತ್ತ ಪರಮಶೆಟ್ಟಿ ಕೋಲ್ಹಾಪುರದಿಂದ ನಾಚವಾಲಿಗಳನ್ನು ಕರೆತರುವುದಾಗಿ ಹೇಳಿ ಅರಮನೆಯನ್ನು ಬರೆಸಿಕೊಳ್ಳಲು ಪ್ರಯತ್ನಿಸುತ್ತಾನೆ. ಇದನ್ನು ತಿಳಿದ ಮರ್‍ಯಾ ಅರಮನೆಯನ್ನು ಉಳಿಸಿಕೊಳ್ಳಲು ದೇಸಾಯಿಗೆ ತಾನು ಕೋಲ್ಹಾಪುರದ ಮಹಾರಾಜನ ಸೂಳೆಯನ್ನು ಕರೆತರುವುದಾಗಿ ನಂಬಿಸಿ ದೇಸಾಯಿಗೆ ಗೊತ್ತಿಲ್ಲದಂತೆ ಅರಮನೆಯನ್ನು ಸಿಂಗಾರೆವ್ವನ ಹೆಸರಿಗೆ ಬರೆಸಿ ಸಹಿ ಹಾಕಿಸಿಕೊಳ್ಳುತ್ತಾನೆ. ಕೋಲ್ಹಾಪುರದ ಮಹಾರಾಜರ ಸೂಳೆ ಬಂದಿದ್ದಾಳೆಂದು ಮರ್‍ಯಾ ಕರೆದುಕೊಂಡು ಹೋಗುತ್ತಾನೆ. ಅಲ್ಲಿ ವಿಲಾಸಿನಿಯಂತೆ ನಿಂತಿದ್ದ ಸಿಂಗಾರೆವ್ವ ದೇಸಾಯಿಗೆ ತೊಡೆ ತೋರಿಸಿದಾಗ ದೇಸಾಯಿ ಬೇಹೋಶ್ ಆಗಿ ಬೀಳುತ್ತಾನೆ. ಆಗ ಮರ್‍ಯಾ ಮತ್ತು ಸಿಂಗಾರೆವ್ವ ಅವನನ್ನು ಅರಮನೆಗೆ ತರುತ್ತಾರೆ.

ಮರುದಿನ ದೇಸಾಯೀ ಮದುವೆಗೂ ಮುಂಚಿನಿಂದಲೂ ನಿಮಗೂ ಮರ್‍ಯಾನಿಗೂ ಸಂಬಂಧವಿತ್ತು. ನೀವು ಅದಕ್ಕಾಗಿ ಮರ್‍ಯಾನನ್ನು ಇಲ್ಲಿಗೆ ಕರೆಸಿಕೊಂಡು ಅವನೊಂದಿಗೆ ಸಂಬಂಧ ಬೆಳಸಿ ಗರ್ಭಿಣಿಯಾಗಿರುವಿರಿ. ನೀವು ನನ್ನ ಮುಖಕ್ಕೆ ಮಸಿ ಬಳಿದಿರಿ. ನೀವು ಸೂಳೆಯಂತೆ ವೇಷಧರಿಸಿ ನನ್ನ ಮುಂದೆ ನಟಿಸಿದಿರಿ. ನಾನು ಆಗ ಬೇಹೋಶ್ ಆದಂತೆ ಬಿದ್ದೆ ಹೊರತು ಬೇಹೋಶ್ ಆಗಿರಲಿಲ್ಲ. ನೀವು ಮೋಸದಿಂದ ಅರಮನೆಯನ್ನು ನಿಮ್ಮ ಹೆಸರಿಗೆ ಬರೆಯಸಿಕೊಂಡಿದ್ದೀರಿ. ಹೀಗೆ ಊರಲ್ಲಿ ನನ್ನ ಗೌರವ ಕಡಿಮೆಯಾಗುವಂತೆ ಮಾಡಿದ್ದೀರಿ. ನಿಮ್ಮ ಕೆಲಸದಿಂದ ಊರ ಜನರಿಗೆ ಮುಖ ತೋರಿಸಲಾಗದೆ ನಾನು ಸಾಯುತ್ತಿದ್ದೇನೆ. ಕುಮುದವ್ವನಾಣೆಗೂ ನೀವೇ ನನ್ನ ಸಾವಿಗೆ ಕಾರಣ. ನಿಮ್ಮಲ್ಲಿ ಸ್ವಲ್ಪವಾದರೂ ಮನುಷ್ಯತ್ವವಿದ್ದರೆ ನೀವು ಸತ್ಯ ಒಪ್ಪಿಕೊಂಡು ಜೈಲಿಗೆ ಹೋಗಿರಿ? ಎಂದು ಸಿಂಗಾರೆವ್ವನ ಹೆಸರಿಗೆ ಪತ್ರ ಬರೆದು ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ.

ಕಾಗದ ಓದಿದ ಸಿಂಗಾರೆವ್ವ ತಾನೇ ಅಪರಾಧಿ ಎಂದು ಪೋಲಿಸರ ಮುಂದೆ ಒಪ್ಪಿಕೊಂಡು ಜೈಲು ಸೇರುತ್ತಾಳೆ. ಜೈಲಿನಲ್ಲಿ ರವಿಚಂದ್ರನಿಗೆ ಜನ್ಮಕೊಟ್ಟು ಹೆರಿಗೆಯಲ್ಲಿಯೇ ಮರಣ ಹೊಂದುತ್ತಾಳೆ. ಕ್ರೂರಿಯಾಗಿದ್ದ ಸಿಂಗಾರೆವ್ವನ ಪ್ರೀತಿಯಿಂದ ಮನುಷ್ಯತ್ವ ಬೆಳಸಿಕೊಂಡ ಮರ್‍ಯಾ ಅವಳ ಕೊರಗಿನಲ್ಲಿ ಹುಚ್ಚನಾಗಿ ಅವಳು ಸತ್ತ ಮೂರುದಿನಕ್ಕೆ ಹಾವು ಕಚ್ಚಿಸಿಕೊಂಡು ಸಾಯುತ್ತಾನೆ. ಸಿಂಗಾರೆವ್ವನ ಮಗ ರವಿಚಂದ್ರ ಶಾಲೆ ಕಲಿತು, ಬೆಳಗಾವಿಯಲ್ಲಿಯೆ ವಾಸವಿದ್ದು ಈಗ ಅರಮನೆಯನ್ನು ಮಾರಿ ಬೆಳಗಾವಿಯಲ್ಲಿ ನೆಲೆಸಲು ನಿರ್ಧರಿಸಿ ಅರಮನೆಯನ್ನು ಹರಾಜಿಗೆ ಹಚ್ಚುತ್ತಾನೆ. ಈ ವಿಷಯ ತಿಳಿದ ಕಾದಂಬರಿಕಾರರು ಶಿನಿಂಗವ್ವನಿಂದ

ಸಿಂಗಾರೆವ್ವ ಮತ್ತು ಅರಮನೆಯ ಕತೆಯನ್ನು ಕೇಳುತ್ತಾರೆ. ಶಿವಾಪುರದ ಜನ ಕಾದಂಬರಿಕಾರರಿಗೆ ಊರಲ್ಲಿ ಪ್ರಾರಂಭವಾದ ಹೈಸ್ಕೂಲ ನಡೆಸಲು ಜಾಗವಿಲ್ಲದ್ದರಿಂದ ಅರಮನೆಯನ್ನು ಹರಾಜು ಹಾಕುವ ಬದಲು ಶಾಲೆಗೆ ಬಿಟ್ಟು ಕೊಡು ಎಂದು ರವಿಚಂದ್ರನನ್ನು ಕೇಳು ಎಂದು ಹೇಳಿ ಜವಾಬ್ದಾರಿಯನ್ನು ಹೊರಟಿಸುತ್ತಾರೆ. ಊರಜನರ ಮಾತಿಗೆ ಬೆಲೆಕೊಟ್ಟು ಕೃತಿಕಾರರು ಕೆಲವು ಊರ ಹಿರಿಯರೊಂದಿಗೆ ರವಿಚಂದ್ರನನ್ನು ಭೇಟಿಯಾಗಿ ವಿಷಯ ಪ್ರಸ್ತಾಪಿಸುತ್ತಾರೆ. ಯೋಚಿಸಲು ಸಮಯ ಕೇಳಿದ ರವಿಚಂದ್ರ ನಂತರ ಅರಮನೆಯನ್ನು ಶಾಲೆಗೆ ಬಿಟ್ಟು ಕೊಡುವುದಾಗಿ ಪತ್ರ ಬರೆಯುತ್ತಾನೆ. ಅರಮನೆಯ ಕಂಬಕ್ಕೊಂದರಂತೆ ಮಕ್ಕಳನ್ನು ಹೆತ್ತು ಸಂಭ್ರಮಿಸಬೇಕೆಂಬ ಸಿಂಗಾರೆವ್ವನ ಕನಸು ಅರಮನೆ ಶಾಲೆಯಾಗಿ ಅರಮನೆಯ ತುಂಬಾ ಮಕ್ಕಳಾಡುವ ಮೂಲಕ ನನಸಾಗುತ್ತದೆ.

ಸಿಂಗಾರೆವ್ವ ಅರಮನೆಯನ್ನು ಉಳಿಸುವ ಜವಾಬ್ದಾರಿಯನ್ನು ನಿರ್ವಹಿಸಲು ಪ್ರಯತ್ನಿಸುವುದರೊಂದಿಗೆ, ಕ್ರೂರಿಯಾದ ಮರ್‍ಯಾನನ್ನು ತನ್ನ ಪ್ರೀತಿಯ ಮೂಲಕ ಮನುಷ್ಯನನ್ನಾಗಿ ಮಾಡುತ್ತಾಳೆ.

ಶಿಖರಸೂರ್ಯ

ಎರಡು ವಿಭಿನ್ನ ಜೀವನ ಮೌಲ್ಯಗಳ ಮುಖಾಮುಖಿಯನ್ನು ವಸ್ತುವಾಗುಳ್ಳ 'ಶಿಖರಸೂರ್ಯ' ಕಾದಂಬರಿ, ವಿದ್ಯೆಯನ್ನು ಜನೋಪಕಾರಕ್ಕಾಗಿ ಬಳಸದೆ ತನ್ನ ಉಪಭೋಗ, ಸ್ವಾರ್ಥ, ಅಧಿಕಾರದ ಆಸೆ, ಅಹಂಕಾರ ಮುಂತಾದ ದುರುಪಯೋಗಿ ಕಾರ್ಯಗಳಿಗೆ ಬಳಸುವ ವ್ಯಕ್ತಿ, ಜನೋಪಕಾರಕ್ಕಾಗಿ ಬದುಕುವ ವ್ಯಕ್ತಿಯ ಮುಂದೆ ನಿಕೃಷ್ಟನಾಗುವ ಕತೆಯನ್ನು ಹೇಳುತ್ತದೆ. ಮನುಷ್ಯ ಜೀವನಕ್ಕೆ ಬೇಕಾಗಿರುವುದು ಕೇವಲ ಅಧಿಕಾರ, ಸಂಪತ್ತು, ವಿದ್ಯೆಗಳಲ್ಲ. ಅದನ್ನು ಮೀರಿದ ಮಾನವೀಯತೆ ಎಂಬ ಸತ್ಯದ ಅರಿವನ್ನು ಈ ಕಾದಂಬರಿ ಮಾಡಿಸುತ್ತದೆ.

'ಶಿಖರಸೂರ್ಯ' ಕಾದಂಬರಿ ಕಂಬಾರರ ಮಹಾಕಾವ್ಯ 'ಚಕೋರಿ'ಯ ಮುಂದುವರಿದ ಕತೆ. 'ಚಕೋರಿ' ಕಾವ್ಯದ ನಾಯಕ, ಪ್ರತಿನಾಯಕರಾದ 'ಚಂದಮುತ್ತ' 'ಚಿನ್ನಮುತ್ತರೆ', ಇಲ್ಲಿಯ 'ನಿನ್ನಡಿ' ಮತ್ತು 'ಶಿಖರಸೂರ್ಯ'ರು. ಚಕೋರಿಯ 'ಯಕ್ಷಿ' ಇಲ್ಲಿಯ ಗೌರಿ. ಭಾರತೀಯ ನಂಬಿಕೆಗಳಾದ ಪೂರ್ವಜನ್ಮ, ಕರ್ಮಫಲ, ಪವಾಡ ಮುಂತಾದವುಗಳನ್ನು ಅವಲಂಬಿಸಿ ಕಾದಂಬರಿ ನಿರ್ಮಾಣವಾಗಿದೆ. ಜೀವನದಲ್ಲಿ ವಿದ್ಯೆಯೊಂದರಲ್ಲಿ ಉನ್ನತ ಸಾಧನೆ ಮಾಡಿ ಶ್ರೇಷ್ಠವ್ಯಕ್ತಿಯಾಗಬೇಕೆಂಬ ಆಸೆಯುಳ್ಳವ್ವ 'ಚಕೋರಿ' ಕಾವ್ಯದ ಸೂರ್ಯಮುತ್ತ ಹೆಗ್ಗಡೆಯ ಮಗ ಚಿನ್ನಮುತ್ತ, ಅದಕ್ಕಾಗಿ ಸಂಗೀತ ಸ್ಪರ್ಧೆಯಲ್ಲಿ ಚಂದಮುತ್ತನೊಂದಿಗೆ ಸ್ಪರ್ಧಿಸಿ ಸೋಲುತ್ತಾನೆ. ಇದರಿಂದ ಹತಾಶೆ ಹೊಂದಿ ಆತ್ಮಹತ್ಯೆ ಮಾಡಿಕೊಳ್ಳಲು ಬೆಟ್ಟದ ಮೇಲಿಂದ ಕಮರಿಗೆ ಹಾರುತ್ತಾನೆ. ಆಗ ಸಾಯದೇ ಉಳಿದ ಈತನ ಮುಂದಿನ ಜೀವನದ ಭಾಗ 'ಶಿಖರಸೂರ್ಯ' ಕಾದಂಬರಿಯಲ್ಲಿ ಮುಂದುವರಿಯುತ್ತದೆ.

ಶಿವಾಪುರ ಒಂದು ಕಡಿಮೆ ನಾಲ್ವತ್ತು ಹಟ್ಟಿಗಳ ಗ್ರಾಮ, ಬೆಟ್ಟದ ಮೇಲಿನ ಗುಹೆಯಲ್ಲಿರುವ ಮಗುವಿಗೆ ಜನ್ಮ ನೀಡುತ್ತಿರುವ ಅಮ್ಮ ಇಲ್ಲಿನ ಆರಾಧ್ಯದೇವಿ. ಇಡೀ ಹಟ್ಟಿಯ ರಕ್ಷಕಿ. ಪ್ರೀತಿ, ಸಹಕಾರ, ತ್ಯಾಗ ಒಗ್ಗಟ್ಟಿನ ಸದ್ಗುಣಗಳಿಂದ ಕೂಡಿದ ಶಿವಾಪುರದ ಜನ ಪ್ರತಿಯೊಂದಕ್ಕೂ ನಂಬಿರುವುದು ಮತ್ತು ಅವಲಂಬಿಸಿರುವುದು ತಾಯಿಯನ್ನು. ಶಿವಪಾದ ಈ ತಾಯಿಯ ಪೂಜಾರಿ. ತಾಯಿ ಮೇಲಿದ್ದಷ್ಟು ಭಕ್ತಿ ಮತ್ತು ಗೌರವಗಳು ಶಿವಪಾದನ ಮೇಲೆಯೂ ಇದ್ದವು. ಧರ್ಮಾಧಿಕಾರಿ, ತಾಂತ್ರಿಕ ಪೂಜಾರಿ, ವೈದ್ಯವಿದ್ಯೆ

[illegible]

ಪಾರಂಗತನಾದ ಶಿವಪಾದನ ಆಣತಿಯಂತೆ ಗ್ರಾಮ ನಡೆಯುತ್ತಿರುತ್ತದೆ. ಈ ಒಂದು ಕಡಿಮೆ ನಾಲ್ವತ್ತು ಹಟ್ಟಿಗಳ ಹಕ್ಕಿನ ಒಡೆತನ ಜಟ್ಟಿಗನದು. ಜಟ್ಟಿಗ ಮತ್ತು ಬೆಳ್ಳಿ ನಾಟಿ ವೈದ್ಯರಾಗಿದ್ದು ಔಷಧ ಸಸ್ಯತರಲು ಕಾಡಿಗೆ ಹೋದಾಗ ಕಮರಿಯಲ್ಲಿ ಕಾಲು ಮುರಿದು ಅರೇಜೀವವಾಗಿ ಬಿದ್ದಿದ್ದ ಚಿನ್ನಮುತ್ತನನ್ನು ಕರೆದುಕೊಂಡು ಬಂದು ಆರೈಕೆ ಮಾಡುತ್ತಾರೆ. ಈ ವಿಷಯವನ್ನು ಶಿವಪಾದನಿಗೂ ತಿಳಿಸುತ್ತಾರೆ. ಬೆಳ್ಳಿ, ಜಟ್ಟಿಗರು ಇವನ ಹೆಸರನ್ನು ಕೇಳಿದಾಗ ಈತ ಚಿನ್ನಮುತ್ತ ಎನ್ನದೆ 'ಜಯಸೂರ್ಯ' ಎಂದು ಸುಳ್ಳು ಹೇಳುತ್ತಾನೆ.

ಇವರ ಆರೈಕೆಯಿಂದ ಗುಣಮುಖನಾದ ಚಿನ್ನಮುತ್ತ ನಾಟಿವೈದ್ಯಕ್ಕಾಗಿ ಗಿಡಮೂಲಿಕೆ ತರಲು ಹೋದ ಬೆಳ್ಳಿಯೊಂದಿಗೆ ಕಾಡಿಗೆ ಹೋದಾಗ, ನನಗೂ ವೈದ್ಯವಿದ್ಯೆ ಕಲಿಸು ಎನ್ನುತ್ತಾನೆ. ಬೆಳ್ಳಿ ಶಿವಪಾದನ ಹತ್ತಿರ ಕಲಿ ಎನ್ನುತ್ತಾಳೆ. ವೈದ್ಯದಿಂದ 'ಚಿರಂಜೀವಿತ್ವ' ಸಾಧ್ಯವೇ? ಎಂದು ಕೇಳಿದಾಗ ಇದಕ್ಕೆಲ್ಲ ಉತ್ತರ ಶಿವಪಾದನಲ್ಲಿದೆ ಎಂದು ಬೆಳ್ಳಿ ಹೇಳುತ್ತಾಳೆ. ಜಟ್ಟಿಗ ಅವನನ್ನು ಶಿವಪಾದನ ಹತ್ತಿರ ಕರೆತರುತ್ತಾನೆ. ಜಯಸೂರ್ಯ ಅವನ ಹತ್ತಿರ ವೈದ್ಯವಿದ್ಯೆ ಕಲಿಸಿ ಕೊಡಲು ಕೇಳುತ್ತಾನೆ. ಇಂಥವನಿಗೆ ವೈದ್ಯವಿದ್ಯೆ ಕಲಿಸಿದರೆ ದುರುಪಯೋಗವಾಗಬಹುದೇನೋ? ಎಂಬ ಭಯ ಶಿವಪಾದನನ್ನು ಕಾಡುತ್ತದೆ. ದೈವದ ಮುಂದೆ ವಿದ್ಯೆ ಕೇಳಿದಾಗ ಇಲ್ಲ ಎನ್ನಬಾರದೆಂದು, ದುರುಪಯೋಗ ಮಾಡಿದರೆ ಅದು ಅವನ ಕರ್ಮ ಎಂದು ಒಪ್ಪಿಗೆ ನೀಡುತ್ತಾನೆ. 'ವೈದ್ಯವಿದ್ಯೆಯಿಂದ ಚಿರಂಜೀವಿತ್ವ ಸಾಧ್ಯವೇ?' ಎಂದು ಜಯಸೂರ್ಯ ಕೇಳಿದಾಗ, 'ಸಸ್ಯವಿದ್ಯೆ ಅರಿತು ಉಪಯೋಗಿಸಿದರೆ ವಜ್ರದೇಹಿ ಆಗಬಹುದು' ಎಂದು ಶಿವಪಾದ ತಿಳಿಸುತ್ತಾನೆ. 'ಪ್ರಕೃತಿಗೆ ವಿರುದ್ಧವಾದ ಯಾವ ಸಿದ್ಧಿಗಳನ್ನು ಭೋದಿಸುವುದು ನಮ್ಮ ಪರಂಪರೆಯಲ್ಲ' ಎಂಬ ಎಚ್ಚರಿಕೆ ನೀಡಿ ಇವನನ್ನು ಶಿಷ್ಯನನ್ನಾಗಿ ಸ್ವೀಕರಿಸುತ್ತಾನೆ. ಜೊತೆಗೆ ಈತನಿಗೆ ವಿದ್ಯೆ ಕಲಿಯಲು ಸಹಾಯಕವಾಗಲೆಂದು 'ಕುರುಮುನಿ' ಎಂಬ ಸಾಧಕನನ್ನು ಆತನ ಜೊತೆ ಮಾಡುತ್ತಾನೆ.

ಶಿವಪಾದನ ಶಿಷ್ಯನಾಗಿ ಸೇರಿದ ಜಯಸೂರ್ಯ ಗವಿಯ ನಿಯಮಕ್ಕೆ ವಿರುದ್ಧವಾಗಿ ವಿದ್ಯೆ ಕಲಿಯ ತೊಡಗುತ್ತಾನೆ. ಕುರುಮುನಿ ಕೊಟ್ಟ 'ಸಸ್ಯ ಹೃದಯ' ಗ್ರಂಥದಿಂದ ಚರಾಚರವಸ್ತುಗಳ ಲಯದ ಮೇಲೆ ಪ್ರಭುತ್ವ ಸಾಧಿಸುತ್ತಾನೆ. ಕುರುಮುನಿಯಿಂದ ಬೇರೆ ಗ್ರಂಥಗಳನ್ನು ಪಡೆದು ತಾನೇ ಪ್ರಯೋಗ ಮಾಡತೊಡಗುತ್ತಾನೆ. ರಸವಿದ್ಯೆ ಇವನಿಗೆ ಹತ್ತದಾಗ, ಹೆಣ್ಣು ಕೂಸುಗಳನ್ನು ಸಸ್ಯಮೂಲಿಕೆಗಳಿಂದ ವಿಷದೇಹಿಗಳನ್ನಾಗಿ ಮಾಡಿ ವೈರಿಗಳನ್ನು ಕೊಲ್ಲಲು ಬಳಸುವ ವಿಷವಿದ್ಯೆಯನ್ನು ಕರಗತ ಮಾಡಿಕೊಳ್ಳುತ್ತಾನೆ. ಶಿವಪಾದನಿಗೆ ತಿಳಿಯದಂತೆ ರಹಸ್ಯವಾಗಿ ವಜ್ರದೇಹಿಯಾಗಿ ಮಾರ್ಪಾಡಾಗುತ್ತಾನೆ.

ಈ ವೇಳೆಗೆ ಅಮ್ಮನ ಪರ್ವ (ಜಾತ್ರೆ) ಬರುತ್ತದೆ. ಶಿವಾಪುರದ ಜನ ಅಮ್ಮನ ಮುಂದೆ ಹಾಡುತ್ತಾ, ಕುಣಿಯುತ್ತಾ ಹಬ್ಬ ಮಾಡುತ್ತಾರೆ. ಪರ್ವದಲ್ಲಿ 'ಒಂದು ಕಾಲಲಿ ತಕ್ಕಡಿ ಒಂದು ಕಾಲಲಿ ಕತ್ತಿ ಹಿಡಿದುಕೊಂಡ ರಣಹದ್ದು ಬೆಟ್ಟದ ಮೇಲೆ ಕುಳಿತುಕೊಂಡು ಹಟ್ಟಿ ಕಡೆಗೆ ನೋಡುತ್ತದೆ' ಎಂದು ಕಾರಣಿಕವಾಗುತ್ತದೆ. ಇದು 'ಜಯಸೂರ್ಯ'ನಿಂದ ಮುಂದೆ ಅಗಬಹುದಾದ ಅನಾಹುತವನ್ನು ಸೂಚಿಸುತ್ತದೆ. ಅದೇ ದಿನ ಶಿವಪಾದ ಬೆಳ್ಳಿಜಟ್ಟಿಗರನ್ನು ಕರೆಯಿಸಿ ಮುಂದಿನ ಶಿವಪಾದ ನಿಮ್ಮಿಬ್ಬರಲ್ಲಿ ಹುಟ್ಟುತ್ತಾನೆ ಎಂದು ಹೇಳಿ ಉಡಿಯಲ್ಲಿ ಫಲಪುಷ್ಪ ನೀಡಿ ಆಶೀರ್ವಾದ ಮಾಡುತ್ತಾನೆ. ಇದರಿಂದ ಸಂತೋಷಗೊಂಡ ಹಟ್ಟಿಯ ಜನ ಅವರಿಬ್ಬರನ್ನು ಮೆರವಣಿಗೆಯ ಮುಖಾಂತರ ಹಟ್ಟಿಗೆ ಕರೆತರುತ್ತಾರೆ. ಮುಂದಿನ ಶಿವಪಾದನಿಗೆ ಜನ್ಮ ನೀಡುವ ಇವರನ್ನು ಕೂಡಿಸಲು ಹಟ್ಟಿಯನ್ನು ಶೃಂಗಾರಗೊಳಿಸಿ, ಬೆಳ್ಳಿಯನ್ನು ಅಲಂಕರಿಸುತ್ತಾರೆ. ಇದಕ್ಕಾಗಿ

ತೊರೆಗೆ ಹೋಗಿ ಮೀಯುತ್ತಿದ್ದ ಜಟ್ಟಿಗನನ್ನು ನೋಡಿ, ಬೆಳ್ಳಿಯನ್ನು ಮೋಹಿಸುತ್ತಿದ್ದ ಜಯಸೂರ್ಯ ಅವನ ಮೇಲೆ ಬಂಡೆಗಲ್ಲನ್ನು ಎತ್ತಿಹಾಕಿ ಕೊಂದು ಹಟ್ಟಿಗೆ ಬಂದು ಬೆಳ್ಳಿಯನ್ನು ಬಲತ್ಕಾರ ಮಾಡಲು ಹೋಗುತ್ತಾನೆ. ಬೆಳ್ಳಿ ಚೀರಿ ಅವನನ್ನು ಒದ್ದಾಗ ತಪ್ಪಿಸಿಕೊಳ್ಳಲು ಹೋಗಿ ಕುರುಮುನಿಯ ಕೈಗೆ ಸಿಗುತ್ತಾನೆ. ಅವನು ಇವನನ್ನು ಚೆನ್ನಾಗಿ ಥಳಿಸಿ 'ನಿತ್ಯವು ಶಾಪಗಳಿಗೆ ಗುರಿಯಾಗುತ್ತ ಚಿರಂಜೀವಿಯಾಗು ಪಿಶಾಚಿ' ಎಂದು ಶಾಪ ಕೊಡುತ್ತಾನೆ. ಇದು ಮುಂದೆ ಅವನ ಜೀವನದಲ್ಲಿ ನಿಜವಾಗುತ್ತದೆ. ಅಲ್ಲಿಂದ ಪಾರಾಗಿ ಜಯಸೂರ್ಯ ಬಂದು ಸೇರುವುದು ಕನಕಪುರಿಗೆ.

ಕನಕಪುರಿ ಶಿವಾಪುರದಿಂದ ೧೨೫ ಮೈಲಿದೂರದ ಶ್ರೀಮಂತನಗರ. ಇದರ ಮೂಲ ಹೆಸರು 'ಬಂಗಾರದ ಹಟ್ಟಿ', 'ಗರುಡವಂಶ'ದ ಪಾಳೆಗಾರ 'ಬಂಗಾರಹಟ್ಟಿ'ಯ ಒಡೆಯ. ಇಲ್ಲಿಗೆ ವ್ಯಾಪಾರಕ್ಕಾಗಿ ಬಂದ ವರ್ತಕರು ಇಲ್ಲೇ ನೆಲೆನಿಂತು ಇವರೊಂದಿಗೆ ಸ್ನೇಹ ಬೆಳೆಸುತ್ತಾರೆ. ಇವರಿಬ್ಬರೂ ಸೇರಿ ರಾಜ್ಯಕಟ್ಟಿ ಅದಕ್ಕೆ 'ಕನಕಪುರಿ' ಎಂದು ಕರೆದು ಗರುಡವಂಶದ ಪಾಳೆಗಾರರನ್ನೇ ಅದರ ಒಡೆಯನನ್ನಾಗಿ ಮಾಡುತ್ತಾರೆ. ಸೂರ್ಯನ ಗುರುತಾದ 'ಹದ್ದು' ರಾಜ ಲಾಂಛನವಾದದ್ದನ್ನು ಬದಲಿಸಿ, 'ಒಂದು ಕೈಯಲ್ಲಿ ಕತ್ತಿ ಒಂದು ಕೈಯಲ್ಲಿ ತಕ್ಕಡಿ ಹಿಡಿದ ಹದ್ದ'ನ್ನು ರಾಜಲಾಂಛನವನ್ನಾಗಿ ಮಾಡುತ್ತಾರೆ. ಕೊನೆಯದೊರೆ 'ವಿನಯಶೀಲ' ವರ್ತಕರ ಮಗಳು 'ಕನಕರೇಖೆ'ಯನ್ನು ಮೋಹಿಸಿದಾಗ ಕೆಲವು ಕರಾರುಗಳೊಂದಿಗೆ ವರ್ತಕರು ಮಗಳನ್ನು ಕೊಡುತ್ತಾರೆ. ರಾಜ ವಿಲಾಸಿಯಾದಾಗ ಕನಕರೇಖೆಯ ಸೋದರರೇ ಆಡಳಿತ ಪ್ರಾರಂಭಿಸುತ್ತಾರೆ. ಇದರಿಂದ ಅನೇಕ ಕ್ಷತ್ರಿಯರು ರಾಜ್ಯ ಬಿಟ್ಟು ಪರರಾಜ್ಯಕ್ಕೆ ಹೋಗುತ್ತಾರೆ. ಕ್ಷತ್ರಿಯರಿಲ್ಲದ್ದನ್ನು ಕಂಡ ಪರರಾಜರು ದಾಳಿ ಮಾಡಿದಾಗ ವರ್ತಕರು ಚಿನ್ನ, ಹಣ ನೀಡಿ ಅವರ ದಾಳಿ ತಡೆಯುತ್ತಾರೆ. ಚಿನ್ನ ಸಾಲದಾದಾಗ ಚಿನ್ನದ ಶೋಧನೆ ಪ್ರಾರಂಭಿಸುತ್ತಾರೆ. ಆಗ ಆಕಾಶದಲ್ಲಿ ಚಿನ್ನದ ತಲೆಕಂಡು ತಲೆ ಮೂಲಕ ಆಡಳಿತ ಮಾಡಬೇಕೆಂದು ಭವಿಷ್ಯ ನುಡಿಯುತ್ತದೆ. ಇದರ ಪ್ರಭಾವದಿಂದ ವಿವಿಧ ತಂತ್ರಗಳನ್ನು ಅನುಸರಿಸಿ ರಾಜ್ಯವನ್ನು ಶ್ರೀಮಂತವಾಗಿಸುತ್ತಾರೆ.

'ಕನಕಪುರಿ'ಯ ರಾಜ ಗುಣಾಧಿಕ್ಯ ಅನೇಕ ದಾಳಿಗಳಲ್ಲಿ ಜಯಗಳಿಸಿ ಬಿಳಿಗಿರಿಯ ಮೇಲೆ ದಾಳಿ ಮಾಡುತ್ತಾನೆ. ಸೋತ ಬಿಳಿಗಿರಿಯ ರಾಜ ಚಲುವರಾಯ ಕನಕಪುರಿ ರಾಜನಿಗೆ 'ವಿಜಯದ ಖಡ್ಗ' ನೀಡಿ ತನ್ನ ಸೋದರಿ 'ವಿನಯವತಿ'ಯನ್ನು ಇವನಿಗೆ ಮದುವೆ ಮಾಡಿಕೊಡುತ್ತಾನೆ. ರಾಜನಿಗೆ ಈಗಾಗಲೇ ಮಹಾರಾಣಿ ಇದ್ದು, ಅವಳಿಗೆ 'ಆದಿತ್ಯಪ್ರಭ'ನೆಂಬ ಮಗನೂ ಇರುತ್ತಾನೆ. ಕನಕಪುರಿ ರಾಜನನ್ನು ಮದುವೆಯಾಗಿ ಬಂದ ವಿನಯವತಿ ರಾಜ್ಯದ ಚಿಕ್ಕಮ್ಮಣ್ಣಿ ಎನಿಸುತ್ತಾಳೆ. ಇವಳಿಗೆ 'ಛಾಯಾವತಿ' ಮತ್ತು 'ತರುಣಚಂದ್ರ'ರೆಂಬ ಮಕ್ಕಳು ಜನಿಸುತ್ತಾರೆ. ಮೊದಲು ರಾಣಿಯ ಸದ್ಗುಣಗಳಿಂದ ಅವಳ ಜೊತೆ ಸೌಹಾರ್ದತೆಯಿಂದ ಇದ್ದ ಹಿರಿಯರಾಣಿ, ಅವಳಿಗೆ ಗಂಡು ಮಗುವಾದಾಗ ಎಲ್ಲಿ ರಾಜ ಅವಳ ಮಗನನ್ನೇ ಯುವರಾಜನನ್ನಾಗಿ ಮಾಡುತ್ತಾನೇನೋ ಎಂದು ಭಯಗೊಳ್ಳುತ್ತಾಳೆ. ಹಿರಿಯರಾಣಿ ತನ್ನ ಮಗನಿಗೆ ಯುವರಾಜಪಟ್ಟ ನೀಡಲು ಒತ್ತಾಯಿಸುತ್ತಾಳೆ. ರಾಜನಿಗಿದ್ದ ಹಿರಿಯರಾಣಿಯ ಮಗ 'ಆದಿತ್ಯಪ್ರಭ' ಪ್ರಧಾನಿ ಅರ್ಥಕೌಶಲನೊಂದಿಗಿನ ರಾಣಿಯ ಅನೈತಿಕ ಸಂಬಂಧದಿಂದ ಹುಟ್ಟಿರಬಹುದೆಂದು ಸಂಶಯ ಮತ್ತು 'ವರ್ತಕರ ಸಂಘ' ಅವನಿಗೆ ಪಟ್ಟ ಕಟ್ಟುವ ವಿಷಯದಲ್ಲಿ ಸಮ್ಮತಿ ನೀಡದ್ದರಿಂದ ರಾಜ ಆದಿತ್ಯಪ್ರಭನಿಗೆ ಪಟ್ಟ ಕಟ್ಟುವುದಿಲ್ಲ. ತನ್ನ ಸವತಿಯ ಮಗನಿಗೆ ರಾಜ್ಯ ಸೇರಬಹುದೆಂಬ ಅನುಮಾನದಿಂದ ಮಹಾರಾಣಿ

ಪ್ರಧಾನಿಯೊಂದಿಗೆ ಸೇರಿ ತಾಯಿಯೊಂದಿಗೆ ಮಲಗಿದ್ದ ವರ್ಷದ ಹಸುಳೆ ತರುಣಚಂದ್ರನನ್ನು ಅಪಹರಿಸಿ ಅದನ್ನು ಕೊಲ್ಲು ಎಂದು ಬುಡಕಟ್ಟು ಮಹಿಳೆಗೆ ಕೊಡುತ್ತಾಳೆ. ಯುದ್ಧದಲ್ಲಿದ್ದ ಮಹಾರಾಜ ತರುಣಚಂದ್ರನ ಅಪಹರಣ ತಿಳಿದು ಹುಡುಕಾಡಿಸುತ್ತಾನೆ. ಮಗು ಸಿಗದಾಗ ಚಿಂತೆಯಿಂದ ಹಾಸಿಗೆ ಹಿಡಿಯುತ್ತಾನೆ. ಜೊತೆಗೆ ಅಧಿಕಾರದ ಆಸೆಗಾಗಿ ಮಹಾರಾಣಿ ಮತ್ತು ಪ್ರಧಾನಿ ಸೇರಿ ಹಾಕಿದ ವಿಷದಿಂದ ರಾಜನ ಅನಾರೋಗ್ಯ ಮತ್ತಷ್ಟು ಬಿಗಡಾಯಿಸುತ್ತದೆ. ಈ ವೇಳೆಗೆ 'ಶಿಖರಸೂರ್ಯ'ನ ಪ್ರವೇಶವಾಗುತ್ತದೆ.

ಶಿವಾಪುರವನ್ನು ಬಿಟ್ಟ ಶಿಖರಸೂರ್ಯ ಶಿವಾಪುರದ ಗಾಳಿ, ಬೆಳಕು ಸುಳಿಯಿಂದ ಸುಳಿಯದ ಜಾಗದಲ್ಲಿ ಬಾಳಬೇಕೆಂದು ನಾಲ್ಕು ದಿನ ಕುದುರೆ ಸವಾರಿ ಮಾಡಿ ಬಂದು, ಕನಕಪುರಿಯ ಪ್ರಧಾನಿ ಅರ್ಥಕೌಶಲನ ಮನೆಗೆ ಹೋಗಿ, ತಾನು ರಾಜನ ರೋಗಕ್ಕೆ ಔಷಧ ಕೊಡಬೇಕೆಂದು ತಿಳಿಸುತ್ತಾನೆ. ಅರ್ಥಕೌಶಲನೊಂದಿಗೆ ಅರಮನೆಗೆ ಹೋಗಿ ಔಷಧ ನೀಡಿ ರಾಜನ ರೋಗ ನಿಯಂತ್ರಣಕ್ಕೆ ಬರುವ ಹಾಗೆ ಮಾಡುತ್ತಾನೆ. ಇದರಿಂದ ಅರಮನೆಯಲ್ಲಿ ಶಿಖರಸೂರ್ಯ ರಾಜವೈದ್ಯನ ಸ್ಥಾನಗಿಟ್ಟಿಸುತ್ತಾನೆ. ಚಿಕ್ಕಮ್ಮಣ್ಣಿಯ ಸರಳ ಸ್ವಭಾವ ಮತ್ತು ಅರಮನೆಯಲ್ಲಿ ಆಕೆಗಿರುವ ಸ್ಥಾನದಿಂದ ಮರುಕ ಪಡುತ್ತಾನೆ. ಇವನ ಬಗ್ಗೆ ವಿಶ್ವಾಸ ಬೆಳೆಸಿಕೊಂಡ ಚಿಕ್ಕಮ್ಮಣ್ಣಿ ಇವನಿಗೆ ತನ್ನ ಮಗಳು ಛಾಯಾವತಿಯನ್ನು ಕೊಟ್ಟು ಮದುವೆ ಮಾಡಲು ಮುಂದಾಗುತ್ತಾಳೆ. ಸವತಿ ಮಗಳ ಬಗ್ಗೆಯೂ ಅಸಡ್ಡೆಯಿಂದಿದ್ದ ಮಹಾರಾಣಿ ವೈದ್ಯನಿಗೆ ಅವಳನ್ನು ಮದುವೆ ಮಾಡಿಕೊಟ್ಟರೆ ಮುಂದೆ ತಮ್ಮ ಮಗನ ಯುವರಾಜ ಪಟ್ಟಕ್ಕೆ ಯಾವುದೇ ಬಾಧೆ ಬಾರದೆಂದು ಯೋಚಿಸಿ ಮದುವೆಗೆ ಸಮ್ಮತಿ ನೀಡುತ್ತಾಳೆ. ಶಿಖರಸೂರ್ಯ ಮತ್ತು ಛಾಯಾವತಿಯರ ಮದುವೆಯಾಗಿ ಇವರಿಗೆ 'ರವಿಕೀರ್ತಿ' ಮತ್ತು 'ಗೌರಿ' ಎಂಬ ಅವಳಿ ಮಕ್ಕಳಾಗುತ್ತಾರೆ.

ಬಿಳಿಗಿರಿಯ ಮಹಾರಾಜ 'ಚೆಲುವರಾಯ' ಕನಕಪುರಿ ಮಹಾರಾಜ ಗುಣಾಧಿಕ್ಯನಿಗೆ ಸೋತು ಅನೇಕ ಕರಾರುಗಳಿಗೆ ಒಪ್ಪಿದಾಗ ಅವನ ತಮ್ಮ 'ಶಿವದೇವರಾಯ' ಅದನ್ನು ವಿರೋಧಿಸುತ್ತಾನೆ. ಇವರಿಬ್ಬರಲ್ಲಿ ಕಲಹ ಏರ್ಪಟ್ಟು ಮಹಾರಾಜ ಸೋತು ಅಲ್ಲಿಂದ ಅಪಾರ ಪ್ರಮಾಣದ ಚಿನ್ನವನ್ನು ತೆಗೆದುಕೊಂಡು, ಬಿಳಿಗಿರಿ ಬಿಟ್ಟು ಬರುವಾಗ ಅರ್ಧ ಚಿನ್ನವನ್ನು ಹೂತಿಟ್ಟು, ಅರ್ಧ ಚಿನ್ನವನ್ನು ಭೂಮಿಯಲ್ಲಿ ಕನಕಪುರಿಗೆ ತರುತ್ತಾನೆ. ಹಣ ಇರುವವರೆಗೆ ಇವನೊಂದಿಗೆ ಮೈತ್ರಿಯಿಂದಿದ್ದ ರಾಜ ಪರಿವಾರ ನಂತರ ಅವನೊಂದಿಗೆ ಮಧುರ ಸಂಬಂಧ ಹೊಂದಿರುವುದಿಲ್ಲ. ಇದರಿಂದಾಗಿ ಬಿಳಿಗಿರಿ ರಾಜ ಸತ್ತಾಗ ಅವನ ಹೆಣ ನೋಡಲು ಬಿಡುವುದಿಲ್ಲ ಎಂದು ಬಿಳಿಗಿರಿಯ ಭಂಟರು ಕನಕಪುರಿಯವರಿಗೆ ಹೇಳುತ್ತಾರೆ. ಆಗ ಶಿಖರಸೂರ್ಯ ಮಧ್ಯ ಪ್ರವೇಶಿಸಿ ಸಂಧಾನ ಏರ್ಪಡಿಸಿ ರಾಜ್ಯದಲ್ಲಿ ಗೌರವ ಪಡೆಯುತ್ತಾನೆ. ರಾಜ ಹೂತಿಟ್ಟ ಬಂಗಾರದ ಸುಳಿವು ಹಿಡಿದು ಅದನ್ನು ತರಲು ಹೋದ ಆದಿತ್ಯಪ್ರಭು ಬಂಗಾರ ತರುತ್ತಿರುವಾಗ, ಶಿಖರಸೂರ್ಯನ ಭಂಟರು ಆದಿತ್ಯಪ್ರಭುವಿನ ಸೈನಿಕರ ಕಣ್ಣು ತಪ್ಪಿಸಿ ಬಂಗಾರವನ್ನು ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಾರೆ. ತನ್ನಿಬ್ಬರು ಸೋದರಿಯರು ವಿಷಕನ್ಯೆಯರಾಗಲು ಮತ್ತು ತನ್ನ ಹೆಂಡತಿಯ ಸಾವಿಗೆ ರಾಜಪರಿವಾರವೇ ಕಾರಣವಾದ್ದರಿಂದ ಅವರ ಮೇಲಿನ ಸೇಡು ತೀರಿಸಿಕೊಳ್ಳಲು 'ಬದಿಯ' ಎಂಬ ಭಂಟ ರಾಜಕುಮಾರನನ್ನು ಅಪಹರಿಸುತ್ತಾನೆ. ರಾಜಕುಮಾರ ಅರಮನೆಯಲ್ಲಿಲ್ಲದ ಸುಳಿವು ತಿಳಿದ ಬಿಳಿಗಿರಿಯವರು 'ರಾಜಕುಮಾರ ತಮ್ಮ ಬಂಧನದಲ್ಲಿದ್ದಾನೆ. ಎಂಟು ಹಂಡೆಯಷ್ಟು ಚಿನ್ನ ಕೊಟ್ಟರೆ ಅವನನ್ನು ಬಿಡುವೆವು' ಎಂದು ಸುದ್ದಿ ಕಳಿಸುತ್ತಾರೆ.

ಶಿಖರಸೂರ್ಯ ಬಿಳಿಗಿರಿಯವರೊಂದಿಗೆ ಸಂಧಾನಮಾಡಲು ಸೂಕ್ತ ವ್ಯಕ್ತಿಯೆಂದು ಮಹಾರಾಣಿ ಅವನನ್ನು ಬಿಳಿಗಿರಿಗೆ ಕಳಿಸುತ್ತಾಳೆ. ತಮ್ಮ ಚಿಕ್ಕಮ್ಮಣ್ಣಿಯ ಅಳಿಯ ಎಂದು ಶಿಖರಸೂರ್ಯನನ್ನು ಬಿಳಿಗಿರಿಯ ಜನ ಗೌರವದಿಂದ ಕಾಣುತ್ತಾರೆ. ಜೊತೆಗೆ ಅಲ್ಲಿಯ ಕಣ್ಣುಕಾಣದ ಮಹಾರಾಣಿಗೆ ವೈದ್ಯಮಾಡಿ ಕಣ್ಣು ಬರೆಸಿ ಅವರ ವಿಶ್ವಾಸಕ್ಕೆ ಪಾತ್ರನಾಗುತ್ತಾನೆ. ಆದರೆ ಆದಿತ್ಯಪ್ರಭು ಅಲ್ಲಿಲ್ಲ, ಇದು ಕೇವಲ ತಾವು ಕಳೆದುಕೊಂಡ ಚಿನ್ನ ಮರಳಿ ಪಡೆಯಲು ಅವರು ಮಾಡಿದ ಉಪಾಯ ಎಂದು ತಿಳಿದ ಶಿಖರಸೂರ್ಯ ಬದಿಯನೆ ಅವನನ್ನು ಅಪಹರಿಸಿರಬಹುದೆಂದು ಯೋಚಿಸಿ ಸುಕ್ರನ ಮೂಲಕ ರಾಜಕುಮಾರನ ಪತ್ತೆ ಹಚ್ಚಿ ಅವನನ್ನು ಬಿಡಿಸಿಕೊಂಡು ಬಂದು ಮಹಾರಾಣಿಗೆ ಒಪ್ಪಿಸುತ್ತಾನೆ.

ಶಿಖರಸೂರ್ಯ ಮಗನನ್ನು ಬಿಡಿಸಿಕೊಂಡು ಬಂದಿದ್ದರಿಂದ ಮಹಾರಾಣಿಗೆ ಅವನ ಮೇಲೆ ವಿಶ್ವಾಸ, ಗೌರವ ಹೆಚ್ಚುತ್ತದೆ. ಬಂಧನದಿಂದ ಅನಾರೋಗ್ಯ ಪೀಡಿತನಾದ ಅವನನ್ನು ವಜ್ರದೇಹಿಯನ್ನಾಗಿ ಮಾಡಲು ಮಹಾರಾಣಿ ಮತ್ತು ಅರ್ಥಕೌಶಲ ಕೇಳಿಕೊಳ್ಳುತ್ತಾರೆ. ಒಪ್ಪಿದ ಶಿಖರಸೂರ್ಯ ತನ್ನ ಮಗನೇ ಮುಂದಿನ ರಾಜನಾಗಬೇಕೆಂಬ ಆಸೆಯಿಂದ ಪಥ್ಯಾಹಾರದ ಹೆಸರಲ್ಲಿ ಶಕ್ತಿವರ್ಧಕದ ಜೊತೆ ಕಾಮಾತಿಕಾಮದ ಮದ್ದು ನೀಡುತ್ತಾನೆ. ಬಿಳಿಗಿರಿರಾಜ ಹೂತಿಟ್ಟ ಬಂಗಾರವನ್ನು ಶಿಖರಸೂರ್ಯನ ಭಂಟರು ತಂದಾಗ ಅದನ್ನು ಮಹಾರಾಣಿ, ಆದಿತ್ಯಪ್ರಭು ಯಾರಿಗೂ ತಿಳಿಯದಂತೆ ಶಿಖರಸೂರ್ಯ ತನ್ನ ವೈದ್ಯಶಾಲೆಯಲ್ಲಿ ಬಚ್ಚಿಡುತ್ತಾನೆ. ಆದರೆ ಪ್ರಧಾನಿ ಅರ್ಥಕೌಶಲ ಇವನಿಗೆ ತಿಳಿಯದಂತೆ ಆ ಬಂಗಾರವನ್ನು ಅಪಹರಿಸಿ ತನ್ನ ಮನೆಯಲ್ಲಿ ಇಟ್ಟುಕೊಳ್ಳುತ್ತಾನೆ.

ರಾಜ್ಯದ ಮೊದಲಲ ವೈದ್ಯ ಚಂಡಿದಾಸ ಕನಕಪುರಿಗೆ ಬರುತ್ತಾನೆ. ಆತನು ಶಿವಪಾದನ ಶಿಷ್ಯನಾಗಿದ್ದು, ವಿಷವಿದ್ಯೆ ಕಲಿತು ಅನೇಕ ಹೆಣ್ಣು ಮಕ್ಕಳನ್ನು ವಿಷಕನ್ಯೆಯರನ್ನಾಗಿ ಮಾಡಿರುತ್ತಾನೆ. ತನಗೆ ದೇವದಾಸಿ ಗುಣಶೀಲೆಯಲ್ಲಿ ಜನಿಸಿದ ಸ್ವರ್ಣಲತೆ, ವಿದ್ಯುಲ್ಲತೆಯರನ್ನು ವಿಷಕನ್ಯೆಯರನ್ನಾಗಿ ಮಾಡಿರುತ್ತಾನೆ. ಚಿನ್ನವನ್ನು ತನ್ನ ಹತ್ತಿರ ಬರುವಂತೆ ಮಾಡುವ ವಿದ್ಯೆ ಅವನಿಗೆ ಗೊತ್ತಿರುತ್ತದೆ. ಇವನ ಹಿರಿಮಗಳನ್ನು ಬಿಳಿಗಿರಿರಾಜನನ್ನು ಕೊಲ್ಲಲು ಬಳಸಲಾಗಿತ್ತು. ಕಿರಿಮಗಳ ವಿಷದ ಪ್ರಮಾಣವನ್ನು ಕಡಿಮೆ ಮಾಡುವ ಕಾರ್ಯದಲ್ಲಿ ಶಿಖರಸೂರ್ಯ ತೊಡಗಿದ್ದ. ಚಂಡಿದಾಸ, ಶಿಖರಸೂರ್ಯ, ಅರ್ಥಕೌಶಲ ಊಟಕ್ಕೆ ಕುಳಿತಾಗ ಚಂಡಿದಾಸ 'ಅರ್ಥಕೌಶಲನ ಮನೆಯಲ್ಲಿ ಆರು ಹಂಡೆ ಚಿನ್ನವಿದೆ ಸಿಗದಿದ್ದರೆ ತಲೆದಂಡ ಕೊಡುತ್ತೇನೆ' ಎನ್ನುತ್ತಾನೆ. ತಾನು ಕಷ್ಟದಿಂದ ತಂದ ಚಿನ್ನ ಇವನ ವಶವಾದದ್ದನ್ನು ತಿಳಿದ ಶಿಖರಸೂರ್ಯ, ಅರಮನೆಗೆ ತೆರಳಿ ಆದಿತ್ಯಪ್ರಭುವಿಗೆ ಅರ್ಥಕೌಶಲನ ಮನೆಯಲ್ಲಿ ಅರಮನೆಯ ಚಿನ್ನವಿದೆ ಮತ್ತು ಈಗಲೇ ಹೋಗದಿದ್ದರೆ ಆತ ಅದನ್ನು ಬೇರೆಕಡೆ ಸಾಗಿಸುತ್ತಾನೆಂದು ತಿಳಿಸುತ್ತಾನೆ. ಚಿನ್ನ ಸಿಕ್ಕಾಗ ಕೋಪಗೊಂಡ ಆದಿತ್ಯಪ್ರಭು ಅವನಿಗೆ ಶಿಕ್ಷೆ ವಿಧಿಸಬೇಕೆನ್ನುವಷ್ಟರಲ್ಲಿಯೇ ಅರ್ಥಕೌಶಲ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ತನ್ನ ಚಿನ್ನ ಕದ್ದವನ ಮೇಲೆ ಖಜಾನಿ ಕದ್ದ ಆರೋಪ ಹೊರಿಸಿ ಅವನು ಸಾಯುವಂತೆ ಮಾಡುತ್ತಾನೆ ಶಿಖರಸೂರ್ಯ.

ಅರ್ಥಕೌಶಲನ ಮರಣದ ನಂತರ 'ಧನಪಾಲ' ಪ್ರಧಾನಿಯಾಗಿ ತನ್ನ ಮಗಳು 'ಗಜಲಕ್ಷ್ಮಿ'ಯನ್ನು ಯುವರಾಜನಿಗೆ ಕೊಟ್ಟು ಮದುವೆ ಮಾಡುತ್ತಾನೆ. ಯುವರಾಜ ವಿಲಾಸಿಯಾಗಿದ್ದರಿಂದ ಆಡಳಿತ ಧನಪಾಲನ ಕೈ ಸೇರುತ್ತದೆ. ಆತ ಅಸಮರ್ಥ ಆಡಳಿತ ನಡೆಸುತ್ತಾ, ಜನರ ಮೇಲೆ ಅಧಿಕ ತೆರಿಗೆ ವಿಧಿಸುತ್ತಾ ಆಡಳಿತ ನಡೆಸುತ್ತಾನೆ. ಇವನ ಆಡಳಿತದಲ್ಲಿ ಶಿಖರಸೂರ್ಯನನ್ನು ಅರಮನೆಯ ಹೊರಗಿನ ವ್ಯಕ್ತಿಯಂತೆ

ನೋಡಲಾಗುತ್ತದೆ. ಇಷ್ಟರಲ್ಲಾಗಲೇ ಮಗನನ್ನು ವಿದ್ಯಾಭ್ಯಾಸಕ್ಕೆ ಕಂಚಿಗೆ ಕಳಿಸಿದ್ದ ಶಿಖರಸೂರ್ಯ ಯಾವುದೇ ಅಧಿಕಾರವಿಲ್ಲದೇ ಇಲ್ಲಿರುವುದು ಸೂಕ್ತವಲ್ಲವೆಂದು ನಿರ್ಧರಿಸಿ ಹೆಂಡತಿ, ಮಗಳು ಮತ್ತು ಚಿಕ್ಕಮ್ಮಣ್ಣಿಯನ್ನು ಬಿಳಿಗಿರಿಯಲ್ಲಿ ಬಿಟ್ಟು ಸ್ವಲ್ಪದಿನ ಹದ್ದಿನಕೊಳ್ಳದಲ್ಲಿ ವಿದ್ಯುಲ್ಲತೆಯೊಂದಿಗೆ ಕಳೆಯುತ್ತಾನೆ. ನಂತರ ಗರುಡ ಬೆಟ್ಟಕ್ಕೆ ತೆರಳುತ್ತಾನೆ.

ಹದ್ದಿನಕೊಳ್ಳದಿಂದ ಮರೆಯಾದ ಶಿಖರಸೂರ್ಯ ಗರುಡಬೆಟ್ಟಕ್ಕೆ ತೆರಳುತ್ತಾನೆ. ಅಲ್ಲಿ ಶಿವಪಾದನ ಶಿಷ್ಯ ನಾಗಾರ್ಜುನನ ಹತ್ತಿರ ಹೋಗಿ ತನಗೆ 'ಧಾನ್ಯವನ್ನು ಚಿನ್ನ ಮಾಡುವ, ಹುಲ್ಲನ್ನು ಸೈನಿಕರನ್ನಾಗಿ ಮಾಡುವ ವಿದ್ಯೆಯನ್ನು ಕಲಿಸಿಕೊಡಬೇಕು' ಎಂದು ಕೇಳಿಕೊಳ್ಳುತ್ತಾನೆ. ನಾಗಾರ್ಜುನ 'ಶಿವಪಾದನಿಂದ ಕದ್ದು ನಾನು ವಿದ್ಯೆಯನ್ನು ಕಲಿತಿರುವೆ ನೀನು ನನ್ನಿಂದ ವಿದ್ಯೆಯನ್ನು ಕಲಿತರೆ ಅದರ ಜೊತೆಗೆ ಶಾಪಕ್ಕೂ ವಾರಸುದಾರನಾಗಬೇಕಾಗುತ್ತದೆ. ಇದು ಶಿವಪಾದ ನನಗೆ ಕೊಟ್ಟ ಶಾಪ. ಕದ್ದು ಕಲಿತ ವಿದ್ಯೆ ಅರ್ಹರಿಗೆ ದಾನ ಮಾಡುವವರೆಗೆ ಮುಕ್ತಿ ಇಲ್ಲ. ನಾನು ಮಾಡಿದ ತಪ್ಪಿಗಾಗಿ ಈಗ ಗರುಡನಂತಿದ್ದೇನೆ. ಈ ವಿದ್ಯೆ ಬಳಸಿದರೆ ಮನುಷ್ಯತ್ವ ಹೋಗುತ್ತದೆ. ಧಾನ್ಯ ಹುಲ್ಲಿನಿಂದ ನಮ್ಮ ವಿದ್ಯೆ ಬಳಸಿ ಮಾಡಿರುವ ಚಿನ್ನ ಸೈನಿಕರು ಶಾಶ್ವತವಲ್ಲ. ತಿರುಮಂತ್ರ ಹಾಕುವವರು ಬಂದರೆ ನಾವು ಸೃಷ್ಟಿಸಿದ್ದೆಲ್ಲವು ಮೂಲಸ್ಥಿತಿಗೆ ಮರಳುತ್ತದೆ.ಆಗ ನೀನು ಗರುಡ ಬೆಟ್ಟ ಹತ್ತಿ ಯಾರಿಗಾದರೂ ಕಾಯುತ್ತ ಕುಳಿತರಬೇಕಾಗುತ್ತದೆ. ನೀನು ಯಾರಿಗಾದರೂ ಅರ್ಹವ್ಯಕ್ತಿಗೆ ವಿದ್ಯೆ ಭೋದಿಸಿದಾಗ ಮಾತ್ರ ನಿನಗೆ ಮುಕ್ತಿ ಸಿಗುತ್ತದೆ', ಎಂದು ಬುದ್ಧಿ ಮಾತು ಹೇಳುತ್ತಾನೆ. ಆದರೆ ಶಿಖರಸೂರ್ಯ ಅವನ ಬುದ್ಧಿಮಾತು ಕೇಳದೆ ಧಾನ್ಯವನ್ನು ಚಿನ್ನಮಾಡುವ, ಹುಲ್ಲನ್ನು ಸೈನ್ಯ ಮಾಡುವ ಸೃಷ್ಟಿವಿರೋಧಿ ವಿದ್ಯೆಯನ್ನು ಅವನಿಂದ ಪಡೆಯುತ್ತಾನೆ. ಇವನಿಗೆ ವಿದ್ಯೆ ಭೋಧಿಸಿದ ನಾಗಾರ್ಜುನ ಶಾಪದಿಂದ ಮುಕ್ತಿ ಹೊಂದಿ ಗರುಡನಾಗಿ ಹಾರುತ್ತಾ ಹೋಗುತ್ತಾನೆ.

ಧಾನ್ಯದಿಂದ ಚಿನ್ನ ಮಾಡುವ, ಹುಲ್ಲಿನಿಂದ ಸೈನಿಕರನ್ನು ಮಾಡುವ ವಿದ್ಯೆ ಕಲಿತ ಶಿಖರಸೂರ್ಯ. ದೊಡ್ಡ ರಾಜ್ಯ ಕಟ್ಟಿ ಸಾಮ್ರಾಟನಾಗುವ ಆಸೆಯನ್ನು ಬೆಳೆಸಿಕೊಳ್ಳುತ್ತಾನೆ. ತನ್ನನ್ನು ಅಧಿಕಾರದಿಂದ ವಂಚಿತನನ್ನಾಗಿ ಮಾಡಿದ 'ಕನಕಪುರಿ'ಯ ವಿರುದ್ಧ ಸೇಡು ತೀರಿಸಿಕೊಂಡು ಅದನ್ನು ತನ್ನ ವಶಕ್ಕೆ ತೆಗೆದುಕೊಳ್ಳುವ ಆಸೆಯಿಂದ ಕನಕಪುರಿಗೆ ಬರುತ್ತಾನೆ. ಈ ವೇಳೆಗೆ ವಯಸ್ಸಾದ ರಾಣಿ, ವಿಲಾಸಿ ಯುವರಾಜ, ಅಸಮರ್ಥ ಪ್ರಧಾನಿಯಿಂದ 'ಕನಕಪುರಿ' ವಿನಾಶದ ಹಾದಿ ಹಿಡಿದಿರುತ್ತದೆ. ನಕಲಿ ಚಿನ್ನ ಸೈನಿಕರನ್ನು ಹೊತ್ತು ಬಂದ ಶಿಖರಸೂರ್ಯ ಅವುಗಳ ಮೂಲಕ ಗುಪ್ತಚಾರದಳದವರನ್ನು ತನ್ನ ವಶಮಾಡಿಕೊಂಡು ಯಾವುದೇ ಪ್ರತಿರೋಧವಿಲ್ಲದೆ ಕನಕಪುರಿ ಸೇರುತ್ತಾನೆ. ಪ್ರಧಾನಿ ತನಗೆ ಮತ್ತು ಮಹಾರಾಣಿಗೆ ವಿಷ ಹಾಕಿದ್ದನ್ನು ಗುಪ್ತಚಾರರಿಂದ ತಿಳಿದು ರಾಣಿಯನ್ನು ವಿಷದಿಂದ ಬದುಕಿಸುತ್ತಾನೆ. ವಿದ್ಯುಲ್ಲತೆಗಾಗಿ ವಿಷಪುರುಷನಾದ ಶಿಖರಸೂರ್ಯ ಮೋಹದಿಂದ ಮಹಾರಾಣಿಯನ್ನು ಸೇರಿ ಅವಳ ಸಾವಿಗೆ ಕಾರಣವಾಗುತ್ತಾನೆ. ತನ್ನ ರಾಜ್ಯದ ಎಲ್ಲ ಧಾನ್ಯವನ್ನು ತಂದು ಚಿನ್ನಮಾಡುವ ಕ್ರಿಯೆಯಲ್ಲಿ ತೊಡಗುತ್ತಾನೆ.

ಅತ್ತ ಶಿವಾಪುರದಲ್ಲಿ ಜಟ್ಟಿಗ ಸತ್ತ ನಂತರ ಬೆಳ್ಳಿ ಅಳುತ್ತಾ ಮಲಗಿದಾಗ ಮಗು ತೊಡೆಯ ಮೇಲಿದ್ದಂತೆ ಕನಸು ಕಾಣುತ್ತಾಳೆ. ಎದ್ದು ನೋಡಿದಾಗ ಅವಳ ತೊಡೆಯ ಮೇಲೆ ಮಗುವಿರುತ್ತದೆ. ಮಹಾರಾಣಿಯಿಂದ ತರುಣಚಂದ್ರನನ್ನು ಕೊಲ್ಲುವುದಕ್ಕಾಗಿ ಪಡೆದ ಬುಡಕಟ್ಟು ಮಹಿಳೆ ಅದನ್ನು ಕೊಲ್ಲದೆ ಆ ಮಗುವಿನ

ಮೂಲ ಹೇಳಿ ಅದನ್ನು ಮಗುವಿನ ಸುರಕ್ಷಿತತೆಯ ದೃಷ್ಟಿಯಿಂದ ಯಾರಿಗೂ ಹೇಳಬಾರದೆಂದು ಶಿವಪಾದನಿಗೆ ಹೇಳಿ ಆ ಮಗುವನ್ನು ಶಿವಪಾದನ ಹತ್ತಿರ ಕೊಟ್ಟು ಹೋಗಿರುತ್ತಾಳೆ. ಆ ಮಗುವನ್ನು ಶಿವಪಾದ 'ಇವನೇ ಮುಂದಿನ ಶಿವಪಾದ' ಎಂದು ಹೇಳಿ ಬೆಳ್ಳಿಗೆ ನೀಡುತ್ತಾನೆ. 'ನಿನ್ನಡಿ' ಎಂದು ಆ ಮಗುವಿಗೆ ಹೆಸರಿಟ್ಟು ಅದಕ್ಕೆ ವಿದ್ಯಾದಾನ ಮಾಡುತ್ತಾನೆ. ಧಾನ್ಯವನ್ನು ಚಿನ್ನ ಮಾಡುವ ವಿದ್ಯೆ ಕಲಿತು ಪ್ರಯೋಗಿಸಿದಾಗ 'ತಿನ್ನುವ ಅನ್ನವನ್ನು ಹಾಳು ಮಾಡುವ ಅದರಿಂದೇನು ಉಪಯೋಗ?' ಎಂದು ತಾಯಿ ಕೇಳಿದಾಗ, ಅರಿವು ಬೆಳಸಿಕೊಂಡ ನಿನ್ನಡಿ ಗುರುವಿನ ಹತ್ತಿರ ಅದನ್ನು ತ್ಯಾಗ ಮಾಡಿ ಚಿನ್ನವನ್ನು ಧಾನ್ಯಮಾಡುವ ವಿದ್ಯೆ ಕಲಿಯುತ್ತಾನೆ. ಶಿವಪಾದನಿಂದ ಎಲ್ಲ ವೈದ್ಯವಿದ್ಯೆಗಳನ್ನು ಕಲಿಯುತ್ತಾನೆ. ಶಿವಪಾದ ಅವನಿಗೆ ಮದುವೆಯಾಗಲು ಹೇಳಿ, ಐದು ಹಿಡಿ ಅಕ್ಕಿಯನ್ನು ಶೆಲ್ಯದಲ್ಲಿ ಕಟ್ಟಿ ಅದರಲ್ಲೇ ಅವನಿಗೆ ಹೊಟ್ಟೆ ತುಂಬ ಊಟ ಮಾಡಿಸುವ ಹೆಣ್ಣನ್ನು ಮದುವೆಯಾಗಲು ಹೇಳುತ್ತಾನೆ. ಅನೇಕ ದಿನ ಹುಡುಕಿದರೂ ಕರಾರು ಒಪ್ಪುವ ಹೆಣ್ಣು ಸಿಗದಾಗ, ಚಂಡಿದಾಸ ಅವನಿಗೆ ಶಿಖರಸೂರ್ಯನ ಮಗಳು 'ಗೌರಿ'ಯನ್ನು ತೋರಿಸುತ್ತಾನೆ. ಗೌರಿ ಕೇವಲ ಐದು ಹಿಡಿಯಲ್ಲಿ ಅಕ್ಕಿಯಲ್ಲಿ ಊಟ ಮಾಡಿಸಿ, 'ನಿನಗೆ ತಾಯಿ ಹಂಚಿ ಉಣ್ಣುವ ಪದ್ಧತಿಯನ್ನು ಕಲಿಸಿಲ್ಲವೇ?' ಎಂದು ಅವನನ್ನೇ ಪ್ರಶ್ನಿಸುತ್ತಾಳೆ. ನಿನ್ನಡಿ ಕನ್ಯೆಯನ್ನು ಒಪ್ಪುತ್ತಾನೆ. ಛಾಯಾವತಿಗೆ ಮನಸ್ಸಿರದಿದ್ದರೂ, ಆತನಿಗೆ ಕಾಲಲ್ಲಿ ಆರು ಬೆರಳು ಇದ್ದಿದ್ದರಿಂದ ಆತ ತನ್ನ ಮಗ ತರುಣಚಂದ್ರನಿರಬಹುದೆಂದು ಚಿಕ್ಕಮ್ಮಣ್ಣಿ, ತನ್ನ ಕನಸಿನಲ್ಲಿ ಬರುತ್ತಿದ್ದ ಹೋರಿ ಅವನ ಜೊತೆಯಲ್ಲಿದ್ದ ಭೈರನೇ ಆಗಿದ್ದರಿಂದ ಆತನೇ ನನ್ನ ಮಾವ ಎಂದು ಗೌರಿ ಈ ಮದುವೆಗೆ ಒಪ್ಪುತ್ತಾರೆ. ಶಿಖರಸೂರ್ಯ ಬಂದ ನಂತರ ನಿರ್ಧಾರ ತೆಗೆದುಕೊಳ್ಳೋಣವೆನ್ನುತ್ತಿರುವಾಗಲೇ ಶಿಖರಸೂರ್ಯ ಬಂದು ಅವರನ್ನು ಕನಕಪುರಿಗೆ ಕರೆಸಿಕೊಳ್ಳುತ್ತಾನೆ. ಇದೇ ವೇಳೆಗೆ ಕಂಚಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ರವಿಕೀರ್ತಿ ಅಲ್ಲಿ ವಾಸಂತಿಯನ್ನು ಪ್ರೀತಿಸಿ, ಶಿವಲಿಂಗದೇವರೆದುರು ಅವಳನ್ನು ಕೈಹಿಡಿದು, ಅವಳ ಗರ್ಭಿಣಿಯಾದವೇಳೆ ತಂಗಿಯ ನಿಶ್ಚಿತಾರ್ಥಕ್ಕಾಗಿ ಊರಿಗೆ ಬರುತ್ತಾನೆ.

ಸಾಮ್ರಾಟನಾದ ಶಿಖರಸೂರ್ಯ ತನ್ನ ಅಂತಸ್ತಿಗೆ ತಕ್ಕಂತೆ ಮಕ್ಕಳ ಮದುವೆ ಮಾಡಬೇಕೆಂದು ಬಯಸಿ, ಕಂಚಿಯ ಮಹಾರಾಜರೊಂದಿಗೆ ಸಂಬಂಧ ಬೆಳೆಸಿ ಮಕ್ಕಳ ಮದುವೆ ಮಾಡಲು ಮುಂದಾಗುತ್ತಾನೆ. ರವಿಕೀರ್ತಿ ವಾಸಂತಿಯನ್ನು ಪ್ರೀತಿಸುವ ವಿಷಯ ತಿಳಿದು ಅವರ ಮನೆಯವರನ್ನು ಕೊಲ್ಲಲು ಭಂಟರನ್ನು ಕಳಿಸುತ್ತಾನೆ. ಶಿಖರಸೂರ್ಯ ಮಗಳು ಗರ್ಭಿಣಿಯಾದ ವಿಷಯ ತಿಳಿದು ಅವಳಿಂದ ತನ್ನ ಗೌರವ ಕಡಿಮೆಯಾಗಬಾರದೆಂದು ಭಾವಿಸಿ ಮಗಳು ಕುಡಿಯುವ ಹಾಲಿನಲ್ಲಿ ವಿಷ ಹಾಕುತ್ತಾನೆ. ತಂದೆ ತನ್ನನ್ನು ಪ್ರೀತಿಸುವ ನಿನ್ನಡಿಯೊಂದಿಗೆ ಮದುವೆ ಮಾಡುವುದಿಲ್ಲ, ತನ್ನನ್ನು ಶಿವಾಪುರಕ್ಕೆ ಕಳಿಸುವುದಿಲ್ಲ ಎಂದು ತಿಳಿ ಗೌರಿ, ಶಿವಾಪುರಕ್ಕೆ ಪಾದಾಯಾತ್ರೆ ಹೊರಟ ಜೋಗ್ತಿಯರ ಜೊತೆ ಶಿವಾಪುರಕ್ಕೆ ಹೋಗುತ್ತಾಳೆ. ತಂದೆ ಹಾಕಿದ ವಿಷದಿಂದ ಹಾದಿಯಲ್ಲಿ ಹೊಟ್ಟೆನೋವಿನಿಂದ ನರಳಿದರೂ ಶಿವಾಪುರದ ಅಮ್ಮ ಜೋಗ್ತಿಯ ವೇಷದಲ್ಲಿ ಇವಳೊಂದಿಗೆ ಇರುವುದರಿಂದ ಮತ್ತು ಕೊನೆಗೆ ನಿನ್ನಡಿ, ಚಂಡಿದಾಸ ಅವಳ ವಿಷವನ್ನು ತೆಗೆದುದ್ದರಿಂದ ಗೌರಿ ನೆಮ್ಮದಿಯಿಂದ ಶಿವಾಪುರ ಸೇರುತ್ತಾಳೆ. ಶಿವಪಾದ ಇವರಿಬ್ಬರ ಮದುವೆ ನೆರವೇರಿಸಿ ಸಮಾಧ್ಯಸ್ಥನಾಗುತ್ತಾನೆ. ಸುತ್ತಮುತ್ತಲಿನ ಎಲ್ಲ ಜನ ಧಾನ್ಯ ತಂದುಕೊಟ್ಟಿದ್ದರಿಂದ ಯಾವ ತೊಂದರೆ ಇಲ್ಲದೆ ಜಾತ್ರೆ ನೆರವೇರುತ್ತದೆ.

ಮಗಳನ್ನು ಹುಡುಕಿದರೂ ಸಿಗದಾಗ, ಇದಕ್ಕೆಲ್ಲ ನಿನ್ನಡಿಯೇ ಕಾರಣ ಎಂದು ಭಾವಿಸಿ ತನ್ನಲ್ಲಿ ಧಾನ್ಯದ ಕೊರತೆ ಇರುವಾಗ ಶಿವಾಪುರದಲ್ಲಿ ಅಪಾರವಾದ ಧಾನ್ಯದ ರಾಶಿಯಿದೆ. ತನ್ನ ವೈರಿ ಹತ್ತಿರ ಚಂಡಿದಾಸ ಗುಣಾಧಿತ್ಯನ ಮಗ ತರುಣಚಂದ್ರನೇ ನಿನ್ನಡಿ ಎಂದು ಹೇಳಿದ್ದರಿಂದ, ಈತ ಮುಂದೆ ತನ್ನ ಮಹಾರಾಜನ ಸ್ಥಾನಕ್ಕೆ ಕಂಟಕನಾಗಬಹುದು ಆದ್ದರಿಂದ ಅವನನ್ನು ಮತ್ತು ಅವನಿಗೆ ಆಶ್ರಯಕೊಟ್ಟ ಶಿವಾಪುರವನ್ನು ನಾಶಗೊಳಿಸಬೇಕು ಮತ್ತು ಶಿವಾಪುರದಲ್ಲಿರುವ ಬಂಗಾರದ ಬೆಟ್ಟವನ್ನು ತನ್ನ ಕೈ ವಶಮಾಡಿಕೊಳ್ಳಬೇಕೆಂದು ತನ್ನ ಧಾನ್ಯದ ಚಿನ್ನ, ಹುಲ್ಲಿನ ಸೈನಿಕರ ಜೊತೆ ಶಿಖರಸೂರ್ಯ ಶಿವಾಪುರಕ್ಕೆ ತೆರಳುತ್ತಾನೆ. ಶಿವಾಪುರದಲ್ಲಿ ಕುರುಮುನಿ ಹುಲ್ಲನ್ನು ಸೈನಿಕರನ್ನಾಗಿ ಮಾಡಿ ಶಿಖರಸೂರ್ಯನ ಎದುರು ನಿಲ್ಲಿಸಿದರೆ, ನಿನ್ನಡಿ ಚಿನ್ನವನ್ನು ಧಾನ್ಯವನ್ನಾಗಿ ಮಾಡುವ, ಸೈನಿಕರನ್ನು ಹುಲ್ಲನ್ನಾಗಿ ಮಾಡುವ ಪ್ರಕೃತಿಪೂರಕ ವಿದ್ಯೆಯನ್ನು ಬಳಸಿ ಅವನ ಚಿನ್ನ, ಸೈನಿಕರನ್ನು ಮೂಲಸ್ವರೂಪಕ್ಕೆ ತರುತ್ತಾನೆ. ಚಿನ್ನ, ಸೈನಿಕರನ್ನು ಕಳೆದುಕೊಂಡ ಶಿಖರಸೂರ್ಯ ಮಹಾರಾಜ, ನಿನ್ನಡಿಯಂತಹ ಒಬ್ಬ ಸಾಮಾನ್ಯ ಪುರುಷನನ್ನು ಎದುರಿಸಲಾರದೆ ಕನಕಪುರಿಗೆ ಮರಳುತ್ತಾನೆ. ಇಲ್ಲಿ ಶಿಖರಸೂರ್ಯನ ಅಧಿಕಾರ, ಸಾಮ್ರಾಜ್ಯ, ಅಹಂಕಾರ ನಿನ್ನಡಿಯಂತಹ ಮಾನವೀಯಗುಣದ ವ್ಯಕ್ತಿಯ ಮುಂದೆ ಸೋಲನ್ನನುಭವಿಸುತ್ತದೆ.

ಶಿಖರಸೂರ್ಯ 'ಕನಕಪುರಿ'ಗೆ ಮರಳುವ ವೇಳೆಗೆ ಅಲ್ಲಿಯ ಪರಿಸ್ಥಿತಿ ಶೋಚನೀಯವಾಗಿರುತ್ತದೆ. 'ಕನಕಪುರಿ' ಸಾಮ್ರಾಜ್ಯದಲ್ಲಿ ಚಿನ್ನವೆಲ್ಲ ಧಾನ್ಯವಾಗಿ, ಸೈನಿಕರು ಹುಲ್ಲಾಗಿ ಪರಿವರ್ತನೆಯಾಗಿರುತ್ತಾರೆ. ವರ್ತಕರು ತಮಗಾದ ಮೋಸದಿಂದ ರಾಜನ ಮೇಲೆ ಕುಪಿತರಾಗುತ್ತಾರೆ. ಬಡವರು ಉಣ್ಣಲು ಅನ್ನವಿಲ್ಲದೆ ತತ್ತರಿಸಿರುತ್ತಾರೆ. ರಾಜನಿಲ್ಲದೆ ರಾಜ್ಯ ಕಳ್ಳಕಾಕರಿಗೆ, ದರೋಡೆಕೋರರಿಗೆ ಅನುಕೂಲವಾಗಿ ಪರಿಣಮಿಸಿ ಅವರು ಕಳ್ಳತನ ಮಾಡುವುದರೊಂದಿಗೆ ಕಳ್ಳತನ ಮಾಡಿದ ಮನೆಗಳಿಗೆ ಬೆಂಕಿ ಹಚ್ಚಿಹೋಗತೊಡಗಿರುತ್ತಾರೆ. ಇದರಿಂದಾಗಿ ಮನೆಗಳು ಸುಟ್ಟು ಅನೇಕ ಜನರು ಸಾಯುತ್ತಾರೆ. ಅರಮನೆಯಲ್ಲಿರುವ ಧಾನ್ಯವನ್ನು ಜನಸಾಮಾನ್ಯರೊಂದಿಗೆ ಅರಮನೆಯ ಕಾವಲು ಭಟರು ಕದಿಯತೊಡಗುತ್ತಾರೆ. ವಾಸಂತಿ ಸತ್ತ ವಿಷಯ ತಿಳಿದ ರವಿಕೀರ್ತಿ ಹುಚ್ಚನಾಗಿ ಅಲೆಯುತ್ತಾ ಬಂದು ವಿಷಕನ್ಯೆ ವಿದ್ಯುಲ್ಲತೆಯನ್ನು ಕೂಡಿ ಅವಳ ವಿಷದಿಂದ ಸಾಯುತ್ತಾನೆ. ವಿದ್ಯುಲ್ಲತೆ ತಾನೇ ಇದಕ್ಕೆ ಕಾರಣವೆಂದು ತಿಳಿದು ಬಾವಿಗೆ ಹಾರಿ ಸಾಯುತ್ತಾಳೆ. ಮಗ ಸತ್ತ ಸುದ್ದಿ ತಿಳಿದ ಛಾಯಾವತಿ ಎದೆಯೊಡೆದು ಸಾಯುತ್ತಾಳೆ. ಚಿಕ್ಕಮ್ಮಣ್ಣಿ ಹುಚ್ಚಿಯಾಗುತ್ತಾಳೆ. ಇದೇ ವೇಳೆಗೆ ಊರಲ್ಲಿ ಮಾರಕ ರೋಗ ಹರಡಿ ಜನಗಳು ಸಾಯಲು ಪ್ರಾರಂಭಿಸುತ್ತಾರೆ. ರಾಜ್ಯದಲ್ಲಿ ರಾಜನಿಲ್ಲದ್ದರಿಂದ ರೋಗದ ಬಗ್ಗೆ ಯಾವುದೇ ನಿರ್ಧಾರ ತೆಗೆದುಕೊಳ್ಳಲಾಗದ್ದರಿಂದ ಸಾವಿನ ಸಂಖ್ಯೆ ಹೆಚ್ಚಿ ಬೀದಿ ಬೀದಿಗೆ ಹೆಣ ಬೀಳುತ್ತವೆ. ಇಡೀ ಕನಕಪುರಿ ಹುಲ್ಲಾದ ಸೈನಿಕರು, ಸುಟ್ಟಮನೆಗಳು, ರೋಗದಿಂದ ಸತ್ತ ಹೆಣಗಳಿಂದ ದುರ್ನಾತ ಬೀರುತ್ತಿರುತ್ತದೆ. ಇಂತಹ ವೇಳೆ ಅರಮನೆ ಪ್ರವೇಶಿಸಿದ ಶಿಖರಸೂರ್ಯ ಅಲ್ಲಿಯ ಚಿನ್ನ ಮಾಯಾವಾದದ್ದನ್ನು ನೋಡಿ ಅರಮನೆ ಹೊಕ್ಕು ಬಾಗಿಲು ಹಾಕಿಕೊಳ್ಳುತ್ತಾನೆ.

'ಕನಕಪುರಿ'ಯಲ್ಲಿ ರೋಗ ಹರಡಿದ ಸುದ್ದಿ ತಿಳಿದ ನಿನ್ನಡಿ ರೋಗಕ್ಕೆ ಚಿಕಿತ್ಸೆ ನೀಡಲು ಚಂಡಿದಾಸ ಮತ್ತು ಕುರುಮುನಿಯನ್ನು ಕೂಡಿಕೊಂಡು ಬರುತ್ತಾನೆ. ಇಲ್ಲಿಯ ರೋಗ ಮತ್ತು ಆಹಾರದ ಕೊರತೆಯಿಂದ ಅಪಾರ ಜನ ರಾಜ್ಯ ಬಿಟ್ಟು ತೆರಳಿರುತ್ತಾರೆ. ವಯಸ್ಸಾದವರು, ರೋಗಿಷ್ಟರು ಮತ್ತು ಹೆಣಗಳು ಮಾತ್ರ ಅಲ್ಲಿರುತ್ತವೆ. ಗ್ರಾಮಸ್ವಚ್ಛಗೊಳಿಸುವ ಕಾರ್ಯಕ್ಕೆ ಮುಂದಾದ ಮೂವರು ಮೊದಲು ಹೆಣಗಳನ್ನು ತಂದು

ಕೂಡಿ ಹಾಕಿ ಸುಡುತ್ತಾರೆ. ನಂತರ ಕುರುಮುನಿ ಗಂಜಿವ್ಯವಸ್ಥೆ ಮಾಡಿದರೆ, ಚಂಡಿದಾಸ ಕಾಡಿಗೆ ಹೋಗಿ ಸೊಪ್ಪು ತಂದು ಜನರಿಗೆ ಮದ್ದು ನೀಡುತ್ತಾನೆ. ನಿನ್ನಡಿ ಎಲ್ಲ ಹೆಣಗಳನ್ನು ಸುಟ್ಟು ಗ್ರಾಮಸ್ವಚ್ಛಗೊಳಿಸುತ್ತಾನೆ. ಇವರ ಕೆಲಸವನ್ನು ಮೊದಲು ನಿಂತು ನೋಡಿದ ಜನ ನಂತರ ಇವರ ಜೊತೆ ಕೈಜೋಡಿಸುತ್ತಾರೆ. ಇದರಿಂದ ರಾಜ್ಯದ ರೋಗ ನಿಯಂತ್ರಣಕ್ಕೆ ಬರುತ್ತದೆ.

ಜನತೆಯ ಈ ಪರಿಸ್ಥಿತಿಗೆ ಕಾರಣವಾದ ರಾಜ ಅರಮನೆಯಲ್ಲಿರುವುದನ್ನು ತಿಳಿದ ಜನ ಅರಮನೆಗೆ ಮುತ್ತಿಗೆ ಹಾಕುತ್ತಾರೆ. ಧಾನ್ಯವನ್ನು ಕೊಡು ಎಂದು ಪೀಡಿಸುತ್ತಾರೆ. ಆದರೆ ರಾಜ ಬಾಗಿಲು ತೆಗೆದು ಹೊರಬರುವುದಿಲ್ಲ. ಬದಲಾಗಿ 'ನಿನ್ನಡಿಯನ್ನು ಇಲ್ಲಿ ಯಾರು ಬಾ ಎಂದು ಕರೆಸಿದ್ದಾರೆ' ಎಂದು ನಿನ್ನಡಿಯನ್ನೇ ಬಯ್ಯುತ್ತಾನೆ. ನಿನ್ನಡಿಯಿಂದ ಉಪಕಾರ ಪಡೆದ ಜನ ಅವನ ಪರ ವಾದಿಸುತ್ತಾರೆ. ಆದರೂ ರಾಜ ಅವನನ್ನು ಬಯ್ಯುತ್ತಾ ಅರಮನೆಯಿಂದ ಹೊರಬರದಾದಾಗ ಗಾಜು ಒಡೆದು ಜನ ಅರಮನೆಯೊಳಗೆ ನುಗ್ಗುತ್ತಾರೆ. ಇವರಿಂದ ತಪ್ಪಿಸಿಕೊಳ್ಳಲು ಶಿಖರಸೂರ್ಯ ಒಡ್ಡೋಲಗದ ಮೇಲಿನ ಗೋಪುರವನ್ನು ಹತ್ತಿ ಅದರ ಕಳಸವನ್ನು ತಬ್ಬಿಕೊಂಡು ನಿಲ್ಲುತ್ತಾನೆ. ಇಳಿಯಲು ಸಾಧ್ಯವಾಗದಾಗ ಮುಳುಗುವ ಸೂರ್ಯನನ್ನು ನೋಡುತ್ತ ನಿಂತಾಗ ಗುರು ನಾಗಾರ್ಜುನ ಕರಿಹುಡುಗನ ರೂಪದಲ್ಲಿ ಪ್ರತ್ಯಕ್ಷನಾಗಿ 'ಮಹಾರಾಜನಾಗಿ ದರ್ಪದಿಂದ ಮೆರೆದು ಈಗ ಪ್ರಜೆಗಳ ಎದುರು ಹಾಸ್ಯಾಸ್ಪದನಾಗಿ ಕಳಸ ತಬ್ಬಿಕೊಂಡು ನಿಂತಿದ್ದೀಯಾ, ಇಲ್ಲಿ ನಿನ್ನನ್ನು ಉಳಿಸಿಕೊಳ್ಳುವವರು ಯಾರೂ ಇಲ್ಲ. ನಿನಗೆ ಕೆಳಗಿಳಿಯಲು ಸಾಧ್ಯವಿಲ್ಲ. ಉಳಿದಿರುವುದೊಂದೇ ದಾರಿ ಕೈಬಿಟ್ಟು ಗೋಪುರದಿಂದ ಹಾರು ಎನ್ನುತ್ತಾನೆ. ಶಿಖರಸೂರ್ಯ ಕೈಬಿಟ್ಟು ಹಾರುತ್ತಾನೆ. ಕೆಳಗಿನ ಜನ ಕೆಳಗೆ ಬಿದ್ದು ಸಾಯುತ್ತಾನೆ ಎಂದು ಕಾಯುತ್ತಿರುವಾಗ ಶಿಖರಸೂರ್ಯ ಹದ್ದಾಗಿ ಹಾರಿ ಹೋಗುತ್ತಾನೆ. ಹದ್ದಿನ ಹಾಗೆ ಹಾರುತ್ತಾ ಸಂತೋಷ ಪಡುವಾಗ ನಾಗಾರ್ಜುನ 'ನೀನು ಮತ್ತೊಬ್ಬರಿಗೆ ಈ ವಿದ್ಯೆ ಕಲಿಸುವವರೆಗೆ ಹದ್ದಾಗಿ ಇದೇ ಗರುಡ ಬೆಟ್ಟದಲ್ಲಿ ಒಂಟಿಯಾಗಿ ವಾಸವಾಗಿರುತ್ತಿ' ಎಂದು ಹೇಳಿದ ಮಾತು ನೆನಪು ಬಂದು ಹದ್ದಿನ ಕೊಳ್ಳದ ಹತ್ತಿರದ ಗರುಡ ಬೆಟ್ಟದತ್ತ ಶಿಖರಸೂರ್ಯ ಹದ್ದಾಗಿ ಹಾರುತ್ತಾ ಹೋದರೆ, ಇತ್ತ ನಿನ್ನಡಿ ಮಗುವಿಗಾಗಿ ಅಳುತ್ತಾ ಹಸಿವಿನಿಂದ ಬಳಲಿ ಊಟಕ್ಕೆ ಹಂಬಲಿಸುತ್ತಿರುವ ತನ್ನ ತಾಯಿಯನ್ನು ಊಟಕ್ಕೆ ಕರೆದುಕೊಂಡು ಹೋಗುತ್ತಾನೆ. ಜನರಿಂದ ಧಾನ್ಯ ಕಿತ್ತು ಚಿನ್ನ ಮಾಡಿದ ಶಿಖರಸೂರ್ಯ ಹದ್ದಾದರೆ, ಚಿನ್ನವನ್ನು ಧಾನ್ಯವನ್ನಾಗಿ, ಸೈನಿಕರನ್ನು ಹುಲ್ಲಾಗಿಸಿ ಜನದನಗಳ ಅನ್ನದ ಕೊರತೆಯನ್ನು ನೀಗಿಸುವ ಕಾರ್ಯ ಮಾಡಿದ ನಿನ್ನಡಿ ಅನ್ನ ನೀಡಿ ಪೊರೆಯುವ ತಾಯಿಗೆ ಅನ್ನ ನೀಡುವ ಮೂಲಕ ಮರುಸೃಷ್ಟಿಯ ಕಾರ್ಯಕ್ಕೆ ಮುನ್ನಡೆಯುತ್ತಾನೆ.

ಆಸೆ ಅತಿಯಾಸೆಯಾದರೆ ಅದು ಹೇಗೆ ನಮ್ಮ ಅವನತಿಗೆ ಕಾರಣವಾಗುತ್ತದೆಂಬುದನ್ನು 'ಶಿಖರಸೂರ್ಯ' ಕಾದಂಬರಿ ತಿಳಿಸುತ್ತದೆ. ಜಾಗತೀಕರಣದ ಪ್ರಭಾವದಿಂದ ಮನುಷ್ಯ ಉಪಭೋಗಿಯಾಗಿ ತನ್ನ ಅವನತಿಯನ್ನು ತಾನೇ ತಂದುಕೊಳ್ಳುತ್ತಿರುವ ಭಾರತದ ಸಮಕಾಲೀನ ಪರಿಸ್ಥಿತಿಯ ಯಥಾವತ್ ಚಿತ್ರಣವನ್ನು ನಾವಿಲ್ಲಿ ಕಾಣಬಹುದು.

* * *

ಅಧ್ಯಾಯ ೫

ಕಂಬಾರರ ಕಾದಂಬರಿಗಳಲ್ಲಿ ತಾಯ್ತನದ ನೆಲೆಗಳು

ಈ ಜಗತ್ತನ್ನು ಸೃಷ್ಟಿಮಾಡಿದ ದೇವರು, ಜಗತ್ತಿನಲ್ಲಿರುವ ಎಲ್ಲ ಜೀವ ಜಂತುಗಳನ್ನು ಪಾಲನೆ, ಪೋಷಣೆ ಮಾಡುವ ಜವಾಬ್ದಾರಿ ತನ್ನೊಬ್ಬನಿಂದಲೇ ನಿರ್ವಹಿಸಲು ಸಾಧ್ಯವಿಲ್ಲದಾಗ, ಪ್ರೀತಿ, ವಾತ್ಸಲ್ಯ, ಮಮತೆ, ತ್ಯಾಗ, ಸಹನೆ ಮುಂತಾದ 'ಸದ್ಗುಣಗಳ ಖನಿ'ಯಾದ 'ತಾಯಿಯನ್ನು ಸೃಷ್ಟಿ ಮಾಡಿ ಭೂಮಿಗೆ ಕಳುಹಿಸಿದ. ಹೀಗೆ ಜಗತ್ತಿನ ಜೀವಜಂತುಗಳ ಪಾಲನೆ, ಪೋಷಣೆ, ರಕ್ಷಣೆಗಾಗಿ ಸೃಷ್ಟಿಯಾದ ಇಂತಹ ತಾಯಿಗೆ ನಮ್ಮ ಸಂಸ್ಕೃತಿಯಲ್ಲಿ ಪೂಜ್ಯನೀಯ, ಸ್ಥಾನವನ್ನು ನೀಡಿ ಗೌರವಿಸಲಾಗುತ್ತದೆ.

ನಮ್ಮ ರಕ್ಷಣೆಗಾಗಿ ತಾಯಿಯನ್ನು ಸೃಷ್ಟಿಸಿದ ದೇವರು ನಮಗೆ ಕಾಲ ಕಾಲಕ್ಕೆ ಮಳೆ–ಬೆಳೆಗಳನ್ನು ನೀಡಿ ಪ್ರಾಕೃತಿಕ ಸಮತೋಲನ ಕಾಪಾಡಿ, ಪಾಕೃತಿಕ ವಿಕೋಪಗಳಿಂದ ರಕ್ಷಿಸಿ, ನಮ್ಮ ಜೀವನಾವಶ್ಯಕ ವಸ್ತುಗಳನ್ನು ಪೂರೈಸಿ, ತಾಯಿಯಂತೆ ನಮ್ಮ ರಕ್ಷಣೆ ಮಾಡುತ್ತಿದ್ದಾನೆ. ಹೀಗೆ ನಮ್ಮನ್ನು ರಕ್ಷಿಸುವ ದೇವರೊಂದಿಗೆ ಭಾವನಾತ್ಮಕ ಸಂಬಂಧಗಳನ್ನು ಬೆಳೆಸಿಕೊಂಡ ಜನಪದರು ಅವರಿಗೆ ಮಾನವೀಯ ರೂಪ ಕೊಟ್ಟು ಅವರನ್ನು ಗುರುತಿಸುವುದು 'ತಾಯಿ'ಯಂತೆಯೇ. ಹಾಗೆಯೇ ನಿಸರ್ಗದಲ್ಲಿರುವ ಭೂಮಿ, ಆಕಾಶ, ಸೂರ್ಯ, ಚಂದ್ರ, ಗಿಡ, ಮರಗಳು, ಪ್ರಾಣಿಪಕ್ಷಿಗಳು ಮನುಷ್ಯನಿಗೆ ಬೇಕಾದ ಅನ್ನ, ನೀರು, ಗಾಳಿ, ಬೆಳಕು ನೀಡಿ ನಮ್ಮನ್ನು ರಕ್ಷಿಸುತ್ತವೆ. ಮೊದಲು ನಿಸರ್ಗ ವಿಕೋಪಗಳಾದ ಪ್ರವಾಹ, ಜ್ವಾಲಾಮುಖಿ, ಭೂಕಂಪ, ಬಿರುಗಾಳಿಗಳಿಂದ ಬೆದರಿದ ಮನುಷ್ಯರು ಅವುಗಳಿಂದ ರಕ್ಷಣೆ ಪಡೆಯಲು ನಿಸರ್ಗಕ್ಕೆ ದೈವೀಸ್ಥಾನವನ್ನು ನೀಡಿದ್ದಾರೆ. ಅಲ್ಲದೇ ನಿಸರ್ಗದಲ್ಲಿರುವ ಈ ಪಾಲಕ, ರಕ್ಷಕ ಗುಣಗಳಿಂದ ತಾಯಿಸ್ಥಾನವನ್ನು ನೀಡಿದ್ದಾರೆ. ಮನೆಯೊಳಗಡೆ ತಾಯಿ ನಮ್ಮನ್ನು ರಕ್ಷಿಸಿದರೆ ಮನೆಬಿಟ್ಟು ಹೊರಬಂದ ನಮ್ಮನ್ನು ಪ್ರೀತಿ, ವಿಶ್ವಾಸದಿಂದ ಕಂಡು, ಅನುತನುಗಳನ್ನು ಕೇಳಿ ಕಷ್ಟ ಸುಖಗಳಲ್ಲಿ ಭಾಗಿಯಾಗಿ, ಸಹಾಯ ಸಹಕಾರಗಳನ್ನು ನೀಡಿ ನಮ್ಮನ್ನು ತಾಯಿಯಂತೆ ರಕ್ಷಣೆ ಮಾಡುವುದು ಸಮಾಜ. ತಾಯಿಯಂತೆ ರಕ್ಷಣೆ ಮಾಡುವ ಸಮಾಜವನ್ನು ನಮ್ಮ ಸಂಸ್ಕೃತಿ 'ದೈವ' ಎಂದು ಕರೆದು ಅದಕ್ಕೆ ದೇವರ ಹಾಗೂ ತಾಯಿಸ್ಥಾನವನ್ನು ನೀಡಿ ಗೌರವಿಸುತ್ತದೆ. ಹೀಗಾಗಿ ನಮ್ಮ ಜನಪದ ಸಂಸ್ಕೃತಿಯಲ್ಲಿ ನಮ್ಮನ್ನು ಸಲಹುವ ದೇವರು, ನಿಸರ್ಗ, ಸಮಾಜ ಎಲ್ಲಕ್ಕೂ ತಾಯಿಯ ಸ್ಥಾನ ಗೌರವಗಳಿವೆ.

ಚಂದ್ರಶೇಖರ ಕಂಬಾರರ ಕಾದಂಬರಿಗಳಲ್ಲಿಯೂ ಸಹ ದೇವರು, ನಿಸರ್ಗ ಹಾಗೂ ಸಮಾಜಗಳು ತಾಯಿ ಸ್ಥಾನಪಡೆದು, ಸಲಹುವ ಹಾಗೂ ಕಾಪಾಡುವ ಕಾರ್ಯವನ್ನು ಮಾಡುತ್ತವೆ. ಕಂಬಾರರ

ಕಾದಂಬರಿಗಳಲ್ಲಿ 'ತಾಯಿಸಂಸ್ಕೃತಿ'ಯನ್ನು ಅಧ್ಯಯನ ಮಾಡುವಾಗ ದೈವಿ ನೆಲೆಗಳು, ಪ್ರಾಕೃತಿಕ ನೆಲೆಗಳು, ಮನುಷ್ಯ ನೆಲೆಗಳೆಂದು ವಿಭಾಗಿಸಿ ತಾಯ್ತನದ ನೆಲೆಗಳನ್ನು ಕುರಿತು ಚರ್ಚಿಸಲಾಗಿದೆ

೫.೧ ದೈವಿ ನೆಲೆಗಳು

ನಮ್ಮ ಸಂಸ್ಕೃತಿಯೊಳಗಡೆ ದೇವರಿಗೆ ಪೂಜ್ಯನೀಯ ಸ್ಥಾನ ಕೊಟ್ಟು ದೇವರುಗಳನ್ನು ಕೇವಲ ಭಕ್ತಿ ಆರಾಧನಾ ಭಾವಗಳಿಂದ ನೋಡುವುದಕ್ಕಿಂತ ಹೆಚ್ಚಾಗಿ, ದೇವರುಗಳೊಂದಿಗೆ ಭಾವನಾತ್ಮಕ ಸಂಬಂಧಗಳನ್ನು ಬೆಳೆಸಿಕೊಂಡು ಅವರನ್ನು ಕುಟುಂಬದ ಸದಸ್ಯರಂತೆ ಕಾಣುವುದೇ ಹೆಚ್ಚು. ನಮಗೆ ಸಂತೋಷವಾದಾಗ ಅವರನ್ನು ಹಾಡಿ, ಕೊಂಡಾಡಿ, ಕೃತಜ್ಞತೆಯಿಂದ ಸ್ಮರಿಸಿ ಪೂಜೆ ಸಲ್ಲಿಸಿದರೆ, ನಮಗೆ ಕಷ್ಟಗಳು ಬಂದಾಗ ಅದಕ್ಕೆ ಪರಿಹಾರ ಒದಗಿಸು ಎಂದು ಅವರನ್ನು ಬೇಡಿಕೊಂಡು ಹರಕೆ ಹೊರುತ್ತೇವೆ. ಅದಕ್ಕೆ ಪರಿಹಾರ ದೊರೆಯದಿದ್ದರೆ ಕುಟುಂಬದ ಹಿರಿಯರೊಂದಿಗೆ ಸಣ್ಣಮಕ್ಕಳು ಹಠಮಾಡಿ ಕೋಪಗೊಳ್ಳುವಂತೆ, ಮುನಿಸಿಕೊಳ್ಳುವಂತೆ ದೇವರುಗಳೊಂದಿಗೆ ಮುನಿಸಿಕೊಳ್ಳುತ್ತೇವೆ. ಒಳ್ಳೆಯದನ್ನು ಮಾಡು ಎಂದು ತಂದೆತಾಯಿಯರನ್ನು ಕಾಡಿ, ಬೇಡುವಂತೆ ದೇವರುಗಳನ್ನು ಕಾಡಿ ಬೇಡುತ್ತೇವೆ. ಇನ್ನು ನಾವು ದೇವರುಗಳನ್ನು ಸಂಭೋಧಿಸುವುದು ನಮ್ಮ ಕುಟುಂಬದ ಹಿರಿಯರನ್ನು ಸಂಭೋಧಿಸುವ ಅಜ್ಜ, ಅಜ್ಜಿ, ಅಪ್ಪ, ಅಮ್ಮ, ಆಯಿ, ತಾಯಿ ಎಂಬ ಭಾವನಾತ್ಮಕ ಸಂಬಂಧ ಸೂಚಕ ಪದಗಳ ಮೂಲಕ. ಅಂದರೆ ಕುಟುಂಬದ ಯಜಮಾನರು ಹೇಗೆ ಕುಟುಂಬದ ಅಗತ್ಯಗಳನ್ನು ಪೂರೈಸುವ, ಕುಟುಂಬ ಪೋಷಿಸುವ, ರಕ್ಷಿಸುವ ಜವಾಬ್ಧಾರಿಯನ್ನು ನಿರ್ವಹಿಸುತ್ತಾರೋ ಹಾಗೆಯೇ ದೇವರುಗಳು ತಮ್ಮನ್ನು ನಂಬಿರುವ ಜನ, ಕುಟುಂಬ, ಸಮಾಜ, ಗ್ರಾಮಗಳ ಅಗತ್ಯ ಪೂರೈಸುವ, ಪೋಷಿಸುವ, ರಕ್ಷಿಸುವ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆಂಬ ಭಾವನೆ ನಮ್ಮದು. ಹೀಗಾಗಿ ನಮ್ಮ ಸಂಸ್ಕೃತಿಯೊಳಗಡೆ ದೇವರಿಗೆ ಅಗ್ರಸ್ಥಾನ. ಇಂತಹ ಸಂಸ್ಕೃತಿಯೊಳಗಡೆ ಹುಟ್ಟಿ ಬೆಳೆದ ಕಂಬಾರರು ತಮ್ಮ ಸಾಹಿತ್ಯದಲ್ಲಿ ದೇವರಿಗೆ ಪಾಲನೆ ಮಾಡುವ, ಪೋಷಿಸುವ, ರಕ್ಷಿಸುವ ತಾಯಿಸ್ಥಾನ ನೀಡಿ ದೇವರನ್ನು 'ತಾಯ್ತನದ ನೆಲೆ'ಯೊಂದಿಗೆ ಸಮೀಕರಿಸಿದ್ದಾರೆ.

'ದ್ರಾವಿಡ ಸಂಸ್ಕೃತಿ'ಯು 'ಮಾತೃಪ್ರಧಾನ' ವ್ಯವಸ್ಥೆಯುಳ್ಳ ಸಂಸ್ಕೃತಿ. ಈ ಸಂಸ್ಕೃತಿಯೊಳಗಡೆ ಆಸ್ತಿ, ಅಧಿಕಾರ, ಜವಾಬ್ದಾರಿ ಎಲ್ಲವೂ ತಾಯಿಗೆ ಸೇರಿದ್ದು. ಇಡೀ ಕುಟುಂಬ ನಿರ್ವಹಣೆಯ ಜವಾಬ್ಧಾರಿ ಹೊತ್ತ ತಾಯಿಗೆ ಕುಟುಂಬದಲ್ಲಿ ಅಗ್ರಸ್ಥಾನವಿದ್ದು, ಎಲ್ಲವೂ ಅವಳ ಆಣತಿಯಂತಲೇ ನಡೆಯಬೇಕು. ಆರ್ಯರ ಸಂಪರ್ಕದಿಂದಾಗಿ ಈ ಸಂಸ್ಕೃತಿಯು 'ಪಿತೃಪ್ರಧಾನ' ವ್ಯವಸ್ಥೆಯಾಗಿ ಮಾರ್ಪಟ್ಟರೂ, ಅದು ಮಾತೃಪ್ರಧಾನ ವ್ಯವಸ್ಥೆಯ ಕುರುಹುಗಳನ್ನು ಇನ್ನೂ ಉಳಿಸಿಕೊಂಡು ಬಂದಿದೆ. ಇದುವರೆಗೂ ಕುಟುಂಬದ ಒಡತಿಯಾಗಿದ್ದು, ಕುಟುಂಬ ರಕ್ಷಿಸುವ ಜವಾಬ್ಧಾರಿ ಹೊತ್ತ ತಾಯಿಗೆ ಈಗ ದೈವೀಸ್ಥಾನ ಕಲ್ಪಿಸಲಾಗಿದೆ. ಹೆಚ್ಚಾಗಿ ಕೃಷಿಯನ್ನೇ ಪ್ರಧಾನವೃತ್ತಿಯನ್ನಾಗಿ ಅವಲಂಬಿಸಿರುವ 'ದ್ರಾವಿಡ ಸಂಸ್ಕೃತಿ' ಜನರು ತಮ್ಮ ಹಿಂದಿನ ಪರಂಪರೆಯ ಕುರುಹಾಗಿ ಇಂದಿಗೂ ಮಾತೃದೇವತೆಗಳನ್ನು ಹೆಚ್ಚಾಗಿ ಆರಾಧಿಸುತ್ತಾರೆ. ಜೊತೆಗೆ ತಮ್ಮ ವೃತ್ತಿಗೆ ಸಂಬಂಧಿಸಿದ ಭೂಮಿ, ಧಾನ್ಯ, ಕೃಷಿ ಉಪಕರಣಗಳಿಗೂ ದೇವತೆಯ ಸ್ಥಾನ ನೀಡಿ, ಮೊದಲು ಅವುಗಳಿಗೆ ಪೂಜಿಸಿ, ಸಂತೃಪ್ತಗೊಳಿಸಿ ನಂತರ ತಮ್ಮ ಕೃಷಿ ಚಟುವಟಿಕೆಗಳನ್ನು ಪ್ರಾರಂಭಿಸುತ್ತಾರೆ. ಹೀಗೆ ದ್ರಾವಿಡ ಸಂಸ್ಕೃತಿಯ ಜನ ಮೊದಲು ಕುಟುಂಬದ ಒಡತಿಯಾಗಿ, ಕುಟುಂಬದ ಪಾಲನೆ,

ರಕ್ಷಣೆಯ ಜವಾಬ್ದಾರಿ ಹೊತ್ತ ತಾಯಿಗೆ ಇಂದು ದೇವತೆಯ ಸ್ಥಾನ ಕಲ್ಪಿಸಿ, ತಮ್ಮನ್ನು ನಂಬಿದ ಜನ, ಕುಟುಂಬ, ಸಮಾಜ, ಗ್ರಾಮವನ್ನು ಪೋಷಿಸುವ, ರಕ್ಷಿಸುವ ಜವಾಬ್ದಾರಿಯನ್ನು ಹೊರೆಸಿದ್ದಾರೆ.

ಇನ್ನು ವಾಮಾಚಾರಿಗಳು ಅಥವಾ ಅವಧೂತ ಪರಂಪರೆಯನ್ನು ಅನುಸರಿಸುವ ಸಾಧುಗಳಿಗೂ ಶಕ್ತಿದೇವತೆಗಳೇ ಆರಾಧ್ಯದೈವ. ಅವರು ತಮ್ಮ ಯಂತ್ರ, ತಂತ್ರಗಳ ಸಾಧನೆ, ಸಿದ್ಧಿಗಳಿಗೆ ಅವಲಂಬಿಸಿರುವುದು ಸ್ತ್ರೀ ದೇವತೆಗಳನ್ನೆ. ಇವರು 'ಪಂಚಮಕಾರಗಳ ಮೂಲಕ ದೇವಿಯನ್ನು ಸಂತೃಪ್ತಿಗೊಳಿಸಿ, ಅವಳನ್ನು ಸಾಕ್ಷಾತಾರ ಮಾಡಿಕೊಳ್ಳುತ್ತಾರೆ. ಈ ಮೂಲಕ ತಮ್ಮ ಕಾರ್ಯಗಳನ್ನು ಸಿದ್ಧಿಸಿಕೊಳ್ಳುತ್ತಾರೆ.

ಚಂದ್ರಶೇಖರ ಕಂಬಾರರು ಜನಿಸಿದ್ದು ಇಂಥ ಪರಿಸರದಲ್ಲಿ. ಅದೂ ಮಾತೃದೇವತೆಯಾದ 'ಕಾಳಮ್ಮ'ನನ್ನು ಕುಲದೇವತೆಯಾಗಿ ಆರಾಧಿಸುವ ಕಂಬಾರ ಜಾತಿಯಲ್ಲಿ. ಅವಧೂತ ಪರಂಪರೆಯ ವಾಮಾಚಾರದ ಆಚರಣೆಯ ಸೋದರಮಾವ ರಾಮಪ್ಪನ ಸಂಪರ್ಕವು ಕಂಬಾರರಿಗೆ ಉಂಟಾಯಿತು. ಇವೆರಡರ ಸಂಪರ್ಕದ ಪ್ರಭಾವ ಇವರ ಮೇಲಾದುದರ ಪರಿಣಾಮವಾಗಿ ಕಂಬಾರರ ಸಾಹಿತ್ಯದಲ್ಲಿ ಮಾತೃದೇವತೆ ಅಗ್ರಸ್ಥಾನಪಡೆದಿದ್ದಾಳೆ. ಇವರ ಕಾವ್ಯ, ಕಾದಂಬರಿಗಳಲ್ಲಿ ಹೆಚ್ಚಾಗಿ ಕಂಡು ಬರುವ ಮಾತೃದೇವತೆಗಳು ಅವರನ್ನು ನಂಬಿರುವ ಜನ, ಕುಟುಂಬ, ಸಮಾಜ, ಗ್ರಾಮಗಳನ್ನು ಪೊರೆಯುವ, ರಕ್ಷಿಸುವ ಶಕ್ತಿಗಳಾಗಿ, ಅವರೊಂದಿಗೆ ಭಾವನಾತ್ಮಕ ಸಂಬಂಧವನ್ನು ಹೊಂದಿದ ವ್ಯಕ್ತಿಗಳಾಗಿದ್ದಾರೆ. ಇವರ ಕಾದಂಬರಿಗಳಲ್ಲಿ ಜಂಗಮ, ದೇವರೇಸಿ, ಶಿವಪಾದರಂತಹ ಪುರುಷಸಾಧುಗಳ ಅಥವಾ ದೇವತಾಪುರುಷರ ಹೆಸರುಗಳು ಬಂದರೂ ಅವರು ಇಲ್ಲಿ ಕಂಡುಬರುವುದು, ದೇವತೆಗಳ ಪೂಜಾರಿ, ಸೇವಕ ಅಥವಾ ತನ್ನ ಕಾರ್ಯಗಳನ್ನು ನಿರ್ವಹಿಸಲು ತಾಯಿ ಕಳುಹಿಸಿದ ಸಂಕಲ್ಪಿತ ವ್ಯಕ್ತಿಗಳಾಗಿಯೇ ಹೊರತು ದೇವತಾಸ್ಥಾನವಲ್ಲ. ಕಂಬಾರರ ಕಾದಂಬರಿಗಳಲ್ಲಿ ಮಾತೃದೇವತೆಗೆ ದೊರೆತ ಸ್ಥಾನ ಪುರುಷ ದೇವರುಗಳಿಗಿಲ್ಲ. ಮಕ್ಕಳಿಗೆ ಸಂಬಂಧಿಸಿದ ಎಲ್ಲ ಜವಾಬ್ದಾರಿ ಹೊತ್ತ ತಾಯಿಗೆ ಜಗತ್ತನ್ನು ಸಂಭಾಳಿಸುವ ಶಕ್ತಿ ಇದೆ ಎಂಬ ಕಂಬಾರರ ನಂಬಿಕೆ, ವಿಶ್ವಾಸವೇ ಇದಕ್ಕೆ ಕಾರಣವಾಗಿರಬಹುದು.

ಚಂದ್ರಶೇಖರ ಕಂಬಾರರ 'ಕರಿಮಾಯಿ' ಕಾದಂಬರಿ ಹೆಸರೇ ಸೂಚಿಸುವಂತೆ ಶಿವಾಪುರದ ಗ್ರಾಮದೇವತೆ 'ಕರಿಮಾಯಿ' ಕತೆಯ ಸುತ್ತಲೇ ಹುಟ್ಟಿಕೊಂಡ ಕಾದಂಬರಿ. 'ಕರಿಮಾಯಿ' ತಾಯಿಯ ಜನನವಾದದ್ದೇ ಭೂಮಿ, ಪರಿಸರ, ಸಾಧುಸಂತರ ಜನತೆಯ ರಕ್ಷಣೆಗಾಗಿ. ದೇವದಾನವರುಗಳ ಜಗಳದಿಂದ ಭೂಮಿಯ ಮೇಲಿನ ಮಳೆಬೆಳೆಗಳೆಲ್ಲ ಹಾನಿಯಾಗಿ, ಸಾಧುಸತ್ಪುರುಷರ ಜಪತಪಗಳಿಗೆ ಸಂಕಟ ಒದಗಿದಾಗ, ಭೂಮಿತಾಯಿ ಇವೆಲ್ಲ ಕಷ್ಟಗಳಿಂದ ಮುಕ್ತಿಕೊಡೆಂದು ಹೋಗಿ ಶಿವಪಾರ್ವತಿಯರನ್ನು ಪ್ರಾರ್ಥಿಸಿದಾಗ ಶಿವ ಭೂಮಿಯ ರಕ್ಷಣೆಗಾಗಿ ತನ್ನ ಬೆವರಿನಿಂದ ಕರಿಮಾಯಿಯನ್ನು ಸೃಷ್ಟಿಸಿ ಕಳುಹಿಸಿದ. ಹೀಗೆ ಭೂಮಿ ರಕ್ಷಣೆಗಾಗಿ ಹುಟ್ಟಿದ ಕರಿಮಾಯಿ ಬಾವಿಯಲ್ಲಿ ಬಿದ್ದ ಜಡೆಮುನಿಯನ್ನು ರಕ್ಷಿಸಿ ವಿವಾಹವಾದುದರಿಂದ ದೇವದಾನವರುಗಳ ಕಲಹ ಮತ್ತಷ್ಟು ಹೆಚ್ಚಿತು. ದೇವದಾನವರುಗಳು ಜಡೆಮುನಿಯನ್ನು ಕೊಂದು, ಗರ್ಭಿಣಿಯಾದ ಕರಿಮಾಯಿಯನ್ನು ಅಟ್ಟಿಸಿಕೊಂಡು ಹೋಗಿ ಅವಳ ಗರ್ಭವನ್ನು ನಾಶ ಮಾಡಿದಾಗ, ಕರಿಮಾಯಿ ಶಿವಪಾರ್ವತಿಯರಿಂದ ವರಪಡೆದು ದೇವದಾನವರುಗಳನ್ನು ನಾಶಮಾಡುತ್ತಾಳೆ. ನಂತರ ಕರಿಮಾಯಿ ಶಿವನಿಗೆ ಸವಾಲು ಹಾಕಿ ಸತ್ತ ತನ್ನ ಗಂಡ ಮತ್ತು ಮಕ್ಕಳನ್ನು ಜೀವಸಹಿತ ಮರಳಿ ಪಡೆಯುತ್ತಾಳೆ. ಮಕ್ಕಳನ್ನು ಮರಳಿ ಪಡೆದರೂ ದೈತ್ಯರ ಬಗ್ಗೆ ಅವಳಿಗೆ ಭಯವಿದ್ದುದರಿಂದ ಅವಳು

ಸಂಜೆವರೆಗೂ ತನ್ನ ಮಕ್ಕಳನ್ನು ಆಡಲು ಬಿಟ್ಟು ರಾತ್ರಿ ಮಕ್ಕಳನ್ನು ಕವಡೆಗಳನ್ನಾಗಿ ಪರಿವರ್ತಿಸಿ ತನ್ನ ಕೊರಳಲ್ಲಿ ಧರಿಸುತ್ತಾಳೆಂದು ಕರಿಮಾಯಿಯನ್ನು ಕುರಿತು ಶಿವಪೂರದಲ್ಲಿರುವ ಕತೆ. ಇದಕ್ಕೆ ಪೂರಕವಾಗಿ ಕರಿಮಾಯಿಯ ಕೊರಳಲ್ಲಿ ಕವಡೆಯ ಸರವಿದೆ.

ಹೀಗೆ ಭೂಮಿ, ಸಾಧುಸತ್ಪುರುಷರ ರಕ್ಷಣೆಗಾಗಿ ಹುಟ್ಟಿದ ಕರಿಮಾಯಿ ನಮ್ಮನ್ನು ರಕ್ಷಿಸುತ್ತಾಳೆಂಬ ನಂಬಿಕೆ ಶಿವಾಪುರದ ಜನರದ್ದು. ತನ್ನ ಗಂಡ ಮಕ್ಕಳಿಗಾಗಿ ದೇವಿ ದೈತ್ಯರನ್ನು ಎದುರಿಸಿ. ಶಿವಪಾರ್ವತಿಯರಿಂದಲೇ ವರಪಡೆದು ಅವರನ್ನು ಸೋಲಿಸಿದವಳು ಕರಿಮಾಯಿ. ಸತ್ತ ಗಂಡ, ಮಕ್ಕಳನ್ನು ದೇವರಿಂದ ಮರಳಿ ಪಡೆದು ಮಕ್ಕಳ ರಕ್ಷಣೆಗಾಗಿ ಅವರನ್ನು ಕವಡೆಸರವನ್ನಾಗಿ ಪರಿವರ್ತಿಸಿದ ಕರಿಮಾಯಿ ಅವಳನ್ನು ನಂಬಿದ, ಅವಳ ಮಕ್ಕಳಾದ ಶಿವಾಪುರದ ಜನರನ್ನು ಎಂದಿಗೂ ಕೈಬಿಡದೆ ಸದಾ ನಮ್ಮನ್ನು ರೋಗರುಜಿನ ಅನ್ಯರ ಆಕ್ರಮಣದಿಂದ ರಕ್ಷಿಸುತ್ತಾಳೆಂಬ ಭರವಸೆ ಅಲ್ಲಿಯ ಜನರದ್ದು.

ಕರಿಮಾಯಿ ದೇವಸ್ಥಾನ ಊರಮುಂದೆ ಅಗಸಿ ಬಾಗಿಲ ಬಳಿಯಿದ್ದು, ನಾಲಿಗೆ ಹಿರಿದು ತೇಲುಗಣ್ಣಾಗಿ ಬಿದ್ದ, ಕತ್ತಿನಲ್ಲಿ ಕತ್ತಿ ನೆಟ್ಟ ಕೋಣದ ಮೇಲೆ ಕರಿಮಾಯಿ ಕುಳಿತಿದ್ದಾಳೆ. ತಾಯಿಗೆ ನಾಲ್ಕು ಕೈಗಳಿದ್ದು ಹಸ್ತ ಒಂದರಲ್ಲಿ ಖಡ್ಗ, ಒಂದರಲ್ಲಿ ದೈತ್ಯನತಲೆ, ಒಂದು ಅಭಯಹಸ್ತ, ಒಂದು ನರ್ತನದ ರೀತಿಯಲ್ಲಿದ್ದು ಗುಡಿಯಲ್ಲಿ ಮೂರು ಜೇನುಹುಟ್ಟುಗಳಿದ್ದು, ಇವು ತಾಯಿ ದೇವದಾನವರುಗಳ ಸಂಹಾರದಲ್ಲಿ ದೇವಿ ತಾನು ನುಂಗಿದ ದೈತ್ಯರನು ಕಾರಿಕೊಂಡಾಗ ಅವರು ಜೇನುಹುಳುಗಳಾಗಿ ಮಾರ್ಪಟ್ಟು ಅವಳ ಭಕ್ತರಾಗಿ ದೇವಸ್ಥಾನದಲ್ಲಿ ಆಶ್ರಯಪಡೆದಿದ್ದಾರೆಂದು ಕರಿಮಾಯಿ ಪುರಾಣ ಹೇಳುತ್ತದೆ. ಇನ್ನು ಕರಿಮಾಯಿ ಗುಡಿ ಪ್ರವೇಶಿಸುವುದು ಚಿಕ್ಕದಾದ ಬಾಗಿಲ ಮುಖಾಂತರ.

'ಕರಿಮಾಯಿ'ಯ ಈ ಮೂರ್ತಿಯೇ ಅವಳ ದುಷ್ಟಶಿಕ್ಷೆ, ಶಿಷ್ಟರಕ್ಷಣೆಯ ಕಾರ್ಯವನ್ನು ತಿಳಿಸುತ್ತದೆ. ದುಷ್ಟ ಕೋಣವನ್ನು ಸಂಹರಿಸಿದ ಕರಿಮಾಯಿಯ ಕೈ ಆಯುಧಗಳು ದುಷ್ಟರಿಗೆ ಶಿಕ್ಷೆಯ ಎಚ್ಚರಿಕೆ ನೀಡಿದರೆ, ಅಭಯ ಹಸ್ತ ಭಕ್ತರಿಗೆ ಕಾಪಾಡುವ ಅಭಯವನ್ನು ದಯಪಾಲಿಸುತ್ತದೆ. ಇನ್ನು ಅವಳ ಬಾಗಿಲು ನಮ್ಮಲ್ಲಿಯ ದುರ್ಗುಣಗಳನ್ನು ಅಹಂಕಾರಗಳನ್ನು ಬದಿಗೊತ್ತಿ ಅವಳೆದುರಿಗೆ ತಲೆಬಾಗಿ ನಡೆಯಿರಿ ಎಂಬ ಸೂಚನೆಯನ್ನು ನೀಡುತ್ತದೆ. ತಾಯಿಯ ಗುಡಿಯ ಹಿಂದೆಯೇ ಊರು ಬೆಳೆದದ್ದು, ತಾಯಿ ತನ್ನ ಬೆನ್ನು ಹಿಂದೆ ಬಿದ್ದವರನ್ನು ತನ್ನಲ್ಲಿ ಆಶ್ರಯ ಕೋರಿ ಬಂದವರನ್ನು, ರಕ್ಷಿಸುತ್ತಾಳೆಂಬ ನಂಬಿಕೆ ಊರವರದಾದರೆ, ತನ್ನ ಬೆನ್ನು ಹತ್ತಿದವರನ್ನು ರಕ್ಷಿಸುವ ಹೊಣೆ ತಾಯಿಯದು ಎಂಬ ನಿಟ್ಟಿನಲ್ಲಿ.

ಶಿವಾಪುರದ ಆದಿಗೌಡ ಅಪಾರ ಸಂಪತ್ತಿನ ಒಡೆಯನಾದರೂ ಮಕ್ಕಳಾಗದಾಗ ಕನಸಿನಲ್ಲಿ ಕಾಣಿಸಿದ ಕರಿಮಾಯಿ 'ನಿಲ್ಲೋದಕ್ಕೊಂದು ನೆಲೆ ಮಾಡು : ನೀ ಮಣ್ಣ ಮುಟ್ಟಿದರ ಚಿನ್ನ ಮಾಡತೀನಿ' ಎಂಬ ಭರವಸೆ ನೀಡಿ ಅವನಿಂದ ಗುಡಿ ಕಟ್ಟಿಸಿಕೊಂಡಳು. ಅದಕ್ಕೆ ಪ್ರತಿಫಲವಾಗಿ ವರ್ಷ ತುಂಬುವದರೊಳಗೆ ಗೌಡನಿಗೆ ಗಂಡುಮಗುವನ್ನು ನೀಡಿ, ಶಿವಾಪುರದ ಭೂಮಿಯನ್ನು ಅಪಾರ ದವಸ ಧಾನ್ಯವನ್ನು ಬೆಳೆಯುವ ಸಮೃದ್ಧಿಯ ಗ್ರಾಮವನ್ನಾಗಿ ಮಾಡಿದಳು. ಗೌಡನಿಗೆ ಮಕ್ಕಳ ಫಲ ನೀಡಿದ್ದರಿಂದ ಆತ ತಾಯಿಗೆ ಬಂಗಾರದ ಮುಖವನ್ನು ಮಾಡಿಸಿಕೊಡುತ್ತಾನೆ. ಹೀಗೆ ಶಿವಾಪುರದ ಕರಿಮಾಯಿ, ಮಕ್ಕಳಿಲ್ಲದ ಗೌಡನಿಗೆ ಮಕ್ಕಳ ಫಲವನ್ನು, ಭೂಮಿಗೆ ಅಪಾರ ಪ್ರಮಾಣದ ದವಸ ಧಾನ್ಯ ಬೆಳೆಯುವ ಶಕ್ತಿಯನ್ನು ನೀಡಿ ಫಲವಂತಿಕೆಯ ಪ್ರತಿರೂಪವಾಗುತ್ತಾಳೆ. ತಾಯಿಯಂತೆ ಕರಿಮಾಯಿ ಸಮೃದ್ಧಿ ಫಲವಂತಿಕೆಯನ್ನು ನೀಡಿ,

ಗ್ರಾಮದ ರಕ್ಷಣೆಯ ಜವಾಬ್ದಾರಿ ಹೊತ್ತಿದ್ದರಿಂದ ಶಿವಾಪುರದ ಜನತೆಯ ಮನದಲ್ಲಿ 'ತಾಯಿ'ಸ್ಥಾನ ಪಡೆದು ಶಾಶ್ವತವಾಗಿ ಅಲ್ಲಿ ನೆಲೆಯೂರುತ್ತಾಳೆ. ಕಂಬಾರರು ಬಂಗಾರದ ಮುಖದ ಕರಿಮಾಯಿಯೇ ತನಗೆ 'ಬರೆಯುವ ಬುದ್ಧಿ ಕೊಟ್ಟಳು' ಎಂದು ಹೇಳಿ 'ಓದುಗರಿಗೆ ತೂಗು ತೊಟ್ಟಿಲು, ಬೆಳ್ಳಿ ಬಟ್ಟಲದ ಭಾಗ್ಯ, ಮಕ್ಕಳ ಫಲಪುತ್ರ ಸಂತಾನದ ಸೌಭಾಗ್ಯ ಕೊಡಲಿ' ಎಂದು ತಾಯಿಯನ್ನು ಬೇಡಿಕೊಳ್ಳುತ್ತಾರೆ. ಅವರು ವರ ಬೇಡುವದರಲ್ಲಿ ಅವಳನ್ನು ಚಿತ್ರಿಸಿರುವದು ಫಲವಂತಿಕೆಯ ತಾಯಿಯಂತೆ.

ಶಿವಾಪುರದ ಜನ ಎದ್ದಾಗ ಬಿದ್ದಾಗ ನೆನೆಯುವದು ಇಂತಹ ಕರಿಮಾಯಿಯನ್ನೆ. ಇವರು ಒಳ್ಳೆಯದಿರಲಿ, ಕೆಟ್ಟದ್ದಿರಲಿ ಎಲ್ಲದಕ್ಕೂ ಅವಲಂಬಿಸಿರುವದು ಕರಿಮಾಯಿಯನ್ನೆ. ಹುಟ್ಟು, ಸಾವು, ಕೊಲೆ, ಹಾದರದಂತಹ ಸಮಯಗಳಲ್ಲಿ ಎಲ್ಲರೂ ನೆನೆಯುವದು ದೇವಿಯನ್ನು. 'ಆಣಿ ಹೊರುವುದು' ಅವಳ ಹೆಸರಿನಲ್ಲಿಯೇ. ಶಿವಾಪುರ ಗ್ರಾಮ ಒಂದು ಸಮೃದ್ಧಿಯ, ಗ್ರಾಮವಾಗಲೂ, ಅಖಂಡತೆಯ ರೂಪವಾಗಲೂ ಕಾರಣ ಕರಿಮಾಯಿ. ಆ ಗ್ರಾಮದಲ್ಲಿ ಮಳೆಬೆಳೆಗಳು ಸಮೃದ್ಧಿಯಾಗಲು ಕಾರಣ ಆ ತಾಯಿ. ಅಲ್ಲಿಯ ಜನ ವಿವಿಧ ಜಾತಿಗೆ ಸೇರಿದ್ದರೂ ಅವರು ಒಂದೇ ಕುಟುಂಬದಂತೆ ಇರಲು, ಅವರಿಗೆ ಬಂದ ಕಷ್ಟಗಳು ಮಂಜಿನಂತೆ ನಿವಾರಣೆಯಾಗಲು, ತಮ್ಮ ಗ್ರಾಮದ ಸಮಸ್ಯೆಗಳು ಯಾರ ಹಸ್ತಕ್ಷೇಪವಿಲ್ಲದೆ ಪರಿಹಾರವಾಗಲು ಎಲ್ಲದಕ್ಕೂ ಕಾರಣ ಆ ತಾಯಿ.

'ದತ್ತಾತ್ರೇಯ ನಾಮಾ' ಬರೆದ ದತ್ತು ಕುಲಕರ್ಣಿ ಹೇಳುವುದು ಶಿವಾಪುರದ ಪಾಪ ಹೆಚ್ಚಾದಾಗ ಅವರ ರಕ್ಷಣೆಗಾಗಿ ಕರಿಮಾಯಿ ಕಳಿಸಿದ ವ್ಯಕ್ತಿಯೇ ತಾನೆಂದು. ಶಿವಾಪುರದ ಪರಗೌಡನಿಗೆ ಗೌಡ್ತಿಯಲ್ಲಿ ಮಕ್ಕಳಾಗದಾಗ, ಗೌಡ್ತಿ ಬೇಡರ ಜಾತಿಯ ಶಿವನಿಂಗಿಗೆ ಗೌಡನಿಂದ ಹುಟ್ಟಿದ ಮಗನನ್ನು ದತ್ತು ಪಡೆಯಲು ನಿರಾಕರಿಸುತ್ತಾಳೆ. ಆದರೆ ತಾಯಿ ದೇವರೇಸಿಯ ಮೂಲಕ ದತ್ತು ಪಡೆಯಲು ಹೇಳಿದಾಗ ಗೌಡ್ತಿ ತನ್ನ ಬಳಗದಲ್ಲೆ ದತ್ತು ಪಡೆಯಲು ಅನೇಕ ಮಕ್ಕಳಿದ್ದರು, ಕೆಳಜಾತಿಯಲ್ಲಿ ಹುಟ್ಟಿದ ಶಿವಲಿಂಗನನ್ನು ದತ್ತು ಪಡೆಯುತ್ತಾಳೆ. ಇದಕ್ಕೆ ಕರಿಮಾಯಿಯಲ್ಲಿ ಆಕೆ ಇಟ್ಟ ಭಕ್ತಿ ಮತ್ತು ಫಲವಂತಿಕೆಯ ದೇವತೆ ಕರಿಮಾಯಿ ಆಶೀರ್ವಾದದಿಂದ ದತ್ತು ಪಡೆದ ಮಗನಿಂದ ತಮ್ಮ ವಂಶ ಬೆಳೆಯುತ್ತದೆಂಬ ನಂಬಿಕೆಯೇ ಕಾರಣ.

ನಿಂಗೂನ ಕೊಲೆಯ ಪ್ರಸಂಗದಲ್ಲಿಯೂ ಅವನನ್ನು ರಕ್ಷಿಸುವವಳು ಕರಿಮಾಯಿಯೇ. ಗೌಡ ನಿಂಗೂನನ್ನು ರಕ್ಷಿಸುವುದಕ್ಕಾಗಿ ಗುಡಸೀಕರನನ್ನು ಒಪ್ಪಿಸಲು, ಅವನ ಮಾತು ಕೇಳುವುದಾಗಿ ಆಣಿ ಹಾಕುವುದು ಕರಿಮಾಯಿಯ ಮೇಲೆಯೇ. ಗೌಡ ಕೊನೆಗೂ ನಿಂಗುವನ್ನು ರಕ್ಷಿಸಿದ್ದು ಕರಿಮಾಯಿಯ ಅನುಮತಿ ಪಡೆದು, ಕರಿಮಾಯಿಯ ಬೇಟೆ ಹಬ್ಬ ಮಾಡುವುದರ ಮೂಲಕ. ಕೊಲೆ ಮಾಡಿದ ನಿಂಗೂ 'ಹಡೆದವ್ವ ಇದರಿಂದ ನನ್ನ ಪಾರುಮಾಡು. ಸೀರೆ ಉಟ್ಟು ಹರಕೆ ತೀರಿಸುತ್ತೇನೆಂದು' ಕರಿಮಾಯಿಗೆ ಹರಕೆ ಹೊತ್ತು ಕೊಲೆಯ ಅಪರಾಧದಿಂದ ಪಾರಾದದ್ದು, ಸೀರೆ ಉಟ್ಟು ಕರಿಮಾಯಿಯ ಹರಕೆ ತೀರಿಸುವುದರ ಮುಖಾಂತರ. ಅಂದರೆ ಗೊತ್ತಿಲ್ಲದೆ ತಪ್ಪಾದಾಗ ಅಥವಾ ತಪ್ಪಿಗೆ ಪಶ್ಚಾತಾಪ ಪಟ್ಟರೆ ಅದಕ್ಕೆ ದೇವರ ರಕ್ಷಣೆ ಇರುತ್ತದೆಂಬ ಭಾವನೆ ಅವರದು. ತನ್ನ ಅಜಾಗರೂಕತೆಯಿಂದ ತಾಯಿಯ ಕವಡೆಯ ಸರ ಕಳುವಾದಾಗ ದೇವರೇಸಿ 'ಮಗು ಹೇಸಿಗೆ ಮಾಡಿಕೊಳ್ಳುತ್ತದೆ. ತಾಯಿ ತೊಳೆದು ಹತ್ತಿರ ಕರೆದುಕೊಳ್ಳುವದಿಲ್ಲವೇ'? ಹಾಗೇ ನನ್ನ ತಪ್ಪು ಕ್ಷಮಿಸಲಿ ಶಿಕ್ಷೆಕೊಟ್ಟರು ಅವಳು ತಾಯಿಯಲ್ಲವೇ ಎಂದು ದೇವಿಯ ಮುಂದೆ ಮಗುವಿನಂತೆ ದೈನ್ಯದಿಂದ ಬೇಡಿಕೊಳ್ಳುತ್ತಾನೆ. ಇದು ದೇವರು ಮತ್ತು ಭಕ್ತರ ನಡುವೆ ತಾಯಿ ಮಕ್ಕಳ ನಡುವಿರುವಂತೆ ಭಾವನಾತ್ಮಕ ಸಂಬಂಧವಿರುವುದನ್ನು ಸೂಚಿಸುತ್ತದೆ.

ಹೀಗೆ ಶಿವಾಪುರದ ಜನತೆಯ ಪಾಲಿನ ಉಸಿರಾದ ಕರಿಮಾಯಿ, ಊರಿಗೆ ಆಧುನೀಕರಣದ ಪ್ರವೇಶದಿಂದಾಗಿ ತನ್ನ ಶಕ್ತಿಯನ್ನು ಕಳೆದುಕೊಳ್ಳುವ ಸ್ಥಿತಿ ಒದಗುತ್ತದೆ. ಗುಡಸೀಕರ ನಾಟಕ ಆಡಿಸಲು ಕರೆಸಿದ ಚಿಮಣಾಳೊಂದಿಗೆ ಊರಿಗೆ ಬಂದ ಬಸವರಾಜ ಆಧುನಿಕತೆಯನ್ನು ರೂಡಿಸಿಕೊಂಡ, ದೇವರುಗಳ ಬಗ್ಗೆ ನಂಬಿಕೆಯಿಲ್ಲದ ವ್ಯಕ್ತಿ. ಈತ ಗುಡಸೀಕರನಿಗಾಗಿ ದೇವಿಯ ಗುಡಿಯ ಹತ್ತಿರ ಬಂದ ದುರ್ಗಿಯನ್ನು ಸೇರುವದು ಕರಿಮಾಯಿಯ ಗರ್ಭಗುಡಿಯಲ್ಲಿ. ಇವರ ಈ ಭೋಗದ ಗುದ್ದಾಟದಲ್ಲಿ ತಾಯಿಯ ಮರದ ಮೂರ್ತಿ ನಡುಗಿ 'ಖಡ್ಗ ಹಿಡಿದ ಅವಳ ಬಲಗೈ' ಮುರಿದು ಬೀಳುತ್ತದೆ. ಮಡಿಮೈಲಿಗೆ ಆಚರಿಸದಿದ್ದರೆ ಕೆಂಡದಂಥ ಕೋಪ ಮಾಡಿಕೊಳ್ಳುತ್ತಿದ್ದ ಕರಿಮಾಯಿ, ಸೀಗೆ ಹುಣ್ಣಿಮೆಯ ಉತ್ಸವಕ್ಕಾಗಿ ಮಡಿಯಿಂದ ಶುದ್ಧಗೊಳಿಸಿದ ಈ ಗುಡಿಯಲ್ಲಿ ಇಂತಹ ಅಚಾತುರ್ಯ ನಡೆದರೂ ದೇವಿ ಯಾವುದೇ ರೀತಿಯಲ್ಲಿ ಶಿಕ್ಷೆ ನೀಡುವುದಿಲ್ಲ. ಇನ್ನು ಶಕ್ತಿಯ ಸಂಕೇತವಾದ ಖಡ್ಗಹಿಡಿದ ಬಲಗೈ ಮುರಿಯುವಿಕೆ ಸೂಚಿಸುವದು ದುಷ್ಟರನ್ನು ಶಿಕ್ಷಿಸುವ ಅವಳ ಶಕ್ತಿ ಕಳೆಗುಂದಿತು ಎಂಬುದನ್ನು. ಮರುದಿನ ಉತ್ಸವಕ್ಕಾಗಿ ಸಮೃದ್ಧಿದೇವತೆಯ ಅವತಾರ ತಾಳಬೇಕಾಗಿದ್ದ ತಾಯಿ ತನ್ನ ಶಕ್ತಿಯುತ ಖಡ್ಗಹಿಡಿದ ಬಲಗೈಯನ್ನು ಕಳೆದುಕೊಳ್ಳವದು ಸೂಚಿಸುವದು, ನಮ್ಮ ಸಂಸ್ಕೃತಿಯೊಳಗಡೆ ಪ್ರವೇಶಿಸಿದ ಆಧುನಿಕತೆಯು ನಮ್ಮ ಶಕ್ತಿ ಕೇಂದ್ರವಾದ ದೇವಾಲಯಗಳನ್ನು ಮಲಿನಗೊಳಿಸಿ ನಮ್ಮನ್ನು ಅಬಲರನ್ನಾಗಿ ಮಾಡುತ್ತಿರುವುದನ್ನು.

ಆದರೆ ಅಂದು ತನ್ನ ಗುಡಿಯಲ್ಲಿ ಅಚಾತುರ್ಯ ನಡೆದರೂ, ಅವರನ್ನು ಶಿಕ್ಷಿಸದ ತಾಯಿ, ಮರುದಿನದ ಕೆಂಡದ ಉತ್ಸವದಲ್ಲಿ ಗುಡಿ ಪ್ರವೇಶ ಮಾಡದೆ ಗುಡಿಯಲ್ಲಿ ಮೈಲಿಗೆಯಾದದ್ದನ್ನು ಸೂಚಿಸುತ್ತಾಳೆ. ಮೋಜಿನ ಆಟವೆಂದು ಕೆಂಡದ ಉತ್ಸವ ನೋಡುತ್ತಾ ನಿಂತ ಬಸವರಾಜನನ್ನು ಧರಧರನೆ ಎಳೆದು ತಂದು, ಅವನನ್ನು ಕೆಂಡದಲ್ಲಿ ಓಡಾಡಿಸುತ್ತಾಳೆ. ತನ್ನ ಗುಡಿಯಲ್ಲಿ ಅಚಾತುರ್ಯ ಕೆಲಸ ಮಾಡಿದ ಅವನನ್ನು ಶಿಕ್ಷಿಸುವ ಮೂಲಕ ತಾಯಿ ತಾನಿನ್ನೂ ಜಾಗೃತಳಾಗಿದ್ದೇನೆಂದು ತೋರಿಸುತ್ತಾಳೆ. ಜೊತೆಗೆ 'ಚಿನ್ನದ ಕೂಸು ಕಣ್ಮರೆಯಾದಿತು ಜೋಕೆ' ಎಂದು ಕಾರಣಿಕ ನುಡಿದು ಮುಂದೆ ಅವನಿಂದ ಊರಿಗೆ ಒದಗಬಹುದಾದ ಅಪಾಯವನ್ನು ಸೂಚಿಸುತ್ತಾಳೆ. ಆದರೆ ಮಾಡಿದ ತಪ್ಪಿಗೆ ಪಶ್ಚಾತಾಪ ಪಡವುದನ್ನು ಬಸವರಾಜನಲ್ಲಿ ಕಾಣುವುದಿಲ್ಲ.

ದೇವರೇಸಿ ಕರಿಮಾಯಿಯ ಪೂಜಾರಿ. ಅವಳ ಪೂಜೆ, ಪುನಸ್ಕಾರ, ಕಾರಣಿಕ ಹೇಳುವದು, ದೇವರ ಹೇಳುವುದು ಮುಂತಾದ ದೇವಿಯ ಎಲ್ಲ ಕ್ರಿಯೆಗಳು ನಡೆಯುವದು ಇವನ ಮೂಲಕ. ದೇವಿಯಲ್ಲಿ ಅಪಾರ ಭಕ್ತಿಯುಳ್ಳ ದೇವರೇಸಿ ಬಸವರಾಜನ ಸಂಚಿನಿಂದ ಚಿಮಣಾ ಮನೆಗೆ ಹೋಗಿ ಬ್ರ್ಯಾಂಡಿ ಕುಡಿಯುತ್ತಾನೆ. ಇವನ ಈ ಅಚಾತುರ್ಯದ ಕೆಲಸ ಚಿಮಣಾಳಂಥ ಬಹಿಷ್ಕೃತ ಹೆಣ್ಣು ಕರಿಮಾಯಿಯ ಗುಡಿಯಲ್ಲಿ ಪ್ರವೇಶಿಸಿ, ಅವಳು ಕರಿಮಾಯಿಯ ಆಭರಣಗಳನ್ನು ಕದಿಯಲು ಅವಕಾಶ ಮಾಡಿಕೊಡುತ್ತದೆ. ಆದರೆ ತನ್ನ ತಪ್ಪಿನ ಅರಿವಾದ ದೇವರೇಸಿ ಅವರಿಂದ ಆಭರಣ ಮರಳಿ ಪಡೆಯುತ್ತಾನೆ. ದೇವಿಯ ಹತ್ತಿರ ತಪ್ಪಿಗೆ ಪಶ್ಚಾತಾಪ ಪಟ್ಟು ಕ್ಷಮೆ ಕೇಳುತ್ತಾನೆ. ಕಾರಣಿಕದ ವೇಳೆ ಚಿಮಣಾ ತನ್ನ ಮೇಲೆ ತಾಯಿ ಬಂದಳೆಂದು ನಾಟಕವಾಡಿದ್ದರಿಂದ, ತಾಯಿ ತನ್ನ ತಪ್ಪಿಗೆ ತನ್ನನ್ನು ಬಿಟ್ಟು ಹೋದಳೆಂದು ಭಾವಿಸಿ, ತನ್ನ ತಪ್ಪಿಗೆ ಶಿಕ್ಷೆಯೆಂದು ನೇಣು ಹಾಕಿಕೊಂಡು ಸಾಯುತ್ತಾನೆ. ತಪ್ಪು ಮಾಡಿದರೂ, ತನ್ನ ತಪ್ಪಿಗೆ ಮರುಗುವ, ಕ್ಷಮೆ ಕೇಳುವ, ಪಶ್ಚಾತಾಪ ಪಡುವ ಗುಣ ದೇವರೇಸಿಯಲ್ಲಿ ಕಾಣುತ್ತೇವೆ.

ಜಾತ್ರೆಯ ದಿನ ಬಸವರಾಜ ಜೇನು ಹುಟ್ಟಿಗೆ ಕಲ್ಲು ಒಗೆದು ಕೋಲಾಹಲ ಎಬ್ಬಿಸಿದಾಗ ಮುಂದಿನ ಅಪಾಯವನ್ನು ಅರಿತ ಗುಡಸೀಕರ ತಾಯಿಯ ಬಂಗಾರದ ಮೂರ್ತಿಯನ್ನು ರಕ್ಷಿಸುವ ಉಪಾಯದಿಂದ ಅದನ್ನು ಮನೆಗೆ ತರುತ್ತಾನೆ. ಇದುವರೆಗೂ ತಾನು ದ್ವೇಷಭಾವನೆಯಿಂದ ಕಾಣುತ್ತಿದ್ದ ಗೌಡ, ದತ್ತಪ್ಪರಿಗೆ ತಾಯಿಯ ಮೂರ್ತಿಯನ್ನು ಒಪ್ಪಿಸಿ ಜವಾಬ್ದಾರಿ ಕಳೆದುಕೊಳ್ಳಬೇಕೆಂಬ ಭಾವನೆ ಗುಡಸೀಕರನದು. ಆದರೆ ಊರ ದೇವರುಗಳ ಬಗ್ಗೆ ಭಾವನಾತ್ಮಕತೆಯನ್ನು ಬೆಳೆಸಿಕೊಳ್ಳದ ಬಸವರಾಜ ದೇವರ-ಮುಖ, ಆಭರಣಗಳನ್ನು ಅಪಹರಿಸಿಕೊಂಡು ಊರು ಬಿಡುತ್ತಾನೆ.

ಗುಡಸೀಕರ ಬಂಗಾರದ ಮುಖವನ್ನು ಕಿತ್ತುಕೊಳ್ಳುವಾಗ ಕರಿಮಾಯಿಯ ರುಂಡವಿಲ್ಲದ ಮುಂಡ ಬೆನ್ನು ಮೇಲಾಗಿ, ಕೈಕಾಲೂರಿ ನೆಲಕ್ಕೆ ಬೀಳುತ್ತದೆ. ಅವಳ ಉಡಿಯಲ್ಲಿ ತುಂಬಿದ ಫಲಗಳು ಚೆಲ್ಲಾಪಿಲ್ಲಿಯಾಗಿ ಬೀಳುತ್ತವೆ. ಕರಿಮಾರಿಯ ರುಂಡವಿಲ್ಲದ ಮುಂಡ ಬೆನ್ನು ಮೇಲಾಗಿ ಕೈಕಾಲೂರಿ ನೆಲಕ್ಕೆ ಬೀಳುವುದು ನಮ್ಮ ಸಂಸ್ಕೃತಿ ಆಧುನಿಕತೆಯ ಪ್ರವೇಶದಿಂದಾಗಿ ಸ್ವಸಾಮರ್ಥ್ಯದಿಂದ ನಿಲ್ಲುವ ತನ್ನ ಶಕ್ತಿಯನ್ನು ಕಳೆದುಕೊಂಡು ಅವಸಾನದತ್ತ ಸಾಗುವುದನ್ನು ಸೂಚಿಸಿದರೆ, ಉಡಿಯಲ್ಲಿ ತುಂಬಿದ ಫಲಗಳು ಚೆಲ್ಲಾಪಿಲ್ಲಿಯಾಗುವುದು ಅವಳು ರಕ್ಷಕ ಶಕ್ತಿಯನ್ನು ಕಳೆದುಕೊಳ್ಳುವುದನ್ನು ಸೂಚಿಸುತ್ತದೆ.

ದೇವರೇಸಿಯ ಸಾವು ಮತ್ತು ಬಂಗಾರದ ಮುಖದ ಕಳುವಿನೊಂದಿಗೆ ರಂಡಿ ಹುಣ್ಣಿಮೆಯಂದು ಊರುಬಿಟ್ಟು ಹೋದ ಕರಿಮಾಯಿ ಮುತ್ತೈದೆ ಹುಣ್ಣಿಮೆಯಂದು ಊರಿಗೆ ಮರಳಿ ಬರುತ್ತಾಳೆಂದು ಊರ ಜನರು ಮತ್ತು ಗೌಡ ಕಾಯುತ್ತಾರೆ. ಆದರೆ ತಾಯಿ ಮರಳಿ ಬರುವುದು ಇಲ್ಲ ಮತ್ತು ಅವಳ ಬಂಗಾರದ ಮುಖದ ಸುಳಿವು ಸಿಗುವುದಿಲ್ಲ. ಇದು ಆಧುನಿಕತೆಯ ದಾಳಿಯಿಂದ ಕರಿಮಾಯಿ ಊರುಬಿಟ್ಟು ಹೋದಂತೆ, ನಮ್ಮ ಸಂಸ್ಕೃತಿ ಸಂಪೂರ್ಣ ನಾಶವಾದಂತೆ ತೋರುತ್ತದೆ. ಆದರೆ ಕರಿಮಾಯಿ ತಪ್ಪು ಮಾಡಿದ ಬಸವರಾಜನನ್ನು ಶಿಕ್ಷಿಸುತ್ತಾಳೆ. ಇದರಲ್ಲಿ ಭಾಗಿಯಾದ ಚಿಮಣಾಳ ಬಾಯಿ ಕಳೆಯುತ್ತಾಳೆ. ನಗರೀಕರಣದ ಪ್ರಭಾವದಿಂದ ತನ್ನ ಸಂಸ್ಕೃತಿಯ ಬಗ್ಗೆಯೇ ಕೀಳುಮನೋಭಾವನೆ ತಾಳಿದ್ದ ಗುಡಸೀಕರನ ಮನಸ್ಸನ್ನು ಕರಿಮಾಯಿ ಪರಿವರ್ತಿಸುತ್ತಾಳೆ. ಚಿಮಣಾ ಹೆಣ್ಣು ಮಗುವಿಗೆ ಜನ್ಮ ನೀಡುವದರ ಮೂಲಕ ಶಿವಾಪುರದ ಫಲವಂತಿಕೆ, ಸಮೃದ್ಧತೆ ಇನ್ನೂ ಉಳಿದಿದೆ, ಅದಕ್ಕೆ ಎಷ್ಟೇ ಅಪಾಯ ಬಂದೊಗಿದರೂ ಅದು ಬಾಳುತ್ತದೆಂದು ಕರಿಮಾಯಿ ನಿರೂಪಿಸುತ್ತಾಳೆ.

'ಜಿ.ಕೆ.ಮಾಸ್ತರರ ಪ್ರಣಯ ಪ್ರಸಂಗ' ಕಾದಂಬರಿಯ ಗುಂಜ್ಯಾಳ ಕರಿಬಸಯ್ಯ ಮಾಸ್ತರರ ಆರಾಧ್ಯದೇವರು ಕಂಬಾರರಿಗೆ ವಿದ್ಯೆಯನ್ನು ದಯಪಾಲಿಸಿದ ಸಾವಳಗಿ ಶಿವಲಿಂಗೇಶ್ವರ. ಮಾಸ್ತರರು ಮತ್ತು ಗಿರಿಜಮ್ಮ ಶಿವಭಕ್ತರಾಗಿದ್ದು ಪ್ರತಿವರ್ಷ ತಪ್ಪದೆ ಸಾವಳಗಿ ಶಿವಲಿಂಗೇಶ್ವರನ ದರ್ಶನ ಪಡೆಯುತ್ತಿರುತ್ತಾರೆ. ಇವರು ವ್ರತಾಚರಣೆಗಳನ್ನು ಮಡಿ ಮೈಲಿಗೆಯನ್ನು ಕಟ್ಟುನಿಟ್ಟಿನಿಂದ ಆಚರಿಸುವವರು. ದೇವರನ್ನು ಸಹ ಹೆದರಿಸುವಂತಹ ಕಟ್ಟುನಿಟ್ಟುತನ ಇವರ ವ್ರತಾಚರಣೆಯಲ್ಲಿ. ಮಗ ಹೊಟ್ಟೆ ನೋವಿನಿಂದ ನರಳುತ್ತಿರುವಾಗಲೂ ತಮ್ಮ ವ್ರತಕ್ಕೆ ಭಂಗವಾದೀತೆಂದು ಆಸ್ಪತ್ರೆಗೆ ತೋರಿಸದೆ ಮಾಸ್ತರರು ಮಗನನ್ನು ಕಳೆದು ಕೊಳ್ಳುತ್ತಾರೆ. ಈ ನೋವಿನಿಂದ ಹೆಂಡತಿ ವ್ರತಾಚರಣೆ ಕಡಿಮೆ ಮಾಡಿದರೂ ಅದು ತಮ್ಮ ಕರ್ಮವಿಪಾಕವೆಂದು ಬಗೆದ ಮಾಸ್ತರರು ಮೊದಲಿನಂತೆ ಶ್ರದ್ಧೆ ನಿಷ್ಠೆಯಿಂದ ವ್ರತಾಚರಣೆಗಳನ್ನು ಮಾಡುತ್ತಾರೆ. ಇದು ಅವರಿಗೆ ದೇವರ ಬಗೆಗಿದ್ದ ನಂಬಿಕೆ, ಭಕ್ತಿಯನ್ನು ಸೂಚಿಸುತ್ತದೆ.

[illegible]

ಇಂತಹ ದೈವಭಕ್ತರು, ಸದ್ಗುಣಿಗಳಾದ ಮಾಸ್ತರರು ಹೆಣ್ಣಿನ ಮೋಹ ಮತ್ತು ಹುಡುಗನ ಮೇಲಿನ ದ್ವೇಷದಿಂದ ಹಾದಿ ತಪ್ಪಿದಾಗ ಅವರ ಮನಸ್ಸನ್ನು ಪರಿವರ್ತಿಸಿ ಅವರನ್ನು ಸರಿಯಾದ ಮಾರ್ಗದಲ್ಲಿ ನಡೆಯುವಂತೆ ಮಾಡುವವನು ಸಾವಳಗಿ ಶಿವಲಿಂಗೇಶ್ವರ. ರೋಜ ಮತ್ತು ಗಿರಿಯಪ್ಪನಿಂದ ತಾವು ಮೋಸ ಹೋದದನ್ನು ಅರಿತ ಜೀ.ಕೆ.ಮಾಸ್ತರರು ಊರೂರು ಅಲೆಯುತ್ತಾ ತಾವು ಮೋಸಹೋದುದನ್ನು ನೆನೆಸಿಕೊಳ್ಳುತ್ತಾ ಮನಸ್ಸಿಗೆ ಶಾಂತಿಯಿಲ್ಲದೆ ವಿಚಲಿತರಾಗಿರುತ್ತಾರೆ. ಆಗ ಮಾಸ್ತರರು ಸಾವಳಗಿ ಶಿವಲಿಂಗನ ಧ್ಯಾನ ಮಾಡಿದಾಗ ಶಿವಲಿಂಗ ಶಿವರೂಪಧರಿಸಿ ಗಿರಿಯಪ್ಪನಂತಹ ಚಿಕ್ಕಹುಡುಗನ ರೂಪದಲ್ಲಿ ನರ್ತಿಸುತ್ತಾ ಮಾಸ್ತರರಿಗೆ ದರ್ಶನ ಕೊಡುತ್ತಾನೆ. ಶಿವನ ರೂಪದಲ್ಲಿ ಗಿರಿಯಪ್ಪನನ್ನು ನೋಡಿದ ಮಾಸ್ತರರು ತಮ್ಮ ತಪ್ಪಿಗೆ ಪಶ್ಚಾತಾಪ ಪಡುತ್ತಾರೆ. ಗಿರಿಯಪ್ಪನನ್ನು ಭೆಟ್ಟಿಯಾಗಿ, ತಮಗೆ ಶಿವದರ್ಶನ ಕೊಟ್ಟ ವಿಷಯ ಹೇಳಿ, ಅವನಿಗೆ ನೌಕರಿ ವ್ಯವಸ್ಥೆಮಾಡಿ ತಮ್ಮ ಮನೆಯನ್ನು ಅವರಿಗೆ ಬರೆದುಕೊಟ್ಟು, ಅವರ ಮದುವೆಗೆ ಸಹಾಯ ಮಾಡುತ್ತಾರೆ. ಜೊತೆಗೆ 'ನಿಮ್ಮ ಪವಿತ್ರವಾದ ಆಸೆಗಳು ಏನಿವೆಯೋ ಅವನ್ನೆಲ್ಲ ಶಿವಲಿಂಗಸ್ವಾಮಿ ಈಡೇರಿಸಲಿ' ಎಂದು ಹಾರೈಸುತ್ತಾರೆ.

ತಮ್ಮ ಕಾರ್ಯದಕ್ಷತೆ, ನಿಷ್ಠೆ, ಸಮಯಪಾಲನೆ, ಪರೋಪಕಾರತೆಯಿಂದ ಇಡೀ ಊರಿನಲ್ಲಿಯೇ ಹೆಸರು ಗಳಿಸಿದ್ದ ಕರಿಬಸಯ್ಯ ಮಾಸ್ತರರು ಕೇವಲ ಕ್ಷಣಿಕ ಸುಖದ ಬೆನ್ನು ಹತ್ತಿ ತಮ್ಮ ವ್ಯಕ್ತಿತ್ವವನ್ನು ಕಳೆದುಕೊಳ್ಳುತ್ತಾರೆ. ಮಗು ತಪ್ಪು ಮಾಡಿದಾಗ ಅವನಿಗೆ ಬುದ್ಧಿ ಹೇಳಿ ತಿದ್ದುವ ತಾಯಿಯಂತೆ, ಸಾವಳಗಿ ಶಿವಲಿಂಗೇಶ್ವರ ಮಾಸ್ತರರಿಗೆ ದರ್ಶನವಿತ್ತು, ಅವರ ತಪ್ಪನ್ನು ತಿದ್ದುತ್ತಾನೆ. ಅವರಿಂದ ಯುವಪೀಳಿಗೆಗೆ ಸಹಾಯಕವಾಗುವಂತೆ ಮಾಡುತ್ತಾನೆ. ಈ ಕಾದಂಬರಿಯಲ್ಲಿ ಸಾವಳಗಿ ಶಿವಲಿಂಗೇಶ್ವರ ತಪ್ಪುಮಾಡಿದ ಮಕ್ಕಳನ್ನು ತಿದ್ದುವ ತಾಯಿಯಾಗಿ ಮಾಸ್ತರರು ಮತ್ತೆ ತಮ್ಮ ಮೂಲ ನಡುವಳಿಕೆಯನ್ನು ಅಳವಡಿಸಿಕೊಳ್ಳುವಂತೆ ಮಾಡಿ, ನಮ್ಮ ಸಂಸ್ಕೃತಿಯ ರಕ್ಷಕನಾಗಿ ತೋರುತ್ತಾನೆ.

'ಸಿಂಗಾರೆವ್ವ ಮತ್ತು ಅರಮನೆ', ಕಾದಂಬರಿಯಲ್ಲಿ ಬರುವ ದೇವಿ ಕುಮುದವ್ವ, ಶಿವಾಪುರದ ಪಶ್ಚಿಮಕ್ಕಿರುವ ಹುಣಸೆಮೆಳೆಯ ಅಂಚಿನಲ್ಲಿ ಕುಮುದವ್ವನ ವಾಸಸ್ಥಾನ. ಹುಣಸಿಮೆಳೆಯ ಅಂಚಿನಲ್ಲಿರುವ ಮೊಳಕಾಲೆತ್ತರದ ಪೌಳಿಯ ಮಧ್ಯ ಮಡಿಕೆಯಾಕಾರದ ಕುಮುದವ್ವನ ಗುಡಿಗೆ ಚಿಕ್ಕ ಬಾಗಿಲಿದ್ದು ಅದಕ್ಕೆ ಬಿಳಿಪರದೆ ಇಳಿಬಿಡಲಾಗಿದೆ. ಒಳಗಡೆ ತೊಡೆ ಅಗಲಿಸಿ ಕುಳಿತ ಬೆತ್ತಲೆ ಕುಮುದವ್ವನ ಮೂರ್ತಿಯ ಎರಡೂ ಕೈಗಳಲ್ಲಿ ಮತ್ತು ತಲೆಯ ಸ್ಥಾನದಲ್ಲಿ ಕಮಲದ ಹೂಗಳಿವೆ. ಆದ್ದರಿಂದಲೇ ಅವಳಿಗೆ ಕುಮುದವ್ವ ಎಂಬ ಹೆಸರು ಬಂದಿರಬಹುದೆಂದು ಕಂಬಾರರು ಅಭಿಪ್ರಾಯ ಪಡುತ್ತಾರೆ.

ಇಂತಹ ಕುಮುದವ್ವನ ಗುಡಿಯ ಹತ್ತಿರ ಹೆಣ್ಣುಮಕ್ಕಳು ತಪ್ಪಿಯು ಸಹ ಸುಳಿಯುತ್ತಿರಲಿಲ್ಲ. ಅವರು ಹರಕೆ ಹೊತ್ತರು ಅದನ್ನು ಸಲ್ಲಿಸುತ್ತಿದ್ದದ್ದು ಗಂಡಸರ ಮುಖಾಂತರ. ಹಿಂದೆ ಇದು ತಾಂತ್ರಿಕರಸ್ಥಳವಾಗಿದ್ದೆ ಇದಕ್ಕೆ ಕಾರಣವಾಗಿರಬಹುದೆಂದು ಕಂಬಾರರು ಅಭಿಪ್ರಾಯಪಡುತ್ತಾರೆ. ಜೊತೆಗೆ ಈ ಕುಮುದವ್ವನ ಗುಡಿ ಹುಣಸೆಮೆಳೆ ಹತ್ತಿರವಿದ್ದು, ಈ ಹುಣಸೆಮೆಳೆ ದಟ್ಟವಾಗಿ ಆವರಿಸಿದ್ದರಿಂದ, ಇಲ್ಲಿ ಕೊಲೆ, ಬಲತ್ಕಾರದಂತಹ ಯಾವುದೇ ಅಹಿತಕರ ಘಟನೆಗಳು ನಡೆಯಲು ಪ್ರಶಸ್ತವಾದ ಜಾಗ ಇದಾಗಿತ್ತು. ಆದುದರಿಂದ, ಇಂತಹ ಸ್ಥಳಗಳಿಗೆ ಹೆಣ್ಣುಮಕ್ಕಳು ಹೋದರೆ ಅವರಿಗೆ ಅಪಾಯ ಕಟ್ಟಿಟ್ಟ ಬುತ್ತಿಯಾಗಿರುತ್ತಿತ್ತು ಜೊತೆಗೆ ಕೊಲೆಮಾಡಿದ ಹೆಣಗಳನ್ನು ಈ ಮೆಳೆಯ ಹತ್ತಿರ ಇಟ್ಟಿದ್ದರ ಪ್ರಸ್ತಾಪ ಕಾದಂಬರಿಯಲ್ಲಿ

ಬರುತ್ತದೆ. ಆದ್ದರಿಂದ ಹೆಣ್ಣುಮಕ್ಕಳು ಸಂಕಷ್ಟಕ್ಕೆ ಈಡಾಗಬಾರದೆಂಬ ಉದ್ದೇಶದಿಂದ ಈ ರೀತಿಯ ಆಚರಣೆಯನ್ನು ಶಿವಾಪುರದ ಜನ ಅನುಸರಿಸುತ್ತಿರಬಹುದು.

ಈ ಕುಮುದವ್ವನಿಗೆ ಹರಕೆ ಹೊತ್ತವರು ತಮ್ಮ ಹರಕೆಯನ್ನು ತೀರಿಸುತ್ತಿದ್ದುದು ತಾವು ಹರಕೆ ಹೊತ್ತ ವಸ್ತುವನ್ನು ಕದ್ದು ತಂದು ದೇವರಿಗೆ ಅರ್ಪಿಸುವದರ ಮೂಲಕ. ತಾವು ದುಡಿದು ಗಳಿಸಿದ್ದನ್ನು, ಆ ಹಣದಿಂದ ತಂದದ್ದನ್ನು ಆ ದೇವರಿಗೆ ಹರಕೆ ಒಪ್ಪಿಸುವ ಪದ್ಧತಿ ಅಲ್ಲಿರಲಿಲ್ಲ. ಇನ್ನು ದೇವಿಯ ಜಾತ್ರೆಯನ್ನು ಆಚರಿಸುತ್ತಿದ್ದದ್ದು ಇದೇ ರೀತಿ ವಿಶಿಷ್ಟವಾಗಿ. ಜಾತ್ರೆಯ ಹಿಂದಿನ ದಿನ ಊರಗಂಡಸರು ದೇವಿಗುಡಿಯಲ್ಲಿ ಸೇರಿ ನಂತರ ದೇಸಾಯಿ ಮನೆಯಿಂದ ಜೋಡು ತೆಂಗಿನಕಾಯಿ ತಂದು ದೇವರ ಮುಂದೆ ಒಡೆದ ತಕ್ಷಣ ಗಂಡಸರು ಹಲಗೆ ಬಾರಿಸುತ್ತಾ ಜಾತ್ರೆಗೆ ಬೇಕಾದ ಸಾಮಾನುಗಳನ್ನು ಕದ್ದುತರಲು ಬೆಳಗಾವಿಗೆ ಹೋಗುತ್ತಾರೆ. ಅಲ್ಲಿ ಜಾತ್ರೆಗೆ ಬೇಕಾದ ಸೀರೆ, ಕಣ, ಕೋಳಿ, ಕುರಿ ಮುಂತಾದವುಗಳನ್ನು ಕದ್ದು ಊರಿಗೆ ತಂದು, ಹಲಗೆ ಬಾರಿಸುತ್ತಾ ಅವನ್ನು ಪ್ರದರ್ಶಿಸುತ್ತಾ ದೇವರ ಗುಡಿಗೆ ಹೋಗುತ್ತಾರೆ. ನಂತರ ಬೇಟೆಗಳನ್ನು ಬಲಿಕೊಟ್ಟು ಎಲ್ಲರೂ ಸೇರಿ ಊಟ ಮಾಡಿದರೆ ಜಾತ್ರೆ ಮುಗಿಯಿತು. ಗಂಡಸರು ಹಲಗೆ ಬಾರಿಸುತ್ತಾ ಊರಿನಿಂದ ಹೊರಗೆ ಹೋಗುವಾಗ ಚಿಲಕ ಹಾಕಿ ಭದ್ರಗೊಳಿಸಿದ ಬಾಗಿಲುಗಳನ್ನು ಅವರು ಬೆಳಗಾವಿಯಿಂದ ಮರಳಿ ಹಲಗೆ ಬಾರಿಸುತ್ತಾ ಊರಿಗೆ ಬರುವವರೆಗೆ ತೆಗೆಯುತ್ತಿರಲಿಲ್ಲ.

ಶಿವಾಪುರದ ಜನ ಇಷ್ಟುದಿವಸ ಕದ್ದರೂ ಒಮ್ಮೆಯೂ ಮಾಲಿಕರಿಗೂ, ಪೋಲಿಸರಿಗೂ ಸಿಕ್ಕಿಬಿದ್ದಿಲ್ಲ. ಇದಕ್ಕೆ ತಮ್ಮನ್ನು ಕುಮುದವ್ವಳು ರಕ್ಷಿಸುತ್ತಿರುವದೇ ಕಾರಣ ಎಂಬ ನಂಬಿಕೆ ಶಿವಾಪುರದ ಜನರದ್ದು. ಇದಕ್ಕೆ ಶಿವಾಪುರದ ಜನರ ಚಾಣಾಕ್ಷತೆ ಮತ್ತು ಪೋಲಿಸರ ಮತ್ತು ವಸ್ತುಗಳ ಮಾಲಿಕರ ಮಡ್ಡತನವು ಕಾರಣವಾಗಿರಬಹುದೆಂಬ ಅಭಿಪ್ರಾಯ ಲೇಖಕರದ್ದು. ಶಿವಾಪುರದ ಜನ ಪರವೂರಿಗೆ ಹೋಗಿ ಇಷ್ಟೆಲ್ಲ ಕದ್ದು ಬಂದರು ಅವರ ಊರಲ್ಲಿ ಒಂದು ದಿನವೂ ಕಳ್ಳತನವಾಗುತ್ತಿರಲಿಲ್ಲ. ಅದಕ್ಕೆ ಕುಮುದವ್ವಳ ರಕ್ಷಣೆ ಕಾರಣ ಎಂಬ ಅಭಿಪ್ರಾಯ ಜನರದ್ದಾದರೆ, ಇಡೀ ಊರಲ್ಲಿ ದೇಸಾಯರದ್ದು ಮಾತ್ರ ಶ್ರೀಮಂತ ಮನೆತನವಾಗಿದ್ದು, ಉಳಿದವರೆಲ್ಲ ಬಡವರು. ಜನ ಕದ್ದರೆ ದೇಸಾಯರ ಮನೆಯಿಂದಲೇ ಕದಿಯಬೇಕಾಗುತಿತ್ತು. ಆದ್ದರಿಂದ ದೇಸಾಯರು ಉಪಾಯ ಮಾಡಿ ನಮ್ಮೂರಲ್ಲಿ ಜನ ಕಳ್ಳತನ ಮಾಡಬಾರದೆಂದು ದೇವಿಯ ಹತ್ತಿರ ಹೇಳಿಸಿದ್ದಾರೆಂದು, ಆದ್ದರಿಂದ ನಮ್ಮೂರಲ್ಲಿ ಕಳ್ಳತನವಾಗುತ್ತಿರಲಿಲ್ಲ. ದೇಸಾಯರ ಈ ಉಪಾಯ ಈಗೀಗ ಜನರಿಗೆ ತಿಳಿಯುತ್ತಿದೆ ಎಂದು ಕಂಬಾರರು ಅಭಿಪ್ರಾಯ ಪಡುತ್ತಾರೆ. ಕುಮುದವ್ವನೊಂದಿಗೆ ಭಾವನಾತ್ಮಕ ಬೆಸುಗೆ ಹೊಂದಿದ್ದ ಹಳ್ಳಿಯ ಜನರು ಅವಳೇ ತಮಗೆ ಕಳ್ಳತನ ಮಾಡಲು ಕಲಿಸಿದ್ದು, ಅವಳೇ ನಮ್ಮನ್ನು ಕಾಯುವವಳೆಂದು ನಂಬಿದ್ದಾರೆ. ಜಾತ್ರೆಗಾಗಿ ಕಳ್ಳತನ ಮಾಡಲು ಹೊರಡುವಾಗ ಹಲಗೆ ಸಪ್ಪಳದೊಂದಿಗೆ ಮುಚ್ಚುತ್ತಿದ್ದ ಬಾಗಿಲುಗಳು ಮತ್ತೆ ಹಲಗೆ ಸಪ್ಪಳದೊಂದಿಗೆ ತೆರೆಯಲು, ಊರಲ್ಲಿ ಗಂಡಸರು ಇಲ್ಲದ ವೇಳೆಯಲ್ಲಿ ಅಹಿತಕರ ಘಟನೆಗಳು ನಡೆಯಬಾರದೆಂಬ ಮುಂಜಾಗ್ರತೆಯ ದೃಷ್ಟಿಯೇ ಕಾರಣವಾಗಿರಬಹುದು.

ಇಂತಹ ಹುಣಸೆಮೆಳೆಯ ಕುಮುದವ್ವ ಫಲದೇವತೆ. ಅವಳು ಬೇಡಿದವರಿಗೆ ಬೇಡಿದ ವರವನ್ನು ನೀಡುವವಳು. ಮಕ್ಕಳಿಲ್ಲದ ಬಂಜೆಯರಿಗೆ ಮಕ್ಕಳನ್ನು ಕೊಡುವವಳು. ಊರ ಜನ ತಮಗೇನೆ ಕಷ್ಟ–ಸುಖ ಬಂದರೂ ಅದನ್ನು ಕುಮುದವ್ವನ ಪ್ರಸಾದವೆಂದು ತಿಳಿದು ಸ್ವೀಕರಿಸುವವರು. ನಿರ್ವೀರ್ಯ ಗಂಡನನ್ನು

[illegible]

ಮದುವೆಯಾದ ಸಿಂಗಾರೆವ್ವ ತಾಯಿಯಾಗದಾಗ, ಅವಳತ್ತೆ ನಾಗವ್ವ ಗಂಡಮಗನನ್ನು ಹೆತ್ತುಕೊಟ್ಟರೆ ತನ್ನ ಚಿನ್ನದ ನಡಪಟ್ಟಿಯನ್ನು ಕೊಡುವುದಾಗಿ ಹೇಳುತ್ತಾಳೆ. ಆಗ ಸಿಂಗಾರೆವ್ವ ಹರಕೆ ಹೊರುವದು ಕುಮುದವ್ವನಿಗೆ. ತನ್ನ ಅತ್ತೆ ಕೊಡುವ ಚಿನ್ನದ ನಡಪಟ್ಟಿಯನ್ನು ಕುಮುದವ್ವನಿಗೆ ಕೊಡುವುದಾಗಿ ಹರಕೆ ಹೊರುತ್ತಾಳೆ. ಜೊತೆಗೆ ಪ್ರತಿ ಸೋಮವಾರ ಉಪವಾಸ ಮಾಡವದಾಗಿಯೂ, ಮಗನಾದರೆ ಮೂರುವರ್ಷ ಎತ್ತಿಕೊಂಡು ಬಂದು ಶಿವನಿಂಗನಿಗೆ ಕೊಂಡ ಹಾಯುವದಾಗಿಯೂ, ಸಿದ್ಧರಾಮಸ್ವಾಮಿಗಳಿಗೆ ಬೆಳ್ಳಿ ಚಡಿ ಮಾಡಿಸಿ ಕೊಡುವದಾಗಿಯೂ ಸಾವಳಗಿ ಶಿವಲಿಂಗೇಶ್ವರನಿಗೆ ಹರಕೆ ಹೊರುತ್ತಾಳೆ. ತಮಗೆ ಕಷ್ಟಗಳು ಬಂದಾಗ, ಹರಕೆ ಹೊತ್ತು ಅವನ್ನು ತೀರಿಸಿದರೆ, ದೇವರು ನಮ್ಮ ಕಷ್ಟಗಳನ್ನು ಪರಿಹರಿಸಿ ನಮ್ಮನ್ನು ರಕ್ಷಿಸುತ್ತಾನೆ ಎಂಬ ಭಾವನೆ ನಮ್ಮದು. ಇದೇ ರೀತಿ ಸಿಂಗಾರೆವ್ವ ತನಗೆ ಮಕ್ಕಳಾಗುವದಿಲ್ಲ, ತಾನು ಬಂಜೆ ಎಂಬ ನೋವನ್ನು ನಿವಾರಿಸಲು ದೇವರ ಮೊರೆ ಹೋಗುತ್ತಾಳೆ.

ಕುಮುದವ್ವ ಸಂತಾನ ನೀಡುವ ದೇವತೆ. ಸಿಂಗಾರೆವ್ವ ತಾಯ್ತನದ ಸದೃಢತೆಯನ್ನು ಮತ್ತು ಹಂಬಲವನ್ನುವುಳ್ಳವಳು. ಆದರೆ ಆಕೆಗೆ ದೊರೆತ ಗಂಡ ಮಾತ್ರ ಅವಳ ಆಸೆಯನ್ನು ಪೂರೈಸಲು ಅಶಕ್ತನಾದವನು. ಮರ್‍ಯಾನನ್ನು ದ್ವೇಷಿಸುತ್ತಿದ್ದ, ಅವನನ್ನು ಕೊಲ್ಲಲ್ಲು ಯತ್ನಿಸಿದ ಸಿಂಗಾರೆವ್ವ ಕೊನೆಗೆ ಗಂಡನ ಚಟದಿಂದ ಬೇಸತ್ತು ಮರ್‍ಯಾನನ್ನು ಕೂಡಿ ತಾಯಿಯಾಗುತ್ತಾಳೆ. ಸಿಂಗಾರೆವ್ವ ಅನೈತಿಕ ಮಾರ್ಗದಿಂದಲಾದರೂ ಕುಮುದವ್ವನಿಂದ ವರಪಡೆಯುತ್ತಾಳೆ. ಆದರೆ ಆ ಮಗುವಿಗೆ ಮಾತ್ರ ಸಮಾಜದಲ್ಲಿ ಸ್ಥಾನ ದೊರೆಯುವುದಿಲ್ಲ. ಕುಮುದವ್ವ ಅವಳ ಬಂಜೆತನ ನಿವಾರಿಸುವದರೊಂದಿಗೆ ಅವಳ ಮೇಲೆ ಬರಬಹುದಾಗಿದ್ದ ಕೊಲೆಯ ಅಪವಾದವನ್ನು ದೂರ ಮಾಡುತ್ತಾಳೆ.

ಈ ಕಾದಂಬರಿಯಲ್ಲಿ ದೇವರ ರೂಪ ಎಂದು ಭಾವಿಸುವ ಸಾಧುಗಳ ಪಾತ್ರಗಳು ಬರುತ್ತವೆ. ಅರಮನೆಕಟ್ಟುವಾಗ ಅಲ್ಲಿದ್ದ ಪತ್ರಿವನವನ್ನು ನಾಶಮಾಡಿದಾಗ ಆ ಸನ್ಯಾಸಿ 'ಅರಮನೆಪತ್ರಿವನವಾಗಲಿ' ಎಂಬ ಶಾಪಕೊಟ್ಟಿದ್ದನೆಂದು ಹೇಳಲಾಗುತ್ತದೆ. ಇಂದಿನ ಅರಮನೆಯ ಸ್ಥಿತಿಗೆ ಸನ್ಯಾಸಿಯ ಶಾಪವೇ ಕಾರಣ ಎಂದು ಜನರು ನಂಬಿದ್ದಾರೆ. ಸಾಧುಗಳು ದೇವರ ಸಮಾನ ಅವರಿಗೆ ಕಷ್ಟಕೊಟ್ಟರೆ ತೊಂದರೆಗೆ ಈಡಾಗಬೇಕಾಗುತ್ತದೆಂಬ ನಂಬಿಕೆ ಜನತೆಯದ್ದು.

ಸಿಂಗಾರೆವ್ವಗೆ ಮಕ್ಕಳಾಗದಾಗ ಸನ್ಯಾಸಿ ಹುಚ್ಚಯ್ಯ ಬಂದು ಆಕೆಗೆ ಮಕ್ಕಳಾಗುವ ಭವಿಷ್ಯ ನುಡಿಯುತ್ತಾನೆ. ಅಮವಾಸ್ಯೆಯ ರಾತ್ರಿ ಪೂಜೆ ಮಾಡುವ ವ್ಯವಸ್ಥೆ ಮಾಡಲು ಹೇಳುತ್ತಾನೆ. ತಾಂತ್ರಿಕಸಿದ್ಧಿಯನ್ನು ಪಡೆದ ಈತ ಅಮಾವಾಸ್ಯೆಯ ರಾತ್ರಿ ವಿಭಿನ್ನ ಬಗೆಯ ವಸ್ತುಗಳನ್ನು ತರಿಸಿ ತಾಂತ್ರಿಕಪೂಜೆಮಾಡುವಾಗ ಅಚಾನಕ ಅವನ ಸಾವು ಸಂಭವಿಸಿ, ಮರ್‍ಯಾ ಅವನನ್ನು ಕುಮುದವ್ವನ ಗುಡಿಯ ಹತ್ತಿರದ ಗುಡಿಸಲಿನಲ್ಲಿ ಇಟ್ಟು ಬರುತ್ತಾನೆ. ಅದೇ ವೇಳೆಗೆ ಮಳೆ ಬೇರೆ ಆಗಿದ್ದರಿಂದ ಜನ ಹುಚ್ಚಯ್ಯ ಮಳೆಗಾಗಿ ಸಮಾಧಿಗೆ ಕುಳಿತು ಶಿವನಪಾದ ಸೇರಿದನೆಂದು ಅವನ ತಪಸ್ಸಿನಿಂದ ಮಳೆಯಾಗುತ್ತದೆಯೆಂದು ಭಾವಿಸಿ ವಿಜೃಂಭಣೆಯಿಂದ ಅವನ ಅಂತ್ಯಕ್ರೀಯೆ ಮಾಡುತ್ತಾರೆ. ಆಕಸ್ಮಿಕವಾಗಿ ಕೊಲೆಯ ರೀತಿಯಲ್ಲಿ ಸತ್ತ ಸಾಧು ಇಲ್ಲಿ ಮಳೆಗಾಗಿ ಪ್ರಾಣತ್ಯಾಗಮಾಡಿದನೆಂದು ದೈವದಸ್ಥಾನಕ್ಕೇರುತ್ತಾನೆ.

'ಶಿಖರಸೂರ್ಯ' ಕಾದಂಬರಿಯಲ್ಲಿ ಬರುವ ಮಾತೃದೇವತೆ ಅಮ್ಮ ಅಥವಾ ಬೆಟ್ಟದ ಅಮ್ಮ. ಶಿವಾಪುರದ ಬೆಟ್ಟದ ಮೇಲಿನ ಗವಿ ಈ ದೇವಿಯ ವಾಸಸ್ಥಾನ. ಗವಿಯೊಳಗಡೆ ಕೆಂಪುಕಲ್ಲಿನಲ್ಲಿ ಮಾಡಿದ ಮಗುವಿಗೆ

ಜನ್ಮ ನೀಡುತ್ತಿರುವ ತಾಯಿಯ ಶಿಲ್ಪವೇ ಬೆಟ್ಟದ ಅಮ್ಮ. ಈ ಅಮ್ಮನ ಗವಿಯೊಳಗಡೆ ಹಬ್ಬದ ದಿನದ ಹೊರತು ಉಳಿದ ದಿನ ಹೆಣ್ಣುಮಕ್ಕಳಿಗೆ ಪ್ರವೇಶ ನಿಷೇಧ. ಇವಳು ತಾಂತ್ರಿಕ ದೇವತೆ ಮತ್ತು ಅವಳ ಆರಾಧಕರು ತಾಂತ್ರಿಕರಾಗಿರುವದೇ ಇದಕ್ಕೆ ಕಾರಣ. ಇಂತಹ ಅಮ್ಮನ ಪೂಜಾರಿ ಅಥವಾ ಆರಾಧಕ ಶಿವಪಾದ. ಸಾಕ್ಷಾತ ಶಿವನೇ ಅವನ ದೇಹದಲ್ಲಿ ವಾಸಮಾಡುತ್ತಾನೆ, ಆದ್ದರಿಂದ ಅವನು ನಡೆಯುವಾಗ ಒಂದು ಹೆಜ್ಜೆ ಕಂಡು ಮತ್ತೊಂದು ಶಿವನ ಹೆಜ್ಜೆ ಮಾಯವಾಗಿರುತ್ತದೆಂಬ ನಂಬಿಕೆ ಜನರದ್ದು. ಇವನಿಗೆ ತಾಂತ್ರಿಕರ ಮೇಲೆ ವಿಶೇಷ ಅಧಿಕಾರವಿದೆಯೆಂದು ಅವನ ಆಶೀರ್ವಾದ ಸಮ್ಮತಿ ಇಲ್ಲದೆ ತಾಂತ್ರಿಕರು ಸಿದ್ಧಿ ಪ್ರಯೋಗ ಮಾಡುವಂತಿಲ್ಲ ಎಂದು ಜನ ನಂಬಿದ್ದಾರೆ.

ಇಂತಹ ಶಿವಪಾದರು ದೀರ್ಘಾಯುಷಿಗಳು, ಇಚ್ಛಾಮರಣಿಗಳು. ಮನುಷ್ಯರನ್ನು ಚಿರಂಜೀವಿಯಾಗಿಸುವ ವಿದ್ಯೆ ಅವರಿಗೆ ಗೊತ್ತಿದ್ದರೂ ಅವರು ಅದನ್ನು ಪ್ರಯೋಗಿಸಿ ಚಿರಂಜೀವಿಗಳಾಗದೆ ಅಮ್ಮನ ಸೂಚನೆ ಸಿಕ್ಕ ತಕ್ಷಣ ತಮ್ಮ ಜೀವನವನ್ನು ಮುಗಿಸುವವರು. 'ಈ ಭೂಮಿಯ ಮೇಲೆ ಬಂದ ಪ್ರತಿಯೊಬ್ಬರು ಮರಳಿ ಭೂಮಿಗೆ ಹೋಗಬೇಕು ಈ ಚಕ್ರತಟಸ್ಥವಾಗಿರದೆ ಸದಾ ಕ್ರಿಯಾಶೀಲವಾಗಿರಬೇಕು. ಜೊತೆಗೆ ತನ್ನಿಂದ ಹುಟ್ಟಿದ ಮಕ್ಕಳಲ್ಲಿ ಈ ಚಿರಂಜೀವಿತ್ವದ ಮೂಲಕ ಭೇದಭಾವ ಉಂಟುಮಾಡಬಾರದು' ಎಂಬ ಆಸೆ ಅಮ್ಮನದು. ಅದರಂತೆ ತಮ್ಮ ಕಾಲ ಮುಗಿಯಿತೆಂದು ಅನಿಸಿ, ಅಮ್ಮನಿಂದ ಸೂಚನೆ ಬಂದಾಗ ಶಿವಪಾದ ಇನ್ನೊಬ್ಬ ಅರ್ಹನನ್ನು ಶಿವಪಾದನನ್ನಾಗಿ ಮಾಡಿ ಗವಿಯ ಅಂತರಂಗ ಪ್ರವೇಶಿಸುತ್ತಾನೆ. ಅಲ್ಲಿರುವ ಮುಂಚಿನ ಶಿವಪಾದನ ತೊಡೆಯ ಮೇಲೆ ಕುಳಿತು ಸಮಾಧಿಸ್ಥನಾಗುತ್ತಿರುತ್ತಾನೆ. ಅಮ್ಮನ ಬೆಳಗಿನ ಪೂಜೆ, ಹನಿ ಪೂಜೆ, ಮಧ್ಯಾಹ್ನದ ಪೂಜೆ, ರಾತ್ರಿಯ ಶಾಂತಿ ಪೂಜೆಗಳನ್ನು ಮಾಡುವದು ಈ ಶಿವಪಾದನೆ.

ಶಿವಪಾದರುಗಳು ವೈದ್ಯವಿದ್ಯೆಯಲ್ಲಿ ಪರಿಣಿತರು. ಜನರನ್ನು ರೋಗರುಜಿನುಗಳಿಂದ ರಕ್ಷಿಸುವ ಸಲುವಾಗಿ ತಾಯಿ ಇವರಿಗೆ ವೈದ್ಯವಿದ್ಯೆಯನ್ನು ಧಾರೆ ಎರೆದಿದ್ದಳು. ವೈದ್ಯವಿದ್ಯೆಗಾಗಿ ಸಸ್ಯಗಳನ್ನು ಕೀಳುವಾಗ ಇವರು ಮೊದಲು ತಾಯಿಗೆ ನಂತರ ಅಮ್ಮನ ಕಾಡಿಗೆ, ಅಲ್ಲಿರುವ ಪ್ರಾಣಿಗಳಿಗೂ ಪ್ರಾರ್ಥಿಸಿ ನಂತರ ತಾವು ಔಷಧಕ್ಕಾಗಿ ಕೀಳುವ ಸಸ್ಯವನ್ನು ಪ್ರಾರ್ಥಿಸಿ, ನಂತರ ತಾವು ಒಂದು ಜೀವವನ್ನು ಉಳಿಸುವ ಉದ್ದೇಶದಿಂದ ಇದನ್ನು ಕೀಳುತ್ತಿದ್ದೇನೆಂದು ಹೇಳಿ ಸಸ್ಯವನ್ನು ಕೀಳಬೇಕಾಗಿತ್ತು. ತಮ್ಮನ್ನು ರಕ್ಷಿಸುವ ತಮ್ಮ ಜೊತೆ ಬದುಕುವ ಕಾಡು, ಪ್ರಾಣಿಗಳು, ಸಸ್ಯಗಳ ಬಗ್ಗೆ ಸದಾಭಿಪ್ರಾಯ ಬೆಳಸಿಕೊಳ್ಳಲಿ, ಅವುಗಳನ್ನು ಬೇಕಾಬಿಟ್ಟಿಯಾಗಿ ಬಳಸಿ ನಿಸರ್ಗ ಸಮತೋಲನ ಕೆಡದಂತೆ ಮಾಡಿ ಅವನ್ನು ಕಾಪಾಡಲಿ ಎಂಬ ಭಾವನೆ ಅಮ್ಮನದು.

ಶಿವಾಪುರ, ಶಿವಾಪುರದ ಕಾಡು, ಅಲ್ಲಿಯ ಸಸ್ಯಸಂಪತ್ತು, ಅಲ್ಲಿಯ ಜನಗಳ ರಕ್ಷಕಿ ಬೆಟ್ಟದ ಅಮ್ಮ. ಶಿವಾಪುರವನ್ನು ರೋಗರುಜಿನುಗಳಿಂದ ಅಲ್ಲಿಯ ಜನರಲ್ಲಿ ಜಗಳತಂಟೆಗಳು ಬರದಂತೆ, ಅಲ್ಲಿಯ ಜನರಿಗೆ ಆಹಾರದ ಕೊರತೆಯಾಗದಂತೆ ರಕ್ಷಿಸುವವಳು ಈ ಅಮ್ಮ. ಜೊತೆಗೆ ಮಗುವಿಗೆ ಜನ್ಮ ನೀಡುವ ಮಾದರಿಯಲ್ಲಿರುವ ಅಮ್ಮ ಇಲ್ಲಿರುವ ಮನುಷ್ಯ, ಪ್ರಾಣಿ, ಸಸ್ಯರಾಶಿಗಳಿಗೆ ಫಲವಂತಿಕೆಯ ಶಕ್ತಿನೀಡಿ, ಈ ಸ್ಥಳಕ್ಕೆ ಚಲನಶೀಲತೆಯನ್ನು ನೀಡಿ ಸೃಷ್ಟಿಕ್ರಿಯೆಯಲ್ಲಿ ತೊಡಗಿದವಳು. ಬೆಟ್ಟದ ತಾಯಿ ತನ್ನ ನಂಬಿದ ಭಕ್ತರನ್ನು ಸಂಕಷ್ಟದಿಂದ ಪಾರುಮಾಡುವ ತನಗೆ ದ್ರೋಹಮಾಡಿದವರಿಗೆ ಶಿಕ್ಷೆಯನ್ನು ಕೊಡುವ ಶಕ್ತಿಯನ್ನು ಹೊಂದಿದವಳು. ಈ ತಾಯಿಗೆ ಶಿವಾಪುರ ಮತ್ತು ಸುತ್ತಮುತ್ತಲಿನ ಹಟ್ಟಿಗಳಲ್ಲೆಲ್ಲ ಇವಳ ಭಕ್ತರಿದ್ದು

ಅವರು ದೇವಿಯ ಹಾಡು ಹಾಡುತ್ತಾ, ಕತೆ ಹೇಳುತ್ತಾ ಪಾದಯಾತ್ರೆ ಮಾಡುವ ಮೂಲಕ ಶಿವಾಪುರಕ್ಕೆ ಬಂದು ಇವಳ ಸೇವೆ ಮಾಡುತ್ತಿದ್ದರು.

ಶಿಖರಸೂರ್ಯನ ಮಗಳು ಗೌರಿ ಹೋದ ಜನ್ಮದಲ್ಲಿ ಯಕ್ಷಿಯಾಗಿದ್ದು, ಈ ಜನ್ಮದಲ್ಲಿ ಸಾತ್ವಿಕ ಗುಣಗಳನ್ನು ಬೆಳೆಸಿಕೊಂಡವಳು. ತಂದೆ ತನ್ನನ್ನು ಶಿವಾಪುರದ ಶಿವಪಾದ ನಿನ್ನಡಿಗೆ ಕೊಟ್ಟು ಮದುವೆಮಾಡುವದಿಲ್ಲವೆಂದು ತಿಳಿದು ಶಿವಾಪುರಕ್ಕೆ ಹೋಗುತ್ತಿರುವ ಜೋಗತಿಯರ ಬೆನ್ನು ಹತ್ತಿ ಶಿವಾಪುರಕ್ಕೆ ನಡೆಯತ್ತಾಳೆ. ಅವಳು ಗರ್ಭಿಣಿಯಾಗಿದ್ದರಿಂದ ಮತ್ತು ಅವಳ ಗರ್ಭನಿವಾರಣೆಗಾಗಿ ಶಿಖರಸೂರ್ಯ ಮದ್ದನ್ನು ಹಾಕಿದ್ದರಿಂದ ದಾರಿಯಲ್ಲಿ ಅವಳು ಹೊಟ್ಟೆನೋವಿನಿಂದ ನರಳುವಂತಾದಾಗ ಅವಳಿಗೆ ಹಾದಿಯುದ್ದಕ್ಕೂ ಸಾಂತ್ವನದ ಮಾತುಗಳನ್ನಾಡುತ್ತಾ, ಅವಳನ್ನು ಆರೈಕೆ ಮಾಡುತ್ತಾ, ರಕ್ಷಿಸುತ್ತಾ ಹೋಗುವವಳು ಶಿವಾಪುರದ ದೇವಿ. ತನ್ನನ್ನು ನಂಬಿ ಬರುವ ಭಕ್ತರು ಕಷ್ಟದಲ್ಲಿರುವದನ್ನು ತಿಳಿದ ದೇವಿ ಅಲ್ಲಿಗೆ ಧಾವಿಸಿ ತಾನೇ ಅವರ ಸೇವೆ ಮಾಡುತ್ತಾಳೆ. ನೋವಿನಿಂದ ನರಳುತ್ತಿರುವ ಗೌರಿಯನ್ನು ಮಗುವಿನಂತೆ ಆರೈಕೆಮಾಡುತ್ತಾಳೆ. ಜೊತೆಗೆ ಅವಳಿಗೆ ಬೇಕಾದ ಮದ್ದನ್ನು ತರುವದಕ್ಕಾಗಿ ನಿನ್ನಡಿ ಮತ್ತು ಚಂಡಿದಾಸರನ್ನು ಅಲ್ಲಿಗೆ ಕಳುಹಿಸಿ ಅವರ ಮೂಲಕ ಗೌರಿಯ ಆರೈಕೆ ಮಾಡಿ ಅವಳು ಸುರಕ್ಷಿತವಾಗಿ ಶಿವಾಪುರ ತಲುಪುವಂತೆ ಮಾಡುತ್ತಾಳೆ. ತಾಯಿ 'ಅಮ್ಮ' ಎಂಬ ಹೆಸರಿಗೆ ತಕ್ಕಂತೆ ಕಷ್ಟದಲ್ಲಿರುವವರನ್ನು ಕೂಸಿನಂತೆ ಕಾಪಾಡುತ್ತಾಳೆ.

ಮುಂದಿನ ಶಿವಪಾದನಾಗುವ ನಿನ್ನಡಿ ಅಮ್ಮನ ಅನುಮತಿಯಂತೆ ಬೆಳ್ಳಿ ಜಟ್ಟಿಗರ ಮಗನಾದವನು. ನಿನ್ನಡಿ ಅಮ್ಮನ ಸೇವಕ ಶಿವಪಾದನಾಗಿ ಅವಳ ಇಚ್ಛೆಯಂತೆ ಜನತೆಯ ರಕ್ಷಣೆಗಾಗಿ ವೈದ್ಯವಿದ್ಯೆಯನ್ನು ಕಲಿಯುತ್ತಾನೆ. ಧಾನ್ಯವನ್ನು ಚಿನ್ನ ಮಾಡುವ, ಹುಲ್ಲನ್ನು ಸೈನಿಕರನ್ನಾಗಿ ಮಾಡುವ ರಸವಿದ್ಯೆಯನ್ನು ಕಲಿತರೂ ತಾಯಿಯ ಮಾತನ್ನು ಕೇಳಿ ಅದನ್ನು ತಿರಸ್ಕರಿಸಿ ಚಿನ್ನವನ್ನು ಧಾನ್ಯವನ್ನಾಗಿ, ಸೈನಿಕರನ್ನು ಹುಲ್ಲನ್ನಾಗಿ ಮಾಡುವ, ಜೀವಪರವಿದ್ಯೆಯನ್ನು ಕಲಿಯುತ್ತಾನೆ. ಅಮ್ಮನ ಪ್ರತಿರೂಪವಾದ ಈತ ವೈದ್ಯವಿದ್ಯೆಯ ಮೂಲಕ ಜನತೆಯ ಸೇವೆ ಮಾಡುತ್ತಾನೆ. ತಿನ್ನುವ ಅನ್ನವನ್ನು ಚಿನ್ನವನ್ನಾಗಿ ಮಾಡುವ ಜೀವವಿರೋಧಿ ಗುಣ ಅಮ್ಮನಂತೆ ಇವನಿಗೂ ಇಲ್ಲ. ಜನತೆಗೆ ಉಣ್ಣಲು ಅನ್ನ, ದನಗಳಿಗೆ ಮೇಯಲು ಹುಲ್ಲು ಬೇಕು ಹೊರತು, ಚಿನ್ನ ಸೈನಿಕರಲ್ಲ. ಚಿನ್ನ, ಸೈನ್ಯದಿಂದ ಹೊಟ್ಟೆ ತುಂಬದು. ಧಾನ್ಯ ಬೀಜವಾಗಿ, ಮತ್ತೆ ಬೆಳೆಯಾಗಿ ನಿರಂತರವಾಗಿ ಸಾಗುವ ಜೀವಚಕ್ರ. ಚಿನ್ನ, ಸೈನ್ಯಗಳು ಒಮ್ಮೆ ಮಾತ್ರ ಬಳಕೆಯಾಗುವ ದುರ್ಬಲವಸ್ತುಗಳು. ಜೀವಿಗಳಿಗೆ ಉಪಯೋಗವಾಗುವ ಸಬಲವಸ್ತುಗಳನ್ನು ಸೃಷ್ಟಿಸುವ ಬಯಕೆ ಅಮ್ಮನಂತೆ ಇವನದು. ಅಮ್ಮನಿಂದ ಬಳುವಳಿಯಾಗಿ ಬಂದ ವಿದ್ಯೆಯಿಂದ ದುರ್ಬಲವಸ್ತುಗಳಿಗೆ ಜೀವತುಂಬಿ ಅಮ್ಮನ ಚೇತನರೂಪದ ಆಸೆಯನ್ನು ಸಾಕಾರಗೊಳಿಸುತ್ತಾನೆ. ತನ್ನ ಆಜ್ಞೆಯಂತೆ ನಡೆಯುವ ಇವನಿಗೆ ಅಮ್ಮ ಅವನ ಕಾರ್ಯದಲ್ಲಿ ಯಶಸ್ಸುಗಳಿಸುವಂತೆ ಮಾಡುತ್ತಾಳೆ.

ಶಿಖರಸೂರ್ಯ ಅಮ್ಮನ ಪ್ರಕೃತಿನಿಯಮಕ್ಕೆ ವಿರುದ್ಧವಾಗಿ ಹೊರಟವನು. ಇವನದು ಸಜೀವವಾದ ಧಾನ್ಯ, ಹುಲ್ಲುಗಳನ್ನು ತನ್ನ ಉಪಭೋಗದ ಆಸೆಯಿಂದ ಅವುಗಳಿಗೆ ಚಿನ್ನ, ಸೈನ್ಯದ ರೂಪ ಕೊಟ್ಟು ಅವನ್ನು ನಿರ್ಬಲಗೊಳಿಸಲು ಹೊರಟವನು. ಅವನಿಗೆ ತನ್ನ ಭೋಗ ಜೀವನ ಮುಖ್ಯ ಹೊರತು, ಸೃಷ್ಟಿಯ ನಿಯಮ, ಜನತೆಯ ಹಿತವಲ್ಲ. ಇವನು ಸಹ ಶಿವಾಪುರದ ಅಮ್ಮನ ಬೆಟ್ಟದಲ್ಲಿಯೇ ವೈದ್ಯವಿದ್ಯೆ

ಕಲಿತು ಚಿರಂಜೀವಿಯಾಗಲು ಆಸೆಪಟ್ಟು ಅಮ್ಮನ ನಿಯಮಕ್ಕೆ ವಿರುದ್ಧವಾದ ವಿದ್ಯೆಕಲಿಯುತ್ತಾನೆ. ಅಮ್ಮನ ವಿರುದ್ಧ ಹೊರಟ ಪರಿಣಾಮವಾಗಿ ಚಿರಂಜೀವಿಯಾಗಬೇಕಾಗಿದ್ದ ಇವನು ವಿಷಪುರುಷನಾಗಿ ಮಾರ್ಪಡುತ್ತಾನೆ. ವಿಶಾಲ ಸಾಮ್ರಾಜ್ಯದ ಸಾರ್ವಭೌಮನಾಗಿ ಮೆರೆಯಲು ಆಸೆಪಟ್ಟು ದೈವ, ಪ್ರಕೃತಿಯ ನಿಯಮಗಳನ್ನು ಗಾಳಿಗೆ ತೂರಿ ಹೊರಟಿದ್ದರಿಂದ ಇಡೀ ಸಾಮ್ರಾಜ್ಯವನ್ನು ಕಳೆದುಕೊಂಡು ಹದ್ದಾಗುವ ಪರಿಸ್ಥಿತಿ ಅವನಿಗೆ ಬರುತ್ತದೆ. ನಮ್ಮನ್ನು ರಕ್ಷಿಸುವ ದೇವರಿಗೆ, ಸೃಷ್ಟಿಶಕ್ತಿಗೆ ವಿರುದ್ಧವಾಗಿ ಹೊರಟಪರಿಣಾಮ, ಅಮ್ಮ ಅವನಿಗೆ ನೀಡಿದ ಶಿಕ್ಷೆಗೆ ಈಡಾಗುವಂತಾಗುತ್ತದೆ.

ಕಂಬಾರರ ಕಾದಂಬರಿಗಳಲ್ಲಿ ದೇವರು ಮತ್ತು ದೇವಸ್ಥಾನಗಳು ಜಾಗೃತ ತಿಳುವಳಿಕೆಯ ಕೇಂದ್ರಗಳಾಗಿ, ಮನುಷ್ಯನಲ್ಲಿ ಅರಿವನ್ನು, ಜ್ಞಾನವನ್ನು ಮೂಡಿಸುವ ಶಕ್ತಿಗಳಾಗಿವೆ. ಇಲ್ಲಿಯ ದೈವಗಳು ಮನುಷ್ಯ ಮತ್ತು ನಿಸರ್ಗದಿಂದ ವಿಭಿನ್ನತೆ ಹೊಂದದೆ ಮೂರರ ನಡುವೆ ಪರಸ್ಪರ ಭಾವನಾತ್ಮಕ, ಸಾವಯವ ಸಂಬಂಧವನ್ನು ಏರ್ಪಡಿಸಿ, ದೇವರನ್ನು ಮಾನವೀಕರಿಸುವ ಮೂಲಕ, ಪ್ರಕೃತಿಯನ್ನು ದೈವೀಕರಿಸುವ ಮೂಲಕ, ಮನುಷ್ಯರಲ್ಲಿ ದೈವೀಗುಣಗಳನ್ನು ತುಂಬುವ ಮೂಲಕ ಮೂರನ್ನೂ ಸಮೀಕರಿಸಲಾಗಿದೆ. ದೇವರು ವಿಭಜನೆಗೊಳ್ಳುವ ಸಮಾಜವನ್ನು ರಕ್ಷಿಸಿ, ಜನತೆಯಲ್ಲಿ ಕೂಡಿಬಾಳುವ ಗುಣ ಹುಟ್ಟಿಸಿ, ಬಾಂಧವ್ಯಕುದುರಿಸಿ, ಸಮತಾಭಾವನೆಯನ್ನು ಬೆಳೆಸುವ ಮೂಲಕ ಸಮಾಜವನ್ನು ಅಖಂಡಗೊಳಿಸುತ್ತಾನೆ. ದಣಿದ ದೇಹಗಳಿಗೆ ಜಾತ್ರೆ, ಉತ್ಸವ ರೂಪದಲ್ಲಿ ಮನರಂಜನೆ ನೀಡಿ, ಉತ್ಸಾಹ ಉಲ್ಲಾಸ ವೃದ್ಧಿಸಿ, ಸಹಕಾರ ಸಂಘಟನೆಗಳನ್ನು ಬೆಳೆಸಿ, ಜನರಲ್ಲಿರುವ ಕ್ರಿಯಾಶೀಲತೆಯನ್ನು ಜಾಗೃತಗೊಳಿಸಿ ಅವರನ್ನು ಚಲನಶೀಲರನ್ನಾಗಿ ಮಾಡುತ್ತವೆ. ಕಷ್ಟಗಳಿಂದ ನರಳುವವರಿಗೆ ರೋಗಗಳಿಂದ ಬಳಲುವವರಿಗೆ ತಾಯಿಯಂತೆ ಆರೈಕೆಮಾಡಿ ಅವರನ್ನು ರಕ್ಷಿಸುತ್ತವೆ. ಮನುಷ್ಯನಲ್ಲಿರುವ ಅತ್ಯಾಸೆ, ದರ್ಪ, ವ್ಯಾವಹಾರಿಕ ದೃಷ್ಟಿಕೋನವನ್ನು ಬುಡಮೇಲು ಮಾಡಿ ಸರ್ವಸಮಾನತೆಯ ಸಮಾಜಕ್ಕೆ ಮನ್ನಣೆ ನೀಡುತ್ತವೆ. ದೈವಗಳು ನಗರ ಜನರ ನಿರ್ಭಾವುಕತೆಯನ್ನು, ಆಧುನಿಕ ಸಂಸ್ಕೃತಿ ನಮ್ಮ ಸಂಸ್ಕೃತಿಯ ಅನನ್ಯತೆಯ ಮೇಲೆ ಮಾಡಿದ ದಾಳಿಯನ್ನು ಹತ್ತಿಕ್ಕುವ ಪ್ರಬಲಶಕ್ತಿಗಳಾಗಿವೆ. ಮನುಷ್ಯನನ್ನು ಅಪೂರ್ಣತೆಯಿಂದ ಪೂರ್ಣತೆಯ ಕಡೆಗೆ ಚಲಿಸುವಂತೆ ಮಾಡುವ ಶಕ್ತಿ ಹೊಂದಿವೆ.

೫.೨. ಪ್ರಾಕೃತಿಕ ನೆಲೆಗಳು

ಜನಪದ ಕೃಷಿ ಸಂಸ್ಕೃತಿಯಿಂದ ಬಂದ ಕಂಬಾರರು ತಮ್ಮ ಸಾಹಿತ್ಯ (ಕಾದಂಬರಿ)ದೊಳಗಡೆ ಸಮುದಾಯ, ಸಂಸ್ಕೃತಿಯನ್ನು ಕಟ್ಟಿಕೊಟ್ಟಿದ್ದಾರೆ. ಅವರ ಕಾದಂಬರಿಯೊಳಗಡೆ ಪ್ರಕೃತಿ ತಾಯಾಗಿ, ದೈವವಾಗಿ ಗೌರವ, ಆರಾಧನೆಗಳನ್ನು ಪಡೆಯುತ್ತಾಳೆ. ಹಾಗೆಯೇ ಭ್ರಮೆಯ ಬೆನ್ನು ಹತ್ತಿದ ಮಾನವ ಪ್ರಕೃತಿಮಾತೆಯನ್ನು ನಿರ್ಲಕ್ಷಿಸಿದರೆ ಆಗುವ ಪರಿಣಾಮಗಳು, ನಮ್ಮ ಮಿತಿಮೀರಿದ ಭೋಗ ಸಂಸ್ಕೃತಿಯಿಂದ ಅವಳ ಮೇಲೆ ಆಕ್ರಮಣ ಮಾಡಿ ಎದುರಿಸುತ್ತಿರುವ ಸಮಸ್ಯೆಗಳು ಇಲ್ಲಿ ಸ್ಥಾನ ಪಡೆಯುತ್ತವೆ. ಪ್ರಕೃತಿ ಇರುವುದು ಮನುಷ್ಯರ ಅನುಕೂಲಕ್ಕೆ. ಮನುಷ್ಯ ಅದಕ್ಕೆ ವಿರುದ್ಧವಾಗಿ ಹೋದರೆ ತಮ್ಮ ಅಂತ್ಯವನ್ನು ತಾವೇ ತಂದುಕೊಳ್ಳುತ್ತಾರೆಂಬುದನ್ನು ಕಂಬಾರರು ತಮ್ಮ ಸಾಹಿತ್ಯದಲ್ಲಿ ನಿರೂಪಿಸಿದ್ದಾರೆ. ಕಂಬಾರರ ದೃಷ್ಟಿಯಲ್ಲಿ ಜೀವಸೆಲೆ, ಚೈತನ್ಯದಾಯಕ, ಕ್ರಿಯಾತ್ಮಕತೆಯ ರೂಪಕವಾದ ನಿಸರ್ಗ ಅವರ ಕಾದಂಬರಿಗಳಲ್ಲಿಯೂ ಅದೇಸ್ಥಾನ ಪಡೆದಿದೆ.

ಕಂಬಾರರ 'ಕರಿಮಾಯಿ' ಕಾದಂಬರಿಯಲ್ಲಿ ಪ್ರಕೃತಿ ಜಗತ್ತಿನ ಜೀವರಕ್ಷಕ ತಾಯಿಯಾಗಿ, ದೈವವಾಗಿ ಸ್ಥಾನಪಡೆಯುತ್ತದೆ. ನಿಸರ್ಗ ಊರನ್ನು ರಕ್ಷಿಸುವ, ಊರಜನ ನಿಸರ್ಗವನ್ನು ಸಂತೃಪ್ತಿಗೊಳಿಸುವ ಆಚರಣೆಗಳು ನಿಸರ್ಗದ ಸಮೃದ್ಧತೆಯು ಈ ಕಾದಂಬರಿಗಳಲ್ಲಿ ಬರುತ್ತವೆ. ಇಲ್ಲಿ ಸಮುದಾಯಕ್ಕೆ ಕೇಡಾಗುವಿಕೆಯನ್ನು ನಿಸರ್ಗ ತನ್ನ ಕ್ರಮ ತಪ್ಪುವಿಕೆಯ ಮೂಲಕ ಭವಿಷ್ಯ ನುಡಿಯುತ್ತದೆ.

ಶಿವಾಪುರ ತನ್ನ ಪಡುವಣದ ದಿಕ್ಕಿಗೆ ಎತ್ತರವಾದ ದಟ್ಟಡವಿಯನ್ನು, ಬಡಗಣದಲ್ಲಿ ಕೆರೆಯನ್ನು, ಮೂಡಣ, ತೆಂಕಣ ದಿಕ್ಕುಗಳಲ್ಲಿ ಹೊಲ, ತೋಟಗಳನ್ನು ಹೊಂದಿ ಹೀಗೆ ಸುತ್ತಲೂ ಕೆರೆಕಾಡು, ಹೊಲ, ಮಡ್ಡಿ, ಅಡವಿಗಳ ಮೂಲಕ ನಿಸರ್ಗದಿಂದ ಆವೃತ್ತವಾದ ಊರು. ಸುತ್ತಲೂ ಆವರಿಸಿರುವ ನಿಸರ್ಗ ಶಿವಾಪುರವನ್ನು ಕಾಯುವುದರೊಂದಿಗೆ ಶಿವಾಪುರದ ಜನತೆಗೆ ಅಗತ್ಯವಾದ ಕುಡಿಯುವ ನೀರು, ಬೇಸಾಯದ ಭೂಮಿ, ಕಾಡಿನ ಉತ್ಪನ್ನಗಳನ್ನು ಒದಗಿಸಿ ಅವರ ಅಗತ್ಯಗಳನ್ನು ಪೂರೈಸುವ ರೀತಿಯಲ್ಲಿ ನಿರ್ಮಾಣವಾಗಿದೆ. ರಾತ್ರಿಯಾದರೆ ಒಂದು ಬೆಂಕಿಕೊಳ್ಳಿಯಾಗಿ, ಹಗಲಾದರೆ ಒಂದು ಕಪ್ಪು ಚುಕ್ಕೆಯಾಗಿ ಶಿವಾಪುರ ಕಾಣುತ್ತದೆ ಎಂದು ಕಂಬಾರರು ಹೇಳುತ್ತಾರೆ. ನಿಸರ್ಗದ ಮುಂದೆ ಈ ಗ್ರಾಮ ಚಿಕ್ಕದು, ನಿಸರ್ಗದ ಜೊತೆ ಸೇರಿದಾಗ ಮಾತ್ರ ನಮ್ಮ ಗ್ರಾಮಕ್ಕೆ ವಿಸ್ತಾರತೆ ಬರುತ್ತದೆ ಎಂಬ ಅಭಿಪ್ರಾಯ ಕಂಬಾರರದು. ನಿಸರ್ಗ ಮತ್ತು ಜನಸಮುದಾಯಗಳನ್ನು ಒಗ್ಗೂಡಿಸಿ ನೋಡುವ ಪ್ರಯತ್ನ ಇಲ್ಲಿದೆ. ನಿಸರ್ಗ ಮತ್ತು ಜನತೆಯ ನಡುವೆ ಸಾವಯುವ ಸಂಬಂಧವನ್ನು ಕಲ್ಪಿಸುವ ಪ್ರಯತ್ನವನ್ನು ಕಂಬಾರರು ಮಾಡುತ್ತಾರೆ. ಈ ನಿಸರ್ಗದಿಂದ ಆವೃತ್ತವಾದ ಊರಿಗೆ ಪರವೂರಿನೊಂದಿಗೆ ಸಂಪರ್ಕ ಕಲ್ಪಿಸುವ ಏಕೈಕ ರಸ್ತೆ ಬಂಡಿ ಹಾದಿಯು, ಶಿವಾಪುರ ಗ್ರಾಮ ಇನ್ನು ಆಧುನಿಕತೆಯ ಯಾವ ಸ್ಪರ್ಶವಿಲ್ಲದೇ ತನ್ನ ಮೂಲ ಸಂಸ್ಕೃತಿಯಲ್ಲಿಯೇ ಬದುಕುತ್ತಿರುವುದನ್ನು ಸ್ಪಷ್ಟಪಡಿಸುತ್ತದೆ.

ಈ ಶಿವಾಪುರದ ಆರಾಧ್ಯದೇವತೆ 'ಕರಿಮಾಯಿ'ಯ ಜನನಕ್ಕೆ ಕಾರಣಕರ್ತಳು ಭೂಮಿತಾಯಿ. ಶಿವಾಪುರದಲ್ಲಿ ದೇವದಾನವರುಗಳ ಯುದ್ಧದಿಂದ ಮಳೆಯಾಗದೆ, ಬೆಳೆ ಬರದೆ ಜನ ಸಂಕಷ್ಟಗಳನ್ನು ಅನುಭವಿಸುತ್ತಿರುವಾಗ, ಜನರ ಸಂಕಟಗಳನ್ನು ನೋಡಿ ಸಹಿಸಲು ಸಾಧ್ಯವಾಗದ ಭೂಮಿತಾಯಿ 'ಜನರ ಕಷ್ಟಗಳನ್ನು ನಿವಾರಿಸಿ ಅವರನ್ನು ರಕ್ಷಿಸು' ಎಂದು ಶಿವನ ಹತ್ತಿರ ಹೋಗಿ ಸೆರಗೊಡ್ಡಿ ಬೇಡುತ್ತಾಳೆ. ಇವಳ ಮೊರೆ ಕೇಳಿದ ಶಿವ ತನ್ನ ಬೆವರ ಹನಿಸಿಡಿಸಿ ಅದರಿಂದ ಹುಟ್ಟಿದ ಕರಿಮಾಯಿಯನ್ನು ಶಿವಾಪುರದ ರಕ್ಷಣೆಗೆ ಕಳಿಸುತ್ತಾನೆ.

ಮನುಷ್ಯನಿಗೆ ಬೇಕಾದ ಆಹಾರ, ನೀರು, ಬಟ್ಟೆ ಒದಗಿಸುವ ಭೂಮಿತಾಯಿ, ಬೇಸಾಯ ಮಾಡಿ ಬೆಳೆ ತೆಗೆಯಲು ಮಾನವನಿಗೆ ಅನುಕೂಲ ಮಾಡಿಕೊಡುತ್ತಾಳೆ. ಈ ಮೂಲಕ ನಮ್ಮ ಹೊಟ್ಟೆಯ ಹಸಿವು ತಣಿಸಿ, ನಮ್ಮ ರಕ್ಷಣೆ ಮಾಡುವ ಭೂಮಿತಾಯಿಗೆ ನಮ್ಮ ಜನಪದ ಸಂಸ್ಕೃತಿಯಲ್ಲಿ ಪೂಜ್ಯನೀಯಸ್ಥಾನ. ಜನಪದ ಗರತಿಯರು ತಮಗೆ ಅನ್ನ, ಬಟ್ಟೆ, ನೀರು ಕೊಟ್ಟು ಕಾಪಾಡುವ ಈ ಭೂಮಿತಾಯಿಯನ್ನು ಕುರಿತು

ಮುಂಜಾನೆ ಏಳುತಲಿ ಯಾರ್‍ಯಾರ ನೆನೆಯಲಿ
ಎಳ್ಳುಜೀರಿಗೆ ಬೆಳೆಯೋಳ। ಭೂಮಿತಾಯಿನ
ಎದ್ದೊಂದು ಗಳಿಗೆ ನೆನದೇನು॥

ಎಂದು ಹಾಡಿ ಎದ್ದ ತಕ್ಷಣ ಅವಳನ್ನು ನೆನೆಯುತ್ತಾರೆ. ಅಂತಹ ಭೂಮಿತಾಯಿ ಇಲ್ಲಿ ಬೆಳೆ ಬೆಳೆದು ಆಹಾರ ಪೂರೈಸುವುದರೊಂದಿಗೆ ಜನತೆಯ ಕಷ್ಟಗಳನ್ನು ಕಣ್ಣಾರೆ ನೋಡಿ ತಾಳದೆ, ಇವನ್ನು ನಿವಾರಿಸು ಎಂದು ದೇವರ ಹತ್ತಿರ ಹೋಗಿ ಸೆರಗೊಡ್ಡಿ ಬೇಡುತ್ತಾಳೆ. ಮಕ್ಕಳಿಗೆ ರೋಗರುಜಿನಗಳು, ಕಷ್ಟಗಳು ಬಂದಾಗ ಅವುಗಳಿಂದ ತನ್ನ ಮಕ್ಕಳನ್ನು ರಕ್ಷಿಸು ಎಂದು ತಾಯಿ ದೇವರನ್ನು ಸೆರಗೊಡ್ಡಿ ಬೇಡುವಂತ ಇಲ್ಲಿ ಭೂಮಿತಾಯಿ ಜೀವರಾಶಿಗಳ ರಕ್ಷಣೆಗೆ ಸೆರಗೊಡ್ಡಿ ದೇವರನ್ನು ಬೇಡುತ್ತಾಳೆ. ಹೀಗೆ ಸೆರಗೊಡ್ಡಿ ಬೇಡಿ ಭೂಮಿತಾಯಿ ತರುವುದು ಗ್ರಾಮರಕ್ಷಕಿಯಾದ ಕರಿಮಾಯಿಯನ್ನು. ಹೀಗೆ ದೇವರ ಸೃಷ್ಟಿಗೆ ಕಾರಣವಾದ ಭೂಮಿತಾಯಿ ಅವಳ ಗುಡಿಗೆ ಸ್ಥಳ ಒದಗಿಸಿದ್ದು ಸುತ್ತಲೂ ಮರಗಳಿಂದಾವೃತವಾದ ಪ್ರಕೃತಿಯ ಮಡಿಲಲ್ಲಿಯೇ. ಇಲ್ಲಿ ಭೂಮಿತಾಯಿ ಜೀವರಾಶಿಗಳನ್ನು ಸೃಷ್ಟಿಸುವದರೊಂದಿಗೆ ದೇವರನ್ನು ಸೃಷ್ಟಿಸಿ, ಅವಳಿಗೂ ಆಶ್ರಯ ನೀಡಿ ಅವಳಿಗೂ ತಾಯಿಯಾಗುತ್ತಾಳೆ.

ಪರಮಗೌಡನ ಮಗ ಶಿವನಿಂಗ ಆಚಾರ-ವಿಚಾರಗಳಿಂದ ಒಳ್ಳೆಯ ನಡತೆಯಿಂದ ಊರಲ್ಲಿ ಸಭ್ಯವ್ಯಕ್ತಿ ಎನಿಸಿದ್ದ. ಈತನ ಸಹಾಯ ಮಾಡುವ ಬುದ್ಧಿ, ರೀತಿನೀತಿಗಳಿಂದ ಗೌಡನಿಗೆ ತಕ್ಕ ಮಗನೆನಿಸಿದ್ದ. ಇಂತಹ ಶಿವನಿಂಗಗೌಡ ಈಜಲು ಹೋಗಿ ಕೆರೆಯಲ್ಲಿ ಬಿದ್ದ ಚಿಮಣಾಳನ್ನು ರಕ್ಷಿಸಿ, ಅವಳ ಹೃದಯದಲ್ಲಿ ಸ್ಥಾನ ಪಡೆಯುತ್ತಾನೆ. ಇವನನ್ನು ಮೋಹಿಸಿದ ಚಿಮಣಾ ಅವನು ತೋಟದಲ್ಲಿ ಹುರಿ ಹೊಸೆಯುತ್ತಾ ಕುಳಿತಾಗ ಅಲ್ಲಿಗೆ ಹೋಗಿ ಅವನಿಂದ ಹುರಿದ ಶೇಂಗಾ ತಿಂದು, ಲಗಮವ್ವನ ಬಟ್ಟಿ ಸರಾಯಿ ಕುಡಿಯುತ್ತಾ ಅದರ ನಿಶೆಯಲ್ಲಿ ತೋಟದಲ್ಲಿ ಬರುತ್ತಿವಾಗ ಜೋಲಿ ತಪ್ಪಿ ಅವನ ಮೇಲೆ ಬಿಳುತ್ತಾಳೆ. ಏಳಲು ಹೋದ ಅವನನ್ನು ಬಿಡದೆ ಅವನ ಜೊತೆ ಸಂಪರ್ಕ ಹೊಂದುವ ಈ ಮೂಲಕ ಸಭ್ಯವ್ಯಕ್ತಿಯಾಗಿದ್ದ ಶಿವನಿಂಗನಿಂದ ಅನೈತಿಕ ಕಾರ್ಯ ಮಾಡಿಸುತ್ತಾಳೆ.

ಸೀಗೆ ಹುಣ್ಣಿಮೆಯ ಹೊತ್ತಿಗೆ ಎಲ್ಲ ಹೊಲಗಳಲ್ಲಿ ಬೆಳೆಗಳು ಕಾಳು ಕಟ್ಟಿಕೊಂಡು ನಿಂತು ಮುಂದೆ ಅದರಿಂದ ಬರುವ ಫಸಲಿನ ಸೂಚನೆಯನ್ನು ನೀಡುತ್ತಿರುತ್ತವೆ. ತೆನೆ ಕಾಳು ಕಟ್ಟಿದ ಹೊತ್ತಿನಲ್ಲಿ ಮಳೆ ಬಂದರೆ ಆ ಬೆಳೆಗಳು ನಾಶವಾಗಿ ರೈತನಿಗೆ ಇದುವರೆಗೆ ಬೆಳೆದ ಯಾವ ಫಸಲುಗಳು ಕೈಗೆ ಬರದೆ ಅವನಿಗೆ ಕೈಗೆ ಬಂದ ತುತ್ತು ಬಾಯಿಗೆ ಬರದಂತಾಗುತ್ತದೆ. ಹಾಗಾಗಬಾರದೆಂದು ಪ್ರಕೃತಿಯು ಈ ಸಂದರ್ಭದಲ್ಲಿ ಮಳೆ ಸುರಿಸದೆ ಬೆಳೆಯ ರಕ್ಷಣೆಗೆ ಪೂರಕ ಪರಿಸರ ಒದಗಿಸುತ್ತದೆ.

ಪ್ರಕೃತಿಯಲ್ಲಿ ಕಾಲಕಾಲಕ್ಕೆ ಎಲ್ಲವೂ ಸರಿಯಾಗಿಯೇ ನಡೆಯಬೇಕು. ಪ್ರಕೃತಿ ತನ್ನ ಕ್ರಮವನ್ನು ಮೀರಿದರೆ ಜಗತ್ತಿನ ಎಲ್ಲ ಜೀವರಾಶಿಗಳಿಗೂ ಕಷ್ಟವಾಗುತ್ತದೆ. ಜೀವಹಾನಿಯಾಗುತ್ತದೆ. ಹಾಗೆಯೇ ಸಜ್ಜನರು ಹಾದಿ ತಪ್ಪಿದರೆ ಅದೇ ಪರಿಣಾಮ ಸಮಾಜದ ಮೇಲೂ ಆಗುತ್ತದೆ. ಶಿವಾಪುರದಲ್ಲಿ ಇವೆರಡು ಘಟನೆಗಳು ಏಕಕಾಲಕ್ಕೆ ನಡೆಯುತ್ತವೆ. ಸಜ್ಜನನಾದ ಗೌಡನ ಮಗ ಪೇಟೆಯ ಹೆಣ್ಣಿನ ಕೈಗೆ ಸಿಕ್ಕು ತಾನು ಇದುವರೆಗೂ ಕಾಯ್ದುಕೊಂಡಿದ್ದ ಜೀವನ ರೀತಿಯ ಕ್ರಮವನ್ನು ತಪ್ಪಿ ನೈತಿಕತೆಯನ್ನು ಕಳೆದುಕೊಳ್ಳುತ್ತಾನೆ. ಈ ಮೂಲಕ ನಮ್ಮ ಸಂಸ್ಕೃತಿಯ ತನ್ನ ಘಟ್ಟಿತನವನ್ನು ಕಳೆದುಕೊಳ್ಳುವಂತಾಗುತ್ತದೆ. ಈ ತಪ್ಪಿನ ಮುನ್ಸೂಚನೆಯಾಗಿ ಪ್ರಕೃತಿಯು ಅಕಾಲಿಕ ಮಳೆಯನ್ನು ಸುರಿಸುತ್ತದೆ. ಇದರಿಂದ ಇಲ್ಲಿಯವರೆಗೆ ಬೆಳೆದ ಬೆಳೆ ರೈತನ ಕೈಗೆ ಸಿಗದೆ ಹಾಳಾಗಿ ಹೋಗುತ್ತದೆ. ಅದೇ ರೀತಿ ಬೆಳೆದ ಮಗ ನಮ್ಮ ಸಂಸ್ಕೃತಿಯ ರಕ್ಷಕನಾಗಬೇಕಾದವನೂ

ಮಳೆಗೆ ಸಿಕ್ಕ ಬೆಳೆ ಹಾಳಾದಂತೆ ನಗರದ ಹೆಣ್ಣು ಚಿಮಣಾಳ ಕೈಗೆ ಸಿಕ್ಕು ನೈತಿಕತೆಯನ್ನು ಬೀಡುತ್ತಾನೆ. ಜೋಳದ ಹೊಲದಲ್ಲಿ ನಡೆದ ಆ ಘಟನೆಯಲ್ಲಿ ಜೋಳದ ತೆನೆಗಳು ಮುರಿದು ನೆಲಕಚ್ಚುತ್ತವೆ. ಹಾಗೆಯೇ ಮಳೆಯಿಂದಲೂ ಬೆಳೆ ನೆಲೆಕಚ್ಚುತ್ತವೆ. ರೈತನ ಕಣಜ ತುಂಬಿ ಜನರ ಹೊಟ್ಟೆ ತುಂಬಿಸಬೇಕಾಗಿದ್ದ ಬೆಳೆ, ಗೌಡನ ವಂಶೋದ್ಧಾರಕನಾಗಿ ಗ್ರಾಮ, ಸಂಸ್ಕೃತಿಯ ರಕ್ಷಣೆ ಮಾಡಬೇಕಾದ ಶಿವನಿಂಗ ಇಬ್ಬರೂ ಏಕಕಾಲಕ್ಕೆ ನಾಶ ಹೊಂದುತ್ತಾರೆ. ಪ್ರಕೃತಿಯ ಅಕಾಲಿಕತೆಯಿಂದ ಪ್ರಕೃತಿಯಲ್ಲಿರುವ ಬೆಳೆನಾಶವಾದಂತೆ, ಶಿವನಿಂಗಗೌಡ ತನ್ನ ದೇಹ ಮನಸ್ಸಿನ ಸ್ಥಿಮಿತತೆಯನ್ನು ಕಳೆದುಕೊಳ್ಳುವುದು ಪ್ರಕೃತಿಯ ಮಧ್ಯೆಯೇ.

ಪ್ರಕೃತಿಯು ಚೇತನವಾದದ್ದು. ಅದರಲ್ಲಿ ಜೀವವಿದೆ. ಸೌಂದರ್ಯವಿದೆ. ಸಮೃದ್ಧತೆ ಇದೆ. ಫಲವಿದೆ. ಪ್ರಕೃತಿಯ ಈ ಸೌಂದರ್ಯವನ್ನು ಹೆಣ್ಣಿನೊಂದಿಗೆ ಹೋಲಿಸಲಾಗುತ್ತದೆ. ಕಂಬಾರರು ತಮ್ಮ ಕಾದಂಬರಿಗಳಲ್ಲಿ ಪ್ರಕೃತಿಯ ಸೌಂದರ್ಯವನ್ನು ಹೆಣ್ಣಿನ ಸೌಂದರ್ಯದೊಂದಿಗೆ ಹೋಲಿಸಿದ್ದಾರೆ. ನಾಗರಪಂಚಮಿಯ ಹಬ್ಬದ ವೇಳೆಯಲ್ಲಿನ ಭೂಮಿಯ ಹಸಿರನ್ನು ಪ್ರಾಯದ ಹುಡುಗಿಗೆ ಹೋಲಿಸುತ್ತಾರೆ. ಪ್ರಾಯದ ಹುಡುಗಿಯರು ನೋಡುವವರ ಮನಸ್ಸನ್ನು ಆಕರ್ಷಿಸುತ್ತಾರೆ. ಹಾಗೆಯೇ ನಾಗರ ಹಬ್ಬದ ವೇಳೆಗೆ ಭೂಮಿಯ ಬೆಳೆಗಳು ಹಸಿರು ಬಣ್ಣಗಳಿಂದ ಆಕರ್ಷಕವಾಗಿ ಕಂಡು ಜನರನ್ನು ಆಕರ್ಷಿಸುತ್ತವೆ. ಸೀಗೆ ಹುಣ್ಣಿಮೆಯ ವೇಳೆಯ ಭೂಮಿಯನ್ನು ಬಸುರಿ ಹೆಣ್ಣಿಗೆ ಹೋಲಿಸಲಾಗುತ್ತದೆ. ಗರ್ಭಿಣಿ ಹೆಣ್ಣು ಹೇಗೆ ಗರ್ಭದಲ್ಲಿ ಮಗುವನ್ನು ಹೊತ್ತು ಮುಂದೆ ಮಗುವನ್ನು ಹೆರುವ ಮನೆ ತುಂಬುವ ನಿರೀಕ್ಷೆಯಲ್ಲಿರುತ್ತಾಳೆಯೋ, ಹಾಗೆ ಭೂಮಿ ಆಗ ಬೆಳೆಯನ್ನು ಹೊತ್ತು ಮುಂದೆ ರೈತನಿಗೆ ಫಸಲನ್ನು ಕೊಟ್ಟು ಅವನ ಕಣಜ ತುಂಬಲು ಕಾತುರದಲ್ಲಿರುತ್ತದೆ.

ಹೆಣ್ಣು ಮಗುವನ್ನು ಹೆತ್ತು, ಹೊತ್ತು, ಪಾಲನೆ, ಪೋಷಣೆ, ರಕ್ಷಣೆ ಮಾಡುತ್ತಾಳೆ. ಹಾಗೆಯೇ ಭೂಮಿತಾಯಿ ತನ್ನಲ್ಲಿ ಬೆಳೆ ಬೆಳೆದು, ರೈತನಿಗೆ ನೀಡಿ, ಜನತೆಯ ಹೊಟ್ಟೆ ತುಂಬಿಸುತ್ತಾಳೆ. ಇಬ್ಬರಲ್ಲಿಯೂ ಹೊರುವ, ಹೆರುವ ಸಮೃದ್ಧತೆಯ ಗುಣವಿದೆ. ಪಾಲನೆ ಪೋಷಣೆ ಮಾಡುವ ಪ್ರೀತಿವಾತ್ಸಲ್ಯದ ಮಮಕಾರದ ಗುಣಗಳಿವೆ. ತಾಯಿ ತನ್ನ ಮಕ್ಕಳನ್ನು ರಕ್ಷಿಸುವಂತೆ ಭೂಮಿತಾಯಿ ಜಗತ್ತನ್ನು ರಕ್ಷಿಸುತ್ತಾಳೆ. ಇವರಿಬ್ಬರಲ್ಲಿರುವ ಸಮಾನತೆಯ ಗುಣಗಳಿಂದ ಇವರಿಬ್ಬರನ್ನೂ ಸಮೀಕರಿಸಲಾಗಿದೆ.

ಸೃಷ್ಟಿಕ್ರಿಯೆ ಮಾಡುವ ಪ್ರಕೃತಿ, ಮನುಷ್ಯನ ಸೃಷ್ಟಿ ಕ್ರಿಯೆಯ ಮೂಲವಾದ ಕಾಮವನ್ನು ಉದ್ರೇಕಿಸುವುದರ ಜೊತೆಗೆ ಕಾಮುಕ ಕ್ರಿಯೆಗಳಿಗೆ ತನ್ನಲ್ಲೇ ಅವಕಾಶ ಒದಗಿಸುತ್ತದೆ. ಗುಡಸೀಕರನ ತಂಗಿ ಗಿರಿಜಾ ಬಸವರಾಜನ ಮೋಹಕ್ಕೆ ಬಲಿಯಾಗುವುದು, ಅವನನ್ನು ಸೇರುವುದು ತೋಟದ ಪ್ರಕೃತಿಯ ನಡುವೆಯೇ. ಚಿಮಣಾ ತನ್ನ ಮೋಹದಿಂದ ಶಿವನಿಂಗನನ್ನು ಸೆಳೆದು ಕೂಡುವುದು ನಿಸರ್ಗದ ಮಧ್ಯದಲ್ಲಿಯೇ.

ಕಂಬಾರರ 'ಕರಿಮಾಯಿ' ಕಾದಂಬರಿಯಲ್ಲಿ ಭೂಮಿಗೆ ಚರಗ ಚೆಲ್ಲುವ ಶಿವಾಪುರದ ಜನರ ವಿಚಾರ ಹೇಳುತ್ತಾರೆ. ಪ್ರಕೃತಿಯನ್ನು, ಭೂಮಿಯನ್ನು ಹೆಣ್ಣಿನೊಂದಿಗೆ ಸಮೀಕರಿಸಿದ ಮಾನವ ಹೆಣ್ಣಿನಂತೆ ಅವಳ ಜೀವಕ್ರಿಯೆಯಲ್ಲಿಯೂ ಆಚರಣೆಗಳನ್ನು ಮಾಡುತ್ತಾನೆ. ಗರ್ಭಿಣಿ ಹೆಣ್ಣುಮಗಳಿಗೆ ಸೀಮಂತ ಮಾಡಿ ಅವಳ ಬಯಕೆಗಳನ್ನು ಈಡೇರಿಸುವಂತೆ, ಬೆಳೆ ಬಂದು ತೆನೆಗಟ್ಟಿನಿಂತಾಗ ವಿವಿಧ ಬಗೆಯ ಅಡಿಗೆಗಳನ್ನು ಮಾಡಿ ಅವನ್ನು ಭೂಮಿತಾಯಿಗೆ ನೈವೇದ್ಯಮಾಡಿ ಅವನ್ನು ಹೊಲದ ತುಂಬ ಚೆರಗ ಚೆಲ್ಲಿ ಅವಳನ್ನು

ಸಂತೃಪ್ತಿಗೊಳಿಸುತ್ತಾರೆ. ಹೆಣ್ಣಿನಲ್ಲಿ ಹೇಗೆ ಬಯಕೆಗಳಿರುತ್ತವೆಯೋ ಹಾಗೆ ಭೂಮಿತಾಯಿಗೂ ಬಯಕೆಗಳಿರುತ್ತವೆ ಎಂಬ ಭಾವನೆ ಜನರದು. ಇವರ ದೃಷ್ಟಿಯಲ್ಲಿ ಹೆಣ್ಣು, ಭೂಮಿ ಬೇರೆ ಬೇರೆಯಲ್ಲ. ಲಗಮವ್ವ ಹೋಳಿ ಹುಣ್ಣಿಮೆಯಲ್ಲಿ ಕಾಮಣ್ಣನನ್ನು ಸುಟ್ಟ ಬೂದಿಯನ್ನು ಸೀಮೆಯ ಸುತ್ತ ಚೆಲ್ಲಿ ಬರುತ್ತಾಳೆ. ಅದರಿಂದ ರೋಗರುಜಿನಾದಿಗಳು ಊರಿಗೆ ಬರುವುದಿಲ್ಲ ಎಂಬ ನಂಬಿಕೆ ಶಿವಾಪುರದ್ದು. ಸುಟ್ಟ ಬೂದಿಯಲ್ಲಿ ರೋಗನಿರೋಧಕ ಶಕ್ತಿ ಇರುತ್ತದೆ. ಇದು ಭೂಮಿಗೆ ಗೊಬ್ಬರವಾಗಿಯೂ ಉಪಯೋಗವಾಗುತ್ತದೆ. ಸೃಷ್ಟಿಯಲ್ಲಿರುವ ಪ್ರತಿಯೊಂದು ವಸ್ತು ಮರುಬಳಕೆಯಾಗುವ ಪ್ರಕ್ರಿಯೆಯನ್ನು ಮತ್ತು ಜನಪದರು ಅದನ್ನು ಅರ್ಥಮಾಡಿಕೊಂಡು ಬಳಸುವ ರೀತಿಯನ್ನು ಇಲ್ಲಿ ಕಾಣುತ್ತೇವೆ.

ಸಿಂಗಾರೆವ್ವ ಮತ್ತು ಅರಮನೆ ಕಾದಂಬರಿಯಲ್ಲಿ ತಾಯಿಯಾದ ನಿಸರ್ಗ ಬಂಜೆಯಲ್ಲಿ ತಾಯ್ತನದ ಹಂಬಲ ಬೆಳೆಸುವ ಶಕ್ತಿಯಾಗಿ ಬರುತ್ತದೆ. ನಿಸರ್ಗ ನಾಶ ಮಾಡಿದವರು ತಾವೇ ನಾಶವಾಗುತ್ತಾರೆ ಎಂಬುದನ್ನು ಕಾದಂಬರಿ ಕಟ್ಟಿಕೊಡುತ್ತದೆ.

ಶಿವಾಪುರದ ಅರಮನೆ ಇದ್ದ ಜಾಗ ಮೊದಲು ಪತ್ರಿವನವಾಗಿದ್ದು, ಅರಮನೆ ಕಟ್ಟಲು ಆ ಜಾಗ ಪ್ರಶಸ್ತವೆಂದು ತಿಳಿದ ಅರಮನೆಯ ದೇಸಾಯರು, ಆ ಜಾಗ ನಾಶಮಾಡಿ ಅಲ್ಲಿ ಅರಮನೆ ಕಟ್ಟಿಸಿರುತ್ತಾರೆ. ಆ ವೇಳೆ ಅಲ್ಲಿಗೆ ಬಂದ ಸಾಧು ಅದನ್ನು ತಡೆದಾಗ, ಅವನನ್ನೇ ಅರಮನೆಗೆ ತಳಪಾಯ ಹಾಕಿ ಮುಚ್ಚುತ್ತಾರೆ. ಆ ವೇಳೆ ಸಾಧು 'ಅರಮನ್ಯಾಗ ಪತ್ರಿವನ ಬೆಳೆಯಲಿ' ಎಂದು ಶಾಪ ಕೊಟ್ಟು ಸಾಯುತ್ತಾನೆ. ಈಗ ಆ ಅರಮನೆ ಅವಸಾನದ ಹಂತ ತಲುಪಿದೆ.

ಪ್ರಕೃತಿ ದೈವ, ತಾಯಿ ಸಮಾನ. ಅದನ್ನು ನಾಶಮಾಡಬಾರದೆಂಬ ನಂಬಿಕೆ ನಮ್ಮ ಸಂಸ್ಕೃತಿಯಲ್ಲಿದೆ. ನಮಗೆ ಗಿಡಮರಗಳನ್ನು ಕಡಿಯುವ ಅವಶ್ಯಕತೆ ಬಂದಾಗ ಅವನ್ನು ಪೂಜಿಸಿ ಕಡಿಯುವ, ಆ ಸ್ಥಳದಲ್ಲಿ ಮತ್ತೊಂದು ಮರ ಬೆಳೆಸುವ ಪದ್ಧತಿಯನ್ನು ನಮ್ಮ ಸಂಪ್ರದಾಯದಲ್ಲಿ ಅಳವಡಿಸಿಕೊಂಡು ಬರಲಾಗಿದೆ. ಪ್ರಕೃತಿ ನಾಶ ಜೀವಸಂಕುಲದ ನಾಶ ಎಂಬ ಭಾವನೆ ನಮ್ಮದು. ಒಂದು ಮರವನ್ನು ಕಡಿದರೆ ಪಾಪ ಬರುತ್ತದೆಂದು ನಂಬಿರುವ ಸಂಸ್ಕೃತಿಯಲ್ಲಿ ದೇಸಾಯಿ ಇಡೀ ಪತ್ರಿವನವನ್ನೇ ಕಡಿಸಿ ನಾಶಗೊಳಿಸುತ್ತಾನೆ. ಬುದ್ಧಿ ಹೇಳಿದವನನ್ನು ಬಲಿಕೊಡುತ್ತಾನೆ. ಆಗ ಆತ ಕೊಡುವುದು 'ಅರಮನೆ ಪತ್ರಿವನವಾಗಲಿ' ಎಂಬ ಶಾಪ. ಆ ಶಾಪದಲ್ಲಿ ಹೀಗೆ ಪರಿಸರ ನಾಶ ಮಾಡುವವರ ಸಂತತಿ ನಾಶವಾಗಲಿ, ಅಲ್ಲಿ ಮತ್ತೆ ಜೀವಸಂಕುಲವಾದ ಪ್ರಕೃತಿ ಬೆಳೆಯಲಿ ಎಂಬ ಆಶಯವಿದೆ. ಹೀಗೆ ಶಾಪಕ್ಕೆ ಗುರಿಯಾಗಿ ರಚನೆಯಾದ ಆ ಅರಮನೆ ಜೀವಿಸುವುದು ನಿಸರ್ಗದಿಂದ ದೂರವಾಗಿಯೇ ನಿಸರ್ಗದಲ್ಲಿ ನಡೆಯುವ ಯಾವ ಕ್ರಿಯೆಗಳೂ ಅರಮನೆಯ ಜನತೆಗೆ ಅಪರಿಚಿತ. ಜೀವಸಂಕುಲಕ್ಕೆ ವಿರುದ್ಧವಾಗಿ ರಚಿತವಾದ ಅರಮನೆಯಲ್ಲಿ ಪ್ರಾಕೃತಿಕ ಚಲನಶೀಲತೆಯೇ ಇರಲಿಲ್ಲ. ಪ್ರಕೃತಿಯ ಚೈತನ್ಯಶಕ್ತಿ ನಾಶಗೊಳಿಸಿ ಹುಟ್ಟಿದ ಅರಮನೆ ಚೈತನ್ಯ ಹೀನವಾಗಿ ನಾಶವಾಗುತ್ತದೆ.

ಇಂತಹ ಅರಮನೆಯಲ್ಲಿ ಬೆಳೆದ ಸರಗಂ ದೇಸಾಯಿಯು ಸಹ ಪ್ರಕೃತಿಯ ಬಗ್ಗೆ ಅನಾಸಕ್ತಿ ಉಳ್ಳವನು. ಇವನು ತನ್ನ ಹೊಲ. ತೋಟದ ಬಗ್ಗೆ ಯಾವುದೇ ರೀತಿಯ ಆಸಕ್ತಿಯನ್ನು ಹೊಂದಿರಲಿಲ್ಲ. ಆಳುಗಳೇ ತಮಗೆ ಬೇಕಾದಷ್ಟು ಬೀಜಗೊಬ್ಬರ ಹಾಕಿ ಬೆಳೆ ತೆಗೆಯುತ್ತಿದ್ದರೂ, ಅವರು ಸಹ ಆಸಕ್ತಿಯಿಂದ ಈ

ಕಾರ್ಯ ಮಾಡುತ್ತಿರಲಿಲ್ಲ. ಇಂತಹ ನಿರ್ವೀರ್ಯ ಸರಗಂ ದೇಸಾಯಿ ಹುಟ್ಟದ್ದು ಚಲನಶೀಲ ಪ್ರಕೃತಿಯನ್ನು ನಾಶಗೊಳಿಸಿದ ಮನೆತನದಲ್ಲಿ. ಹಾಗೆಯೇ ಅವನು ಈ ಪ್ರಕೃತಿ ಬಗ್ಗೆ ಅನಾಸಕ್ತಿ ತಾಳಿದವ. ಜೀವಪರ ಪ್ರಕೃತಿಯ ಬಗ್ಗೆ ಆಸಕ್ತಿ, ಗೌರವ ಬೆಳೆಸಿಕೊಳ್ಳದ ಈತ ಜೀವ ನೀಡುವ ಶಕ್ತಿಯನ್ನು ಕಳೆದುಕೊಂಡಿರುತ್ತಾನೆ. ಫಲ ಕೊಡುವ ಸಮೃದ್ಧತೆಯ ದೇವತೆ ಕುಮುದವ್ವನ ಅನುಗ್ರಹದ ಊರಲ್ಲಿದ್ದು ಫಲ ಹೀನನಾಗುತ್ತಾನೆ.

ಸಿಂಗಾರೆವ್ವ ಮೊದಲಿನಿಂದಲೂ ತಾಯ್ತನದ ಹಂಬಲವುಳ್ಳ ಹೆಣ್ಣು. ಹುಡುಗಿಯಾಗಿದ್ದಾಗ ತಾಯಿಯಾಗಿ ಸಂಸಾರದ ಆಟ ಆಡುತ್ತಿದ್ದಳು. ನಿಸರ್ಗದ ಬಗ್ಗೆ ಪ್ರೇಮ ಹೊಂದಿದ್ದು, ಪ್ರಕೃತಿ ಅವಳಿಗೆ ನಿಸರ್ಗ ಸಹಜವಾದ ತಾಯ್ತನದ ಶಕ್ತಿ, ಲಕ್ಷಣಗಳನ್ನು ನೀಡಿತ್ತು. ಅವಳು ಆಕಳ ಕರುವನ್ನು ಎತ್ತಿ ಮುದ್ದಾಡಿ ಅದನ್ನು ತಾಯಿಯಂತೆ ಪ್ರೀತಿಸುತ್ತಿದ್ದಳು.

ಹಾಗೆಯೇ ಅರಮನೆಯ ಕಿಟಕಿಯ ಬಳಿ ನಿಂತು ನಿಸರ್ಗವನ್ನು ಆಸ್ವಾದಿಸುತ್ತಿದ್ದವಳು. ಅಲ್ಲಿ ಅವಳನ್ನು ಆಕರ್ಷಿಸಿದ್ದು ಹುಣಸಿಮೆಳೆ. ಹುಣಸಿಮೆಳೆ, ಬೋಳಾದ ಊರಲ್ಲಿ ಒತ್ತೊತ್ತಾಗಿ ಮರಗಳು ಬೆಳೆದ ಸ್ಥಳ. ಬೋಳಾದ ಊರಲ್ಲಿ ಆಕರ್ಷಿಸುವ ಮೆಳೆ ಸಾಯಂಕಾಲ ಅತಿ ಸುಂದರವಾಗಿ ಕಾಣುತ್ತದೆ. ಸಾಯಂಕಾಲ ಆ ಮರಗಳ ಸಂದಿಯಿಂದ ಬರುವ ಸೂರ್ಯಕಿರಣಗಳನ್ನು ಹಿಡಿಯುವ ಆಟಕ್ಕೆ ಜನರನ್ನು ಹಚ್ಚಿ ಮೆಳೆ ಆಕರ್ಷಿಸುತ್ತದೆ. ಅದರ ಸೌಂದರ್ಯ ಸವಿಯುತ್ತಾ ಒಳ ಪ್ರವೇಶಿಸಿದರೆ ಮತ್ತಷ್ಟು ಒಳಗೆ ಎಳೆದುಕೊಳ್ಳುವ ಅದು, ನಂತರ ಅವರ ದಿಕ್ಕು ತಪ್ಪಿಸುತ್ತದೆ. ನಂತರ ಆ ಮೆಳೆಯಿಂದ ಹೊರಬರಲಾರದ ಪರಿಸ್ಥಿತಿಗೆ ಜನ ಹೋಗುತ್ತಾರೆ. ಮೊದಲು ತನ್ನ ಸೌಂದರ್ಯ ಪ್ರದರ್ಶಿಸಿದ ಮೆಳೆ ನಂತರ ತನ್ನ ಭಯಾನಕತೆ ತೋರಿಸುತ್ತದೆ. ಅಲ್ಲಿನ ಭಯಾನಕತೆ ಮತ್ತು ಅಲ್ಲಿಂದ ಹೊರಬರಲಾರದ ಸ್ಥಿತಿಯಿಂದ ಒಳಪ್ರವೇಶಿಸಿದವರು ಅಲ್ಲಿಯೇ ಎದೆಯೊಡೆದು ಸಾಯುತ್ತಾರೆ. ಈ ಮೆಳೆ ದೆವ್ವ, ಭೂತ, ಪಿಶಾಚಿಗಳ ಆವಾಸಸ್ಥಾನ. ದೆವ್ವಗಳು ಸಹ ಈ ಹುಣಸಿಮೆಳೆಯ ಹೆಸರು ಕೇಳಿ ಬಿಟ್ಟರೆ ಓಡಿ ಹೋಗುತ್ತಿದ್ದವು. ಇಂತಹ ಮೆಳೆ ಬಗ್ಗೆ ಆಕರ್ಷಣೆ ಬೆಳೆಸಿಕೊಳ್ಳುವ ಸಿಂಗಾರೆವ್ವ ಸೀಗೆಹುಣ್ಣಿಮೆಯ ದಿನ ಚರಗಚೆಲ್ಲಲು ಹೋಗಿ ಆ ಮೆಳೆ ಪ್ರವೇಶಿಸುತ್ತಾಳೆ. ಅಲ್ಲಿ ಬಲಾತ್ಕಾರಕ್ಕೂ ಒಳಗಾಗಿ, ತಂದೆಯ ಹೆಣನೋಡಿ ಭಯಾನಕತೆಗೆ ಹೆದರಿ ಮೂರ್ಛೆ ಹೋಗುತ್ತಾಳೆ.

ಸಿಂಗಾರೆವ್ವನಲ್ಲಿ ಭ್ರಮೆಯನ್ನು ಹುಟ್ಟಿಸಿ ಜನರನ್ನು ಸೆಳೆದು ಬಲಿ ತೆಗೆದುಕೊಳ್ಳುವಂತಹ ಹುಣಸೆ ಮೆಳೆಯಿಂದ ಆಕರ್ಷಿತಳಾಗುತ್ತಾಳೆ. ಇಲ್ಲಿ ಅವಳ ಸ್ಥಿತಿಯನ್ನು ಪ್ರಕೃತಿಯ ಜೊತೆಗೆ ಸಮೀಕರಿಸಲಾಗಿದೆ. ಹುಣಸೆ ಮೆಳೆಯಿಂದ ಆಕರ್ಷಿತಳಾದಂತೆ ಸಿಂಗಾರೆವ್ವ ಮಕ್ಕಳನ್ನು ಪಡೆದು ಅರಮನೆ ಬೆಳೆಸುವ ಬಗ್ಗೆಯೂ ಆಸಕ್ತಿ ಹೊಂದಿರುತ್ತಾಳೆ. ಹುಣಸಿಮೆಳೆಯ ಸೌಂದರ್ಯದ ಭ್ರಮೆಗೆ ಒಳಗಾದವರು ಅದನ್ನು ಪ್ರವೇಶಿಸುವಂತೆ, ಸಿಂಗಾರೆವ್ವ ಮಕ್ಕಳನ್ನು ಪಡೆಯುವ ಆಸೆಯಿಂದ ಸಮಸ್ಯೆಗಳ ಸುಳಿಯಲ್ಲಿ ಸಿಲುಕುತ್ತಾಳೆ. ಗಂಡನನ್ನು ಹಾದಿಗೆ ತರಲು ಪ್ರಯತ್ನಿಸುತ್ತಾಳೆ. ಸಾಧ್ಯವಾಗದಾದಾಗ ಅಮವಾಸೆಯ ರಾತ್ರಿ ಹುಚ್ಚಯ್ಯನಿಂದ ಪೂಜೆ ಏರ್ಪಡಿಸಿ ಅಲ್ಲಿ ಹುಚ್ಚಯ್ಯ ಸತ್ತು ತೊಂದರೆಗೆ ಈಡಾಗುತ್ತಾಳೆ. ಆ ಹೆಣ ಸಾಗಿಸಲು ಬಂದ ಮರ್ಯಾನಿಂದ ಸಮಸ್ಯೆಗಳ ಸರಮಾಲೆಯೆ ಪ್ರಾರಂಭವಾಗುತ್ತದೆ. ಮರ್ಯಾನಿಂದ ಅನೇಕ ಬಾರಿ ಬಲಾತ್ಕಾರಕ್ಕೊಳಗಾಗುತ್ತಾಳೆ. ಗಂಡನನ್ನು ಸರಿದಾರಿಗೆ ತರಲು ವಿಲಾಸಿನಿಯ ರೂಪ ಧರಿಸುತ್ತಾಳೆ. ಕೊನೆಗೆ ಮರ್ಯಾನನ್ನು ಸೇರಿ ದೇಸಾಯಿಯ ಆತ್ಮಹತ್ಯೆಗೆ ಕಾರಣಳಾಗಿ ಜೈಲು ಸೇರುತ್ತಾಳೆ. ಜೈಲಿನಲ್ಲಿ ಮಗುವನ್ನೇನೋ ಆದರೆ ತಾಯ್ತನ ಅನುಭವಿಸಲು ಇರದೇ ಅವಳೇ ಸಾಯುತ್ತಾಳೆ.

ಪ್ರಕೃತಿ ನಮ್ಮನ್ನು ಸಲುಹುವಂತೆ ನಮ್ಮನ್ನು ಭಕ್ಷಿಸಲೂಬಹುದು. ನಾವು ಅರಿತು ಅದರೊಂದಿಗೆ ವ್ಯವಹರಿಸಬೇಕು. ಇಲ್ಲದಿದ್ದರೆ ನಮ್ಮ ನಾಶವನ್ನು ನಾವೇ ತಂದುಕೊಳ್ಳುತ್ತೇವೆ. ಹಾಗೆಯೇ ಭ್ರಮೆಯ ಬೆನ್ನು ಹತ್ತಿದವರು ಸಮಸ್ಯೆಯ ಸುಳಿಗೆ ಸಿಲುಕಿ ನಾಶಹೊಂದುತ್ತಾರೆಯೇ ಹೊರತು ಅವರ ಆಸೆ ಕೈಗೂಡುವುದಿಲ್ಲ.

ಹುಚ್ಚಯ್ಯ ಅರಮನೆಯಲ್ಲಿ ಸತ್ತಾಗ ಮರ್‍ಯಾ ಅವನ ಹೆಣವನ್ನು ತಂದು ಕುಮುದವ್ವನ ಗುಡಿಯಲ್ಲಿ ಸಮಾಧಿ ಸ್ಥಿತಿಯಲ್ಲಿ ಕುಳಿತಂತೆ ಈಡುತ್ತಾನೆ. ಆಗ ಬಹಳ ದಿನದಿಂದ ಮಳೆಯಾಗದೆ ಜನ ಮಳೆಗಾಗಿ ಕಾಯುತ್ತಿರುತ್ತಾರೆ. ಅದಕ್ಕಾಗಿ ದೇವರ ಪೂಜೆ, ಜಾತ್ರೆ, ವಿವಿಧ ಬಗೆಯ ಆಚರಣೆಗಳಿಂದ ಮಳೆಗಾಗಿ ಪ್ರಾರ್ಥಿಸುತ್ತಿರುತ್ತಾರೆ. ಆದರೆ ಮಳೆ ಬಂದಿರಲಿಲ್ಲ. ಹುಚ್ಚಯ್ಯನ ಹೆಣವನ್ನು ಈ ರೀತಿ ನೋಡಿದ ಜನ ಆತ ಮಳೆಗಾಗಿ ಸಮಾಧಿಗೆ ಕುಳಿತು ಸತ್ತನೆಂದು ಭಾವಿಸಿ ಮೆರವಣಿಗೆ ಮಾಡಿ ಅಂತ್ಯಕ್ರಿಯೆ ಮಾಡುತ್ತಾರೆ. ಆಗ ಶಿವಲೋಕದಿಂದ ಹುಚ್ಚಯ್ಯನೇ ಮಳೆ ಕಳಿಸಿದನೇನೋ ಎಂಬಂತೆ ಧಾರಾಕಾರ ಮಳೆಯಾಗುತ್ತದೆ.

ಮಳೆ ಬರುವುದು ಸಹಜ ಮತ್ತು ಉಪಯೋಗವಾಗುವ ರೀತಿಯಲ್ಲಿ ಇರಬೇಕು. ಇಲ್ಲಿ ಜನ ಕಾಯುತ್ತಿದ್ದರೂ. ಬರದ ಮಳೆ ಅಂದು ಬರುತ್ತದೆ. ಮತ್ತು ಆಗ ಅಡಕೆಗಾತ್ರದ ಹನಿಗಳು ಬಿದ್ದು ಮಳೆ ಧಾರಾಕಾರವಾಗಿ ಸುರಿಯುತ್ತದೆ. ಇದು ಸಿಂಗಾರೆವ್ವನ ತಾಯ್ತನದ ರೀತಿಯಲ್ಲಿಯೇ ಇದೆ. ಸಿಂಗಾರೆವ್ವ ತಾಯ್ತನಕ್ಕಾಗಿ, ಆ ಮಗುವಿನಿಂದ ಅರಮನೆ ಬೆಳಗುವುದಕ್ಕಾಗಿ ಕಾಯುತ್ತಿದ್ದಳು. ಮಳೆ ಬಂದ ದಿನವೇ ಅವಳಿಗೆ ಮರ್‍ಯಾ ಸಿಕ್ಕ. ಮಳೆ ಹೇಗೆ ಕಾಯುವಾಗ ಯಾವ ಮುನ್ಸೂಚನೆ ಇಲ್ಲದೆ ದಿಢೀರನೆ ಪ್ರವೇಶವಾಯಿತೋ, ಹಾಗೆ ಸಿಂಗಾರೆವ್ವನ ತಾಯ್ತನದ ಆಸೆ ಪೂರೈಸುವ ಮರ್‍ಯಾ ಎಷ್ಟೋ ವರ್ಷಗಳ ನಂತರ ಪ್ರತ್ಯಕ್ಷನಾಗುತ್ತಾನೆ. ಧಾರಾಕಾರ ಸುರಿದ ಮಳೆ ನೀರಿನ ಅವಶ್ಯಕತೆಯನ್ನೇನೋ ತೀರಿಸಿತು. ಆದರೆ ಅದು ಅನೇಕ ರೀತಿಯಲ್ಲಿ ಪ್ರಕೃತಿಗೆ ನಾಶವನ್ನು ಮಾಡಿತ್ತು. ಅದೇ ರೀತಿ ಸಿಂಗಾರೆವ್ವ ಮರ್‍ಯಾನಿಂದ ತಾಯ್ತನವನ್ನೇನೋ ಪಡೆಯುತ್ತಾಳೆ. ಆದರೆ ಅನೈತಿಕತೆಯಿಂದ ಹುಟ್ಟಿದ ಅದು ಅರಮನೆಯನ್ನು ಬೆಳಸುವ ಸಾಮರ್ಥ್ಯವನ್ನು, ಸಮಾಜದಲ್ಲಿ ಗೌರವವನ್ನು ಹೊಂದುವುದಿಲ್ಲ. ಹೀಗೆ ಮಳೆಯ ಮೂಲಕ ಪ್ರಕೃತಿ ಮುಂದಿನ ಮುನ್ಸೂಚನೆಯನ್ನು ನೀಡುತ್ತದೆ. ಅಕಾಲಿಕವಾದದ್ದು ನಾಶಹೊಂದುವಂತೆ ಅನೈತಿಕವಾದದ್ದು ಒಂದು ರೀತಿಯಲ್ಲಿ ನಾಶವನ್ನೇ ಹೊಂದುತ್ತದೆ.

ಮನುಷ್ಯನಂತೆ ಪ್ರಕೃತಿಗೂ ಜೀವವಿದೆ ಎಂದು ತಿಳಿದ ಮಾನವ ಅದರೊಂದಿಗೆ ಸಾವಯುವ ಸಂಬಂಧವನ್ನು ಬೆಳಸಿಕೊಂಡಿದ್ದಾನೆ. ನಮ್ಮಲ್ಲಿಯೂ, ಪ್ರಕೃತಿಯಲ್ಲಿಯೂ ಯಾವುದೇ ರೀತಿಯ ಭೇದವಿಲ್ಲ ಎಂದು ತಿಳಿದು ತನ್ನೊಂದಿಗೆ ಪ್ರಕೃತಿಯನ್ನು ಹೋಲಿಸಿಕೊಳ್ಳುವ ಸಂಪ್ರದಾಯವನ್ನು ಅನುಸರಿಸುತ್ತಿದ್ದಾನೆ. ಪ್ರಕೃತಿಯ ಘಟನೆಗಳೆಲ್ಲವಕ್ಕು ವಿವಿಧ ಅರ್ಥ ಕಲ್ಪಿಸುತ್ತಿದ್ದಾನೆ. ಸಿಂಗಾರೆವ್ವನ ಜೀವನದಲ್ಲಿ ನಡೆಯುವ ಘಟನೆಗಳನ್ನು ಇದೇ ರೀತಿ ಪ್ರಕೃತಿಯೊಂದಿಗೆ ಸಮೀಕರಿಸಿ ನೋಡುವ ಪ್ರಯತ್ನವನ್ನು ಈ ಜನಪದ ಸಂಸ್ಕೃತಿಯಲ್ಲಿ ಮಾಡಲಾಗಿದೆ.

ಶಿಖರಸೂರ್ಯ ಕಾದಂಬರಿ ನಿಸರ್ಗದ ಪ್ರಕೃತಿಯ ಗುಣವನ್ನು ತಿಳಿಸುತ್ತದೆ. ಮನುಷ್ಯ ನಿಸರ್ಗಾನು ಕೂಲಿಯಾಗಿ ನಡೆದರೆ ಬದುಕಿದೆ. ಆದರೆ ನಿಸರ್ಗಕ್ಕೆ ಪ್ರತಿಕೂಲವಾಗಿ ನಡೆದರೆ ಅವನತಿ ಹೊಂದುತ್ತಾನೆಂಬುದನ್ನು ಇಲ್ಲಿ ನಿರೂಪಿಸಲಾಗಿದೆ.

ಶಿವಾಪುರ ಬೆಟ್ಟದ ಕೆಳಗೆ ಪ್ರಕೃತಿಯ ಮಧ್ಯ ರಚಿತ ಒಂದು ಚಿಕ್ಕ ಹಟ್ಟಿ. ಮಣ್ಣಿನಲ್ಲಿ ಹುಟ್ಟಿ ಮರಗಳ ಜೊತೆ ಬೆಳೆದ ಇಲ್ಲಿಯ ಜನ, ಪ್ರಕೃತಿ ಒದಗಿಸಿದ ಬೇಟೆ, ಬೇಸಾಯ, ಅರಣ್ಯ ಉತ್ಪನ್ನಗಳ ಶೇಖರಣೆ ಮುಂತಾದ ಕಸುಬುಗಳನ್ನು ಮಾತ್ರ ಅನುಸರಿಸಿ ಬದುಕುವ ಜನ. ಪ್ರಕೃತಿಯಲ್ಲಿಯ ಗಿಡಸಸ್ಯಗಳಿಗೆ ಮದುವೆ ಮಾಡುವ, ನದಿ ನೀರು ಮಳೆಯಿಂದ ಕೆಂಪಾದರೆ ತೊರೆ ಹೊರಗಾಗಿದೆ ಎಂದು ತಿಳಿಯುವ ಮನುಷ್ಯನ ಜೀವನವನ್ನು ಪ್ರಕೃತಿಯ ಜೀವನದೊಂದಿಗೆ ಸಮೀಕರಿಸಿ ನೋಡುವ ಜನ. ದನಕರುಗಳನ್ನು, ಧಾನ್ಯವನ್ನು ಸಂಪತ್ತೆಂದು ತಿಳಿದು, ಬೆಳೆದದ್ದನ್ನು ಪರಸ್ಪರ ಹಂಚಿ ತಿನ್ನುವ ಸಂಸ್ಕೃತಿ ಸಸ್ಯಗಳಲ್ಲಿರುವ ಈ ಜನರದ್ದು. ಇಲ್ಲಿಯ ಔಷಧೀಯ ಗುಣಗಳಿಂದ ಜನರ ರೋಗಗಳನ್ನು ನಿವಾರಿಸುವವರು.

ಪ್ರಕೃತಿಯಲ್ಲಿ ದೊರೆಯುವ ವಸ್ತುಗಳೆಲ್ಲವನ್ನು ಜೀವರಕ್ಷಣೆಗಾಗಿ ಬಳಸಬೇಕೇ ಹೊರತು ಜೀವತೆಗೆಯಲಲ್ಲ ಎಂಬ ಗುಣ ಇವರದು. ಔಷಧಿಗೆ ಬೇಕಾದ ಸಸ್ಯಗಳನ್ನು ಕೀಳುವಾಗಲೂ ಅವುಗಳಿಗೆ ನಮಿಸಿ ಅಗತ್ಯಕ್ಕೆ ಬೇಕಾದಷ್ಟನ್ನು ಮಾತ್ರ ಕೀಳುವವರು. ಇಲ್ಲಿಯ ಅಮ್ಮನ ಪೂಜಾರಿ ಶಿವಪಾದ ಪ್ರಕೃತಿ ನಿಯಮಗಳಿಗೆ ವಿರುದ್ಧವಾದ ವಿದ್ಯೆಯನ್ನು ಕಲಿಸದವ. ಈ ಜನರಿಗೆ ಜೀವರಕ್ಷಕ ಅನ್ನ, ಹುಲ್ಲಿನಂತಹ ವಸ್ತುಗಳು ಮುಖ್ಯ ಹೊರತು ಚಿನ್ನ, ಅಧಿಕಾರ, ಹಣ, ಮುತ್ತುರತ್ನಗಳಲ್ಲ. ಮನುಷ್ಯನ ಬದುಕಿಗೆ ಅವಶ್ಯಕವಲ್ಲದ, ಮರು ಬಳಕೆಯಾಗದ ವಸ್ತುಗಳೆಲ್ಲವೂ ಇವರ ದೃಷ್ಟಿಯಲ್ಲಿ ನಿರರ್ಥಕ.

ಅಂದರೆ ಇವರದು ಪ್ರಕೃತಿ ಚಿಂತಕ ದೃಷ್ಟಿಕೋನ. ಪ್ರಕೃತಿಗೆ ಅನುಗುಣವಾಗಿಯೇ ನಡೆಯಬೇಕು, ಪ್ರಕೃತಿಗೆ ವಿರುದ್ಧವಾಗಿ ನಡೆದರೆ, ಪ್ರಕೃತಿ ಮೇಲೆ ದಾಳಿ, ಆಕ್ರಮಣ ಮಾಡಿದರೆ, ನಮ್ಮ ನಾಶ ಖಂಡಿತ ಎಂದು ಅರಿತವರು. ಪ್ರಕೃತಿಯ ಮಿತ ಬಳಕೆ, ಪ್ರಕೃತಿಯ ಸ್ವಚ್ಛತೆಯಿಂದ ಅಲ್ಲಿ ಕಾಲಕಾಲಕ್ಕೆ ಮಳೆ, ಬೆಳೆಯಾಗುತ್ತಿತ್ತು. ಇದರಿಂದ ಅಲ್ಲಿ ಸಮೃದ್ಧತೆ ನೆಲೆಸಿತ್ತು. ಅಲ್ಲಿಯ ಉತ್ತಮ ಪ್ರಾಕೃತಿಕ ವಾತಾವರಣದಲ್ಲಿ ಬೆಳೆದ ಅವರು ಯಾವ ರೋಗರುಜಿನಗಳಿಗೂ ಬಲಿಯಾಗದೆ ಆರೋಗ್ಯವಂತರೂ, ಮೈಮುರಿದು ದುಡಿದು ಉಂಡು ದೈಹಿಕವಾಗಿ ಬಲಾಢ್ಯರೂ ಆಗಿದ್ದರು. ಎಂಥವರನ್ನು ಎದುರಿಸುವ ಸಾಮರ್ಥ್ಯ ತಾಕತ್ತು ಅವರಲ್ಲಿತ್ತು. ನಿಸರ್ಗದ ಸಮತೋಲನ ಕಾಪಾಡುವ, ನಿಸರ್ಗವನ್ನು ಉಪಯೋಗಕ್ಕಾಗಿ ಮಾತ್ರ ಬಳಸುವ ರಸವಿದ್ಯೆ ನೀತಿ, ಅತಿಯಾದ ಭೋಗಪೇಕ್ಷ ಇಲ್ಲದಿರುವುದು, ಪ್ರಕೃತಿಯ ಚರಾಚರ ವಸ್ತುಗಳಲ್ಲೆಲ್ಲ ದೇವರನ್ನು, ತಾಯಿಯನ್ನು ಕಾಣುವ ಅವರ ದೃಷ್ಟಿಕೋನ ಅವರಿಗೆ ಪ್ರಬಲ ಸಾಮರ್ಥ್ಯವನ್ನು ತಂದುಕೊಟ್ಟಿತ್ತು.

ಶಿವಪಾದ, ನಿನ್ನಡಿ, ಬೆಳ್ಳಿಯರು ಇಂತಹ ಸಮೃದ್ಧಿಯ ನೆಲೆ ಶಿವಾಪುರದಲ್ಲಿ ಹುಟ್ಟಿ ಬೆಳೆದವರು. ಇವರು ಜೀವೋಪಕಾರಿ ನಿಲುವು ಹೊಂದಿದವರು. ಇವರು ಯಾವುದೇ ಸ್ವಾರ್ಥ, ಅಹಂಕಾರ, ಅಧಿಕಾರದ ಬೆನ್ನು ಹತ್ತಿದವರಲ್ಲ. ಗ್ರಾಮದ ಪ್ರತಿಯೊಬ್ಬರನ್ನು ಪ್ರೀತಿಯಿಂದ ಕಾಣುವ, ಹಸಿದವರಿಗೆ ಅನ್ನ ನೀಡುವ ರೋಗಿಗಳಿಗೆ ಔಷಧ ನೀಡುವ ಆ ಮೂಲಕ ಅವರ ಸೇವೆ ಮಾಡುವವರು ಇವರು. ಪ್ರಕೃತಿಯ ಮಧ್ಯ ಬೆಳೆದು ಯಾವ ಸಂಪತ್ತನ್ನು ಕ್ರೂಢೀಕರಿಸದ, ಯಾವ ರಾಜ್ಯವನ್ನು ಕಟ್ಟದ ಈ ಶಿವಾಪುರದ ಜನ ಬಲಾಢ್ಯನಾದ ಕನಕಗಿರಿಯ ಮಹಾರಾಜ ಶಿಖರಸೂರ್ಯನ ಜೊತೆಗಿನ ಹೋರಾಟದಲ್ಲಿ ಜಯಗಳಿಸುತ್ತಾರೆ.

ಕನಕಗಿರಿ ನಿಸರ್ಗ ಪ್ರಿಯ ಶಿವಾಪುರದ ವಿರೋಧಿಗುಣಗಳನ್ನು ರೂಢಿಸಿಕೊಂಡ ಗ್ರಾಮ. ಇಲ್ಲಿ ಹಣ, ಅಧಿಕಾರ, ಮುತ್ತು, ರತ್ನ, ಚಿನ್ನಗಳಿಗೆ ಬೆಲೆ. ನಿಸರ್ಗವನ್ನು ಪ್ರೀತಿಸುವ, ಆರಾಧಿಸುವ ಯಾವ ಗುಣ ಇವರಲ್ಲಿಲ್ಲ. ಇದರ ಮಹಾರಾಜ ಶಿಖರಸೂರ್ಯ ಶಿವಾಪುರದ ಶಿವಪಾದನ ಬಳಿ ವೈದ್ಯವಿದ್ಯೆಯನ್ನು

ಕಲಿತಿದ್ದರೂ, ಅದನ್ನು ಪ್ರಕೃತಿ ಪೂರಕ, ಜನೋಪಕಾರಕ್ಕಾಗಿ ಬಳಸದೆ ಪ್ರಕೃತಿಗೆ ವಿರುದ್ಧವಾಗಿ ಬಳಸುತ್ತಾನೆ. ಇವನಿಗೆ ನಿರುಪಯೋಗಿ ಚಿನ್ನ ಮುಖ್ಯವೇ ಹೊರತು ಜನರ ಹೊಟ್ಟೆ ತುಂಬಿಸುವ ಅನ್ನವಲ್ಲ. ಪ್ರಕೃತಿ ವಿರುದ್ಧ ವಜ್ರದೇಹಿಯಾದ ಈತ ವಿಷಕನ್ಯೆಯರನ್ನು ಅನುಭವಿಸಲು ವಿಷಪುರುಷನಾಗುತ್ತಾನೆ. ಮಹಾನ್ ಸಾಮ್ರಾಟನಾಗುವ, ಅಧಿಕ ಸಂಪತ್ತಿನ ಒಡೆಯನಾಗುವ ಆಸೆಯಿಂದ ಜನರು ಉಣ್ಣುವ ಧಾನ್ಯವನ್ನು ಚಿನ್ನವನ್ನಾಗಿಯೂ, ದನಕರುಗಳಿಗೆ ಮೇವಾಗುವ ಹುಲ್ಲನ್ನು ಸೈನ್ಯವನ್ನಾಗಿಯೂ ಪರಿವರ್ತಿಸುತ್ತಾನೆ. ನಿಸರ್ಗದಲ್ಲಿ ಮರುಸೃಷ್ಟಿಯಾಗುವ, ಮರುಬಳಕೆಯಾಗುವ ವಸ್ತುಗಳು, ಇವನ ಸಂಪತ್ತಿನ ಆಸೆಯಿಂದ ಚಲನಶೀಲಗುಣ ಕಳೆದುಕೊಂಡು ಜಡವಾಗುತ್ತವೆ. ಅಪಾರ ಸಂಪತ್ತಿದ್ದರೂ ಜನರಿಗೆ ತಿನ್ನಲು ಆಹಾರವಿಲ್ಲವಾಗುತ್ತದೆ. ಇಷ್ಟೆಲ್ಲ ಸಂಪತ್ತು ಕ್ರೂಢಿಕೃತವಾದರೂ ಇನ್ನೂ ಆಸೆ ಈಡೇರದ ಮಹತ್ವಕಾಂಕ್ಷಿ ಶಿಖರಸೂರ್ಯ ನಿಸರ್ಗಪ್ರಿಯ ಶಿವಾಪುರದ ಮೇಲೆ ದಾಳಿ ಮಾಡುತ್ತಾನೆ. ಅಲ್ಲಿ ಯಾವ ಸಂಪತ್ತು, ಅಧಿಕಾರ, ಬಲ, ಸೈನ್ಯ ಹೊಂದಿರದ ನಿನ್ನಡಿಯಂತಹ ಸಣ್ಣ ವ್ಯಕ್ತಿತ್ವದ ಮುಂದೆ ಸೋಲು ಅನುಭವಿಸುತ್ತಾನೆ.

ನಿನ್ನಡಿ ಮಾಡ ಹೊರಟದ್ದು ಜನತೆಗೆ ಆಹಾರ ಒದಗಿಸುವ, ದನಕರುಗಳಿಗೆ ಮೇವು ನೀಡುವ, ರೋಗರುಜಿನುಗಳಿಗೆ ಈಡಾದವರ ಆರೈಕೆ ಮಾಡುವ ಪ್ರಕೃತಿನಿಯಮಗಳಿಗೆ ಪೂರಕವಾದ ಕಾರ್ಯ. ಆದರೆ ಶಿಖರಸೂರ್ಯ ಮಾಡಹೊರಟಿರುವುದು ಧಾನ್ಯವನ್ನು ಚಿನ್ನವನ್ನಾಗಿಯೂ, ಹುಲ್ಲನ್ನು ಸೈನಿಕರನ್ನಾಗಿಯೂ ಮಾಡುವ ಪ್ರಕೃತಿ ವಿರೋಧಿ ಕಾರ್ಯ. ನಿಸರ್ಗ ನಿಯಮದ ಪ್ರಕಾರ ಭೂಮಿಯ ಮೇಲಿರುವ ಪ್ರತಿಯೊಂದು ಜೀವಿಗೂ ಪ್ರಕೃತಿಯಲ್ಲಿ ಸಿಗುವ ಪ್ರತಿಯೊಂದು ವಸ್ತುವು ಲಭ್ಯವಾಗಬೇಕು. ನಿಸರ್ಗದ ದೃಷ್ಟಿಯಲ್ಲಿ ಎಲ್ಲರೂ ಸಮಾನರು. ಹಾಗೆಯೇ ನಿಸರ್ಗ ಜೀವಿಗಳ ಉಪಯೋಗಕ್ಕಾಗಿ ಸೃಷ್ಟಿಮಾಡಿದ ಪ್ರತಿಯೊಂದು ವಸ್ತು ನಾಶವಾಗದೆ, ಚಿರಂಜೀವಿತ್ವವನ್ನು ಪಡೆಯದೆ ಸದಾ ಸೃಷ್ಟಿಹೊಂದುತ್ತಾ ಮರುಬಳಕೆಯಾಗುತ್ತಾ ಹೋಗಬೇಕು. ಅವು ಜಡತೆಯನ್ನು ಪಡೆಯದೆ ಚಲನಶೀಲವಾಗಿರಬೇಕು. ಆದರೆ ಶಿಖರಸೂರ್ಯ ತನ್ನ ರಾಜ್ಯದಲ್ಲಿ ಬೆಳೆದ ಎಲ್ಲ ದವಸಧಾನ್ಯಗಳನ್ನು ತನ್ನಲ್ಲಿಯೇ ಕ್ರೂಢೀಕರಿಸುತ್ತಾನೆ. ಇದರಿಂದ ಇಡೀ ರಾಜ್ಯ ಅನ್ನಕ್ಕಾಗಿ ಪರಿತಪಿಸುವಂತಾಗುತ್ತದೆ. ದನಗಳ ಹೊಟ್ಟೆಹಸಿವು ಹಿಂಗಿಸುವ ಮೇವನ್ನು ಸೈನಿಕರನ್ನಾಗಿ ಮಾಡಿ ದನಕರುಗಳಿಗೆ ಮೇವಿನ ಅಭಾವ ತಲೆ ದೋರುವಂತೆ ಮಾಡುತ್ತಾನೆ. ಜೊತೆಗೆ ಅವುಗಳಿಗೆ ಜಡತ್ವ ಕಲ್ಪಿಸುತ್ತಾನೆ. ಇವನ ಅಧೀನದಲ್ಲಿರುವುದು ಕೇವಲ ಧಾನ್ಯದ ಆಕಾರದಲ್ಲಿ ಮಾತ್ರ ಇರುವ, ಬೇರೆ ಯಾವ ಆಕಾರವನ್ನು ಪಡೆದು ಪರಿವರ್ತನೆ ಹೊಂದದ ಚಿನ್ನ, ಯಾವುದೇ ರೀತಿಯ ಭಾವನೆಗಳಿಗೆ ಸ್ಪಂದಿಸುವ, ಕ್ರಿಯೆಗಳನ್ನು ಹೊಂದದ ನಿರ್ಜೀವ ಸೈನ್ಯ.

ನಿನ್ನಡಿಯಲ್ಲಿರುವುದು ಜನರ, ದನಕರುಗಳ ಹೊಟ್ಟೆ ತುಂಬಿಸುವ ಅನ್ನ, ಮೇವು. ಈತನ ಹತ್ತಿರವಿರುವವರು ಪರಿಸರ ಮಧ್ಯದಲ್ಲಿಯೇ ಬೆಳೆದ ಸಧೃಡವಾದ ವ್ಯಕ್ತಿಗಳು. ಈ ಪರಿಸರದಲ್ಲಿ ಬೆಳೆದ ಬೆಳ್ಳಿಯಂತಹ ಹೆಣ್ಣು ಸಹ ಶಿಖರಸೂರ್ಯನಂತಹ ವಜ್ರದೇಹಿ ವ್ಯಕ್ತಿಯಿಂದ ತನ್ನನ್ನು ರಕ್ಷಿಸಿಕೊಳ್ಳುವ ಸಾಮರ್ಥ್ಯ ಪಡೆದಿರುತ್ತಾಳೆ. ನಿನ್ನಡಿ ತಾನು ಕಲಿತ ಪರೋಪಕಾರಿ ವಿದ್ಯೆಯಿಂದ ಶಿಖರಸೂರ್ಯ ಸೃಷ್ಟಿಸಿದ ಪ್ರಕೃತಿ ವಿರೋಧಿ ಸೃಷ್ಟಿಗಳನ್ನು ಮೂಲರೂಪಕ್ಕೆ ತರುತ್ತಾನೆ. ಇದರಿಂದ ಕೃತಕವಾಗಿ ಸಂಪಾದಿಸಿದ್ದ ಶಿಖರಸೂರ್ಯನ ಸಂಪತ್ತು ನಾಶವಾಗುತ್ತದೆ. ನಿನ್ನಡಿಯ ಕಾರ್ಯದಿಂದ ಆಹಾರದಿಂದ ಬಳಲುತ್ತಿದ್ದ ಜನರಿಗೆ ಆಹಾರ ದೊರೆಯುತ್ತದೆ. ಆಹಾರದ ಕೊರತೆಯಿಂದ ರೋಗದಿಂದ ನರಳುತ್ತಿದ್ದ ಜನರಿಗೆ ಪ್ರಕೃತಿಯಿಂದ ಮದ್ದು

ತಂದು ಆರೈಕೆ ಮಾಡಿ ಅವರು ಗುಣಮುಖರಾಗಲು ಸಾಧ್ಯವಾಗುತ್ತದೆ. ಪ್ರಕೃತಿ ಮೊದಲ ಹಂತಕ್ಕೆ ಬಂದು ಸೃಷ್ಟಿಯ ವಸ್ತುಗಳಲ್ಲಿ ಚಲನಶೀಲತೆ ಉಂಟಾಗುತ್ತದೆ.

ಪ್ರಕೃತಿಯನ್ನು ಉಪಭೋಗದ ಸರಕಾಗಿ ಕಂಡ ಶಿಖರಸೂರ್ಯ, ಪ್ರಕೃತಿಯಲ್ಲಿ ತಾಯಿಯನ್ನು ದೈವವನ್ನು ಕಂಡ ನಿಂಗ್ಗಡಿ ಮತ್ತು ಅವನ ಜನಸಮುದಾಯದ ಎದುರು ಸೋಲನ್ನು ಅನುಭವಿಸುತ್ತಾನೆ. ಪ್ರಕೃತಿಯನ್ನು ಜೀವನವಿಧಾನವನ್ನಾಗಿ ಕಂಡ ನಿನ್ನಡಿ ನಮ್ಮ ಗ್ರಾಮೀಣ ಸಂಸ್ಕೃತಿಯ ಪ್ರತೀಕವಾಗಿ ತೋರಿಬಂದರೆ, ಪ್ರಕೃತಿಯನ್ನು ತನ್ನ ಉತ್ಪದನಾ ಸಾಧನವನ್ನು ಕಂಡ ಶಿಖರಸೂರ್ಯ ಜಾಗತೀಕರಣ, ವಸಾಹತುಶಾಹಿಗಳ ಪ್ರಭಾವದಿಂದ ಸಂಪತ್ತಿನ ಕ್ರೂಢಿಕರಣಕ್ಕೆ ತೊಡಗಿದ ನಗರ ಸಂಸ್ಕೃತಿಯ ಪ್ರತೀಕವಾಗಿ ತೋರುತ್ತಾನೆ. ತನ್ನ ಸ್ವಾರ್ಥ, ಮಿತಿಮೀರಿದ ಆಸೆ, ಸಂಪತ್ತಿನ ಕ್ರೂಢಿಕರಣಕ್ಕಾಗಿ ಪ್ರಕೃತಿಯ ಮೇಲೆ ದಾಳಿ, ಆಕ್ರಮಣ ಮಾಡಿ ಪ್ರಕೃತಿಯನ್ನು ದೋಚುತ್ತಿರುವ ನಗರ ಸಂಸ್ಕೃತಿ ಮನುಷ್ಯ ಮುಂದೆ ಎದುರಿಸಬಹುದಾದ ದುರಂತದ ಚಿತ್ರಣವನ್ನು, ಪ್ರಕೃತಿ ನಿಯಮಗಳ ವಿರುದ್ಧ ಹೋರಾಡಿ ಸೋಲನ್ನು ಅನುಭವಿಸುವ ಶಿಖರಸೂರ್ಯನ ಪಾತ್ರ ಕಟ್ಟಿಕೊಡುತ್ತದೆ.

ಪಾಶ್ಚಾತ್ಯ ಸಂಸ್ಕೃತಿಯಿಂದ ಬಂದ ಜಾಗತೀಕರಣ, ಕೈಗಾರೀಕರಣ, ಔದ್ಯೋಗಿಕರಣ ಪ್ರವೃತ್ತಿಯಿಂದ ಮನುಷ್ಯ ಇಂದು ಪ್ರಕೃತಿಯನ್ನು ಜೀವ ರಕ್ಷಕ ನೆಲೆಯಾಗಿ ನೋಡದೆ, ಉಪಭೋಗಿ ನೆಲೆಯಾಗಿ ಕಾಣುತ್ತಿದ್ದಾನೆ. ತಾನು ಶ್ರೀಮಂತನಾಗಬೇಕು. ಜಗತ್ತಿನ ಪ್ರತಿಯೊಂದು ವಸ್ತುವನ್ನು ತಾನು ಅನುಭವಿಸಬೇಕೆಂಬ ಮಹತ್ವಾಕಾಂಕ್ಷೆಗೆ ಈಡಾಗಿ, ತನಗೆ ರಕ್ಷಣೆ ನೀಡುತ್ತಿದ್ದ ಭೂಮಿ ಇರುವುದೇ ತನ್ನ ಅನುಭೋಗಕ್ಕೆಂದು ತಿಳಿದು ಅದರ ಮೇಲೆ ಮಿತಿಮೀರಿದ ದಾಳಿ ಮಾಡುತ್ತಿದ್ದಾನೆ. ತನ್ನ ಅಭಿವೃದ್ಧಿಯ ಸೂಚಕಗಳೆಂದು ಭಾವಿಸಲಾಗಿರುವ ಕಾರ್ಖಾನೆಗಳು, ಸಂಪರ್ಕ ವ್ಯವಸ್ಥೆ, ಯೋಜನೆಗಳಿಂದ ಪರಿಸರವನ್ನು ನಾಶಗೊಳಿಸುವುದರೊಂದಿಗೆ ಅದನ್ನು ಮಲೀನಗೊಳಿಸುತ್ತಿದ್ದಾನೆ. ಪ್ರಕೃತಿ ನಾಶ ತನ್ನ ನಾಶವೇ ಎಂದು ತಿಳಿಯದೆ ದಿನೇ ದಿನೇ ತನ್ನ ವಿದ್ವಂಸ ಕೃತ್ಯವನ್ನು ತೀವ್ರಗೊಳಿಸುತ್ತಿದ್ದಾನೆ. ಆದರೆ ನಮ್ಮ ಗ್ರಾಮೀಣ ಜನಪದ ಸಂಸ್ಕೃತಿಯ ಜನ ಆಧುನಿಕ, ನಗರೀಕೃತ ವ್ಯವಸ್ಥೆಯ ಪ್ರಭಾವಕ್ಕೆ ಅಲ್ಪಸ್ವಲ್ಪ ಒಳಗಾಗಿದ್ದರೂ, ಪ್ರಕೃತಿಯ ಬಗ್ಗೆ ತಮಗಿದ್ದ ಮೊದಲಿನ ನಂಬಿಕೆ, ಭಾವನೆಗಳನ್ನು ಮಾತ್ರ ಬದಲಾಯಿಸಿಕೊಂಡಿಲ್ಲ. ಮೊದಲಿನಂತೆ ಈಗಲೂ ಪ್ರಕೃತಿಯಲ್ಲಿ ತಾಯಿಯನ್ನು ಕಾಣುತ್ತಾ, ತನ್ನನ್ನು ರಕ್ಷಿಸುವ ಅದನ್ನು ದೈವದಂತೆ ಆರಾಧಿಸುತ್ತಾ, ಪ್ರಕೃತಿಯನ್ನು ಬೆಳೆಸುವ ಕಾರ್ಯದಲ್ಲಿ ನಿರತನಾಗಿದ್ದಾನೆ. ಆಧುನಿಕ ಕ್ರಾಂತಿಯಿಂದ ಪ್ರಕೃತಿಗೆ ಆಗುತ್ತಿರುವ ಹಾನಿಯನ್ನು ಅರಿತು ಅದನ್ನು ವಿರೋಧ ಮಾಡುತ್ತಾ ಬಂದಿದ್ದಾನೆ. ಈ ಮೂಲಕ ಪ್ರಕೃತಿ ರಕ್ಷಣಾ ಸಂಸ್ಕೃತಿಯನ್ನು ಮುಂದುವರೆಸಿದ್ದಾನೆ.

೫.೩. ಮಾನವೀಯ ನೆಲೆಗಳು

ಕಷ್ಟದಲ್ಲಿ ಸಿಲುಕಿದವರಿಗೆ ಸಹಾಯ ಮಾಡುವ, ರಕ್ಷಿಸುವ, ತ್ಯಾಗ, ಸಹನೆ ಪರೋಪಕಾರ, ಉದಾರತೆ ಮುಂತಾದ ಮಾನವೀಯ ಗುಣಗಳನ್ನು ರೂಢಿಸಿಕೊಂಡ ವ್ಯಕ್ತಿಗಳೆಲ್ಲರೂ ನಮ್ಮ ಸಂಸ್ಕೃತಿಯಲ್ಲಿ 'ತಾಯಿಸ್ಥಾನ' ಪಡೆಯುತ್ತಾರೆ. ಜನಪದ ಸಂಸ್ಕೃತಿಯಿಂದ ಬಂದ ಕಂಬಾರರ ಸಾಹಿತ್ಯದ ಬಹುತೇಕ ವ್ಯಕ್ತಿಗಳು ಮಾನವೀಯ ಗುಣಗಳನ್ನು ಹೊಂದಿದವರು. ಅವರ ಕಾದಂಬರಿಗಳ ವ್ಯಕ್ತಿಗಳು ಸಹ ಮಾನವೀಯ ಗುಣಗಳನ್ನು ಅಳವಡಿಸಿಕೊಂಡು ತಾಯಿಸಂಸ್ಕೃತಿಯ ಪ್ರತಿನಿಧಿಗಳಾಗಿ ಗೋಚರಿಸುತ್ತಾರೆ.

'ಕರಿಮಾಯಿ' ಕಾದಂಬರಿಯ ಊರಗೌಡನಾದ ಪರಗೌಡ ಮತ್ತವನ ಸುತ್ತಮುತ್ತಲಿನ ಪರಿವಾರವಾದ ದತ್ತಪ್ಪ, ಲಗಮವ್ವ, ನಿಂಗೂ, ಕುಸ್ತಿ ಹುಡುಗರು, ಅವನ ಸುತ್ತಮುತ್ತಲಿನ ಸಮಾಜದ ವ್ಯಕ್ತಿಗಳು ಧಾರ್ಮಿಕ ನಂಬಿಕೆಯುಳ್ಳ, ನೈತಿಕತೆ ಅಳವಡಿಸಿಕೊಂಡ, ಸಂಸ್ಕೃತಿಯ ಬಗ್ಗೆ ಗೌರವವುಳ್ಳ ಪರೋಪಕಾರಿ ಜನಗಳು. ಸಮಾಜದಲ್ಲಿ ಶಾಂತಿ, ನೆಮ್ಮದಿ ನೆಲೆಸಲೆಂದು ಆಸೆಪಡುವ ಇವರು, ನಮ್ಮ ಯುವಜನಾಂಗ ಆಧುನಿಕತೆಗೆ ಮರುಳಾಗಿ ತಮ್ಮ ಪರಂಪರೆಯ ವಿರೋಧಿಗಳಾಗಬಾರದೆಂದು ಬಯಸುವ ಸಾಂಸ್ಕೃತಿಕ ಹರಿಕಾರರು. ಗ್ರಾಮ ಕಾಲಕ್ಕೆ ತಕ್ಕಂತೆ ಪರಿವರ್ತನೆಯನ್ನು ಹೊಂದಿ ಪ್ರಗತಿಯನ್ನು ಸಾಧಿಸಲಿ, ಆದರೆ ಪ್ರಗತಿಯ ಹೆಸರಿನಲ್ಲಿ ತನ್ನ ಮೂಲ ಪರಂಪರೆಯನ್ನು ಕಳೆದುಕೊಳ್ಳಬಾರದೆಂದು ಬಯಸುವವರು ಇವರು.

ಊರಗೌಡ ಉಳಿಗಮಾನ್ಯ ವ್ಯವಸ್ಥೆಯ ಪ್ರತಿನಿಧಿಯಾದರೂ ದರ್ಪ, ಅಹಂಕಾರ, ನಿರಂಕುಶ ಆಡಳಿತವನ್ನು ಅಳವಡಿಸಿಕೊಳ್ಳದೆ ಮಾನವೀಯ ಗುಣಗಳನ್ನು ಅಳವಡಿಸಿಕೊಂಡ ವ್ಯಕ್ತಿ. ಗೌಡನಾದರೂ ತನ್ನ ಅಧಿಕಾರದಿಂದ ಜನತೆಯನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳದೆ, ಪ್ರೀತಿ, ಸಹಕಾರ, ನಗು, ಗ್ರಾಮರಕ್ಷಕ ಪ್ರವೃತ್ತಿಯ ಮೂಲಕ ಊರಜನರ ಮನಸ್ಸೆಳೆದು ಅವರನ್ನು ತನ್ನ ಪ್ರೀತಿಯ ಅಂಕೆಯಲ್ಲಿಟ್ಟುಕೊಂಡವ. ಗ್ರಾಮದ ರಕ್ಷಣೆ ಮಾಡುವುದು ತನ್ನ ಪರಿವಾರದ ಜನತೆಯಿಂದ ತಾನು ಸಂಪಾದಿಸಿದ ಸ್ನೇಹ, ಸಹಕಾರದಿಂದಲೇ ಹೊರತು ತನ್ನ ದರ್ಪದ ಆಳ್ವಿಕೆಯಿಂದಲ್ಲ. ಗೌಡನಂತೆ ಊರ ಹಿತಚಿಂತನೆಯ ಆಸೆ ಹೊತ್ತ ಗುಡಸೀಕರ ಗ್ರಾಮದ ಹಿತ ಕಾಯಲು ಬಳಸುವದು ಪ್ರಜಾಪ್ರಭುತ್ವವಾದಿ ಜನಪದ ತಂತ್ರಗಳನ್ನು ನಗರದಲ್ಲಿ ಕಲಿತು ಅಲ್ಲಿಯ ಆಧುನಿಕತೆಯ ಪ್ರಭಾವಕ್ಕೆ ಒಳಗಾಗಿದ್ದ ಗುಡಸೀಕರ, ಗೌಡ ಇಡೀ ಊರನ್ನು ತನ್ನ ಅಧಿಕಾರದ ಕಪಿಮುಷ್ಟಿಯಲ್ಲಿಟ್ಟಿದ್ದಾನೆ, ಅವರನ್ನು ಅದರಿಂದ ಬಂಧಮುಕ್ತಗೊಳಿಸಬೇಕೆಂಬ ಆಸೆಯುಳ್ಳವ. ಪ್ರಜಾಪ್ರಭುತ್ವದ ಜಾರಿಯಿಂದಲೇ ಊರಜನರು ನೆಮ್ಮದಿಯಿಂದ ಬಾಳಬಹುದು ಹೊರತು ಮಾನವೀಯತೆಯಿಂದಲ್ಲ ಎಂಬ ನಂಬಿಕೆ ಇವನದು.

ನಿಂಗೂ ತನ್ನ ತಂದೆ ಮತ್ತು ಹೆಂಡತಿಯನ್ನು ಕೊಂದ ವೇಳೆ ಗೌಡ ಮತ್ತು ಗುಡಸೀಕರ ಇಬ್ಬರೂ ನಿಂಗೂನನ್ನು ಉಳಿಸಲು ಮುಂದಾಗುತ್ತಾರೆ. ಗೌಡ ಈ ವಿಷಯ ಪೋಲಿಸರಿಗೆ ಗೊತ್ತಾಗದಂತೆ ಮುಚ್ಚಿಹಾಕಿ ನಿಂಗೂನನ್ನು ಕ್ಷಮಿಸಿ ರಕ್ಷಿಸಲು ಮುಂದಾಗುತ್ತಾನೆ. ಆದರೆ ಗುಡಸೀಕರ ಅವನನ್ನು ಕೋರ್ಟಿಗೆ ಎಳೆದು ಅಲ್ಲಿ ಅವನ ಪರವಾದಿಸಿ ಅವನನ್ನು ರಕ್ಷಿಸುತ್ತೇನೆಂದು ಹೇಳುತ್ತಾನೆ.

ಇಲ್ಲಿ ಗೌಡನಿಗಿರುವುದು, ತನಗಾದ ಅನ್ಯಾಯದಿಂದ ನಿಂಗೂ ಕೊಲೆ ಮಾಡಿದ್ದಾನೆ, ಇದರಲ್ಲಿ ಅವನು ತಪ್ಪು ಏನೂ ಇಲ್ಲ ಜೊತೆಗೆ ನಿಂಗೂ ಕೊಲೆ ಮಾಡುವಂತಹ ಕೆಟ್ಟ ವ್ಯಕ್ತಿಯು ಅಲ್ಲ, ಅಂತಹ ವ್ಯಕ್ತಿ ಅನ್ಯಾಯದಿಂದ ಜೈಲು ಪಾಲಾಗಿ ತನ್ನ ಜೀವನವನ್ನೆಲ್ಲ ಜೈಲಿನಲ್ಲಿ ಕಳೆಯುವಂತಾಗಬಾರದೆಂಬ ಉದ್ದೇಶ. ಜೊತೆಗೆ ನಮ್ಮ ಊರನ್ನು ರಕ್ಷಿಸುವ, ನಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ನಮ್ಮ ನ್ಯಾಯಗಳನ್ನು ತೀರ್ಮಾನಿಸಿಕೊಳ್ಳುವ ಸಾಮರ್ಥ್ಯವನ್ನು ನಾವು ಹೊಂದಿರುವಾಗ ಅದಕ್ಕಾಗಿ ಪರರನ್ನೇಕೆ ಅವಲಂಬಿಸಬೇಕೆಂಬ ಮನೋಭಾವ ಗೌಡನದು. ಪರಿಸರದ ಜನತೆಯ ಸಾಮರ್ಥ್ಯದ ಬಗೆಗಿನ ನಂಬುಗೆ, ಬಡಜನರಿಗೆ, ಅಸಮರ್ಥರಿಗೆ ಕಷ್ಟಕೊಡಬಾರದೆಂಬ ಕಳಕಳಿ ಮತ್ತು ಪರಕೀಯತೆಯ ಗುಲಾಮಗಿರಿಯನ್ನು ವಿರೋಧಿಸುವದು ಗೌಡನ ಜೀವಪರ ದೃಷ್ಟಿಕೋನ ಮತ್ತು ತನ್ನ ಪರಿಸರ, ಸಂಸ್ಕೃತಿಯ ಬಗೆಗೆ ಗೌಡನಿಗಿರುವ ಸ್ವಾಭಿಮಾನವನ್ನು ಪ್ರತಿನಿಧಿಸುತ್ತದೆ.

ಗುಡಸೀಕರ ನಿಂಗೂನನ್ನು ರಕ್ಷಿಸಲು ಮುಂದಾಗುವದು ಅವನ ಮೇಲೆ ಕಂಪ್ಲೇಟು ಕೊಟ್ಟು ಅವನನ್ನು ಕೋರ್ಟಿಗೆ ಎಳೆದು ಅಲ್ಲಿ ಅವನ ಪರವಾದಿಸುವುದರ ಮೂಲಕ. ಇಲ್ಲಿ ಗುಡಸೀಕರನಲ್ಲಿ ಕಾಣುವುದು ತಾನು ವಕೀಲ ವೃತ್ತಿಯನ್ನು ಆರಂಭಿಸಿ ವಕೀಲನಾಗಿ ಪ್ರತಿಷ್ಠೆಯನ್ನು ಗಳಿಸಬೇಕೆಂಬ ಸ್ವಾರ್ಥವೇ ಹೊರತು, ನಿಂಗೂನನ್ನು ಕಷ್ಟದಿಂದ ಪಾರುಮಾಡುವ ಉದ್ದೇಶವಲ್ಲ. ನಿಂಗೂನನ್ನು ನಿಸ್ವಾರ್ಥತೆಯಿಂದ, ಕರುಣೆಯಿಂದ ರಕ್ಷಿಸುವ ಗೌಡ ಮತ್ತು ಶಿವಾಪುರದ ಜನತೆಯ ಮನೋಭಾವ ಗುಡಸೀಕರನಿಗಿಲ್ಲ. ಜೊತೆಗೆ ಗುಡಸೀಕರ ಗ್ರಾಮಕ್ಕೆ ಪೋಲಿಸರನ್ನು ಕರೆಸುವ ಮೂಲಕ ಗ್ರಾಮದ ಜನತೆಯನ್ನು ತನ್ನ ಪರ ಮತ್ತು ವಿರೋಧಿ ಎಂಬ ಎರಡು ಗುಂಪುಗಳಾಗಿ ಒಡೆಯುವಂತೆ ಮಾಡುತ್ತಾನೆ. ಇಂದಿನ ಶಾಲೆ ಕಲಿತ ಜನರ ಸ್ವಾರ್ಥ, ಬುದ್ಧಿ ಪರಕೀಯರ ಗುಲಾಮರಾಗುವ ಮನೋಸ್ಥಿತಿ ಮತ್ತು ಗ್ರಾಮದ ಅಖಂಡತೆಯನ್ನು ಛಿದ್ರಗೊಳಿಸುವ ಪ್ರಕ್ರಿಯೆಗೆ ಗುಡಸೀಕರ ಉದಾಹರಣೆಯಾಗಿ ನಿಲ್ಲುತ್ತಾನೆ.

ಈ ವಿಷಯದಲ್ಲಿ ಗ್ರಾಮದ ಜನತೆ ಗೌಡನ ಪರವಾಗಿ ನಿಲ್ಲುತ್ತಾರೆ. ಗೌಡ ಗ್ರಾಮದಲ್ಲಿ ಕೊಲೆ ನಡದೆಯಿಲ್ಲ ಎಂಬುವಂತೆ ಮಾಡಿ, ಅವರ ಸಾವು ಆಕಸ್ಮಿಕ ಎಂದು ರುಜುವಾತು ಪಡಿಸುವಾಗ, ಊರಜನ ಗೌಡನ ಹೇಳಿಕೆಗೆ ಸಮರ್ಪಕವಾಗುವ ಉತ್ತರಗಳನ್ನು ನೀಡಿ ನಿಂಗೂನನ್ನು ರಕ್ಷಿಸುತ್ತಾರೆ. ಗೌಡ ನಿರಪರಾಧಿಯನ್ನು ರಕ್ಷಿಸುವ ಕಾರ್ಯ ಮಾಡುತ್ತಿರುವುದರಿಂದ ಮತ್ತು ಗೌಡ ಮಾಡುವುದು ತಮ್ಮ ಮತ್ತು ತಮ್ಮ ಗ್ರಾಮದ ಹಿತಕ್ಕೆಂದು ನಂಬಿದ ಜನ ಅವನ ಮಾತಿಗೆ ಒಪ್ಪುವುದರೊಂದಿಗೆ ಅವನ ಈ ಕಾರ್ಯಕ್ಕೆ ಸಹಕಾರ ನೀಡುತ್ತಾರೆ. ನಿಂಗೂನ ಪ್ರಸಂಗ ಶಿವಾಪುರದ ಜನತೆಯ ಮಾನವೀಯತೆ, ಕ್ಷಮಾಗುಣ, ಪರಸ್ಪರ ಸಹಕಾರ, ಪರಕೀಯ ಪ್ರವೇಶದ ವಿರೋಧದ ಜೊತೆಗೆ ಆ ಸಮುದಾಯದ ಅಖಂಡತೆಯನ್ನು ಸೂಚಿಸುತ್ತದೆ.

ಇಲ್ಲಿ ಪ್ರಜಾಪ್ರಭುತ್ವ ಪರವಾದಿ ಗುಡಸೀಕರನ ನಿಲುವು ಊರಜನತೆಯ ಮುಂದೆ ಸೋಲುವುದರಿಂದ ಕಂಬಾರರು ಪ್ರಜಾಪ್ರಭುತ್ವ ವಿರೋಧಿಗಳು ಎಂಬ ಭಾವನೆಯನ್ನು ಓದುಗರಲ್ಲಿ ಮೂಡಿಸಿದರೂ, ಅವರಲ್ಲಿ ನಿರಪರಾಧಿಗಳಿಗೆ ಶಿಕ್ಷೆಯಾಗಬಾರದೆಂಬ ಭಾವನೆ ಇದೆಯೇ ಹೊರತು, ತಪ್ಪುಮಾಡಿದವರಿಗೆ ರಕ್ಷಣೆ ಕೊಡಬೇಕೆಂಬ ಉದ್ದೇಶವಲ್ಲ. ನೂರು ಜನ ಅಪರಾಧಿಗಳಿಗೆ ಶಿಕ್ಷೆಯಾಗದಿದ್ದರೂ ಸರಿ ಒಬ್ಬ ನಿರಪರಾಧಿಗೆ ಶಿಕ್ಷೆಯಾಗಬಾರದೆಂದು ನಮ್ಮ ಪ್ರಜಾಪ್ರಭುತ್ವದ ಕಾನೂನೇ ಹೇಳುತ್ತದೆ. ನಮ್ಮ ನ್ಯಾಯಾಂಗ ವ್ಯವಸ್ಥೆಯಲ್ಲಿ ಸಾಕ್ಷಿಗಳೇ ಮುಖ್ಯ–ವಾದುದರಿಂದ ಅಪರಾಧಿಗಳು ಸುಳ್ಳು ಸಾಕ್ಷಿ ಸೃಷ್ಟಿಸಿ ನಿರಪರಾಧಿಗಳೆಂದು ಸಾಬೀತುಪಡಿಸಿಕೊಳ್ಳಬಹುದು. ಆದರೆ ಶಿವಾಪುರದಲ್ಲಿ ನಡೆದ ಈ ನ್ಯಾಯಪದ್ಧತಿಯಲ್ಲಿ ಅಪರಾಧಿಗಳ ಮನಸಾಕ್ಷಿ ಮುಖ್ಯವೇ ಹೊರತು, ಅಪರಾಧಿಗಳು ಸೃಷ್ಟಿಸುವ ಸುಳ್ಳುಸಾಕ್ಷಿಯಲ್ಲ. ಸುಳ್ಳುಸಾಕ್ಷಿ ಸೃಷ್ಟಿಸಿ ನ್ಯಾಯಾಂಗಕ್ಕೆ ಮೋಸಮಾಡುವುದಕ್ಕಿಂತ, ತಪ್ಪೊಪ್ಪಿಕೊಂಡವರಿಗೆ ಅವರ ಬದಕು ಹಾಳಾಗದಂತೆ ಶಿಕ್ಷೆ ವಿಧಿಸಿ, ಅವರಿಗೆ ಬದುಕಲು ಅವಕಾಶ ಮಾಡಿಕೊಡುವುದು ಪ್ರಜಾಪ್ರಭುತ್ವದ ಪ್ರತಿಯೊಬ್ಬರು ಜೀವಿಸುವ ಹಕ್ಕನ್ನು ಬೆಂಬಲಿಸುತ್ತದೆ ಹೊರತು ಪ್ರಜಾಪ್ರಭುತ್ವ ವಿರೋಧಿ ಎನಿಸುವದಿಲ್ಲ.

ನಿಂಗೂನ ವಿಷಯದಲ್ಲಿ ಗೌಡನ ನಿರ್ಧಾರ ತನಗೆ ಮಾಡಿದ ಅವಮಾನ ಎಂದೇ ಭಾವಿಸಿದ ಗುಡಸೀಕರ ಆ ಸೇಡನ್ನು ಮನಸ್ಸಿನಲ್ಲಿಟ್ಟುಕೊಂಡು ಹೋಳಿ ಹುಣ್ಣಿಮೆಯಲ್ಲಿ ಗೌಡನಿಗಾಗಿ ಮೀಸಲಾದ ಸ್ಥಾನದಲ್ಲಿ ಕುಳಿತು, ಗೌಡ ಬರುವ ಮುಂಚೆ ಹಾಡನ್ನು ಪ್ರಾರಂಭಿಸಲು ಹೇಳುತ್ತಾನೆ. ಆದರೆ ಇದ್ಯಾವುದನ್ನು

ಅರಿಯದ ದ್ವೇಷಭಾವನೆಯನ್ನು ಬೆಳಸಿಕೊಳ್ಳದ ಗೌಡ ತಾನು ಹಿರಿಯನಾದರೂ ಸ್ನೇಹಿತನಂತೆ ಹೋಗಿ ಗುಡಸೀಕರನ ಪಕ್ಕ ಕುಳಿತುಕೊಳ್ಳುತ್ತಾನೆ. ಹಿರಿಯರ ಬಗ್ಗೆ ಗೌರವ ತೋರಿಸದ, ಸೌಜನ್ಯತೆಯಿಂದ ವರ್ತಿಸಿದ, ಹಿರಿಯರ ವಿರುದ್ಧ ದ್ವೇಷ ಸಾಧಿಸುವ ಗುಡಸೀಕರನ ವ್ಯಕ್ತಿತ್ವ, ಶಾಲೆ ಕಲಿತ ನಮ್ಮ ಯುವಜನಾಂಗ ನಗರಸಂಸ್ಕೃತಿಯ ಮತ್ತು ಆಧುನಿಕತೆಯ ಪ್ರಭಾವಕ್ಕೆ ಒಳಗಾಗಿ ನಮ್ಮ ಸಂಸ್ಕೃತಿಯ ಮೂಲಗುಣಗಳನ್ನು ಅಳವಡಿಸಿಕೊಳ್ಳದೆ, ನಮ್ಮ ಸಂಸ್ಕೃತಿಯ ವಿರುದ್ಧ ದಿಕ್ಕಿನಲ್ಲಿ ಚಲಿಸುವುದನ್ನು ಸೂಚಿಸುತ್ತದೆ. ಆದರೆ ಗುಡಸೀಕರನ ಯಾವ ಉದ್ದೇಶಗಳನ್ನು ಲೆಕ್ಕಿಸದೆ, ಅವನನ್ನು ಸ್ನೇಹಿತನಂತೆ ಕಂಡು ಅವನ ಪಕ್ಕದಲ್ಲಿ ಕುಳಿತು ಕೊಳ್ಳುವದು ಕಿರಿಯರನ್ನು ಪ್ರೀತಿಯಿಂದ ಕಾಣುವ, ದ್ವೇಷವನ್ನು ಮುಂದುವರೆಸದ, ತನ್ನ ಅಧಿಕಾರ, ಅಂತಸ್ತು, ವಯಸ್ಸನ್ನು ತನ್ನ ಅಹಂಕಾರಕ್ಕಾಗಿ ಬಳಿಸದ ಗೌಡನ ಗುಣಗಳು ನಮ್ಮ ತಾಯಿಸಂಸ್ಕೃತಿಯ ಶ್ರೀಮಂತಿಕೆಯ ಧ್ಯೋತಕವಾಗಿ ಕಾಣುತ್ತವೆ.

ಗರ್ಭಿಣಿಯಾದ ಚಿಮಣಾ ಗುಡಸೀಕರನಿಂದ ತೊಂದರೆಗೆ ಒಳಗಾಗಬಹುದೆಂದು ಬಸವರಾಜನ ಮೂಲಕ ನಿಂಗೂನಿಂದ ಗರ್ಭಪಾತವಾಗುವ ಮದ್ದು ತರಿಸಿಕೊಂಡು ಅದನ್ನು ಹೊಲದಲ್ಲಿ ಸೇವಿಸಿ ಒದ್ದಾಡುತ್ತಿರುವಾಗ, ಗೌಡ ಆಕೆ ತನ್ನನ್ನು ದ್ವೇಷಿಸುವ ಗುಡಸೀಕರನ ಹೆಣ್ಣು ಎಂಬುದನ್ನು ಮರೆತು ಅವಳ ರಕ್ಷಣೆಗೆ ಮುಂದಾಗುತ್ತಾನೆ. ಸಾಯುವ ಹಂತದಲ್ಲಿದ್ದ ಅವಳ ಕಿವಿಯಲಿ ಗಾಳಿ ಊದಿ, ನಿಂತ ಅವಳ ಉಸಿರು ಮರಳಿ ಬರುವಂತೆ ಮಾಡಿ, ಪ್ರಾಣಾಪಾಯದಿಂದ ಅವಳನ್ನು ಪಾರುಮಾಡುತ್ತಾನೆ. ನಂತರ ಅವಳ ತಲೆಯನ್ನು ತನ್ನ ತೊಡೆಯ ಮೇಲಿಟ್ಟುಕೊಂಡು ಅವಳ ಆರೈಕೆ ಮಾಡುತ್ತಾನೆ. ದತ್ತಪ್ಪ ಅವಳಿಗೆ ಅವಶ್ಯಕವಾದ ಮದ್ದನ್ನು ಲಗುಮವ್ವನಿಂದ ತರಿಸಿ ಉಪಚರಿಸಿದರೆ, ಲಗಮವ್ವ ಅವಳಿಗೆ ಅವಶ್ಯಕವಾದ ಮದ್ದನ್ನು ತಂದು ಅವಳ ಔಷದೋಪಚಾರಕ್ಕೆ ದತ್ತಪ್ಪನಿಗೆ ಸಹಾಯ ಮಾಡುವುದರೊಂದಿಗೆ, ಎಚ್ಚರಗೊಂಡ ನಂತರ ಅವಳನ್ನು ನಡೆಸಿಕೊಂಡು ಬಂದು ಮನೆ ತಲುಪಿಸುತ್ತಾನೆ.

ಗುಡಸೀಕರ ಅನೇಕ ಬಾರಿ ಅಪಮಾನ ಮಾಡಿದ್ದರೂ, ಕಾರಣವಿಲ್ಲದೆ ತಮ್ಮ ವಿರುದ್ಧ ದ್ವೇಷ ಸಾಧಿಸುತ್ತಿದ್ದರೂ, ಮೂರು ಜನರು ಅವಳು ಗುಡಸೀಕರನು ಕರೆತಂದ ಚಿಮಣಾ, ಅವಳಿಗೆ ನಾವೇಕೆ ಸಹಾಯ ಮಾಡೋಣ ಎಂದು ಭಾವಿಸದೆ ಅವಳ ಪ್ರಾಣ ರಕ್ಷಣೆಗೆ ಮುಂದಾಗುತ್ತಾರೆ. ಈ ಮೂರು ಜನರಿಗೆ ಚಿಮಣಾಳ ಪ್ರಾಣವನ್ನು ಉಳಿಸುವ ಮಾನವೀಯತೆ ಮುಖ್ಯ ಹೊರತು ದ್ವೇಷವಲ್ಲ. ಕಷ್ಟದಲ್ಲಿರುವವರು ತಮ್ಮ ಶತ್ರುವೇ ಆಗಿರಲಿ ಅವರನ್ನು ತಮ್ಮ ಪ್ರಾಣದ ಹಂಗು ತೊರೆದು ರಕ್ಷಿಸುವ ಗುಣ ಇವರದು. ತಮಗೆ ಸಹಾಯ ಮಾಡಿದವರಿಗೂ ಅಪಕಾರ ಮಾಡುವ ಇಂದಿನ ಕಾಲದಲ್ಲಿ, ಇವರು ತಮಗೆ ಅಪಕಾರ ಮಾಡಿದ ಚಿಮಣಾಳಿಗೆ ಉಪಕಾರ ಮಾಡಿ ಅವಳನ್ನು ರಕ್ಷಿಸುತ್ತಾರೆ.

ಗೌಡನ ಮೇಲಿನ ದ್ವೇಷದಿಂದ ಗುಡಸೀಕರ ಮತ್ತವನ ಸ್ನೇಹಿತರು ಗೌಡನ ಕುದುರೆಯನ್ನು ಮನಸ್ಸು ಬಂದಂತೆ ಥಳಿಸಿ ಕೆಸರಲ್ಲಿ ಮುಳುಗಿಸುತ್ತಾರೆ. ತನ್ನ ಮೇಲಿನ ಸಿಟ್ಟಿಗೆ ಏನೂ ಅರಿಯದ ಮೂಕ ಪ್ರಾಣಿಗೆ ಅನ್ಯಾಯವಾಗಿ ಹೊಡೆದದನ್ನು ಕಂಡ, ಗೌಡ ಗುಡಸೀಕರನ ಮೇಲೆ ಕೋಪ ತಾಳಿ ಅವನನ್ನು ಹೊಡೆಯಲು ಧಾವಿಸಿದರೂ ಅವನ ತಾಯಿಯ ದೈನ್ಯದ ಬೇಡಿಕೆಯನ್ನು ಕೇಳಿ ಅವನನ್ನು ಬಿಟ್ಟು ಬಿಡುತ್ತಾನೆ. ಗುಡಸೀಕರ ಅನೇಕಬಾರಿ ಅವಮಾನ ಮಾಡಿದ್ದರೂ, ಅವನನ್ನು ಮಗನಂತೆ ಕಾಣುತ್ತಿದ್ದ ಗೌಡ ಅವನ ಮೇಲೆ ಕೈಮಾಡಲು ಹೋದದ್ದು ತನ್ನ ಸಾಕುಪ್ರಾಣಿಗೆ ಆತ ಕೊಟ್ಟ ಹಿಂಸೆಯಿಂದ ಹೊರತು, ಅವನ ಮೇಲಿನ

ದ್ವೇಷದಿಂದಲ್ಲ. ಸಾಕು ಪ್ರಾಣಿಗಳನ್ನು ಮಕ್ಕಳಂತೆ ಪ್ರೀತಿಯಿಂದ ಕಾಣುವ, ಅವಕ್ಕೆ ನೋವಾದರೆ ಸಂಕಟ ಪಡುವ, ತಾಯಿಕರುಳಿನ ಗೌಡ ತನ್ನ ಕುದರೆಗಾದ ಹಿಂಸೆಯಿಂದ ಅವನನ್ನು ಶಿಕ್ಷಿಸಲು ಮುಂದಾದರೂ ನನ್ನ ಮಗನನ್ನು ನಿನ್ನ ಮಗನೆಂದು ತಿಳಿದು ಅವನನ್ನು ಕ್ಷಮಿಸೆಂದು ದೈನ್ಯದಿಂದ ಬೇಡುವ ಗುಡಸೀಕರನ ತಾಯಿಯ ಪ್ರೀತಿ ವಾತ್ಸಲ್ಯದ ಮುಂದೆ ಗೌಡನ ಕೋಪ ತಣ್ಣಗಾಗಿ ಬಿಡುತ್ತದೆ. ನಂತರ ಇದೇ ವಿಷಯಕ್ಕಾಗಿ ಇವನನ್ನು ಹೊಡೆಯಲು ತನ್ನ ಮಗ ಶಿವನಿಂಗ ಬಂದಾಗ ಗೌಡ ಅವನನ್ನು ತಡೆದು ಗುಡಸೀಕರನನ್ನು ರಕ್ಷಿಸುತ್ತಾನೆ.

ಸಾಯುವ ಸ್ಥಿತಿಯಲ್ಲಿದ್ದ ತನ್ನನ್ನು ಗೌಡ ರಕ್ಷಿಸಿದ್ದನ್ನು ಮರೆತ ಚಿಮಣಾ ದುಷ್ಟ ಬಸವರಾಜನ ಮಾತುಕೇಳಿ ಗೌಡ ಮತ್ತವನ ಮಗ ಶಿವನಿಂಗ ನನ್ನ ಮೇಲೆ ಬಲತ್ಕಾರ ಮಾಡಿ ಬಸಿರು ಮಾಡಿದ್ದಾರೆಂದು ಗೌಡನ ವಿರುದ್ಧ ಪೋಜದಾರನಿಗೆ ಅರ್ಜಿ ಬರೆದುಕೊಡುತ್ತಾಳೆ. ತುಂಬಿದ ಊರ ಜನರ ನಡುವೆ ಗೌಡ ತನ್ನ ಬಸಿರಿಗೆ ಕಾರಣ ಎಂದು ಹೇಳಿ ಪೋಜದಾರ ಊರಿನ ಪ್ರತೀಕವಾದ ಗೌಡನಿಗೆ ಅಸಭ್ಯವಾಗಿ ಮಾತನಾಡುವ ಹಾಗೆ ಮಾಡುತ್ತಾರೆ. ಗೌಡ ತನ್ನ ಮತ್ತು ತನ್ನ ಮಗುವಿಗೋಸ್ಕರ ಎರಡು ಎಕರೆ ಹೊಲ ಬರೆದು ಕೊಡಬೇಕೆಂದು ಪೋಜದಾರನ ಬಾಯಿಂದ ಹೇಳಿಸುತ್ತಾಳೆ. ಇಷ್ಟೆಲ್ಲಾ ಮಾಡಿ ಎರಡು ಎಕರೆ ಹೊಲಕ್ಕಾಗಿ ತನ್ನ ಮನೆಗೆ ಬಂದು ಗಲಾಟೆ ಮಾಡಿದರೂ, ಯಾವುದೇ ತಪ್ಪು ಮಾಡದ ಗೌಡ ಅವಳ ವಿರುದ್ಧ ಚಕಾರ ಎತ್ತುವುದಿಲ್ಲ. ಅವಳು ಅಳುತ್ತಾ, ಅಳುತ್ತಾ ಕುಸಿದು ಬಿದ್ದಾಗ, ಅದನ್ನು ನೋಡಿ ತಡಿಯದ ಗೌಡ ನೀನು ನನಗೆ ಬಸಿರಾಗಿದ್ದರೆ ನನ್ನ ಮನೆಯಲ್ಲಿಯೇ ಇದ್ದುಬಿಡು ಎಂದು ಅವಳಿಗೆ ಆಶ್ರಯ ಕೊಡಲು ಮುಂದಾಗುತ್ತಾನೆ.

ಸಾಯುವ ಹಂತದಲ್ಲಿ ಅವಳ ಪ್ರಾಣ ಉಳಿಸಿದ್ದರೂ ಉಪಕಾರ ಹಿಡಿಯದೆ, ತನ್ನ ಮತ್ತು ತನ್ನ ಮಗನ ಮೇಲೆ ಬಲತ್ಕಾರದ ಆರೋಪ ಹೊರೆಸಿ ಪೋಜದಾರನಿಂದ ಅಸಭ್ಯವಾಗಿ ಬೈಸಿದ್ದರೂ ಅದ್ಯಾವುದನ್ನು ಮನಸ್ಸಿನಲ್ಲಿಟ್ಟುಕೊಳ್ಳದೇ ಅವಳ ವಿರುದ್ಧ ದ್ವೇಷ ಸಾಧಿಸುವ, ಶಿಕ್ಷೆ ಕೊಡುವ ಪ್ರಕ್ರಿಯೆಗೆ ಮುಂದಾಗದ ಗೌಡ ಅವಳಿಗೆ ತಾನೇ ಆಶ್ರಯ ಕೊಡಲು ಮುಂದಾಗುತ್ತಾನೆ. ಅಪಕಾರ ಮಾಡಿದವರಿಗೂ ಆಶ್ರಯ ನೀಡುವ ಉಪಕಾರ ಮನೋಧರ್ಮದಿಂದ ಗೌಡ ಪರೋಪಕಾರಿ ವ್ಯಕ್ತಿಯನಿಸುತ್ತಾನೆ.

ತನ್ನ ಪ್ರಾಣವನ್ನು ರಕ್ಷಿಸಿದ ಉಪಕಾರ ಸ್ಮರಿಸದೆ, ಬಸವರಾಜನ ಮಾತು ಕೇಳಿ ಸಭ್ಯವಾದ ಗೌಡನ ವಿರುದ್ಧ ತಿರುಗಿ ಬಿಳುವ ಮೂಲಕ ಚಿಮಣಾ ಕ್ರೂರ ಮನುಷ್ಯಳಾಗಿ ಕಾಣುತ್ತಾಳೆ. ಚಿಮಣಾಳ ಈ ಮೃಗೀಯ ವರ್ತನೆ ನಗರ ಜನತೆಯ ಕೃತಘ್ನತಾ ಮನೋಭಾವಕ್ಕೆ ಉತ್ತಮ ನಿದರ್ಶನವಾಗಿದೆ. 'ಮೋಸ ಮಾಡಿದವನ ಹೆಸರನ್ನು ಮಗನಿಗಿಡು' ಎನ್ನುವ ಗಾದೆಯ ಮಾತಿನಂತೆ ಕಷ್ಟದಲ್ಲಿರುವ ಶತ್ರುವನ್ನು ರಕ್ಷಿಸುವ ಗೌಡ ನಮ್ಮ ಪರಂಪರೆಯ ಪ್ರತಿನಿಧಿಯಾಗಿ ಕಂಡರೆ, ಉಪಕಾರ ಮಾಡಿದವರಿಗೂ ಅಪಕಾರ ಮಾಡುವ ಚಿಮಣಾ ನಗರಸಂಸ್ಕೃತಿಯ ಪ್ರತೀಕವೆನಿಸುತ್ತಾಳೆ.

ತನಗೆ ಅಪಕಾರ ಮಾಡಿದ ಚಿಮಣಾಳನ್ನು ಗೌಡ ಕ್ಷಮಿಸಿದರೂ ಗೌಡನ ಪರ ಜನ ಮಾತ್ರ ಅವಳನ್ನು ಕ್ಷಮಿಸದೆ ಅವಳಿಗೆ ಬಹಿಷ್ಕಾರ ಹಾಕುತ್ತಾರೆ. ಹಿರಿಯ, ಗ್ರಾಮರಕ್ಷಕನಿಗಾದ ಅನ್ಯಾಯ ಅವಮಾನವನ್ನು ಸಹಿಸದ ಊರಜನ ಹೊರಗಿನಿಂದ ಬಂದು ತಮ್ಮನ್ನು ತುಳಿಯಲೆತ್ನಿಸಿದ ಚಿಮಣಾಳಿಗೆ ಒಗ್ಗಟ್ಟಿನಿಂದ ನಿಂತು ಬಹಿಷ್ಕಾರ ಹಾಕುವ ಮೂಲಕ ಪರರಿಂದ ತಮಗೆ ಅನ್ಯಾಯವಾಗುವುದನ್ನು ನಮ್ಮ ಸಂಸ್ಕೃತಿಗೆ

ಧಕ್ಕೆಯಾಗುವುದನ್ನು ನಾವೆಂದೂ ಸಹಿಸುವುದಿಲ್ಲ ಎಂಬುದನ್ನು ತೋರಿಸುವುದರೊಂದಿಗೆ ತಮ್ಮಲ್ಲಿರುವ ಅಖಂಡತೆಯನ್ನು ಪ್ರದರ್ಶಿಸುತ್ತಾರೆ. ಇಲ್ಲಿ ಊರಜನ ಚಿಮಣಾಳಿಗೆ ಬಹಿಷ್ಕಾರ ಹಾಕುವುದು ನಿರಪಾಧಿಗಳನ್ನು ರಕ್ಷಿಸಿ, ಅಪರಾಧಿಗಳನ್ನು ಶಿಕ್ಷಿಸಬೇಕೆಂಬ ಉದ್ದೇಶದಿಂದ ಹೊರತು ಒಬ್ಬ ಹೆಣ್ಣುಮಗಳಿಗೆ ನೋವು ಕೊಡುವ, ಅವಳಿಗೆ ಅನ್ಯಾಯ ಮಾಡುವ ಉದ್ದೇಶದಿಂದಲ್ಲ.

ಗುಡಸೀಕರ ತನ್ನು ವಿರುದ್ಧ ಗುಂಪುಕಟ್ಟಿಕೊಂಡು ನಾಟಕ ಆಡಿಸಿದರೂ, ತನ್ನ ಮೇಲೆ ಬಲತ್ಕಾರದ ಆರೋಪ ಹೊರಸಿದರೂ, ತನ್ನ ಕುದುರೆಯನ್ನು ಹಿಗ್ಗಾಮುಗ್ಗಾ ಥಳಿಸಿದರೂ, ಗೌಡ ಇದ್ಯಾವುದನ್ನು ಮನಸ್ಸಿನಲ್ಲಿಟ್ಟುಕೊಳ್ಳದೆ ಊರಿನ ಹಿತರಕ್ಷಣೆಯ ದೃಷ್ಟಿಯಿಂದ ಗುಡಸೀಕರನ ಹತ್ತಿರ ಹೋಗುತ್ತಾನೆ. 'ನನಗೆ ನೀನು ಬೇರೆ ಅಲ್ಲ ನನ್ನ ಮಗ ಬೇರೆಯಲ್ಲ. ಅದಕ್ಕಾಗಿ ನಿನ್ನ ಕೈಗೆ ಪಂಚಾಯ್ತಿಕೊಟ್ಟಿದ್ದೆನೆ. ನಾನು ನಿನ್ನ ವೈರಿಯಲ್ಲ ನಿನ್ನ ಮೇಲೆ ದ್ವೇಷ ಸಾಧಿಸುವ ಮನಸ್ಸು, ವಯಸ್ಸು ನನ್ನದಲ್ಲ. ನಾನು ಸಾವಿನ ಹತ್ತಿರ ಇರುವವ, ಇನ್ನು ಊರು ರಕ್ಷಿಸುವ ಜವಾಬ್ದಾರಿ ನಿನ್ನದು. ನನ್ನ ಮೇಲಿನ ದ್ವೇಷದಿಂದ ಊರಿಗೆ ಕೆಟ್ಟದ್ದನ್ನು ಮಾಡಬೇಡ. ಸಾಯುವ ವಯಸ್ಸಿನಲ್ಲಿ ನನ್ನ ಮೇಲೆ ಇಂತಹ ಆರೋಪ ಹೊರೆಸಬೇಡ'. ಎಂದು ದೈನ್ಯದಿಂದ ಬೇಡಿಕೊಳ್ಳುತ್ತಾನೆ. ಅಧಿಕಾರ, ಅಂತಸ್ತು, ವಯಸ್ಸು, ಅನುಭವ ಯಾವುದರಲ್ಲಿಯೂ ತನ್ನ ಸಮಾನನಲ್ಲದ ಗುಡಸೀಕರನ ಹತ್ತಿರ ತನ್ನ ತಪ್ಪಿರದಿದ್ದರೂ ಕ್ಷಮೆ ಕೇಳುವ, ದೈನ್ಯತೆಯಿಂದ ಬೇಡುವ, ಅವನನ್ನು ಮಗನಂತೆ ಕಂಡು ಅವನಿಗೆ ಅಧಿಕಾರವಹಿಸಲು ಮುಂದಾಗುವದು. ಗೌಡನ ಮತ್ತು ಆತನ ಔದಾರ್ಯತೆ ಶಿವಾಪುರದ ಜನತೆಯ ಸೌಜನ್ಯಯುತ ನಡುವಳಿಕೆಯನ್ನು ಎತ್ತಿತೋರಿಸುತ್ತದೆ. ಗೌಡನಿಗೆ ಬೇಕಾಗಿರುವದು ಅಧಿಕಾರ, ಅಂತಸ್ತಲ್ಲ. ಬದಲಾಗಿ ತಮ್ಮ ದ್ವೇಷದಲ್ಲಿ ಊರು ಹಾಳಾಗಬಾರದೆಂಬ ಕಾಳಜಿ. ಜೊತೆಗೆ ತನಗೆ ಮಗನ ಸಮಾನನಾದ, ಇಡೀ ಊರಿನ ರಕ್ಷಣೆಯ ಜವಾಬ್ದಾರಿವಹಿಸಿಕೊಳ್ಳಬೇಕಾದ ಯುವಕ ಹಾಳಾಗಿ ಊರಿಗೆ ಮಾರಿಯಾಗಬಾರದೆಂಬ ಅಭಿಲಾಷೆ. ತಪ್ಪು ಮಾಡದಿದ್ದರೂ ಕ್ಷಮೆ ಕೇಳಿ ತಪ್ಪು ಮಾಡುತ್ತಿರುವವನ ಮನಸ್ಸನ್ನು ಪರಿವರ್ತಿಸಿ ಅವನನ್ನು ಸರಿದಾರಿಗೆ ತರುವ ಮೂಲಕ ಊರ ಹಿತರಕ್ಷಣೆ ಮಾಡುವ ಗೌಡ ಇಡೀ ಊರಿಗೆ ತಾಯಿ ಸ್ವರೂಪಿಯಾಗುತ್ತಾನೆ.

ನಪುಂಸಕನಾದ ನಿಂಗು ಇಲ್ಲಿ ಹೆಂಗರುಳಿನ ವ್ಯಕ್ತಿಯಾಗಿ ಕಾಣುತ್ತಾನೆ. ಗುಡಸೀಕರ ಕೊಟ್ಟ ಹಣದ ಮೂಲಕ ದುರ್ಗಿಯನ್ನು ಕರಿಮಾಯಿ ಗುಡಿಯಲ್ಲಿ ಉಪಭೋಗಿಸಲು ಯತ್ನಿಸಿದ ಚತುಷ್ಟಯರನ್ನು, ತಾನೇ ದುರ್ಗಿಯ ವೇಷದಲ್ಲಿ ಹೋಗಿ ಅವರನ್ನು ಮೋಸಗೊಳಿಸಿ, ದುರ್ಗಿಯನ್ನು ಅವರಿಂದ ರಕ್ಷಿಸಿ ಒಬ್ಬ ಹೆಣ್ಣುಮಗಳು ಬಲತ್ಕಾರಕ್ಕೆ ಒಳಗಾಗುವದನ್ನು ತಡೆಯುತ್ತಾನೆ. ಅವರು ಕೊಟ್ಟ ಹಣದಲ್ಲಿ ತನ್ನ ಹತ್ತಿರ ಉಳಿದಿದ್ದ ಒಂದು ರೂಪಾಯಿಯನ್ನು ದುರ್ಗಿಗೆ ಕೊಟ್ಟು ಮನುಷ್ಯತ್ವ ಮೆರೆಯುತ್ತಾನೆ. ನಪುಂಸಕನಾದ ನಿಂಗೂ ತನ್ನನ್ನೆ ಕಷ್ಟಕ್ಕಿಡುಮಾಡಿಕೊಂಡು, ಒಂದು ಹೆಣ್ಣನ್ನು ಕಷ್ಟದಿಂದ ಪಾರು ಮಾಡುತ್ತಾನೆ. ತಿಳಿಯದೆ ತಪ್ಪು ಮಾಡಿ ಗರ್ಭಿಣಿಯರಾದ ಹೆಣ್ಣು ಮಕ್ಕಳಿಗೆ ಗರ್ಭ ಇಳಿಯವ ಮದ್ದುಕೊಟ್ಟು ಅವರ ಮಾನ ರಕ್ಷಿಸುತ್ತಿರುತ್ತಾನೆ. ಬಿರಂಡಿ ಎಂದು ನೀರು ಕುಡಿದು ತೂರಾಡುತ್ತಾ ಬರುತ್ತಿದ್ದ ನಾಯಲ್ಯಾನನ್ನು ಕರೆದುಕೊಂಡು ಹೋಗಿ ಮನೆ ಮುಟ್ಟಿಸುತ್ತಾನೆ. ನಪುಂಸಕನಾದರೂ ಈತ ತನ್ನ ಪರೋಪಕಾರ ಬುದ್ಧಿಯಿಂದ ಜನತೆಗೆ ಬೇಕಾದ ವ್ಯಕ್ತಿಯೆನಿಸುತ್ತಾನೆ.

ಗೌಡನ ಸಹವರ್ತಿಗಳಾದ ದತ್ತಪ್ಪ, ಲಗುಮವ್ವರು ಸಹ ಗೌಡನ ಪರೋಪಕಾರಿ ಕಾರ್ಯದಲ್ಲಿ ಆತನ ಜೊತೆಗಿದ್ದು ಸಹಕರಿಸುತ್ತಾರೆ. ತಮ್ಮ ವಿರೋಧಿಯಾದ ಚಿಮಣಾಳನ್ನು ಪ್ರಾಣಾಪಾಯದಿಂದ ಪಾರು ಮಾಡುತ್ತಾರೆ. 'ಗೌಡನಿಗಾದ ಅವಮಾನ ತಮಗಾದ ಅವಮಾನ' ಎಂದು ಭಾವಿಸಿ ಚಿಮಣಾಳಿಗೆ ಬಹಿಷ್ಕಾರ ಹಾಕಿ ಅವಳಿಂದ ಗೌಡನನ್ನು ರಕ್ಷಿಸುತ್ತಾರೆ.

ಶಿವಾಪುರದಂತಹ ಸಾಂಸ್ಕೃತಿಕ ಶ್ರೀಮಂತ ನೆಲದಲ್ಲಿ ಹುಟ್ಟಿದ ಗುಡಸೀಕರ ಕಂಬಾರರೇ ಹೇಳುವಂತೆ 'ಖಳನಾಯಕನಲ್ಲ' ಇವನು ಗ್ರಾಮದ ಹಿತಚಿಂತಕನೇ. ಉಳಿಗಮಾನ್ಯ ವ್ಯವಸ್ಥೆಯ ಪ್ರತಿನಿಧಿಯಾಗಿದ್ದರೂ ಗೌಡ ಊರ ಜನರನ್ನು ಮಕ್ಕಳಂತೆ ಕಾಯುತ್ತಿದ್ದಾನೆ. ಶಿವಾಪುರವನ್ನು ಬೆಳಗಾವಿಯಂತ ನಗರವನ್ನಾಗಿ ಪರಿವರ್ತಿಸಬೇಕೆಂಬ ಉದ್ದೇಶವೇ ಹೊರತು, ಗ್ರಾಮವನ್ನು ಹಾಳುಮಾಡಬೇಕೆಂಬ ಉದ್ದೇಶ ಗುಡಿಸೀಕರನದಲ್ಲ. ಪಂಚಾಯ್ತಿ ಅಧಿಕಾರ ವಹಿಸಿಕೊಂಡಾಗ ಆ ಅಧಿಕಾರದ ಮೂಲಕ ಗ್ರಾಮವನ್ನು ಅಭಿವೃದ್ಧಿಪಡಿಸಲು ಮುಂದಾಗುತ್ತಾನೆ.

ಊರ ಹಿತಬಯಸುವ ಇವನನ್ನು ಸ್ವಾರ್ಥಿಯನ್ನಾಗಿ ಮಾಡುವದು ಊರನ್ನು ಹಾಳುಮಾಡುವಂತೆ ಮಾಡುವುದು ನಗರ ಪ್ರದೇಶದಿಂದ ಬಂದ ಬಸವರಾಜನ ಕುತಂತ್ರಗಳು ನಗರದಲ್ಲಿ ಕಲಿತ ಸ್ವಾರ್ಥಬುದ್ಧಿಯಿಂದ ನಿಂಗೂನನ್ನು ಕೋರ್ಟಿಗೆ ಎಳೆದು ಪ್ರತಿಷ್ಟೆಗಳಿಸಲು ಯತ್ನಿಸಿದರೂ ಅವನಿಗೆ ಅನ್ಯಾಯ ಮಾಡಬೇಕೆಂಬ ಉದ್ದೇಶ ಈತನಿಗಿರುವುದಿಲ್ಲ. ಗೌಡನ ಮೇಲೆ ಬಲತ್ಕಾರದ ಆರೋಪ ಹೊರಿಸುವದು, ಗೌಡನ ಕುದುರೆಯನ್ನು ಮನಬಂದಂತೆ ಥಳಿಸುವದು ಕೊಳವಿ ಮುದುಕಪ್ಪನನ್ನು ಹಿಡಿಯಲು ಪೋಲಿಸರಿಗೆ ಅರ್ಜಿಕೊಟ್ಟು ಅವನ ಸಾವಿಗೆ ಕಾರಣವಾಗುವುದು ನಗರದಿಂದ ಬಂದ ಬಸವರಾಜನ ಕುತಂತ್ರಕ್ಕೆ ಬಲಿಯಾಗಿಯೇ ಹೊರತು ತನ್ನ ಸ್ವ ಇಚ್ಛೆಯಿಂದಲ್ಲ ಹೋಳಿಹುಣ್ಣಿಮೆಯಲ್ಲಿ ತನಗಾದ ಅವಮಾನದ ಸಿಟ್ಟಿನಿಂದ ಬಾಳುನ ಮಗನನ್ನು ಹೊಡೆದರೂ ಅದಕ್ಕಾಗಿ ಮರುಗುವ ಅಂತಃಕರಣದ ವ್ಯಕ್ತಿ ಗುಡಸೀಕರ.

ಸ್ವಭಾವತಃ ಒಳ್ಳೆಯವನಾದ ಗುಡಸೀಕರ ತಾನೂ ಕಲಿತ ಬಂದ ನಗರಸಂಸ್ಕೃತಿ ಮತ್ತು ನಗರದಿಂದ ಬಂದ ಬಸವರಾಜನಂಥ ಕುತಂತ್ರವ್ಯಕ್ತಿಗಳಿಗೆ ಬಲಿಯಾಗಿ ತನ್ನ ಮೂಲಗುಣಗಳನ್ನು ಮರೆತಿದ್ದರೂ ಗೌಡ ಬಂದು ತನ್ನ ತಪ್ಪಿರದಿದ್ದರೂ ಕ್ಷಮ ಕೇಳಿ ಊರನ್ನು ಹಾಳುಮಾಡದೆ ರಕ್ಷಿಸೆಂದು ಬೇಡಿಕೊಂಡಾಗ ತನ್ನಲ್ಲಿರುವ ಕೆಟ್ಟಗುಣಗಳನ್ನು ಕಳೆದುಕೊಂಡು ಕರಗುತ್ತಾನೆ. ಗೌಡ ತಾನು ಪಾಸಾದಾಗ ಊರಿಗೆ ಪೇಡೆ ಹಂಚಿದನ್ನು, ಇಲೆಕ್ಷನ ಮಾಡದೆ ಪಂಚಾಯ್ತಿ ಅಧಿಕಾರವನ್ನು ತನ್ನ ಕೈಗೆ ನೀಡಿದ್ದನ್ನು ಜ್ಞಾಪಿಸಿಕೊಂಡು ಗೌಡ ನನ್ನ ಪರ ಕಾಳಜಿ ಇರುವ ವ್ಯಕ್ತಿ. ಅಂತವನ ವಿರುದ್ಧ ದ್ವೇಷಸಾಧಿಸಲು ಹೋಗಿ ಊರಿಗೆ ಮಾರಕವಾಗುತ್ತಿದ್ದೆನಲ್ಲಾ ಎಂದು ಅರಿತು ತನ್ನ ನೀತಿಯನ್ನು ಬದಲಾಯಿಸಿಕೊಳ್ಳುತ್ತಾನೆ. ತನ್ನನ್ನು ಹಾದಿ ತಪ್ಪಿಸಲು ಪ್ರಯತ್ನಿಸಿದ ಬಸವರಾಜನಿಂದ ದೂರವಿರಲು ಪ್ರಯತ್ನಿಸುತ್ತಾನೆ. ಜಾತ್ರೆಯ ದಿನ ಜೇನುಹುಳದಿಂದ ಗದ್ದಲವಾದಾಗ ಮುಂದಿನ ಅಪಾಯವನ್ನು ಅರಿತು, ದೇವಿಯ ಆಭರಣಗಳನ್ನು ಅಲ್ಲಿಂದ ತಂದು ತನ್ನ ಮನೆಯಲ್ಲಿಟ್ಟು ರಕ್ಷಿಸಲು ಮುಂದಾಗುತ್ತಾನೆ. ನಂತರ ಅವನ್ನು ಗೌಡನಿಗೆ ಒಪ್ಪಿಸಿ ನಿರಾಳವಾಗಬೇಕೆಂಬ ಉದ್ದೇಶ ಇವನದು. ಆದರೆ ಗುಡಸೀಕರನ ಉದ್ದೇಶ ಈಡೇರದೆ ಆಭರಣಗಳು ಅವನ ಮನೆಯಿಂದಲೇ ಕಳುವಾಗುತ್ತದೆ.

ಗುಡಸೀಕರನಲ್ಲಿ ಒಳ್ಳೆಯ ಗುಣಗಳಿದ್ದು, ಅನ್ಯಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿ, ಅಲ್ಲಿಯ ಕುತಂತ್ರಕ್ಕೆ ಒಳಗಾಗಿ ಮಸುಕಾಗಿದ್ದರೂ ಅವನಿಂದ ನಶಿಸಿ ಹೋಗಿರಲಿಲ್ಲ. ಗೌಡನಂಥ ತಾಯಿಮನಸ್ಸಿನ ವ್ಯಕ್ತಿಯ ಸಂಪರ್ಕದಿಂದ ಅವು ಮತ್ತೆ ಅವನಲ್ಲಿ ಜಾಗೃತಗೊಳ್ಳುತ್ತವೆ. ಇದರಿಂದ ಆತನಿಗೆ ತನ್ನ ಸಂಸ್ಕೃತಿಯ ಅರಿವಾಗಿ ಅದನ್ನು ರಕ್ಷಿಸಲು ಮುಂದಾಗುತ್ತಾನೆ.

ನಮ್ಮ ಸಂಸ್ಕೃತಿಯು ಅನ್ಯಸಂಸ್ಕೃತಿಯ ಪ್ರಭಾವಕ್ಕೆ ಒಳಗಾದರೂ ಅದರಿಂದ ಪರಿವರ್ತನೆ ಹೊಂದಿದರೂ ತನ್ನ ಮೂಲರೂಪವನ್ನು ಕಳೆದುಕೊಂಡಂತೆ ಭಾಸವಾದರೂ ಅದೆಂದು ತನ್ನತನವನ್ನು ಕಳದುಕೊಳ್ಳುವುದಿಲ್ಲ. ನಮ್ಮ ಸಂಸ್ಕೃತಿಯ ರಕ್ಷಣಾಗುಣ ಯಾವಾಗಲೂ ಸ್ಥಿರವಾಗಿರುತ್ತದೆ. ನಮ್ಮ ಸಂಸ್ಕೃತಿ ಪರಿವರ್ತನೆ ಹೊಂದಬಹುದೇ ಹೊರತು ನಶಿಸುವುದಿಲ್ಲ ಎಂಬುದು ಗುಡಸೀಕರನ ಗುಣ ತಿಳಿಸುತ್ತದೆ.

ಅನ್ಯಸಂಸ್ಕೃತಿಯಿಂದ ಬಂದ ಬಸವರಾಜ ನಮಗೆ ನಗರಸಂಸ್ಕೃತಿಯ ಕರಾಳತೆಯ ದರ್ಶನ ಮಾಡಿಸುತ್ತಾನೆ. ಒಳ್ಳೆಯ ಗುಣದ ಗುಡಸೀಕರನನ್ನು ಕೆಟ್ಟ ಹಾದಿ ತುಳಿಯುವಂತೆ ಮಾಡುತ್ತಾನೆ. ಸ್ನೇಹಿತನ ತಂಗಿಯನ್ನು ತಂಗಿಯಂತೆ ಕಾಣಬೇಕಾದ ಬಸವರಾಜನು ತನಗೆ ಆಶ್ರಯ ನೀಡಿದ್ದ ಗುಡಸೀಕರನ ತಂಗಿಯ ಮೇಲೆ ಕಣ್ಣು ಹಾಕಿ ಕಡೆಗೆ ಅವಳನ್ನು ಓಡಿಸಿಕೊಂಡು ಹೋಗುತ್ತಾನೆ. ಗುಡಸೀಕರನಿಗಾಗಿ ಕಾಯುತ್ತಿದ್ದ ದುರ್ಗಿಯನ್ನು ಕರಿಮಾಯಿ ಗುಡಿಯಲ್ಲಿ ಭೋಗಿಸಿ ದೇವಿಯ ಗುಡಿಯನ್ನು ಮೈಲಿಗೆ ಮಾಡುವುದರೊಂದಿಗೆ ನಮ್ಮ ಸಂಸ್ಕೃತಿಯನ್ನು ಮಲಿನಗೊಳಿಸುತ್ತಾನೆ. ದೇವಿಯ ಪೂಜಾರಿಗೆ ಬ್ರಾಂಡಿಯ ರುಚಿ ಹಚ್ಚಿಸಿ, ಹಾದಿ ತಪ್ಪುವಂತೆ ಮಾಡುತ್ತಾನೆ. ಕೊನೆಗೆ ದೇವಿಯ ಆಭರಣಗಳನ್ನು ಕದ್ದು ಓಡಿಹೋಗುತ್ತಾನೆ.

ಬಸವರಾಜನ ವರ್ತನೆ ನಮಗೆ ತಾಯಿಸಂಸ್ಕೃತಿಯ ವಿರೋಧಿಯಾದ ಅನ್ಯ ಸಂಸ್ಕೃತಿಯ ದರ್ಶನ ಮಾಡಿಸುತ್ತದೆ. ತನ್ನ ರಕ್ಷಣೆ ಮಾಡಿದವರಿಗೂ ತನಗೆ ಉಪಕಾರ ಮಾಡಿದವರಿಗೂ, ದ್ರೋಹ ಮಾಡುವದು ಅನ್ಯಸಂಸ್ಕೃತಿಯ ಲಕ್ಷಣವಾಗಿದೆ. ನಮ್ಮ ಸಂಸ್ಕೃತಿಯನ್ನು ಹಾಳುಮಾಡುವ ನಗರಸಂಸ್ಕೃತಿಗೆ ನಮ್ಮ ಸಂಸ್ಕೃತಿಯಲ್ಲಿ ಬದಕುವ ಅರ್ಹತೆ, ಯೋಗ್ಯತೆ ಇಲ್ಲ ಎಂಬುದನ್ನು ಬಸವರಾಜನು ಊರುಬಿಟ್ಟು ಓಡಿ ಹೋಗುವುದು ಪ್ರತಿನಿಧಿಸುತ್ತದೆ. ಅನ್ಯಸಂಸ್ಕೃತಿಯೊಂದಿಗೆ ಹೊಂದಿಕೊಂಡರೂ ಅದು ಇಲ್ಲಿಯ ಗುಣಗಳನ್ನು ಅಳವಡಿಸಿಕೊಂಡರೆ ಮಾತ್ರ ಇಲ್ಲಿ ಬದುಕಬಲ್ಲದು, ಇಲ್ಲದಿದ್ದರೆ ಅದಕ್ಕೆ ನಮ್ಮ ಸಂಸ್ಕತಿಯೊಳಗಡೆ ಬದಕುವ ಹಕ್ಕಿಲ್ಲ ಎಂಬುದನ್ನು ಇದು ಧ್ವನಿಸುತ್ತದೆ.

ಶಿವನಿಂಗ ಗೌಡ ಮತ್ತು ಶಿವನಿಂಗಿಯ ಅನೈತಿಕ ಸಂಬಂಧದಿಂದ ಹುಟ್ಟಿದ್ದರೂ, ಗೌಡನಂತೆ ಒಳ್ಳೆಯಗುಣ ಹೊಂದಿದವ. ಜೊತೆಗೆ ಗೌಡನ ದತ್ತುಮಗನಾಗಿ ಊರಜನತೆಯಿಂದ ಸ್ವೀಕೃತನಾದವ ಗೌಡನಂತೆ ಪರೋಪಕಾರಿಯಾದ ಈತ ಕೆರೆಯಲ್ಲಿ ಬಿದ್ದ ಚಿಮಣಾಳನ್ನು ರಕ್ಷಿಸುತ್ತಾನೆ. ಇವನ ಮೇಲೆ ಆಸೆಪಟ್ಟು ಬಂದ ಚಿಮಣಾಳನ್ನು ತಿರಸ್ಕರಿಸಿದ ಅವಳೇ ಮೇಲೆ ಬಿದ್ದು ಇವನನ್ನು ಕೂಡುತ್ತಾಳೆ. ಚಿಮಣಾ ಗೌಡ ಮತ್ತವನ ಮಗ ಬಲತ್ಕಾರಮಾಡಿದ್ದಾರೆಂದು ಅಪವಾದ ಹೊರಿಸಿದಾಗ ಶಿವನಿಂಗ ಊರುಬಿಟ್ಟು ಹೋದವನು ಮರಳಿ ಬರುವದಿಲ್ಲ.

ಬಸವರಾಜನಿಂದ ಕರಿಮಾಯಿಯ ಆಭರಣ ಕಳುವಾಗುತ್ತವೆ. ಆದರೆ ಇದೇ ವೇಳೆಗೆ ಊರಜನರಿಂದ ಬಹಿಷ್ಕಾರಕೊಳಪಟ್ಟು ದೇವಿಯ ಶಿಕ್ಷೆಯಿಂದ ಬಾಯಿಕಳೆದುಕೊಂಡು ಮೂಕಿಯಾದ ಚಿಮಣಾ ಹೆಣ್ಣುಮಗುವಿಗೆ ಜನ್ಮಕೊಡುತ್ತಾಳೆ. ಅವಳಿಗೆ ಊರಿನಿಂದ ಬಹಿಷ್ಕಾರ ಹಾಕಿದ್ದರೂ ಅವಳು ಹೆತ್ತಾಗ ಜನ ಅವಳ ರಕ್ಷಣೆ

ಮುಂದಾಗುತ್ತಾರೆ. ಇದು ಬಸವರಾಜ ನಮ್ಮಿಂದ ಕದ್ದು ಒಯ್ದುದು ಬಂಗಾರದ ಆಭರಣಗಳನ್ನು ಹೊರತು ನಮ್ಮ ಜನರ ಬಂಗಾರದಂತಹ ಸಂಸ್ಕೃತಿಯನ್ನಲ್ಲಾ, ಇಂತಹ ಎಷ್ಟೇ ಜನ ಬಂದರೂ ನಮ್ಮ ಸಂಸ್ಕೃತಿ ನಶಿಸದು ಎಂಬುದನ್ನು ತಿಳಿಸುತ್ತದೆ. ಚಿಮಣಾ ಹೆಣ್ಣುಮಗುವಿಗೆ ಜನ್ಮ ಕೊಡುವದು ರಕ್ಷಣೆಯ ಜವಾಬ್ದಾರಿ ಹೊತ್ತ ಎಂದೂ ತಾಯಿ ಸಾಯುವುದಿಲ್ಲ, ಅವಳು ಮತ್ತೆ ಮತ್ತೆ ಹುಟ್ಟುತ್ತಾಳೆಂಬುದನ್ನು ಪ್ರತಿನಿಧಿಸುತ್ತದೆ.

ಜೀಕೆ.ಮಾಸ್ತರರ ಪ್ರಣಯಪ್ರಸಂಗ 'ಕಾದಂಬರಿಯ ಗುಂಜ್ಯಾಳ ಮಾಸ್ತರರು ಪ್ರೀತಿ, ವಿಶ್ವಾಸ, ತ್ಯಾಗ, ಶಿಸ್ತು ಮುಂತಾದ ಮಾನವೀಯ ಗುಣಗಳಿರುವ ವ್ಯಕ್ತಿ. ಗುಂಜ್ಯಾಳ ಮಾಸ್ತರರು ಸ್ವಭಾವತಃ ಒಳ್ಳೆಯ ಗುಣಗಳನ್ನು ಹೊಂದಿದವರು. ತಮ್ಮ ಪ್ರಯತ್ನದ ಮೂಲಕ ಹೈಸ್ಕೂಲನ್ನು ಕಾಲೇಜಾಗಿ ಪರಿವರ್ತಿಸಿದರು. ತಮ್ಮ ಶೃದ್ಧೆ ಮತ್ತು ನೈತಿಕತೆಯ ಗುಣದಿಂದ ಊರಜನರಿಗೆ ಬೇಕಾದ ವ್ಯಕ್ತಿಯಾಗಿರುವುದರೊಂದಿಗೆ, ಶಿಷ್ಯರ ಅಚ್ಚುಮೆಚ್ಚಿನ ಗುರುಗಳಾಗಿ, ಅವರ ಸಹಕಾರದಿಂದ ಪ್ರಿನ್ಸಿಪಾಲರಾದವರು.

ಖಾಸಗಿ ಜೀವನದಲ್ಲಿಯೂ ಶಿಸ್ತನ್ನು ಅಳವಡಿಸಿಕೊಂಡಿದ್ದ ಮಾಸ್ತರರು, ದೇವರು ಸಹ ಹೆದರುವ ಹಾಗೆ ಕಟ್ಟುನಿಟ್ಟಾಗಿ ವ್ರತಪಾಲನೆ ಮಾಡುತ್ತಿದ್ದರು. ಮಗ ಸತ್ತಾಗ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದ ಹೆಂಡತಿ ಮಕ್ಕಳಿಗಾಗಿ ಮತ್ತೊಂದು ಮದುವೆಯಾಗೆಂದು ಒತ್ತಾಯಮಾಡಿದರೂ, ಕಟ್ಟಿಕೊಂಡ ಹೆಂಡತಿಗೆ ಮೋಸ ಮಾಡಬಾರದೆಂದು ಮತ್ತೊಂದು ಮದುವೆಯಾಗದೆ ಶಾಲೆಯ ಮಕ್ಕಳನ್ನು ತಮ್ಮ ಮಕ್ಕಳಂತೆ ಕಾಣುತ್ತಾ ಶಾಲೆಯ ಕಾಯಕದಲ್ಲೆ ತಮ್ಮ ಸಮಯವನ್ನು ಕಳೆಯುವ ಉದಾರ ಗುಣದವರಾಗಿದ್ದರು.

ಇಂತಹ ಮಾಸ್ತರರು ತಮ್ಮನ್ನು ಅವಮಾನ ಮಾಡಿದ ಗಿರಿಯಪ್ಪನ ಮೇಲೆ ಸೇಡು ತೀರಿಸಿಕೊಳ್ಳುವ ನೆಪದಲ್ಲಿ ಹುಡಗಿಯ ಬಲೆಗೆ ಬಿಳುತ್ತಾರೆ. ತಮ್ಮ ಹೆಂಡತಿಗೆ ಮೋಸ ಮಾಡುತ್ತಿರುವುದರ ಅರಿವಾಗಿ ತಮ್ಮ ತಪ್ಪನ್ನು ತಿದ್ದಿಕೊಳ್ಳಲು ಪ್ರಯತ್ನಿಸುತ್ತಾರೆ. ಆದರೆ ಹುಡುಗನ ಮೇಲಿನ ಸಿಟ್ಟು ಅವರನ್ನು ಮತ್ತೆ ಹಾದಿ ತಪ್ಪುವಂತೆ ಮಾಡುತ್ತದೆ. ರೋಜಾಳನ್ನು ಮನೆಗೆ ಕರೆದು ಅವಳ ಪೇಪರಿಗೆ ಮಾರ್ಕ್ಸ ಹಾಕಿಕೊಳ್ಳಲು ಅವಕಾಶಮಾಡಿಕೊಡುವುದರ ಮೂಲಕ ಇದುವರೆಗೂ ಒಳ್ಳೆಯ ಹೆಸರುಗಳಿಸಿದ್ದ ಮಾಸ್ತರರು ಭ್ರಷ್ಟಕಾರ್ಯವನ್ನು ಎಸಗುತ್ತಾರೆ. ಇವರ ಈ ಚಂಚಲತೆಯನ್ನು ಕಂಡು ಹೃದಯಾಘಾತದಿಂದ ಸಾಯುವ ಅವರ ಹೆಂಡತಿಯ ಸಾವಿಗೂ ಇವರೇ ಕಾರಣರಾಗುತ್ತಾರೆ.

ಆದರೆ ರೋಜಾ, ಗಿರಿಯಪ್ಪ ತಮಗೆ ಮೋಸಮಾಡಿದ್ದರ ಅರಿವಾಗಿ ಅವರಿಂದ ದೂರವಾದ ಮಾಸ್ತರರು, ಕೆಲವು ದಿನಗಳ ನಂತರ ಅವರನ್ನು ಮತ್ತೆ ಭೇಟಿಯಾದಾಗ ಮಕ್ಕಳನ್ನು ಕಳೆದುಕೊಂಡ ತಂದೆ ಮಕ್ಕಳನ್ನು ಮರಳಿ ಪಡೆದಂತೆ ಸಂತೋಷ ಪಡುತ್ತಾರೆ. ಅವರ ಕಷ್ಟಗಳಿಗೆ ಮರುಗುತ್ತಾರೆ. ಅವರು ತಮಗೆ ಮೋಸ ಮಾಡಿದ್ದನ್ನು ಮರೆತು ಅವರಿಗೆ ಸಹಾಯ ಮಾಡಲು ಮುಂದಾಗುತ್ತಾರೆ. ಅವರು ಸತ್ತಿದ್ದಾರೆಂದು ಜನ ತಿಳಿದಿದ್ದರಿಂದ ತಾವು ಸತ್ತ ತಾರೀಖಿಗಿಂತ ಮೊದಲಿನ ತಾರೀಖನ್ನು ಹಾಕಿ ಗಿರಿಯಪ್ಪನಿಗೆ ನೌಕರಿ ಕೊಡಬೇಕೆಂದು ಪಂಚಾಯ್ತಿ ಯಜಮಾನನಿಗೆ ಅರ್ಜಿ ಬರೆದುಕೊಡುತ್ತಾರೆ. ತಮ್ಮ ಹೆಸರಿನಲ್ಲಿದ್ದ ಮನೆ ಮತ್ತು ಹಣವನ್ನು ಗಿರಿಯಪ್ಪ, ರೋಜಾರ ಹೆಸರಿಗೆ ಉಯಿಲು ಬರೆಯುತ್ತಾರೆ.

ಗಿರಿಯಪ್ಪ ಮತ್ತು ರೋಜಾ ಮಾಸ್ತರರಿಗೆ ಮೋಸ ಮಾಡಿರುತ್ತಾರೆ. ಆದರೂ ಅವರ ತಪ್ಪನ್ನು ಕ್ಷಮಿಸುವ ಮಾಸ್ತರರು, ಅವರ ಸ್ಥಿತಿಗೆ ಮರುಗಿ, ಅವರಿಗೆ ಸಹಾಯ ಮಾಡುತ್ತಾರೆ. ಮಾಸ್ತರರ ಸುಸಂಸ್ಕೃತ ನಡತೆಯನ್ನು ಇದು ತೋರಿಸುತ್ತದೆ. ಅವರನ್ನು ಮಕ್ಕಳಂತೆ ಕಾಣುವ, ಅವರ ಕಷ್ಟಗಳಿಗೆ ಮರಗುವ,

ತಮ್ಮಿಂದಾಗುವ ಸಹಾಯ ಮಾಡುವ ಮೂಲಕ ಮಾಸ್ತರರು ಮಕ್ಕಳ ಸಮಾನರಾದ ಅವರಿಗೆ ತಾಯಿಯಂತೆ ಪ್ರೀತಿ, ವಾತ್ಸಲ್ಯ ತೋರಿಸಿ ಅವರು ಮುಂದಿನ ಬದುಕಿಗೆ ಸಹಾಯ ಮಾಡುತ್ತಾರೆ.

ಇಂತಹ ಮಾಸ್ತರರು ಮಗಳ ವಯಸ್ಸಿನ ಹೆಣ್ಣಿನ ಬೆನ್ನು ಹತ್ತುವದು, ಮಗನ ವಯಸ್ಸಿನ ಹುಡುಗನೊಂದಿಗೆ ಪ್ರತಿಸ್ಪರ್ಧೆಗೆ ಇಳಿಯುವುದು ಪೇಪರಿಗೆ ಮಾರ್ಕ್ಸ ಹಾಕುವ ಭ್ರಷ್ಟಕಾರ್ಯವನ್ನು ಮಡುವುದು ತಮ್ಮ ಚಂಚಲ ಚಿತ್ತದಿಂದಲೇ ಹೊರತು ಉದ್ದೇಶಪೂರ್ವಕವಲ್ಲ. ಆಧುನಿಕ ಉಡುಪನ್ನು ವಿರೋಧಿಸುವ, ಯುವಜನಾಂಗದ ನಡತೆಯನ್ನು ದ್ವೇಷಿಸುವ ಇವರು ಅದೇ ಅಧುನಿಕ ಉಡಪನ್ನು ಧರಿಸುವದು ಸಹ ತಮ್ಮ ಚಂಚಲತೆಯ ಗುಣದಿಂದಾಗಿ. ಹೆಂಡತಿಯ ಅನಾರೋಗ್ಯ ಮತ್ತು ಗಿರಿಯಪ್ಪ ಮಾಡಿದ ಅವಮಾನ ಇವರ ಈ ಕೆಟ್ಟಕಾರ್ಯಗಳಿಗೆ ಪುಷ್ಟಿ ಕೊಡುತ್ತದೆ.

ಹೀಗೆ ಅನೈತಿಕತೆಯ ಹಾದಿ ಹಿಡಿದಿದ್ದ ಮಾಸ್ತರರು ತಮ್ಮ ತಪ್ಪಿನ ಅರಿವಾಗಿ ತಮ್ಮ ತಪ್ಪನ್ನು ತಿದ್ದಿಕೊಳ್ಳುವದರೊಂದಿಗೆ, ತಮ್ಮನ್ನು ತಪ್ಪುದಾರಿಗೆ ಎಳೆದ, ತಮ್ಮ ತಪ್ಪಿನಿಂದ ನೋವು ಅನುಭವಿಸುತ್ತಿರುವವರಿಗೆ ಸಹಾಯ ಮಡಿ ತಮ್ಮ ತಪ್ಪಿಗೆ ಪ್ರಾಯಶ್ಚಿತಮಾಡಿಕೊಳ್ಳುತ್ತಾರೆ.

ಗುಂಜ್ಯಾಳ ಮಾಸ್ತರರನ್ನು ಮೋಸಕ್ಕೆ ಈಡು ಮಾಡಿದ ಗಿರಿಯಪ್ಪ ಮತ್ತು ರೋಜಾರು ಆಧುನಿಕ ಸಂಸ್ಕೃತಿಯ ಕೆಟ್ಟನಡತೆ ಒಣಪು, ಒಯ್ಯಾರ ರೂಢಿಸಿಕೊಂಡವರು. ಗಿರಿಯಪ್ಪ ಅಹಂಕಾರದ ಜೊತೆಗೆ ಅಸಭ್ಯ ನಡುವಳಿಕೆಯನ್ನು ಹೊಂದಿದ್ದ. ಗುರುಹಿರಿಯರ ಬಗ್ಗೆ ಗೌರವವಿಲ್ಲದ, ವಿನಯ ವಿವೇಕವನ್ನು ರೂಢಿಸಿಕೊಳ್ಳದ ಮನುಷ್ಯ. ತಾನು ಪ್ರೇಮಿಸುತ್ತಿದ್ದ ಹುಡುಗಿಯ ಮೂಲಕ ಬೆಟ್‌ಕಟ್ಟಿ ಗುಂಜ್ಯಾಳ ಮಾಸ್ತರರನ್ನು ಅವಳ ಪ್ರೇಮದ ಬಲೆಯಲ್ಲಿ ಬೀಳಿಸುತ್ತಾನೆ. ನಿಷ್ಠಾವಂತರಾದ ಮಾಸ್ತರರಿಂದ ರೋಜಾಳ ಮೂಲಕ ತಮ್ಮ ಪೇಪರಿಗೆ ಹೆಚ್ಚು ಮಾರ್ಕ್ಸ ಹಾಕಿಸಿಕೊಳ್ಳುವ ಮೂಲಕ ಮಾಸ್ತರರನ್ನು ಭ್ರಷ್ಟತೆಯ ಕಾರ್ಯಕ್ಕೆ ಎಳೆಯುತ್ತಾನೆ. ಇವನನ್ನು ಪ್ರೇಮಿಸುತ್ತಿದ್ದ ರೋಜಾ ಅವನ ಬೆಟ್‌ಗೆ ಮಾಸ್ತರರನ್ನು ತನ್ನ ಬಲೆಯಲ್ಲಿ ಬಿಳಿಸಿಕೊಳ್ಳುತ್ತಾಳೆ. ನಂತರ ಇಬ್ಬರೂ ತಮ್ಮ ತಪ್ಪನ್ನು ಹೇಳಿ ಮಾಸ್ತರರ ಕ್ಷಮೆ ಕೇಳಿದರೂ ಮಾಸ್ತರರು ಅವರನ್ನು ಕ್ಷಮಿಸದೆ ಅಲ್ಲಿಂದ ಹೊರಗೆ ಹೋಗುತ್ತಾರೆ.

ನಂತರ ಇಬ್ಬರಿಗೂ ಕೆಲಸ ಸಿಗದ್ದರಿಂದ ಮದುವೆಯಾಗಲು ಸಾಧ್ಯವಾಗದೆ ಹೊಟ್ಟೆಪಾಡಿಗಾಗಿ ರೋಜಾ ತನ್ನ ಕುಲಕಸುಬಾದ ವೇಶ್ಯಾವೃತ್ತಿಗೆ ಮರಳುತ್ತಾಳೆ. ಆಗ ತಮ್ಮ ಈ ಪರಿಸ್ಥಿತಿಗೆ ಮಾಸ್ತರರ ಶಾಪವೇ ಕಾರಣವೆಂದು ಇವರಿಬ್ಬರು ಮರಗುತ್ತಾರೆ.

ಆಧುನಿಕತೆಯ ಪ್ರಭಾವವನ್ನು ಮೈಗೂಡಿಸಿಕೊಂಡಿದ್ದ ಈ ಯುವಕರು ಮೊದಲು ಸಭ್ಯ ಮಾಸ್ತರರನ್ನು ಗೋಳು ಹೊಯ್ದುಕೊಳ್ಳುವ, ಮಾಸ್ತರರ ಮೇಲೆಯೇ ಬೆಟ್ ಕಟ್ಟುವ, ನಯವಿನಯ ರೂಢಿಸಿಕೊಳ್ಳದ ವ್ಯಕ್ತಿಗಳಾಗಿ ಕಾಣುತ್ತಾರೆ. ತಮ್ಮ ವರ್ತನೆಗಳಿಂದ ಮಾಸ್ತರರನ್ನು ತಪ್ಪು ದಾರಿಗೆ ಎಳೆಯುತ್ತಾರೆ. ಆದರೆ ಇವರ ಮೋಸಕ್ಕೆ ಬಲಿಯಾದೆನೆಂದು ಅರಿತ ಮಾಸ್ತರರು ಮೂರ್ಛೆ ಹೋದಾಗ ತಮ್ಮ ತಪ್ಪಿನ ಅರಿವು ಮಾಡಿಕೊಂಡ ಹುಡುಗರು ಮಾಸ್ತರರ ಕ್ಷಮೆ ಕೇಳುತ್ತಾರೆ. ಮುಂದೆ ತಮಗೆ ಕಷ್ಟಬಂದಾಗ ಅದಕ್ಕೆ ಮಾಸ್ತರರ ಶಾಪವೇ ಕಾರಣವೆಂದು ಭ್ರಮಿಸುತ್ತಾರೆ. ಪಶ್ಚಾತಾಪ ಪಡುತ್ತಾರೆ.

ಗುಂಜ್ಯಾಳ ಮಾಸ್ತರರು ತಮ್ಮ ತಪ್ಪನ್ನು ತಿದ್ದಿಕೊಳ್ಳುವುದರೊಂದಿಗೆ ತಪ್ಪು ಮಾಡಿದ ವ್ಯಕ್ತಿಗಳನ್ನು ಕ್ಷಮಿಸಿ ಔದಾರ್ಯತೆ ಮೆರೆಯುತ್ತಾರೆ. ಗಿರಿಯಪ್ಪ ರೋಜಾರು ತಮ್ಮ ಹುಡುಗತನದಿಂದ ಮಾಡಿದ

ತಪ್ಪನ್ನು ತಿದ್ದಿಕೊಂಡು ಮಾಸ್ತರರನ್ನು ಕ್ಷಮೆ ಕೇಳುವದರ ಮೂಲಕ ಅವರ ಪ್ರೀತಿಗೆ ಪಾತ್ರರಾಗುತ್ತಾರೆ. ಈ ಪಾತ್ರಗಳು ನಮ್ಮ ಸಂಸ್ಕೃತಿಯಲ್ಲಿಯ ಸದ್ಗುಣಗಳಿಗೆ ಸ್ವಲ್ಪಕಾಲ ಮಂಕು ಕವಿದರೂ ಅವೆಂದೂ ನಾಶವಾಗದೆ ಜಾಗೃತವಾಗಿರುತ್ತವೆಂಬುದನ್ನು ತೋರಿಸುತ್ತವೆ.

'ಸಿಂಗಾರೆವ್ವ ಮತ್ತು ಅರಮನೆ'ಯ ಕಾದಂಬರಿಯ ಸಿಂಗಾರೆವ್ವ ಪ್ರೀತಿ, ವಾತ್ಸಲ್ಯ, ಕ್ಷಮಾಗುಣಗಳನ್ನು ರೂಢಿಸಿಕೊಂಡ, ತಾಯ್ತನಕ್ಕಾಗಿ ಹಂಬಲಿಸುವ, ತಪ್ಪು ಮಾಡುವ ದಾರಿ ತಪ್ಪುವ ವ್ಯಕ್ತಿಗಳ ಮನಸ್ಸನ್ನು ಪರಿವರ್ತಿಸಿ ಅವರನ್ನು ಮನುಷ್ಯರನ್ನಾಗಿ ಪರಿವರ್ತಿಸುವ ಮಾತೃಸ್ವರೂಪಿಣಿ. ಅವಳ ಸ್ನೇಹಿತೆ ಶಿನಿಂಗವ್ವಳು ಸಹ ಗೆಳತಿಗಾಗಿ ತನ್ನ ಜೀವನವನ್ನೆ ತ್ಯಾಗಮಾಡುವ, ಅವಳನ್ನು ತಾಯಿಯಂತೆ ಪ್ರೀತಿಸುವ, ರಕ್ಷಿಸುವ, ಅವಳ ಸುಖದಲ್ಲಿಯೇ ತಾನು ಸಂತೋಷಪಡುವ ತ್ಯಾಗಮಯಿ ಹೆಣ್ಣಾಗಿ ನಮಗೆ ತೋರುತ್ತಾಳೆ.

ಸಿಂಗಾರೆವ್ವನ ತಂದೆ ಪಂಡರಿಗೌಡ ತನ್ನ ಹಣದ, ಆಸ್ತಿಯ ಆಸೆಯಿಂದ ತನ್ನ ಮಗಳನ್ನು ಸತ್ತಹೆಣದೊಂದಿಗೆ ಮದುವೆ ಮಾಡುತ್ತಾನೆ. ನಂತರ ವಿಧವೆಯಾದ ಅವಳಿಗೆ ಮಾಡಿ ಒಳ್ಳೆಯದನ್ನು ಮಾಡುತ್ತೇನೆಂದು ಹೇಳಿ ಮರುಮದುವೆ ಮಾಡುವುದು ಮೂರ್ಛೆರೋಗದ, ಚಟಗಾರ ನಿರ್ವೀರ್ಯ ಸರಗಂದೇಸಾಯಿಗೆ. ಪಂಡರಿಗೌಡ ತಾನು ಹೆತ್ತ ಮಗಳಿಗೆ ಆಸ್ತಿಯ ಆಸೆಯಿಂದ ಮೋಸಮಾಡುತ್ತಾನೆ. ಹೆತ್ತ ತಂದೆಯ ಒಮ್ಮೆ ಸತ್ತ ಹೆಣದೊಂದಿಗೆ ಮತ್ತೊಮ್ಮೆ ಜೀವಂತ ಹೆಣದಂತಿದ್ದ ನಪುಂಸಕನಿಗೆ ಮದುವೆ ಮಾಡಿದರೂ, ಸಿಂಗಾರೆವ್ವ ತನಗೆ ಮೋಸ ಮಾಡಿದ ತಂದೆ ಬಗ್ಗೆ ಸಿಟ್ಟು ಮಾಡಿಕೊಳ್ಳುವುದಿಲ್ಲ. ಅವನ ವಿರುದ್ಧ ಕೆಟ್ಟ ಮಾತನಾಡುವ, ದ್ವೇಷ ಸಾಧಿಸುವ ಪ್ರಯತ್ನವನ್ನೂ ಮಾಡುವುದಿಲ್ಲ. ಬದಲಾಗಿ ಆತ ಮನೆಗೆ ಬಂದಾಗ ಅವನನ್ನು ಗೌರವದಿಂದಲೇ ಸ್ವಾಗತಿಸಿ, ಮಾತನಾಡುತ್ತಾಳೆ. ತಾಯಿ ತನ್ನ ಮಕ್ಕಳು ತಪ್ಪು ಮಾಡಿದಾಗ ಅವರ ತಪ್ಪನ್ನು ಕ್ಷಮಿಸಿ ಪ್ರೀತಿಸುವಂತೆ ತನ್ನ ಜೀವನವನ್ನೇ ಹಾಳು ಮಾಡಿದ ತಂದೆಯನ್ನು ದ್ವೇಷಿಸದೆ, ಅವನ ವಿರುದ್ಧ ವೈರತ್ವ ಬೆಳಸಿಕೊಳ್ಳದೆ ತಾಯಿಯಂತೆ ಅವನ ತಪ್ಪನ್ನು ಕ್ಷಮಿಸುತ್ತಾಳೆ.

ಆದರೆ ತಂದೆ ಹಣಕೇಳಿ 'ನಿನ್ನ ಗಂಡ ಸತ್ತ ನಂತರ ನಾವೇ ನಿನಗೆ ಆಧಾರ' ಎಂದು ಹೇಳಿ ಅವಳ ಗಂಡ ಸಾಯುವ ಮಾತನಾಡಿದಾಗ ಮಾತ್ರ ಕ್ಷಮಾಗುಣದ, ಸಿಂಗಾರೆವ್ವ ರೌದ್ರರೂಪ ತಾಳುತ್ತಾಳೆ. ನಾನು ನನ್ನ ಗಂಡನನ್ನು ಉಳಿಸಿಕೊಂಡು, ಗಂಡು ಮಗನನ್ನು ಹೆತ್ತು ಈ ಅರಮನೆಯನ್ನು ಉಳಿಸಿಕೊಳ್ಳುತ್ತೇನೆಂದು ತಂದೆಯ ಮುಂದೆ ಪ್ರತಿಜ್ಞೆ ಮಾಡುತ್ತಾಳೆ. ಹೆತ್ತ ತಂದೆಯನ್ನು ದ್ವೇಷಿಸಲು ಪ್ರಾರಂಭಿಸುತ್ತಾಳೆ. ಯಾವ ಹೆಣ್ಣು ತನ್ನ ಗಂಡ ಸತ್ತು ತಾನು ವಿಧವೆಯಾಗುವುದನ್ನು ತಾನು ಬಂಜೆಯಾಗುವುದನ್ನು ಬಯಸುವುದಿಲ್ಲ. ತಾನು ಮುತ್ತೈದೆಯಾಗಿ ಸಾಯಬೇಕು, ತಾನು ಹತ್ತಾರು ಮಕ್ಕಳನ್ನು ಹೆತ್ತು ತಾಯ್ತನದ ಸುಖವನ್ನು ಅನುಭವಿಸಬೇಕೆಂದು ಬಯಸುತ್ತಾಳೆ. ಅದೇ ರೀತಿ ಸಿಂಗಾರೆವ್ವಳು ಗಂಡನೊಂದಿಗೆ ಸುಖವಾಗಿ ಬಾಳುವ, ತಾಯಿಯಾಗುವ ಕನಸನ್ನು ಕಾಣುತ್ತಿರುವವಳು. ಅವಳ ಈ ಕನಸಿಗೆ ಕೇಡು ಬಗೆಯುವಂತೆ ತಂದೆ ಮಾತನಾಡಿದಾಗ ಸಹನಾಮೂರ್ತಿ ಒಮ್ಮೆಲೇ ಜ್ವಾಲಾಮುಖಿಯ ಮೂಲಕ ಲಾವಾರಸವನ್ನು ಉಗುಳುವಂತೆ ಆತನ ವಿರುದ್ಧ ದ್ವೇಷ ಕಾರಲು ಪ್ರಾರಂಭಿಸುತ್ತಾಳೆ. ಇಲ್ಲಿ ಸಿಂಗಾರೆವ್ವ ತಂದೆಯ ವಿರುದ್ಧ ದ್ವೇಷಕಾರುವುದು ಅವನು ತನ್ನ ಗಂಡನಿಗೆ ಮತ್ತು ಅರಮನೆಗೆ ಕೇಡು ಬಗೆಯುತಿದ್ದಾನೆಂದು ಹೊರತು ತನಗೆ ಮೋಸಮಾಡಿದ್ದನ್ನು ತೀರಿಸಿಕೊಳ್ಳುವ ಸ್ವಾರ್ಥದಿಂದಲ್ಲ.

ಸಿಂಗಾರೆವ್ವನಿಗೆ ಮಕ್ಕಳಾಗದಾಗ ತಾನು ಗಂಡುಮಗನನ್ನು ಹೆತ್ತ ವಿಷಯ ಹೇಳಿ ಅವನನ್ನು ದತ್ತಕ ತೆಗೆದುಕೋ ಎಂದು ತಂದೆ ಹೇಳಿದಾಗ, ಸಿಂಗಾರೆವ್ವ ತನ್ನ ತಂದೆಯ ಬಗ್ಗೆ ತನ್ನ ಸಿಟ್ಟನ್ನು ಮತ್ತಷ್ಟು ಹೆಚ್ಚಿಸಿಕೊಂಡು ಅವನ ಜೊತೆ ಮಾತನ್ನೇ ಬಿಡುತ್ತಾಳೆ. ಆದರೆ ಗೌಡನನ್ನು ಕೊಲೆಮಾಡಿದ ಮರ್ರ್ಯಾ, ಆ ಹೆಣವನ್ನು ಸಿಂಗಾರೆವ್ವನಿಗೆ ತೋರಿಸಿದಾಗ ತನ್ನ ತಂದೆಯನ್ನ ಕೊಂದವನ ಬಗ್ಗೆ ಕೋಪತಾಳಿ ಅವನ ಕೈಯಿಂದಲೇ ಕಿತ್ತುಕೊಂಡ ಹಿಲಾಲಿನಿಂದ ಅವನ ಎದೆಗೆ ಚುಚ್ಚುತ್ತಾಳೆ. ಅವನನ್ನು ಗುಡಿಸಲಿನಲ್ಲಿ ತಳ್ಳಿ ಬಂದು ಗುಡಿಸಲಿಗೆ ಬೆಂಕಿ ಹಚ್ಚುತ್ತಾಳೆ. ತನ್ನ ಗಂಡನಿಗೆ ಕೆಟ್ಟದ್ದಾಗಲಿ ಎದು ಬಯಸಿದಾಗ ತಂದೆಯ ವಿರುದ್ಧ ವೈರತ್ವ ಸಾಧಿಸುತ್ತಿದ್ದ ಸಿಂಗಾರೆವ್ವ ಆತ ಕೊಲೆಯಾದದ್ದನ್ನು ಮಾತ್ರ ಸಹಿಸುವುದಿಲ್ಲ. ಅವನ ಕೊಲೆ ಮಾಡಿದ್ದವನನ್ನು ಥಳಿಸಿ, ಅವನನ್ನು ಸಾಯಿಸುವ ಪ್ರಯತ್ನ ಮಾಡುತ್ತಾಳೆ. ಹೀಗೆ ಸಿಂಗಾರೆವ್ವ ತನಗೆ ಅನ್ಯಾಯ ಮಾಡಿದ ತಂದೆಯನ್ನು ಕ್ಷಮಿಸಿ ಅವನಿಗೆ ಒಳ್ಳೆಯದಾಗಲೆಂದು ಬಯಸುತ್ತಾಳೆ.

ತಾನು ಚಿಕ್ಕವಳಿದ್ದಾಗ ಪಂಡರಿಗೌಡ ಮರ್ರ್ಯಾನನ್ನು ಚಾಟಿಯಿಂದ ಹೊಡೆಯುವುದನ್ನು ನೋಡಿದ್ದ ಸಿಂಗಾರೆವ್ವ ಮರ್ರ್ಯಾನ ಸ್ಥಿತಿಗೆ ಸಂಕಟ ಪಡುತ್ತಾಳೆ. ತನ್ನ ಊಟ, ತಿಂಡಿಗಳಲ್ಲಿ ಸ್ವಲ್ಪಭಾಗವನ್ನು ಕದ್ದು ತೆಗೆದಿಟ್ಟು ಮರ್ರ್ಯಾನಿಗೆ ಕೊಡುತ್ತಿರುತ್ತಾಳೆ. ಮರ್ರ್ಯಾನನ್ನು ಸ್ನೇಹಿತನಂತೆ ಕಾಣುತ್ತಾಳೆ. ಸಿಂಗಾರೆವ್ವ ಮರ್ರ್ಯಾನ ಸಂಕಟಕ್ಕೆ ಮರಗುವುದು, ಅವನ ಹಸಿದ ಹೊಟ್ಟೆಯನ್ನು ತುಂಬಿಸುವುದು, ಹೆಣ್ಣು ಮಕ್ಕಳು ಹುಟ್ಟಿನಿಂದಲೇ ತಾಯ್ತನದ ಗುಣಗಳನ್ನು ಪಡೆದುಕೊಂಡು ಬಂದಿರುತ್ತಾರೆ ಎಂಬುದಕ್ಕೆ ಉದಾಹರಣೆಯಾಗಿ ನಿಲ್ಲುತ್ತದೆ.

ಸಿಂಗಾರೆವ್ವ ತನ್ನ ಕೈಯಿಂದ ಆಕಸ್ಮಿಕವಾಗಿ ನಡೆದ ಕೊಲೆಯಿಂದ ತತ್ತರಿಸುತ್ತಿರುವಾಗ ಅರಮನೆ ಪ್ರವೇಶಿಸಿದ ಮರ್ರ್ಯಾ ಈ ಸಂದರ್ಭ ಉಪಯೋಗಿಸಿಕೊಂಡು ಅವಳನ್ನು ಪಡೆಯಲು ಪ್ರಯತ್ನಿಸಿದಾಗ ಅವನನ್ನು ದೂಷಿಸುತ್ತಾಳೆ. ದೇಸಾಯಿಯ ಮೂಲಕ ಅರಮನೆ ಪ್ರವೇಶಿಸಿ ಅವಳ ಮೇಲೆ ಬಲತ್ಕಾರ ಮಾಡಲು ಪ್ರಾರಂಭಿಸಿದಾಗ ಸಿಂಗಾರೆವ್ವ ಆತನಿಗೆ ಊಟದಲ್ಲಿ ಮದ್ದುಹಾಕಿ ಕೊಲ್ಲಲು ಶಿನಿಂಗವ್ವನಿಗೆ ಸೂಚಿಸುತ್ತಾಳೆ. ಆದರೆ ಆತನ ಊಟ ಮಾಡುವ ವೇಳೆ ತಾನು ಗರ್ಭಿಣಿಯೆಂದು ತಿಳಿದು ಅದಕ್ಕೆ ಕಾರಣನಾದ ಮರ್ರ್ಯಾ ಸಾಯಬಾರದೆಂದು ಆತ ಊಟಮಾಡುತ್ತಿದ್ದ ತಾಟನ್ನು ಒದ್ದು ಅವನನ್ನು ರಕ್ಷಿಸುತ್ತಾಳೆ.

ಮುಗ್ಧ ಮನಸ್ಸಿನ, ಕರುಣಾ ಸ್ವಭಾವದ ಸಿಂಗಾರೆವ್ವ ಮರ್ರ್ಯಾನನ್ನು ಕೊಲ್ಲಲು ಶಿನಿಂಗವ್ವಳಿಂದ ವಿಷಹಾಕಿಸುವುದು ಆತನಿಂದ ತನಗಾಗುತ್ತಿರುವ ಹಿಂಸೆಯಿಂದ ಬಿಡುಗಡೆ ಪಡೆಯಲು ಹೊರತು, ಆತನ ಮೇಲಿನ ದ್ವೇಷದಿಂದಲ್ಲ. ಸಿಂಗಾರೆವ್ವ ಅವನನ್ನು ಕೊಲ್ಲಲು ಸಂಚು ರೂಪಿಸಿದರೂ, ಅವಳಲ್ಲಿರುವ ಅಂತಃಕರಣ ಅವಳನ್ನು ಕೊಲ್ಲಲು ಬಿಡುವುದಿಲ್ಲ. ಹೀಗೆ ಅವನನ್ನು ಕ್ಷಮಿಸುವುದರೊಂದಿಗೆ ಕ್ರೂರಿಯಾದ ಅವನ ಮನಸ್ಸು ಪರಿವರ್ತನೆ ಹೊಂದಿ ಮುಂದೆ ಆತ ಒಳ್ಳೆಯ ವ್ಯಕ್ತಿಯಾಗಲು ಕಾರಣಳಾಗುತ್ತಾಳೆ.

ವಾತ್ಸಲ್ಯ, ಪ್ರೀತಿ, ಕರುಣೆಯಂತಹ ಗುಣಗಳನ್ನು ಬೆಳಸಿಕೊಂಡಿದ್ದ ಸಿಂಗಾರೆವ್ವ ಮರ್ರ್ಯಾನೊಂದಿಗೆ ಅನೈತಿಕ ಸಂಬಂಧ ಹೊಂದಿ ಗರ್ಭಿಣಿಯಾಗುತ್ತಾಳೆ. ಸುಸಂಸ್ಕೃತ ವ್ಯಕ್ತಿತ್ವದ ಸಿಂಗಾರೆವ್ವ ಹೀಗೆ ಅನೈತಿಕ ಹಾದಿ ಹಿಡಿಯಲು ಕಾರಣ ಅವಳ ತಾಯ್ತನದ ಹಂಬಲ ಜೊತೆಗೆ ಅರಮನೆಯ ವಂಶೋದ್ಧಾರಕನನ್ನು ಹೆತ್ತು ಅರಮನೆಯನ್ನು ಉಳಿಸಿಕೊಳ್ಳಬೇಕೆಂಬ ಆಕಾಂಕ್ಷೆ.

ಸಿಂಗಾರೆವ್ವ ಮೊದಲೇ ತಾಯ್ತನದ ಹಂಬಲವುಳ್ಳವಳು ಆಕಳ ಕರುವನ್ನು ಸಹ ಮಗುವಿನಂತೆ ಮುದ್ದಿಸಿ ಪ್ರೀತಿಸುವವಳು. ಇವಳ ಈ ಹಂಬಲಕ್ಕೆ ನೀರೆರೆಯುವಂತೆ ಸರಗಂದೇಸಾಯಿಯ ತಾಯಿ

ಗಂಡುಮಗುವನ್ನು ಹೆತ್ತು ಕೊಟ್ಟರೆ ತನ್ನಲ್ಲಿರುವ ಚಿನ್ನದ ನಡುಪಟ್ಟಿಯನ್ನು ನಿನಗೆ ಕೊಡುವೆನೆಂದು ಹೇಳಿ ಅವಳ ತಾಯ್ತನದ ಆಸೆಯನ್ನು ಪ್ರೋತ್ಸಾಹಿಸುತ್ತಿರುತ್ತಾಳೆ. ಇವಳ ಆಸ್ತಿಯ ಮೇಲೆ ಕಣ್ಣಿಟ್ಟಿದ್ದ ಇವಳ ತಂದೆ ತನ್ನ ಮಗನನ್ನು ದತ್ತು ತೆಗೆದುಕೋ ಎಂದು ಪೀಡಿಸುತ್ತಿರುತ್ತಾನೆ. ಪರಮಶೆಟ್ಟಿ ದೇಸಾಯಿಯ ಆಸ್ತಿಯನ್ನು ಅರಮನೆಯನ್ನು ನುಂಗಿಹಾಕಲು ಪ್ರಯತ್ನಿಸುತ್ತಿರುತ್ತಾನೆ. ತನ್ನ ತಾಯ್ತನದ ಹಂಬಲವನ್ನು ಈಡೇರಿಸಿಕೊಂಡು ನುಂಗಿಹಾಕಲು ರಕ್ಷಿಸಬೇಕೆಂದರೆ ಅವಳಿಗೆ ದೊರೆತದ್ದು ನಿರ್ವೀರ್ಯ ಗಂಡ. ಹೆಂಗಸರ ತೊಡೆಯನ್ನು ಕಂಡ ತಕ್ಷಣ ಬೆಹೂಶ್ ಆಗಿ ಬೀಳುವ ಗಂಡನನ್ನು ಸುಧಾರಿಸಲು ಪ್ರಯತ್ನಿಸುತ್ತಾಳೆ. ಅವನಿಗಾಗಿ ವಿಲಾಸಿನಿಯಂತೆ ಮೈ ಪ್ರದರ್ಶಿಸುತ್ತಾಳೆ. ಆದರೂ ಗಂಡ ಮತ್ತೆ ಬೆಹೂಶ್ ಆಗಿ ಬಿಳುತ್ತಾನೆ. ಇದರಿಂದ ಕೋಪಗೊಂಡ ಸಿಂಗಾರೆವ್ವ ತನ್ನ ತಾಯ್ತನದ ಆಸೆ ಈಡೇರಿಸಿಕೊಳ್ಳಲು, ಅರಮನೆಯನ್ನು ದುಷ್ಟರಿಂದ ರಕ್ಷಿಸಿ, ಅದನ್ನು ಬೆಳೆಸಲು ತನಗಿರುವುದೊಂದೆ ಮಾರ್ಗ ಎಂದು ತಿಳಿದು ಮರ್‍ಯಾನನ್ನು ಸೇರಿ ಗರ್ಭಿಣಿಯಾಗುತ್ತಾಳೆ.

ಇಲ್ಲಿ ಸಿಂಗಾರೆವ್ವ ಅನ್ಯೆತಿಕತೆಯ ಹಾದಿ ಹಿಡಿಯುವುದು ತಾಯ್ತನದ ಆಸೆ ಈಡೇರಿಸಿಕೊಳ್ಳುವ ಮತ್ತು ಅರಮನೆಯನ್ನು ದುಷ್ಟರಿಂದ ರಕ್ಷಿಸಿ, ತನ್ನ ಹೊಟ್ಟೆಯಲ್ಲಿ ಹುಟ್ಟುವ ಮಗುವಿನ ಮೂಲಕ ಅರಮನೆಯನ್ನು ಉಳಿಸಿ ಬೆಳಸಬೇಕೆಂಬ ಉದ್ದೇಶದಿಂದಲೇ ಹೊರತು, ತನ್ನ ಕಾಮದ ದಾಹವನ್ನು ತೀರಿಸಿಕೊಳ್ಳಲಲ್ಲ. ಕಾದಂಬರಿಯಲ್ಲಿ ಬರುವಂತೆ ಈ ಅರಮನಿ ಹಿರೇರಿಗೆಲ್ಲ ಗೊತ್ತಿರಲಿ ನಾ ಹಾದರಗಿತ್ತಿ ಅಲ್ಲಾ ಅಂತ ಹಾ.... ಹಾ.... ಎಂದ ಸಿಂಗಾರೆವ್ವ ಹೇಳುವ ಮಾತು ತುಂಬ ಗಮನಾರ್ಹವಾದದ್ದು. ಸಿಂಗಾರೆವ್ವ ಅನ್ಯೆತಿಕತೆಯ ಹಾದಿ ತುಳಿಯುವುದು ಮಗುವಿಗೆ ಜನ್ಮಕೊಟ್ಟು ಮಗುವಿನ ತಾಯಿಯಾಗುವ ಅರಮನೆಯನ್ನು ರಕ್ಷಿಸಿ ಅರಮನೆಯ ಪಾಲಿಗೂ ತಾಯಿಯಾಗುವ ಆಕಾಂಕ್ಷೆಯಿಂದ. ಅವಳು ಹಿಡಿಯುವ ಮಾರ್ಗ ಸರಿಯಿರದಿದ್ದರೂ ಉದ್ದೇಶ ಮಾತ್ರ ಒಳ್ಳೆಯದೇ. ಸಿಂಗಾರೆವ್ವ ಗಂಡುಮಗನನ್ನು ಹೆತ್ತು ಅರಮನೆಯನ್ನು ಉಳಿಸಿಕೊಳ್ಳುತ್ತೇನೆಂದು ತಂದೆಗೆ ಹೇಳುತ್ತಾಳೆ. ಜನಪದ ನಾರಿಗೆ ಮಕ್ಕಳಲ್ಲಿ ಹೆಣ್ಣು, ಗಂಡು ಎಂಬ ಭೇದವಿಲ್ಲ ಮಕ್ಕಳನ್ನು ಸಮಾನತೆಯಿಂದ ಕಾಣುವ ಇವರು ಬಯಸುವುದು ಹೆಚ್ಚಾಗಿ ಹೆಣ್ಣು ಮಕ್ಕಳನ್ನು

"ಹತ್ತು ಗಂಡ್ಹಡೆದರ ಮತ್ತೆ ಬಂಜೆಂಬರು
ದಟ್ಟಿಯ ಉಡುವ ಧರಣಿಯ। ಹಡೆದರ
ಮಕ್ಕಳ ತಾಯೆಂದು ಕರೆದಾರ"

ಎಂದು ಹೆಣ್ಣು ಮಕ್ಕಳನ್ನು ಹೆರಲು ಬಯಸುತ್ತಾರೆ. ಸಿಂಗಾರೆವ್ವ ಗಂಡು ಮಗುವನ್ನು ಬಯಸುವುದು, ಅತ್ತೆಯು ಗಂಡುಮಗುವನ್ನು ಹೆತ್ತುಕೊಡು ಎಂದು ಮೇಲಿಂದ ಮೇಲೆ ಮಾಡಿಕೊಳ್ಳುತ್ತಿದ್ದ ಬೇಡಿಕೆ ಮತ್ತು ಗಂಡು ಮಗುವಿನಿಂದಲೇ ತಮ್ಮ ಅರಮನೆ ಬೆಳೆಯುವುದು ಎಂಬ ನಂಬಿಕೆಯ ಜೊತೆಗೆ ತಂದೆ ದತ್ತಕದ ವಿಷಯ ಹೇಳಿ ಅವಳಿಗೆ ನೀಡುತ್ತಿದ್ದ ಹಿಂಸೆಯಿಂದಲೇ ಹೊರತು ಹೆಣ್ಣು ಮಕ್ಕಳು ಬೇಡೆಂಬ ಆಕ್ಷೇಪದಿಂದಲ್ಲ. ಹೀಗೆ ಸಿಂಗಾರೆವ್ವ ಮನುಷ್ಯತ್ವದ ಗುಣಗಳ ವ್ಯಕ್ತಿಯಾಗಿ ಕಂಡುಬರುತ್ತಾಳೆ.

ಸಿಂಗಾರೆವ್ವನ ಸ್ನೇಹಿತೆ ಶಿನಿಂಗವ್ವ, ಸಿಂಗಾರೆವ್ವನಿಗಾಗಿ ಅರಮನೆಗೆ ಬಂದು ನಿಂತು ಅವಳಿಗಾಗಿ ಮದುವೆಯಾಗದೆ ತನ್ನ ಜೀವನವನ್ನು ಸಿಂಗಾರೆವ್ವ ಸಹಾಯಕ್ಕಾಗಿಯೇ ಮುಡಿಪಾಗಿಡುತ್ತಾಳೆ. ಸಿಂಗಾರೆವ್ವ ತಾಯ್ತನದ ಹಂಬಲದಿಂದ ಅತ್ತಾಗ ಅವಳನ್ನು ರಮಿಸುತ್ತಾಳೆ. ಸಿಂಗಾರೆವ್ವ ತನ್ನ ತಾಯ್ತನದ ಹಂಬಲ

ಪೂರೈಸಿಕೊಳ್ಳಲು ಹುಚ್ಚಯ್ಯನಿಂದ ಪೂಜೆ ಮಾಡಿಸಲು ಸಜ್ಜಾದಾಗ, ಶಿನಿಂಗವ್ವ ಅವಳಿಗೆ ಸಹಾಯ, ಸಹಕಾರ ನೀಡುತ್ತಾಳೆ. ಆಕಸ್ಮಿಕವಾಗಿ ಹುಚ್ಚಯ್ಯ ಸತ್ತಾಗ ಮರ್ರ್ಯಾನನ್ನು ಕರೆದುಕೊಂಡು ಬಂದು ಅವಳನ್ನು ಕೊಲೆಯ ಆರೋಪದಿಂದ ಹೊರತರುತ್ತಾಳೆ. ಸಿಂಗಾರೆವ್ವ ಮರ್ರ್ಯಾನಿಂದ ಬಲತ್ಕಾರಕ್ಕಿಡಾದಾಗ ಸಂಕಟ ಪಡುತ್ತಾಳೆ. ಸಿಂಗಾರೆವ್ವ ಮರ್ರ್ಯಾನ ಕಾಟ ಸಹಿಸದೆ ಅವನನ್ನು ಕೊಲ್ಲಲು ವಿಷಹಾಕೆಂದು ಕೊಟ್ಟಾಗ ಅವನನ್ನು ಕೊಲ್ಲಲು ಮನಸ್ಸಾಗದೆ ವಿಷವನ್ನು ಒಲೆಗೆ ಹಾಕಿ ಅವನನ್ನು ಜೀವಾಪಾಯದಿಂದ ರಕ್ಷಿಸುತ್ತಾಳೆ. ಸಿಂಗರೆವ್ವ ಗರ್ಭಿಣಿಯಾದ ವಿಷಯ ತಿಳಿದು ತಾನೇ ಗರ್ಭಿಣಿಯಾದಷ್ಟು ಸಂತೋಷ ಪಡುತ್ತಾಳೆ. ಸಿಂಗಾರೆವ್ವನ ಎಲ್ಲ ಕಷ್ಟಗಳನ್ನು ಪರಿಹರಿಸಿ ಅವಳನ್ನು ರಕ್ಷಿಸಿ ಶಿನಿಂಗವ್ವ ಸಿಂಗಾರೆವ್ವನ ಪಾಲಿಗೆ ತಾಯಿಯಾಗುತ್ತಾಳೆ.

ಪಂಡರಿಗೌಡ ತನ್ನ ಅಸ್ತಿಯನ್ನು ನುಂಗಿದ್ದರಿಂದ ಮತ್ತು ತನ್ನ ತಾಯಿಯೊಂದಿಗೆ ಅನೈತಿಕ ಸಂಪರ್ಕ ಇಟ್ಟುಕೊಂಡಿದ್ದನ್ನು ನೋಡಿದ ಮರ್ರ್ಯಾ ಗೌಡನನ್ನು ಕೊಲ್ಲಲ್ಲು ಹೋಗಿ ತನ್ನ ತಾಯಿಯನ್ನು ಕೊಲ್ಲುತ್ತಾನೆ. ಗೌಡ ತನಗೆ ಅನ್ಯಾಯ ಮಾಡಿದ್ದನ್ನು ನೆನಪಿಟ್ಟುಕೊಂಡು ಆ ಸೇಡನ್ನು ಸಿಂಗಾರೆವ್ವನ ಮೇಲೆ ತೀರಿಸಲು ಪ್ರಯತ್ನಿಸುತ್ತಾನೆ. ದೇಸಾಯಿಯ ಮನೆ ಪ್ರವೇಶಿಸಿ ಅವಳನ್ನು ಬಲತ್ಕಾರಕ್ಕೆ ಇಡು ಮಾಡುತ್ತಾನೆ. ಹೀಗೆ ಮೃಗೀಯ ಗುಣಗಳನ್ನು ಹೊಂದಿದ ಮರ್ರ್ಯಾ ನಂತರ ಸಿಂಗಾರೆವ್ವನ ಪ್ರೀತಿಗೆ ಮರುಳಾಗಿ ತನ್ನಲ್ಲಿರುವ ದುಷ್ಟತವನ್ನು ಕಳೆದುಕೊಂಡು ಮನುಷ್ಯತ್ವ ಬೆಳೆಸಿಕೊಳ್ಳುತ್ತಾನೆ. ಸಿಂಗಾರೆವ್ವನ ಅರಮನೆ ಉಳಿಸಿಕೊಳ್ಳುವ ಯತ್ನದಲ್ಲಿ ಅವಳಿಗೆ ಸಹಾಯ ಮಾಡುತ್ತಾನೆ. ಈ ಮೂಲಕ ಅವಳ ಪ್ರೀತಿ ಪಡೆದ ಮರ್ರ್ಯಾ ಅವಳು ತನ್ನೊಂದಿಗೆ ಸಂಬಂಧ ಹೊಂದಿ ಗರ್ಭಿಣಿಯಾಗಲು ಕಾರಣವಾಗುತ್ತಾನೆ. ಸಿಂಗಾರೆವ್ವ ಜೈಲಿನಲ್ಲಿ ಸತ್ತಾಗ ಹುಚ್ಚು ಹಿಡಿಸಿಕೊಂಡು ಹಾವು ಕಚ್ಚಿಸಿಕೊಂಡು ಸಾಯುತ್ತಾನೆ.

ಮೊದಲು ಕ್ರೂರ ಮನುಷ್ಯನಾಗಿದ್ದ ಮರ್ರ್ಯಾ ಸಿಂಗಾರೆವ್ವನ ಪ್ರೀತಿಯ ಸ್ಪರ್ಶದಿಂದ ತನ್ನಲ್ಲಿರುವ ಮೃಗತ್ವವನ್ನು ಕಳೆದುಕೊಂಡು ಮನುಷ್ಯನಾಗುತ್ತಾನೆ. ನಂತರ ಸಿಂಗಾರೆವ್ವನ ಪ್ರೀತಿಯಲ್ಲಿಯೇ ಕೊನೆಯುಸಿರೆಳೆಯುತ್ತಾನೆ. ಇಲ್ಲಿ ಮರ್ರ್ಯಾ ಮೊದಲು ಕ್ರೂರಯೆನಿಸಿದ್ದರೂ ನಂತರ ಸಿಂಗಾರೆವ್ವನ ಅರಮನೆ ಉಳಿಸುವ ಕಾರ್ಯದಲ್ಲಿ ಸಹಾಯ ಮಾಡುವ ಮೂಲಕ ಪರಂಪರೆ, ಸಂಸ್ಕೃತಿಯ ರಕ್ಷಕನೆನಿಸುತ್ತಾನೆ.

ಸರಗಂದೇಸಾಯಿ ಚಟಗಾರ ನಿರ್ವೀರ್ಯನಾದರೂ ಔದಾರ್ಯತೆಯನ್ನು ಬೆಳಸಿಕೊಂಡ, ಸಂಸ್ಕೃತಿಯ ಬಗ್ಗೆ ಕಾಳಜಿಯುಳ್ಳ ವ್ಯಕ್ತಿಯಾಗಿ ಕಂಡುಬರುತ್ತಾನೆ. ಈತ ತನ್ನ ಅರಮನೆಯ ಆರ್ಥಿಕ ಪರಿಸ್ಥಿತಿ ಸರಿ ಇರದಿದ್ದರೂ ಸಹಾಯ ಕೇಳಿ ಬಂದವರಿಗೆ ಇಲ್ಲ ಎನ್ನದೆ ಸಹಾಯ ಮಾಡುತ್ತಿದ್ದ ಊರಲ್ಲಿ ನಾಟಕ ನಡೆದಾಗ ಆ ಇಡೀ ನಾಟಕದ ಖರ್ಚಿನ ಜವಾಬ್ದಾರಿಯನ್ನು ತಾನೇ ವಹಿಸಿಕೊಳ್ಳುತ್ತಿದ್ದ ತಿಥಿಗಾಗಿ ತಂದಿಟ್ಟಿದ್ದ ಹಣವನ್ನು ಸಹ ಊರಜನ ಕೇಳಿದಾಗ ಅವರಿಗೆ ಕೊಡುತ್ತಾನೆ. ಹಾಗೆಯೇ ತನ್ನ ಗ್ರಾಮ ಮತ್ತು ಅರಮನೆಯೊಳಗೆ ಪೋಲಿಸರ ಪ್ರವೇಶ ಆಗಬಾರದೆಂಬ ಕಾಳಜಿ ಇವನದು. ಬಳೆ ಕದ್ದ ವೇಳೆ ಮಾವ ಪೋಲಿಸರನ್ನು ಅರಮನೆಗೆ ಕರೆಸಿದಾಗ ನಮ್ಮ ಅರಮನೆಯಲ್ಲಿ ಪೋಲಿಸರ ಪ್ರವೇಶಬೇಡ ಎಂದು ಮಾವನನ್ನು ಬಯ್ಯುತ್ತಾನೆ. ಅಂತೆಯೇ ಮನೆಯ ಹೆಣ್ಣುಮಕ್ಕಳ ಹೆಸರನ್ನು ಸಹ ಸಭಾದಲ್ಲಿ ತೆಗೆಯಬಾರದು ಎಂಬ ನಿಯಮವನ್ನು ಈತ ರೂಢಿಸಿಕೊಂಡಿದ್ದ.

ಸರಗಂದೇಸಾಯಿ ತನ್ನ ನಪುಂಸಕತೆಯಿಂದ ದೈಹಿಕವಾಗಿ ಅಸಮರ್ಥನಾದರೂ, ಪರಂಪರೆಯ ಬಗ್ಗೆ ಅವನು ಇಟ್ಟ ಕಾಳಜಿ ಮಾತ್ರ ಅಪೂರ್ವವಾದದ್ದು. ಸ್ತ್ರೀಯರ ಬಗ್ಗೆ ಗೌರವ ಇರುವ ಈತ

ಅವರನ್ನು ಗೌರವದಿಂದ ಕಾಣುತ್ತಾನೆ. ಜೊತೆಗೆ ಅನ್ಯ ವ್ಯವಸ್ಥೆಯು ತನ್ನ ಗ್ರಾಮವನ್ನು ಪ್ರವೇಶಿಸಬಾರದೆಂಬ ಹಂಬಲ ಇವನದು. ಒಂದು ವೇಳೆ ನಗರ ಸಂಸ್ಕೃತಿಯ ಪ್ರತೀಕವಾದ ಪೋಲಿಸರು ಊರು ಪ್ರವೇಶಮಾಡಿದರೆ ನಮ್ಮ ಸಂಸ್ಕೃತಿ ನಶಿಸಿಹೋಗುತ್ತದೆಂಬ ಭಯ ಮತ್ತು ಹಾಗೆ ಹೋಗದಂತೆ ತಡೆಯುವ ಮುನ್ನೆಚ್ಚರಿಕೆ ಕಂಬಾರರದು.

ಶಿಖರಸೂರ್ಯ ಕಾದಂಬರಿಯಲ್ಲಿ ಬರುವ ಶಿವಪಾದ, ಬೆಳ್ಳಿ, ಜಟ್ಟಿಗ, ನಿನ್ನಡಿ, ಗೌರಿ, ಜೋಗತಿ, ಕುರುಮುನಿ ಮುಂತಾದ ಪಾತ್ರಗಳು ಮಾನವೀಯ ಗುಣಗಳನ್ನು ಅಳವಡಿಸಿಕೊಂಡಿದ್ದರೆ, ಶಿಖರಸೂರ್ಯ, ಮಹಾರಾಣಿ, ಅರ್ಥಕೌಶಲ ಮುಂತಾದವರು ದರ್ಪ, ಅಹಂಕಾರ, ಸ್ವಾರ್ಥ, ಕ್ರೂರತೆ ಮುಂತಾದ ಅಮಾನವೀಯ ಗುಣಗಳನ್ನು ಹೊಂದಿದವರು. ಇವೆರಡು ಗುಣಗಳ ನಡುವೆ ನಡೆವ ಹೋರಾಟದಲ್ಲಿ ಅಮಾನವೀಯತೆಯ ಗುಣ ಸೋಲುತ್ತದೆ.

ಶಿವಾಪುರದ ಅಮ್ಮನ ಅನುಗ್ರಹದಲ್ಲಿ ಬೆಳೆದ ಶಿವಪಾದ, ಬೆಳ್ಳಿ, ಜಟ್ಟಿಗ, ಕುರುಮುನಿ, ಚಂಡಿದಾಸ, ನಿನ್ನಡಿ ಮುಂತಾದವರು ಕಷ್ಟದಲ್ಲಿದ್ದವರಿಗೆ ಸಹಾಯಮಾಡುವ, ರೋಗಿಗಳಿಗೆ ಆರೈಕೆ ಸೇವೆ ಮಾಡುವ, ಹಸಿದವರಿಗೆ ಅನ್ನ ನೀಡುವ ಪರೋಪಕಾರಿಗಳು. ಶಿವಾಪುರದ ಬೆಳ್ಳಿ ಕಮರಿಯಲ್ಲಿ ಬಿದ್ದ ಚಿನ್ನಮುತ್ತನನ್ನು ತನ್ನ ಹಟ್ಟಿಗೆ ಕರೆದುಕೊಂಡು ಬಂದು ಅವನಿಗೆ ಔಷಧೋಪಚಾರ ಮಾಡಿ ತಾಯಿ ರೀತಿಯಲ್ಲಿ ಅವನ ಆರೈಕೆ ಮಾಡುತ್ತಾಳೆ. ಜೊತೆಗೆ ಅವನಿಗೆ ಔಷಧೀಯ ಸಸ್ಯಗಳ ಪರಿಚಯ ಮಾಡಿಕೊಡುತ್ತಾಳೆ. ಆತ ಸಸ್ಯವಿದ್ಯೆ ಕಲಿಯಬೇಕೆಂದಾಗ ಅವನನ್ನು ಶಿವಪಾದನ ಹತ್ತಿರ ಕಳುಹಿಸುತ್ತಾಳೆ. ಆದರೆ ಇವಳಿಂದ ಆರೈಕೆ ಮಾಡಿಸಿಕೊಂಡ ಶಿಖರಸೂರ್ಯ ಅವಳನ್ನೆ ಮೋಹಿಸಿ ಅವಳನ್ನು ಪಡೆಯುವ ಆಸೆಯಿಂದ ಜಟ್ಟಿಗನನ್ನು ಕೊಲೆ ಮಾಡಿ ಅವಳನ್ನೆ ಬಲತ್ಕರಿಸಲು ಮುಂದಾಗುತ್ತಾನೆ. ಬೆಳ್ಳಿ ಅಪರಿಚಿತನಾದ ಇವನನ್ನು ತಂದು ಆರೈಕೆ ಮಾಡಿದರೆ ಶಿಖರಸೂರ್ಯ ಪ್ರಾಣರಕ್ಷಣೆ ಮಾಡಿ ಉಪಕಾರ ಮಾಡಿದವಳ ಗಂಡನ ಪ್ರಾಣವನ್ನು ತೆಗೆದು ತಾಯಿ ರೂಪದ ಅವಳ ಮೇಲೆ ಬಲತ್ಕಾರ ಮಾಡಲು ಮುಂದಾಗುತ್ತಾನೆ. ತಾಯಿಸಂಸ್ಕೃತಿ ಜೀವವನ್ನು ರಕ್ಷಿಸುವ ಕೆಲಸ ಮಾಡಿದರೆ, ನಗರಸಂಸ್ಕೃತಿ ರಕ್ಷಿಸಿದವರ ಪ್ರಾಣವನ್ನೆ ತೆಗೆಯುವ ಕ್ರೌರ್ಯದ ಕೆಲಸ ಮಾಡುತ್ತದೆ.

ಬೆಳ್ಳಿ ಶಿವಪಾದ ತಂದು ಕೊಟ್ಟ ಅನಾಥ ಮಗು ನಿನ್ನಡಿಯನ್ನು ತನ್ನ ಸ್ವಂತಮಗುವೆಂದು ತಿಳಿದು ಪ್ರೀತಿಯಿಂದ ಬೆಳೆಸುತ್ತಾಳೆ. ಅನಾರೋಗ್ಯದವರಿಗೆ ಸೇವೆಮಾಡುವ, ಹಸಿದವರಿಗೆ ಅನ್ನ ನೀಡುವ, ಪರಿಸರವನ್ನು ಪ್ರೀತಿಸುವ ಪರೋಪಕಾರಿ ಗುಣವನ್ನು ನಿನ್ನಡಿಯಲ್ಲಿಯೂ ಬೆಳೆಸುತ್ತಾಳೆ. ನಿನ್ನಡಿ ಅನ್ನವನ್ನು ಚಿನ್ನವನ್ನಾಗಿ, ಹುಲ್ಲನ್ನು ಸೈನಿಕರನ್ನಾಗಿ ಮಾಡುವ ಜೀವವಿರೋಧಿ ನಿಲುವಿನ ವಿದ್ಯೆಯನ್ನು ಕಲಿತು ಅದನ್ನು ತಾಯಿಯಮುಂದೆ ಪ್ರದರ್ಶಿಸಿದಾಗ ಬೆಳ್ಳಿ 'ಇಂತಹ ವಿದ್ಯೆಯಿಂದ ಏನು ಪ್ರಯೋಜನವಾಗುತ್ತದೆ' ಎಂದು ನಿನ್ನಡಿಯನ್ನೆ ಪ್ರಶ್ನಿಸುತ್ತಾಳೆ. ನಿನ್ನಡಿ ಜನರಿಗೆ ಉಪಯೋಗವಾಗದ ವಿದ್ಯೆಯನ್ನು ತಿರಸ್ಕರಿಸಿ, ಜನರಿಗೆ ಉಪಯೋಗವಾಗುವ, ಚಿನ್ನವನ್ನು ಅನ್ನವನ್ನಾಗಿಯೂ, ಸೈನ್ಯವನ್ನು ಹುಲ್ಲನ್ನಾಗಿಯೂ ಮಾಡುವ ವಿದ್ಯೆಯನ್ನು ಕಲೆಯಲು ಪ್ರೇರಣೆ ನೀಡುತ್ತಾಳೆ. ಐದು ಹಿಡಿ ಅಕ್ಕಿಯಲ್ಲಿ ಅಡಿಗೆ ಮಾಡಿ ಬಡಿಸಿ ಸಂತೃಪ್ತಗೊಳಿಸಿದ ಗೌರಿಯನ್ನು ನಿನ್ನಡಿ ಮದುವೆಯಾದಾಗ ಅವಳನ್ನು ಮಗುವಿನಂತೆ ಪ್ರೀತಿಯಿಂದ ಸಲುಹಿ ರಕ್ಷಿಸುತ್ತಾಳೆ. ರೋಗಿಗಳನ್ನು ಆರೈಕೆಮಾಡುವ ಉಪಚಾರ ಮಾಡುವ ತನ್ನ ವಿದ್ಯೆಯನ್ನು ಮಗನಿಗೂ ಕಲಿಸಿ, ಕನಕಪುರಿ ನಗರ

ಶಿಖರಸೂರ್ಯನ ಮಿತಿಮಿರಿದ ಉಪಾಭೋಗದ ದಾಹದಿಂದ ರೋಗಿಗಳಿಂದ, ಹೆಣಗಳಿಂದ ತುಂಬಿದಾಗ ನಿನ್ನಡಿ ಅಲ್ಲಿ ಹೋಗಿ ಆ ರೋಗಿಷ್ಟರ ಸೇವೆಯನ್ನು ಮಾಡುವಂತೆ ಮಾಡುತ್ತಾಳೆ.

ಅಮ್ಮನ ಪ್ರತಿರೂಪ, ಪ್ರೀತಿ, ತ್ಯಾಗಗಳ ಸಾಕಾರಮೂರ್ತಿಯಾದ ಶಿವಪಾದ ಕಲಿಸುವುದು ಜೀವರಕ್ಷಕ ವಿದ್ಯೆಗಳನ್ನು. ಈತನಿಗೆ ಚಿರಂಜೀವಿಯಾಗುವ ವಿದ್ಯೆಗೊತ್ತಿದ್ದರೂ ಅದನ್ನು ಮಾತ್ರ ಬಳಸುವದಿಲ್ಲ ಹಾಗೇಯೇ ಔಷಧಕ್ಕಾಗಿ ಸಸ್ಯಗಳನ್ನು ಕಿಳುವಾಗ ಅವನ್ನು ನಮಸ್ಕರಿಸಿ ಅವಶ್ಯಕವಾದಷ್ಟು ಮಾತ್ರ ಕಿಳಬೇಕೆಂದು ತನ್ನ ಸುತ್ತಮುತ್ತಲಿನ ಪರಿವಾರಕ್ಕೆ ತಿಳಿಸಿರುತ್ತಾನೆ. ಹೀಗೆ ಶಿವಪಾದ ಮನುಷ್ಯರ ಜೊತಗೆ ಸಸ್ಯಗಳ ಜೀವರಕ್ಷಣೆಯನ್ನೂ ಮಾಡುತ್ತಾನೆ.

ಶಿವಪಾದ ಬುಡಕಟ್ಟು ಹೆಣ್ಣು ಮಗಳು ಅನಾಥ ಮಗುವನ್ನು ತಂದು ಕೊಟ್ಟಾಗ ಅದನ್ನು ಮಾತೃಹೃದಯದ ಬೆಳ್ಳಿಗೆ ನೀಡಿ ಅವಳು ಆ ಮಗುವನ್ನು ಬೆಳೆಸುವಂತೆ ಮಾಡುತ್ತಾನೆ. ಬೆಳೆದ ಮಗುವಿಗೆ ನಿನ್ನಡಿ ಎಂದು ನಾಮಕರಣ ಮಾಡಿ ಅವನನ್ನು ಮುಂದಿನ ಶಿವಪಾದನೆಂದು ಗುರುತಿಸಿ, ಅವನಿಗೆ ತನ್ನಲ್ಲಿರುವ ಎಲ್ಲ ವಿದ್ಯೆಯ್ನನು ಧಾರೆ ಎರೆಯುತ್ತಾನೆ. ಕಷ್ಟದಲ್ಲಿರುವವರಿಗೆ ಸಹಾಯ ಮಾಡುವ, ರೋಗಿಗಳ ಸೇವೆ ಮಾಡುವ, ಹಸಿದವರಿಗೆ ಅನ್ನ ನೀಡುವ ತಾಯಿಸಂಸ್ಕೃತಿಯ ಗುಣಗಳನ್ನು ನಿನ್ನಡಿಯಲ್ಲಿ ಬೆಳೆಸುತ್ತಾನೆ. ಐದು ಹಿಡಿ ಅಕ್ಕಿಯಲ್ಲಿಯೇ ಹೊಟ್ಟೆತುಂಬ ಊಟಬಡಿಸುವ ಹುಡುಗಿಯನ್ನು ಮದುವೆಯಾಗೆಂದು ಹೇಳಿ ನಿನ್ನಡಿ ಗೌರಿಯಂತ ತಾಯಿಹೃದಯದ ಹುಡುಗಿಯನ್ನು ಮದುವೆಯಾಗುವ ಹಾಗೆ ಮಾಡುತ್ತಾನೆ. ಅವರಿಬ್ಬರ ಮುದುವೆ ಮಾಡಿ ಗೌರಿಯಲ್ಲಿ ಬೆಟ್ಟದ ಅಮ್ಮನನ್ನು ಕಂಡು ಅವಳನ್ನು ತಾಯಿಯಂತೆ ಪ್ರೀತಿಯಿಂದ ಕಾಣುತ್ತಾನೆ. ಕನಕಪುರಿ ಜನರು ಕಷ್ಟದಿಂದ ನರಳುವಾಗ ಅವರಿಗೆ ಸಹಾಯ ಮಾಡುವಂತಹ ಗುಣವನ್ನು ನಿನ್ನಡಿ, ಚಂಡಿದಾಸ, ಕುರಮುನಿಯಂಥ ವ್ಯಕ್ತಿಗಳಲ್ಲಿ ಬೆಳೆಸಿರುತ್ತಾನೆ.

ಶಿವಪಾದ ಶಿವಪುರದ ಜನತೆಯ ರಕ್ಷಣೆ ಮಾಡುವ ಮೂಲಕ ಇಡೀ ಶಿವಾಪುರಕ್ಕೆ ಮಾನವೀಯ ಮೂರ್ತಿಯಾಗಿ ನಿಲ್ಲುತ್ತಾನೆ. ಶಿವಾಪುರದ ಜನತೆಗೆ ಬೆಟ್ಟದ ಅಮ್ಮನ ಪ್ರತಿರೂಪವಾಗುತ್ತಾನೆ. ಇಡೀ ಶಿವಾಪುರ ಮತ್ತು ಸುತ್ತಮುತ್ತಲಿನ ಗ್ರಾಮದ ಜನರನ್ನು ರಕ್ಷಿಸುತ್ತಾನೆ. ಅದೇ ರೀತಿಯ ಗುಣಗಳನ್ನುಳ್ಳ ವ್ಯಕ್ತಿಗಳನ್ನು ನಿರ್ಮಿಸಿ ತಾಯಿಸಂಸ್ಕೃತಿಯ ನಿರ್ಮಾತೃವಾಗಿ ಗೋಚರಿಸುತ್ತಾನೆ. ಇಲ್ಲಿ ಶಿವಪಾದ ಜನತೆಯ ಸೇವೆ ಮಾಡುವುದು ಅವರಿಗೆ ಒಳ್ಳೆಯದಾಗಲಿ ಎಂಬ ಭಾವನೆಯಿಂದಲೇ ಹೊರತು ಯಾವುದೇ ಸ್ವಾರ್ಥದಿಂದಲ್ಲ. ತಾಯಿಯಂತೆ ನಿಸ್ವಾರ್ಥದಿಂದ ಜನತೆಯ ಸೇವೆ ಮಾಡಿ ಶಿವಪಾದ ಮಾತೃ ಹೃದಯದ ವ್ಯಕ್ತಿಯಾಗಿ ಮೆರೆಯುತ್ತಾನೆ.

ಕನಕಪುರಿ ಶಿಖರಸೂರ್ಯನ ಸ್ವಾರ್ಥದಿಂದ ಹಾಳಾಗುತ್ತಿರುವಾಗ ಅದರ ರಕ್ಷಣೆಯ ಕಾರ್ಯವನ್ನು ನಿನ್ನಡಿ ಮಾಡುತ್ತಾನೆ. ಶಿಖರಸೂರ್ಯನ ಸ್ವಾರ್ಥಬುದ್ಧಿಯಿಂದ ಕನಕಪುರಿಯಲ್ಲಿರುವ ಧಾನ್ಯವೆಲ್ಲ ಚಿನ್ನವಾಗಿ ಹುಲ್ಲೆಲ್ಲ ಸೈನ್ಯವಾಗಿ ಜನ ಅನ್ನವಿಲ್ಲದೆ ಸಾಯುತ್ತಾರೆ. ಎಷ್ಟೋ ಜನ ರೋಗಗಳಿಂದ ನರಳುತ್ತಿರುತ್ತಾರೆ. ಆಹಾರಕ್ಕಾಗಿ ಕಳ್ಳತನ ನಡೆದು, ಕಳ್ಳರು ಮನೆಗಳಿಗೆ ಬೆಂಕಿ ಹಚ್ಚಿದ್ದರಿಂದ ಎಷ್ಟೋ ಜನ ಸುಟ್ಟಗಾಯಗಳಿಂದ ಒದ್ದಾಡುತ್ತಿರುವಾಗ ಅಲ್ಲಿಯ ಪರಿಸ್ಥಿತಿಯನ್ನು ತಿಳಿದ ನಿನ್ನಡಿ ಚಂಡಿದಾಸ ಮತ್ತು ಕುರುಮುನಿಯೊಂದಿಗೆ ಕನಕಗಿರಿಗೆ ಹೋಗುತ್ತಾನೆ. ತನ್ನ ವಿದ್ಯೆಯಿಂದ ಚಿನ್ನವನ್ನು ಧಾನ್ಯವನ್ನಾಗಿ, ಸೈನಿಕರನ್ನು ಹುಲ್ಲನ್ನಾಗಿ ಪರಿವರ್ತಿಸಿ ಜನ ಹಾಗೂ ದನಗಳ ಅನ್ನದ ಸಮಸ್ಯೆಯನ್ನು ನಿವಾರಿಸುತ್ತಾನೆ. ಸತ್ತ ಹೆಣಗಳಿಂದ

ನಾರುತ್ತಿದ್ದ ನಗರವನ್ನು ಸ್ವಚ್ಛಗೊಳಿಸುವ ಕಾರ್ಯಕ್ಕೆ ಮುಂದಾಗಿ ಹೆಣಗಳನ್ನೆಲ್ಲ ಒಂದೆಡೆ ಕಲೆಹಾಕಿ ಸುಟ್ಟ ಗ್ರಾಮವನ್ನು ಸ್ವಚ್ಛಗೊಳಿಸುತ್ತಾನೆ. ಇವನೊಂದಿಗೆ ಬಂದಿದ್ದ ಕುರುಮುನಿ ಒಂದು ಚಪ್ಪರ ಹಾಕಿ ಅಲ್ಲಿ ಗಂಜಿ ತಯಾರಿಸಿ ಹಸಿದ ಜನರಿಗೆ ಗಂಜಿ ನೀಡಿ ಅವರ ಹೊಟ್ಟೆಯ ಹಸಿವನ್ನು ತಣಿಸುತ್ತಾನೆ. ಚಂಡಿದಾಸ ಕಾಡಿಗೆ ಹೋಗಿ ಮದ್ದು ತಂದು ರೋಗದಿಂದ ನರಳುತ್ತಿರುವವರಿಗೆ ಕೊಟ್ಟು ಅವರ ಆರೈಕೆ ಮಾಡುತ್ತಾನೆ. ಇವರ ಮೂರು ಜನರ ಕೆಲಸವನ್ನು ಮೊದಲು ನಿಂತು ನೋಡುತ್ತಿದ್ದ ಜನ ನಂತರ ಅವರ ಕೆಲಸಕ್ಕೆ ಸಹಾಯ ಮಾಡುತ್ತಾರೆ.

ಶಿಖರಸೂರ್ಯನ ನೀತಿಯಿಂದ ಸ್ವಾರ್ಥ, ಅಹಂಕಾರ, ದರ್ಪ ಬೆಳಸಿಕೊಂಡಿದ್ದ ಕನಕಪುರಿಯ ಜನತೆ ಇವರ ಕೆಲಸವನ್ನು ನೋಡಿ ತಾವು ಪರಿವರ್ತನೆ ಹೊಂದಿ ಜನಸೇವೆಯಲ್ಲಿ ತೊಡುಗುತ್ತಾರೆ. ಕನಕಪುರಿ ಮತ್ತು ಕನಕಪುರಿಯ ಜನತೆಯನ್ನು ತಾಯಿಯಂತೆ ರಕ್ಷಿಸುವ ಇವರು ಕನಕಪುರಿಯ ಜನತೆಯ ಗುಣಗಳನ್ನು ಪರಿವರ್ತಿಸಿ ಅವರಲ್ಲಿಯೂ ಒಳ್ಳೆಯ ಗುಣಗಳು ಬೆಳೆಯುವ ಹಾಗೆ ಮಾಡಿ ಸ್ವಾರ್ಥಿಯಾದ ಕನಕಪುರಿಯನ್ನು ಪರೋಪಕಾರಿ ಸಂಸ್ಕೃತಿಯ ನಗರ'ವನ್ನಾಗಿ ಮಾಡುತ್ತಾರೆ.

ಶಿಖರಸೂರ್ಯನ ಮಗಳು ಗೌರಿ ಕನಕಪುರಿಯಂತಹ ಸ್ವಾರ್ಥತುಂಬಿದ ನಗರದಲ್ಲಿ ಹುಟ್ಟಿ ಬೆಳೆದರೂ, ಹಿಂದಿನ ಜನ್ಮದಲ್ಲಿ ಶಿವಾಪುರದಲ್ಲಿದ್ದುದರ ಕುರುಹಾಗಿ ಶಿವಾಪುರದ ಜನತೆಯ ಮಾನವೀಯ ಗುಣಗಳನ್ನು ಮೈಗೂಡಿಸಿ ಕೊಂಡವಳು. ಚಿಕ್ಕಂದಿನಲ್ಲಿಯೇ ಶಿವಾಪುರ ಮತ್ತು ಶಿವಾಪುರದ ಅಮ್ಮನ ಬಗ್ಗೆ ಆಸಕ್ತಿ, ಗೌರವ ಬೆಳೆಸಿಕೊಂಡಿದ್ದ ಇವಳು, ತನ್ನಲ್ಲಿಯು ಒಳ್ಳೆಯ ಗುಣಗಳನ್ನು ಬೆಳೆಸಿಕೊಂಡಿರುತ್ತಾಳೆ. ನಿನ್ನಡಿ ಐದು ಹಿಡಿ ಅಕ್ಕಿಯಲ್ಲಿ ಅಡಿಗೆ ಮಾಡಿ ಹೊಟ್ಟೆ ತುಂಬುವಂತೆ ಊಟ ಬಡಿಸಬೇಕೆಂದಾಗ ಅದರಲ್ಲಿಯೇ ಅವನಿಗೆ ತೃಪ್ತಿಯಾಗುವ ಹಾಗೆ ಊಟಬಡಿಸಿ ಅವನನ್ನು ಮೆಚ್ಚಿಸುತ್ತಾಳೆ. ಅವನು ಒಬ್ಬನೇ ಊಟ ಮಡಿದಾಗ "ನಿನ್ನ ತಾಯಿ ನಿನಗೆ ಹಂಚಿ ಉಣ್ಣುವದ್ನನ್ನು ಕಲಿಸಿಕೊಟ್ಟಿಲ್ಲವೇ?" ಎಂದು ಪ್ರಶ್ನಿಸುತ್ತಾಳೆ. ಇದ್ದಷ್ಟರಲ್ಲಿಯೇ ತೃಪ್ತಿಪಡಬೇಕೆಂಬುದು ನಿನ್ನಡಿಯ ತತ್ವವಾದರೆ, ಇದ್ದಷ್ಟರಲ್ಲಿಯೇ ಹಂಚಿ ಉಂಡು ತೃಪ್ತಿ ಪಡಬೇಕೆಂಬುದು ಗೌರಿಯ ತತ್ವವಾಗಿದೆ. ಇದ್ದಷ್ಟರಲ್ಲಿ ತಾನು ತೃಪ್ತಿ ಪಡುವದು ಮುಖ್ಯವಲ್ಲ. ಅದರಲ್ಲಿಯೇ ತಮ್ಮ ಸುತ್ತಮುತ್ತಲಿನವರನ್ನು ತೃಪ್ತಿಪಡಿಸಬೇಕೆಂಬುವ ಗೌರಿಯ ಉದ್ದೇಶ ಅವಳನ್ನು ನಿನ್ನಡಿಗಿಂತಲೂ ಮೇರು ವ್ಯಕ್ತಿತ್ವದವಳನ್ನಾಗಿಸುತ್ತದೆ.

ಗೌರಿಯಲ್ಲಿರುವ ಒಳ್ಳೆಯ ಗುಣ ಅವಳನ್ನು ರಕ್ಷಣೆ ಮಾಡುತ್ತದೆ. ಶಿಖರಸೂರ್ಯನು ಮಗಳು ಗರ್ಭಿಣಿಯಾದದ್ದನ್ನು ತಿಳಿದು ವಿಷಕೊಟ್ಟಾಗ ಶಿವಾಪುರಕ್ಕೆ ಹೊರಟ ಜೋಗತಿಯರೊಂದಿಗೆ ತಾನೂ ಬರುತ್ತೇನೆಂದು ಗೌರಿ ಹೇಳಿದಾಗ ಅವಳನ್ನು ಕರೆದುಕೊಂಡು ಹೋಗುತ್ತಾರೆ. ಕನಕಪುರಿಯಂತಹ ಸ್ವಾರ್ಥನಗರದಿಂದ ಅವಳನ್ನು ಪಾರುಮಾಡಿ ಶಿವಾಪುರದಂತಹ ಸುಸಂಸ್ಕೃತ ಗ್ರಾಮದತ್ತ ಅವಳನ್ನು ಕರೆದುಕೊಂಡು ಹೋಗುತ್ತಾರೆ. ಹಾದಿಯಲ್ಲಿ ವಿಷದ ಪರಿಣಾಮದಿಂದ ಬಂದ ಹೊಟ್ಟೆನೋವಿನಿಂದ ನರಳುತ್ತಿರುವಾಗ ಜೊಗತಿಯರು ಅವಳಿಗೆ ತಾಯಿಯಂತೆ ಪ್ರೀತಿತೋರಿಸಿ ಆರೈಕೆ ಮಾಡುತ್ತಾರೆ. ನಿನ್ನಡಿ ಕುರುಮುನಿಯರು ಅವಳಿಗೆ ಅಗತ್ಯವಾದ ಮದ್ದು ನೀಡಿ ಅವಳನ್ನು ಪ್ರಾಣಾಪಾಯದಿಂದ ರಕ್ಷಿಸುತ್ತಾರೆ. ಬಳಲಿದ ಇವಳನ್ನು ನಿನ್ನಡಿಯ ಹೋರಿ ಭೈರ ತನ್ನ ಮೇಲೆ ಕೂಡಿಸಿಕೊಂಡು ಶಿವಾಪುರಕ್ಕೆ ಕರೆದೊಯ್ಯುತ್ತದೆ. ಶಿವಾಪುರದಲ್ಲಿ ಶಿವಪಾದ ಇವಳ ಮದುವೆ ಮಾಡಿ ಇವಳನ್ನು ತಾಯಿಯತೆ ಕಾಣುತ್ತಾನೆ ಶಿಖರಸೂರ್ಯ

ಶಿವಾಪುರ ಪ್ರವೇಶಿಸಿ ನಿನ್ನಡಿಯನ್ನು ಬಂಧಿಸಿಟ್ಟಾಗ ಅವನನ್ನು ಎದುರಿಸಿ ಗಂಡನನ್ನು ಬಿಡಿಸಿಕೊಂಡು ಬರುತ್ತಾಳೆ.

ಶಿವಪಾದನಿಂದಲೇ ವಿದ್ಯೆಯನ್ನು ಕಲಿತ ಶಿಖರಸೂರ್ಯ ಅಲ್ಲಿಯ ಜೀವಪರ ವಿದ್ಯೆಯನ್ನು ಕಲಿಯದೆ ವಿಷವಿದ್ಯೆಯನ್ನು ಕಲಿಯುತ್ತಾನೆ ಚಿರಂಜೀವಿಯಾಗುವ ಹಂಬಲದಿಂದ ನಿಸರ್ಗಕ್ಕೆ ವಿರುದ್ಧವಾಗಿ ವಜ್ರದೇಹಿಯಾಗುತ್ತಾನೆ. ವಿಷವಿದ್ಯೆಯ ಮೂಲಕ ಅನೇಕ ಜನರ ಸಾವಿಗೆ ಕಾರಣವಾಗುತ್ತಾನೆ. ನಾಗಾರ್ಜುನನಿಂದ ಧಾನ್ಯವನ್ನು ಚಿನ್ನವನ್ನಾಗಿ ಹುಲ್ಲನ್ನು ಸೈನ್ಯವನ್ನಾಗಿ ಮಾಡುವ ವಿದ್ಯೆಯನ್ನು ಕಲಿತು ಮಹಾನ್ ಸಾಮ್ರಾಟನಾಗಬೇಕೆಂಬ ಆಸೆಯಿಂದ ತನ್ನ ನಗರದಲ್ಲಿರುವ ಧಾನ್ಯವನ್ನೆಲ್ಲ ಚಿನ್ನವನ್ನಾಗಿ ಮಾಡಿ ಜನರು ಆಹಾರಕ್ಕಾಗಿ ತತ್ತರಿಸುವಂತೆ ಮಾಡುತ್ತಾನೆ. ನಿನ್ನಡಿ ಕನಕಪುರಿ ರಾಜಕುಮಾರನೆಂದು ಗೊತ್ತಾದಾಗ ಆತ ನೆಲಸಿದ ಶಿವಾಪುರವನ್ನೆ ಹಾಳು ಮಾಡಲು ಪ್ರಯತ್ನಿಸುತ್ತಾನೆ. ತಾನು ಹೆತ್ತ ಮಗಳಿಗೆ ವಿಷ ಉಣಿಸುತ್ತಾನೆ, ಮಗನ ಹೆಂಡತಿಯನ್ನು ಕೊಂದು ಮಗ ಹುಚ್ಚನಾಗಿ ಸಾಯುವಂತೆ ಮಾಡುತ್ತಾನೆ. ತನಗೆ ಆಶ್ರಯ ನೀಡಿದ್ದ ಮಹಾರಾಣಿಯನ್ನು ಮೋಹಿಸಿಸ ತನ್ನ ವಿಷದೇಹದಿಂದ ಅವಳು ಸಾಯುವಂತೆ ಮಾಡುತ್ತಾನೆ. ಮಹಾರಾಣಿಯ ಮಗನಿಗೆ ಮದ್ದು ನೀಡಿ ಅವನನ್ನು ಅಸಮರ್ಥನನ್ನಾಗಿ ಮಾಡಿ ರಾಜ್ಯವನ್ನು ಕಬಳಿಸುತ್ತಾನೆ. ಹೀಗೆ ಕನಕಪುರಿಯಂಥ ನಗರದಲ್ಲಿ ಬೆಳೆದ ಶಿಕರಸೂರ್ಯ ಜೀವಕಂಟಕ ವ್ಯಕ್ತಿಯಾಗಿ ಕ್ರೂರಿಯಾಗಿ ಮಾರ್ಪಡುತ್ತಾನೆ.

ಕನಕಪುರಿಯ ಮಹಾರಾಣಿಯು ಸಹ ಮಾನವೀಯ ಗುಣಗಳಿಲ್ಲದ ಮನುಷ್ಯಳಾಗಿ ತೋರುತ್ತಾಳೆ. ತನ್ನ ಮಗ ರಾಜನಾಗಬೇಕೆಂಬ ಆಸೆಯಿಂದ ಚಿಕ್ಕಮ್ಮಣ್ಣಿಯ ಮಗನನ್ನು ಕೊಲೆಮಾಡಲು ಕಳಿಸುತ್ತಾಳೆ. ಮಹಾರಾಜನಿಗೆ ಮದ್ದುನೀಡಿದರೆ ಆರೋಗ್ಯ ಕೆಡುವಂತೆ ಬಿಳಿಗಿರಿಯ ರಾಜನನ್ನು ವಿಷಕನ್ಯೆಯರಿಂದ ಕೊಲ್ಲಿಸುತ್ತಾಳೆ. ಇವಳ ಈ ಕಾರ್ಯಕ್ಕೆ ಮಂತ್ರಿ ಅರ್ಥಕೌಶಲ ಮತ್ತು ಮಗ ಸಹಕಾರ ನೀಡುತ್ತಾರೆ. ಹೀಗೆ ಮೃಗೀಯ ಗುಣಗಳನ್ನು ಬೆಳೆಸಿಕೊಂಡ ಮೂವರು ದುರಂತ ಸಾವನ್ನು ಹೊಂದುತ್ತಾರೆ. ಅರ್ಥಕೌಶಲ ನೇಣು ಹಾಕಿ ಕೊಂಡರೆ, ಮಹಾರಾಣಿ ಶಿಕರಸೂರ್ಯನನ್ನು ಸೇರಿ ಅವನ ವಿಷ–ದೇಹದಿಂದ ಮರಣ ಹೊಂದುತ್ತಾಳೆ. ಯುವರಾಜ ಶಿಖರಸೂರ್ಯನ ಮದ್ದಿನಿಂದ ತನ್ನ ಸಾಮರ್ಥ್ಯ ಕಳೆದುಕೊಳ್ಳುತ್ತಾನೆ.

ಶಿವಾಪುರದಂತಹ ತಾಯಿಸಂಸ್ಕೃತಿಯಲ್ಲಿ ಬೆಳೆದ ನಿನ್ನಡಿ, ಬೆಳ್ಳಿ, ಶಿವಪಾದ, ಗೌರಿ, ಚಂಡಿದಾಸ, ಕುರುಮುನಿಯರು ತಾವು ಕಲಿತ ಸಂಸ್ಕೃತಿಯಿಂದ ಇಡೀ ಶಿವಾಪುರ ಮತ್ತು ಶಿವಾಪುರದ ಭಕ್ತರನ್ನು ತಾಯಿಯಂತೆ ರಕ್ಷಣೆ ಮಾಡುತ್ತಾರೆ. ತನಗೆ ದ್ರೋಹ ಬಗೆದ ಶಿಖರಸೂರ್ಯನ ಕನಕಪುರಿಯ ಜನತೆಯನ್ನು ಕಷ್ಟಗಳಿಂದ ರಕ್ಷಿಸಿ ಅವರಿಗೆ ತಾಯಿ ಸ್ವರೂಪಿಯಾಗಿ ನಿಲ್ಲುತ್ತಾರೆ. ಅವರು ಅಳವಡಿಸಿಕೊಂಡ ಗುಣಗಳು ಅವರ ಕಾರ್ಯದಲ್ಲಿ ಅವರು ಯಶಸ್ಸುಗಳಿಸುವಂತೆ ಮಾಡುತ್ತವೆ. ಅವರು ಎಲ್ಲರಿಗೂ ಬೇಕಾದ ವ್ಯಕ್ತಿಗಳಾಗಿ ಸಮಾಜದಲ್ಲಿ ಸ್ಥಾನ ಪಡೆಯುವಂತಾಗುತ್ತಾರೆ.

ಇಡೀ ರಾಜ್ಯ ರಕ್ಷಣೆಯ ಜವಾಬ್ಧಾರಿ ಹೊತ್ತ ಶಿಖರಸೂರ್ಯನಿಗೆ ತನ್ನ ಮಕ್ಕಳನ್ನು ಸಹ ರಕ್ಷಿಸಲಾಗುವುದಿಲ್ಲ. ತಾನು ಹೆತ್ತ ಮಗಳಿಗೆ ವಿಷ ನೀಡುತ್ತಾನೆ. ಮಗ ಅರೆಹುಚ್ಚನಾಗಿ ಸಾಯುವಂತೆ ಮಾಡುತ್ತಾನೆ. ಹೆಂಡತಿಯು ಸಾಯುವ ಹಾಗೆ ಮಾಡುತ್ತಾನೆ. ಕೊನೆಗೆ ತನ್ನ ರಕ್ಷಣೆಯನ್ನು ಮಾಡಿಕೊಳ್ಳದೆ ತಾನು ಇತ್ತ ಬದುಕದ ಅತ್ತ ಸಾಯದ ತ್ರಿಶಂಕು ಸ್ಥಿತಿಯನ್ನು ತಂದುಕೊಳ್ಳುತ್ತಾನೆ. ಮತ್ತೊಬ್ಬರ ಮಕ್ಕಳನ್ನು

ಸಾಯಿಸಲು ಯತ್ನಿಸಿದ ಮಹಾರಾಣಿಗೆ ತನ್ನ ಮಗನನ್ನು ಶಿಖರಸೂರ್ಯನ ಮಟ್ಟಿನಿಂದ ರಕ್ಷಿಸಲು ಸಾಧ್ಯವಾಗುವುದಿಲ್ಲ. ಜೊತೆಗೆ ತಾನು ಅವನ ವಿಷದೇಹಕ್ಕೆ ಬಲಿಯಾಗುತ್ತಾಳೆ.

ತಾಯಿಯಂತೆ ಸಮಾಜದ ಹಿತಕಾಪಾಡುವ ರಕ್ಷಿಸುವ ಜನರನ್ನು ಸಮಾಜ ಕಾಪಾಡುತ್ತದೆ. ಅವರ ಸದ್ಗುಣಗಳು ಅವರನ್ನು ರಕ್ಷಿಸುತ್ತವೆ. ಸಮಾಜದ ಪೀಡಕರಾದವರು ತಮ್ಮ ಸ್ವಾರ್ಥಕ್ಕೆ ಬಲಿಯಾಗುತ್ತಾರೆ. ಇಡೀ ಸಮಾಜವನ್ನು ಪ್ರೀತಿಯಿಂದ ಕಾಣುವ, ವಾತ್ಸಲ್ಯದಿಂದ ಪೋಷಿಸುವ ಆರೈಕೆ ಮಾಡುವ ತಾಯಿ ಸಂಸ್ಕೃತಿ ಅವಿನಾಶವಾದದ್ದು ಇದಕ್ಕೆ ವಿರುದ್ಧವಾಗಿ ಬೆಳೆದ ಸಂಸ್ಕೃತಿ ಇದರ ವಿರುದ್ಧ ಹೋರಾಡಿ ಬದುಕಲಾಗದೆ ನಾಶವಾಗುತ್ತದೆ.

ಕಂಬಾರರ ಕಾದಂಬರಿಗಳಲ್ಲಿಯ ಬರುವ ಬಹುತೇಕ ವ್ಯಕ್ತಿಗಳು ಮಾನವೀಯ ಗುಣಗಳುಳ್ಳವರು. ತಮ್ಮ ಮಕ್ಕಳನ್ನು ತಮ್ಮ ಕುಟುಂಬವನ್ನು ಮಾತ್ರ ಪ್ರೀತಿ, ವಾತ್ಸಲ್ಯದಿಂದ ಕಂಡು ರಕ್ಷಣೆಮಾಡದೆ ಇಡೀ ಸಮಾಜವನ್ನು ಪ್ರೀತಿ ವಾತ್ಸಲ್ಯದಿಂದ ಕಂಡು ರಕ್ಷಣೆಮಾಡುತ್ತಾರೆ. ಸಮಾಜದ ಜನತೆಯ ಕಷ್ಟಸುಖಗಳಲ್ಲಿ ಭಾಗಿಯಾಗುತ್ತಾರೆ. ಸಮಾಜದ ನೋವನ್ನು ತಮ್ಮ ನೋವೆಂದು ಪರಿಭಾವಿಸಿ ಮರಗುತ್ತಾರೆ ಅದನ್ನು ಪರಿಹರಿಸಲು ಯತ್ನಿಸುತ್ತಾರೆ. ಇವರ ಕಾದಂಬರಿಗಳಲ್ಲಿ ಸ್ವಾರ್ಥ, ಅಹಂಕಾರಗಳನ್ನು ರೂಢಿಸಿಕೊಂಡ ವ್ಯಕ್ತಿಗಳು ಮಾನವೀಯ ಗುಣದ ವ್ಯಕ್ತಿಗಳ ಮುಂದೆ ಸೋತು ನಾಶಹೊಂದುತ್ತಾರೆ. ಇಲ್ಲವೇ ಇವರಂತೆ ಪರಿವರ್ತನೆ ಹೊಂದುತ್ತಾರೆ ಹೊರತು ಇವರ ವಿರುದ್ಧ ಅವರೆಂದು ಯಶಸ್ವಿಗಳಾಗುವದಿಲ್ಲ. ತಾಯಿಯಂತೆ ಕಾಪಾಡುವ ಮಾನವೀಯತೆ ಕಂಬಾರರ ಕಾದಂಬರಿಗಳಲ್ಲಿ ಯಶಸ್ಸನ್ನು ಪಡೆದರೆ ತಾಯಿಸಂಸ್ಕೃತಿಯನ್ನು ವಿರೋಧಿಸುವ, ಅದಕ್ಕೆ ಪ್ರತಿರೋಧ ಮಾಡುವ ಅನ್ಯ ನಗರ ಸಂಸ್ಕೃತಿಗಳು ಇಲ್ಲಿ ಸೋತು ನೆಲಕಚ್ಚುತ್ತವೆ ಅಥವಾ ಪಲಾಯನ ಮಾಡುತ್ತವೆ. ಮಾನವೀಯ ಗುಣ ಹೊಂದಿರುವ ವ್ಯಕ್ತಿಗಳು ಕ್ರೂರ ವ್ಯಕ್ತಿಗಳ ಪ್ರಭಾವಕ್ಕೆ ಒಳಗಾಗಿ ಬದಲಾವಣೆ ಹೊಂದಿದಂತೆ ಕಂಡುಬಂದರೂ ಅಂತಿಮವಾಗಿ ತಮ್ಮ ಮೂಲ ಪ್ರವೃತ್ತಿಗಳತ್ತಲೆ ವಾಲುತ್ತಾರೆ.

* * *

ಅಧ್ಯಾಯ ೬

ಅಧ್ಯಯನದ ಫಲಿತಗಳು

ದ್ರಾವಿಡ ಸಂಸ್ಕೃತಿಯ ದಟ್ಟಛಾಯೆ ಕಂಬಾರರ ಒಟ್ಟು ಸಾಹಿತ್ಯದಲ್ಲಿ ಎದ್ದುಕಾಣುತ್ತದೆ. ಕನ್ನಡ ಸಂಸ್ಕೃತಿಯ ನಿರ್ಮಾಣ ಹಾಗೂ ನಿರ್ವಚನ ದೃಷ್ಟಿಯಿಂದ ಕಂಬಾರ ಕೃತಿಗಳ ರಚನೆ ಹಾಗೂ ಅವುಗಳ ಓದು ಮಹತ್ವ ಪೂರ್ಣವಾದುದು. ಶಕ್ತಿದೇವತೆಗಳು, ಅವುಗಳ ಆಚರಣೆ, ಯೋನಿಪೂಜೆ, ಬನಪೂಜೆ, ಗರ್ಭಪೂಜೆ ಇವೆಲ್ಲ ಫರ್ಟಿಲಿಟಿಯ ಪ್ರಕ್ರಿಯೆಗಳಾಗಿ ಬರುತ್ತವೆ. ಕರಿಮಾಯಿ, ಕರಿಸಿದ್ಧ, ನಿನ್ನಡಿ, ಕತ್ತಲು, ಪ್ರಕೃತಿ ಇವು ದ್ರಾವಿಡ ಬದುಕಿನ ಸಂಕೇತಗಳು. ಕತ್ತೆ, ಕುದುರೆ, ಹೋರಿ ಇವು ವ್ಯವಸಾಯೀ ಬದುಕಿನ ಪರಿಕರಗಳು. ಕತ್ತಲು ಮತ್ತು ಪ್ರಕೃತಿ ಆರಾಧಕರಾದ ದ್ರಾವಿಡರು ಭಯಮೂಲವಾದ ನೆಲೆಯಿಂದ ಹೊರಟು ನಿಗೂಢಗಳೊಂದಿಗೆ ಮಿಳಿತು ಅವನ್ನು ಭೇದಿಸುತ್ತಲೇ ದೈವೀಕೃಪೆಗೆ ಪಾತ್ರರಾಗುತ್ತಾರೆ. ಮಾತೃಸಂಸ್ಕೃತಿಯ ಪ್ರಧಾನ ಲಕ್ಷಣವಿದು. ಅಲ್ಲಿ ಎಲ್ಲದಕ್ಕೂ ತಾಯಿಯೇ ಪ್ರಧಾನ.

ತಾಯಿಯ ಪರಿಕಲ್ಪನೆಯೇ ಮೂಲತಃ ಸಮೃದ್ಧಿ ಮತ್ತು ಸಂಭ್ರಮ ಹಾಗೂ ಅಂತಃಕರಣಯುಕ್ತವಾದದ್ದು. ಭೂಮಿ ಮತ್ತು ತಾಯಿಯನ್ನು (ಹೆಣ್ಣು) ಸಮೀಕರಿಸಲಾಗುತ್ತದೆ. ಭೂಮಿಯ ಹೆಣ್ಣುತನ, ಹೆಣ್ಣಿನ ತಾಯ್ತನದ ಗುಣಾಂಶಗಳನ್ನು ಕೃಷಿ ಬದುಕು ಅನನ್ಯವಾಗಿ ಹೊಂದಿಸಿಕೊಂಡಿದೆ. ಒಬ್ಬಳು ಜೀವನಾಧಾರವಾದರೆ ಇನ್ನೊಬ್ಬಳು ಸಂರಕ್ಷಳು ಹಾಗೂ ಪಾಲಕ ಪೋಷಕಗಳು. ತಾಯಿ ತತ್ವದ ಮುಖ್ಯನೆಲೆಯೆಂದರೆ ತುಂಬು ಪ್ರೀತಿ ಮತ್ತು ರಕ್ಷಕತೆ. ಭಾರತೀಯ ಸಂಸ್ಕೃತಿಯನ್ನು ಪ್ರಾಯ್ಡನ ದೃಷ್ಟಿಕೋನದಿಂದ ವಿಶ್ಲೇಷಿಸಿದ ಫಿಲಿಫ್‌ಸ್ಟ್ರಾಟ್ ಎಂಬ ವಿದ್ವಾಂಸನ ಪ್ರಕಾರ ಈ ತಾಯಿ ಪರಿಕಲ್ಪನೆ ಭಾರತೀಯ ಸಂಸ್ಕೃತಿಯ ಆಧಾರ ಸ್ತಂಭಗಳಲ್ಲೊಂದು. ಧರ್ಮ ಮತ್ತು ಕಲೆಗಳಲ್ಲಿ ಸ್ಥಳೀಯ ಸಾಮಾಜಿಕ ಹಾಗೂ ಕೃಷಿ ಜೀವನದಲ್ಲಿ ಈ ತಾಯಿ ತತ್ವ ಎನ್ನುವುದು ಮೂಲಮಾದರಿಯಾಗಿ ಹೋಗಿದೆ.

ಮಾತೃಪ್ರಧಾನ ಸ್ಥಿತಿಯ ಯಾವುದೇ ಪೂರ್ವ ಸಂಸ್ಕೃತಿಗಳಿಗೆ ಹೋದರೂ ಹೆಣ್ಣೇ ಪ್ರಾಧಾನ್ಯತೆ ಪಡೆದದ್ದು ಗೊತ್ತಾಗುತ್ತದೆ. ಕಂಬಾರರ ಕರಿಮಾಯಿ ಇಂಥ ಎಲ್ಲ ಸಂಗತಿಗಳನ್ನು ಗರ್ಭೀಕರಿಸಿಕೊಂಡಾಕೆ. ಇವಳ ಸುತ್ತ ನಡೆಯುವ ಹುಟ್ಟು-ಸಾವು, ಮಳೆ-ಬೆಳೆ, ಪಕ್ವತೆ-ಫಲವಂತಿಕೆ, ಕೊಲೆ-ಹಾದರ ಇವೆಲ್ಲ ಜನ ಬದುಕಿನ ಮೇಲೆ ಚೈತನ್ಯದಾಯಕ ಪರಿಣಾಮ ಬೀರುವಂತವು. ಊರ ಹೊರಗೆ ನಿಸರ್ಗದ ಮಡಿಲಲ್ಲಿ ಇರುವ ಕರಿಮಾಯಿ ಸಾವು ಮತ್ತು ಮರು ಸೃಷ್ಟಿಯ ಸಂಕೇತವಾಗಿದ್ದಾಳೆ. ಇದಿಮಾಯಿ,

ಶೆಟವಿ, ಭೂಮಿ, ಕರಿಮಾಯಿ, ಭಾರತಮಾತೆ, ನಾಡದೇವಿ, ಹೆತ್ತತಾಯಿ, ಪ್ರಕೃತಿ ಹೀಗೆ ವಿವಿಧ ಮಜಲುಗಳಲ್ಲಿ ಈ ತಾಯಿ ತತ್ವದ ನೆಲೆಗಳನ್ನು ಕಂಬಾರರು ವಿಸ್ತರಿಸುತ್ತಾ ಹೋಗುತ್ತಾರೆ. ಉದಾಹರಣೆಗೆ ಕರಿಮಾಯಿ ಗುಡಿಯ ಹಿಂದಿನ ಹುಣಸೆ ಮಳೆಯಲ್ಲಿ ವಾಸವಾಗಿದ್ದ ಹುಚ್ಚಯ್ಯ, ಮನೆ ಆಳು ಮಾರೆಪ್ಪ, ಸಿಂಗಾರೆವ್ವನ ಸಂತಾನದ ಹಂಬಲಕ್ಕೆ ಪೂರಕವಾಗಿ ವರ್ತಿಸುವ ಸಂಗತಿಗಳು ಗಮನಾರ್ಹವಾದಂಥವು. ಹುಚ್ಚಯ್ಯ ಊರಿನ ಸಮೃದ್ಧಿಗಾಗಿ ಮಳೆ ತರಿಸುವ ಶಕ್ತಿಯುಳ್ಳವನಾದರೆ, ಮಾರೆಪ್ಪ ಸಿಂಗಾರೆವ್ವನ ಮಡಿಲು ತುಂಬಿ ಬಂಜೆತನ ನೀಗುವ ಸಾಮರ್ಥ್ಯವುಳ್ಳವ. ಎರಡೂ ಪಾತ್ರಗಳು ಅದಮ್ಯ ಸೃಷ್ಟಿಶೀಲ ಗುಣವನ್ನು ಹೊಂದಿದಂಥವು. ಇವು ದ್ರಾವಿಡ ಸಂಸ್ಕೃತಿಯ ಸಂಕೇತಗಳೂ ಆಗಿವೆ. ಫರ್ಟಿಲಿಟಿ ಪ್ರಕ್ರಿಯೆ ದ್ರಾವಿಡರ ರಕ್ತದಲ್ಲಿ ಬೆರೆತಿರುವಂಥದ್ದು. ಫರ್ಟಿಲಿಟಿ ಅಂದಾಕ್ಷನ ಬರೀ ಸಂತಾನ ಎನ್ನುವ ಸರಳಾರ್ಥಸಲ್ಲದು. ಅದು ಚರಾಚರವನ್ನು ಸೃಷ್ಟಿಸುವ, ಸಲುಹುವ, ನಾಶಗೊಳಿಸುವ, ಹಾಗೂ ಮುಂದುವರೆಸುವ, ಒಳ್ಳೆಯ ಮತ್ತು ಕೆಟ್ಟತನಗಳನ್ನು ಒಳಗೊಳ್ಳುತ್ತ ನಡೆಯುವಂಥದ್ದು. ಅದು ಪ್ರಕ್ರಿಯಾತ್ಮಕ ಸ್ವಭಾವದ್ದು. ಹೀಗಾಗಿ ಕಂಬಾರರು ಆ ಶಕ್ತಿಯ ಅದಮ್ಯತೆ ಕುರಿತು ಮತ್ತೇ ಮತ್ತೇ ಹಾಡುತ್ತಾರೆ ಹಾಗೂ ಬರೆಯುತ್ತಾರೆ. ಆ ಮೂಲಕ ಶ್ರಮಿಕ ವರ್ಗಗಳ ಸೃಷ್ಟಿಶೀಲ ಗುಣವನ್ನು ಎತ್ತಿ ಹಿಡಿಯುತ್ತಾರೆ. ಊಳಿಗಮಾನ್ಯ ವ್ಯವಸ್ಥೆಯ ಪ್ರತಿನಿಧಿಯಾದ ದೇಸಾಯಿ, ರಾಮಗೊಂಡ, ಒಣ ದರ್ಪದ ವಿಘಟಿತ ವ್ಯಕ್ತಿತ್ವಗಳಾಗಿ ಸೃಷ್ಟ್ಯಾತ್ಮಕತೆಯನ್ನು ಕಳೆದುಕೊಂಡ ನಿರ್ಜೀವ ಪಾತ್ರಗಳು. ಗಂಡು ಪಾತ್ರಗಳು ಹೀಗೆ ನಿರ್ವೀರ್ಯಸ್ಥಿತಿಯನ್ನು ತೋರಿದರೆ, ಹೆಣ್ಣು ಪಾತ್ರಗಳು ಸಂತಾನ ಸೃಷ್ಟಿಸುವ ಹಾಗೂ ಸಂವರ್ಧಿಸುವ ಪ್ರಕ್ರಿಯೆಯಲ್ಲಿ ತೀವ್ರ ಆಸಕ್ತಿಹೊಂದಿದಂಥವು. ಅದಕ್ಕಾಗಿ ಸಮಾಜದ ಚೌಕಟ್ಟುಗಳನ್ನು ಮೀರಿ ಫಲಾಪೇಕ್ಷಿಗಳಾಗುತ್ತವೆ. ನಾಡಿನಿಂದ ಕಾಡಿನತ್ತ ಮುಖ ಚಾಚುತ್ತವೆ. ಮನುಷ್ಯ ನಿರ್ಮಿತ ನಾಡ ಸಂಸ್ಕೃತಿಯ ನಿರ್ವೀರ್ಯತೆಯನ್ನು ಮೀರಿ ನಿಸರ್ಗದತ್ತವಾದ ಕಾಡು ಸಂಸ್ಕೃತಿಯ ಸಂಸರ್ಗದೊಂದಿಗೆ ಸಮೃದ್ಧಿಯನ್ನು ಪಡೆದುಕೊಳ್ಳುತ್ತವೆ. ಇದಕ್ಕೆ ಚಕೋರಿ, ಶಿಖರಸೂರ್ಯ ಕೃತಿಗಳು ಉತ್ತಮ ಉದಾಹರಣೆಗಳು.

ಅವೈದಿಕ ಸಂಸ್ಕೃತಿಯಲ್ಲಿ, ಗರ್ಭಕ್ಕೆ ಕಾರಣನಾದ ಗಂಡು, ಎಷ್ಟು ಪ್ರಧಾನವೋ ಗರ್ಭಧರಿಸಿಕೊಳ್ಳುವ ಹೆಣ್ಣು ಅಷ್ಟೇ ಪ್ರಧಾನ. ಅಲ್ಲಿ ಮೇಲು ಕೀಳಿನ ಪ್ರಶ್ನೆಗಳಿಲ್ಲ. ವೈದಿಕ ಸಂಸ್ಕೃತಿಯಲ್ಲಿ ಹೆಣ್ಣಿನ ಲೈಂಗಿಕ ಶಕ್ತಿಯನ್ನು ಕೇವಲ ಜನನ ಸಾಮರ್ಥ್ಯಕ್ಕಾಗಿ ಮಾತ್ರ ಉಪಯೋಗಿಸಿಕೊಳ್ಳಲಾಗುತ್ತದೆ. ಅವಳಿಗೆ ಗರ್ಭದಿಂದಲೇ ಗತಿ. ಗರ್ಭಧರಿಸದಿದ್ದರೆ ಅವಳಿಗೆ ವ್ಯಕ್ತಿತ್ವವಿಲ್ಲ. ವಿವಾಹದ ಚೌಕಟ್ಟಿನಲ್ಲಿ ಹೆಣ್ಣಿನ ಲೈಂಗಿಕ ಹಕ್ಕನ್ನು ಜೈವಿಕ ಅಸ್ತಿತ್ವವನ್ನು ಗಂಡಸಿಗೆ ಒತ್ತೆ ಇಡಲಾಗಿದೆ. ವೈದಿಕ ಪ್ರಣೀತ ಹಾಗೂ ಊಳಿಗಮಾನ್ಯ ವ್ಯವಸ್ಥೆಯ ಪ್ರತೀಕಗಳಾದ ಗೌಡ, ದೇಸಾಯಿ, ಹಿರಿಯ ದೊರೆಸ್ವಾನಿ ಇವರು ಹೆಣ್ಣನ್ನು ಅಸ್ತಿತ್ವರಹಿತವಾಗಿಯೇ ಭಾವಿಸಿದವರು. ಸಿಂಗಾರೆವ್ವ ಮತ್ತು ಅರಮನೆ ಕಾದಂಬರಿಯಲ್ಲಿ ಹಿರಿಯ ದೊರೆಸ್ವಾನಿ ಹಾಡಿಕೊಳ್ಳುವ ಹಾಡು ಗಮನಾರ್ಹ.

ಚಿನ್ನದ ನಡಪಟ್ಟಿ ರನ್ನದ ನಡಪಟ್ಟಿ
ಚಿನ್ನ ರನ್ನದ ನಡಪಟ್ಟಿ ಕೊಡತೀನಿ
ಮೊಮ್ಮಗನ ಹಡೆದ ಸೊಸಿಮುದ್ದಿಗೆ ॥ಸೋ॥(ಪುಟ–೬೬)

ದೇಸಗತಿ ವಾರಸುದಾರಿಕೆಗಾಗಿ ನಿಷ್ಕ್ರಿಯ ಸ್ಥಿತಿಯಲ್ಲೂ ಕ್ರಿಯಾತ್ಮಕವಾಗಿ ವ್ಯವಹರಿಸುವ ಮುದುಕಿ ಕುತೂಹಲಭರಿತಳಾಗಿ ಕಾಣುತ್ತಾಳೆ. ಅದಕ್ಕಾಗಿಯೇ ಕಣ್ಣಲ್ಲಿ ಜೀವ ಹಿಡಿದು ಬಿದ್ದಿರುವ ಮುದುಕಿ ಗರ್ಭದಿಂದಲೇ ಸಿಂಗಾರೆವ್ವನನ್ನು ಗುರುತಿಸುತ್ತಾಳೆ. ಹಾಗೆ ವಂಶಾಭಿವೃದ್ಧಿಗಾಗಿ ಹೆಣ್ಣು ಚಡಪಡಿಸುವ ಸ್ಥಿತಿಯನ್ನು ಗ್ರಹಿಕೆಗೆ ತರುತ್ತದೆ. ಕೃಷಿ ಪ್ರಧಾನ ಬದುಕಲ್ಲಿ ದೇಸಗತಿ ಊರ ಸಮೃದ್ಧಿಯ ಪ್ರತೀಕ. ಆ ಸ್ಥಾನವನ್ನು ಉಳಿಸಿಕೊಳ್ಳಲು ಗಂಡಿಗಿಂತ ಹೆಣ್ಣು ಕಾತರವಹಿಸುತ್ತಾಳೆ. ಇದು ಮತ್ತೆ ನಮಗೆ ಕೃಷಿ ಪ್ರಧಾನ ಬದುಕಿನ ಸ್ತ್ರೀ ಪ್ರಾಧಾನ್ಯತೆಯನ್ನೇ ನೆನಪಿಗೆ ತರುತ್ತದೆ. ಇಂಥ ಮಾತೃ ಮೂಲೀಯ ಸಂಬಂಧಗಳ ಗುಣಾತ್ಮಕತೆಯನ್ನೇ ಕಂಬಾರರ ಸಾಹಿತ್ಯ ಉದ್ದಕ್ಕೂ ಪ್ರತಿಪಾದಿಸುತ್ತದೆ ಎಂದೆನಿಸುತ್ತದೆ.

ಇನ್ನೊಂದು ಕುತೂಹಲವೆಂದರೆ ಮಾರನಂತಹ ಸೃಷ್ಟಿಶೀಲ ಗುಣವುಳ್ಳ ಪಾತ್ರಗಳ ಮೂಲಕ ವಂಶೋದ್ಧಾರತೆಯನ್ನು ಪಡೆದುಕೊಳ್ಳುವ ದೊಡ್ಡ ಮನೆತನಗಳ ಹೆಣ್ಣು ಪಾತ್ರಗಳು ತಮಗೊದಗಿದ ಸಂಕಟವನ್ನೇನೋ ಪರಿಹರಿಸಿಕೊಳ್ಳುತ್ತವೆ. ಕಮ್ಮಿ ಜಾತಿಯಲ್ಲಿ ಹುಟ್ಟಿದ ಮಾರ್ರ್ಯಾನಿಂದ ಸಿಂಗಾರೆವ್ವ ಹೊಟ್ಟೆ ತುಂಬಿಸಿಕೊಂಡಿದ್ದಾಳೆ. ವಾರಸುದಾರಿಕೆ ಒಂದೇ ಉದ್ದೇಶವಾಗಿದ್ದರೆ ಮಲತಮ್ಮನನ್ನು ಸಿಂಗಾರೆವ್ವ ದತ್ತು ತೆಗೆದುಕೊಳ್ಳಬಹುದಿತ್ತು. ಆದರೆ ತಂದೆಯ ಸ್ವಾರ್ಥಬುದ್ಧಿ ಇದಕ್ಕೆ ಅಡ್ಡ ಬರುತ್ತದೆ. ಮೊದಲಿನಿಂದಲೂ ಹಣದಾಸೆಗಾಗಿ ನಿರ್ಜೀವ ಸರಕಿನಂತೆ ಸಿಂಗಾರೆವ್ವನನ್ನು ಬಳಸುತ್ತಾ ಬಂದಿದ್ದಾನೆ. ಅವಳು ಮೊದಲು ಮದುವೆಯಾದದ್ದು ಒಂದು ನಿರ್ಜೀವ ಹೆಣ. ನಂತರದ ಸರಗಂ ದೇಸಾಯಿ ಸಜೀವ ಹೆಣ. ಸಮೃದ್ಧ ಬದುಕು ಬಾಳಬೇಕಾದ ಮನೆಯೊಡತಿ ಬರಡು ಬಾಳನ್ನು ಬಾಳುತ್ತಿದ್ದಾಳೆ. ಸಂವೇದನ ರಹಿತಳಾಗಿ ಕಾಲಕಳೆಯುತ್ತಿದ್ದಾಳೆ. ಆದರೆ ಅವಳ ಸಹನೆಯ ಕಟ್ಟೆಯೊಡೆದು ಮಾರನೊಡನೆ ಬೆರೆಯುತ್ತಾಳೆ. 'ವನವೆಲ್ಲ ಹಣ್ಣು ಗಿಣಿ ಬಾಯಿಗೆ ಹುಣ್ಣು' ಎನ್ನುವ ಸ್ಥಿತಿ ಅವಳದು. ಎಲ್ಲವೂ ಇದೆ, ಆದರೆ ಏನೂ ಇಲ್ಲದಂತೆ ಅನಾಥವಾಗಿದ್ದಾಳೆ.

ಸಿಂಗಾರೆವ್ವ ಗಂಡನ ಷಂಡತನವನ್ನು ಹಳಿಯುವ ಸಂಕಟದೊಳಗೆ ತನ್ನ ಗರ್ಭದ ಕಾರಣವನ್ನು ಸಮರ್ಥಿಸಿಕೊಳ್ಳುತ್ತಾಳೆ. "ಈ ಅರಮನಿ ಹಿರೇರಿಗೆಲ್ಲ ನಾ ಹಾದರಗಿತ್ತಿ ಅಲ್ಲ ಅಂತ ತಿಳದಿರಲಿ. ನಿಮ್ಮ ವಂಶದ – ಕುಡಿ ಹಾ ಹಾ ಮಹಾರಾಜ – ಅವನ ಷಂಡತನದಿಂದ ಹಿಂಗೆಲ್ಲಾ ನಡೀತು ಅಂತ ತಿಳದಿರಲಿ. ಈ ಅರಮನ್ಯಾಗ ಯಾರಾದರೂ ದೇವರಿದ್ದರ ಹಿರೇರ ಆತ್ಮ ಇದ್ದರ ಅವರಿಗೆ ನಾ ಯಾರಂತ ಗೊತ್ತೈತಿ; ನಾ ಹಾದರಾ ಮಾಡಿದ್ದರ ಈ ಅರಮನಿ ಕಂಬದಾಗ ಮಕ್ಕಳ ಅರಳಿಸಲಿಕ್ಕೆ ಅಂತ ತಿಳದಿರಲಿ" ಎನ್ನುವಲ್ಲಿ ಸಂತಾನ ಹಾಗೂ ವ್ಯಕ್ತಿತ್ವದೊಳಗಿನ ಸಂಕೀರ್ಣತೆಯನ್ನು ಕಾಣಬಹುದು. ಆದರೆ ಸಾಮಾಜಿಕ ನೈತಿಕತೆ ಒಪ್ಪದ ಈ ಫಸಲು ಬಳಕೆಗೆ ಬರುವುದಿಲ್ಲ. ಭ್ರಷ್ಟಗೊಂಡ ಸಂಬಂಧದಿಂದ ಹುಟ್ಟಿದ ಕಾರಣಕ್ಕಾಗಿ ಬಾಳಗೊಂಡ, ಶಿವನಿಂಗ, ರವಿಚಂದ್ರನಂಥ ಪಾತ್ರಗಳಿಗೆ ಬದುಕನ್ನು ನಿರಾಕರಿಸಲಾಗಿದೆಯೇ? ಗೌಡನೆಂದರೆ ಊರಿಗೆ ದೇವರು. ಅವನಾಗಲೀ ಅವನ ಸಂತಾನವಾಗಲೀ ಸಮೃದ್ಧಿಯ ಪ್ರತೀಕಗಳು. ಆದರೆ ಕಾಲ ಅವರನ್ನು ಅಜಾಗ್ರತರನ್ನಾಗಿಸಿದೆ. ಗೌಡರ ಅಧಿಕೃತ ಸಂತಾನ ಇವು ಅಲ್ಲ ಎಂಬ ಖಾತ್ರಿ ಬರುತ್ತದೆ. ಇದು ಋಷ್ಯಶೃಂಗದಲ್ಲಿ ಸ್ಪಷ್ಟವಾಗುತ್ತದೆ. ಮತ್ತದೇ ಅಧಿಕೃತತೆಯ ಹುಡುಕಾಟ, ಐಡೆಂಟಿಟಿಯ ಸಮಸ್ಯೆ.

ಕಾಮವು ಕಂಬಾರರಲ್ಲಿ ಹೀಗೆ ಅಧಿಕೃತತೆ ಮತ್ತು ಐಡೆಂಟಿಟಿಯ ಜೊತೆಗೆ ಅವಿನಾಭಾವ ಸಂಬಂಧವನ್ನು ಹೊಂದಿದೆ. ಇದರಿಂದಾಗಿಯೇ ಅವರು ಕಾಮದ ಈ ಸೃಜನಶೀಲ ಶಕ್ತಿಯ ತೀವ್ರತೆಯ ಮೂಲಕವೇ

ಜಗತ್ತಿನ ಉಳಿದೆಲ್ಲ ಅನುಭವಗಳನು ಗ್ರಹಿಸುತ್ತಾರೆ. ಅಂತಃಕರಣದ ವಿಕಾಸವನ್ನು ಪ್ರೀತಿ ಮತ್ತು ಸಿಟ್ಟಿನಲ್ಲಿ ಪರಿಭಾವಿಸುತ್ತಾರೆ. ಬೆಂಕಿ ಮತ್ತು ಬೆಳಕುಗಳೆರಡನ್ನೂ ಸಮಾನವಾಗಿ ತಿಳಿಯುವ ಕಂಬಾರರಲ್ಲಿ ಲೌಕಿಕ ಅರ್ಥಗಳ ನೈತಿಕ ಮೌಲ್ಯಗಳ ಚೌಕಟ್ಟಿಗೆ ಸಿಗದ ಉದಾತ್ತ ಹಂತದಲ್ಲಿ ಕಾಮವು ಬಳಕೆಯಾಗುತ್ತದೆ. ಪಾರಂಪರಿಕ ಎನ್ನುವ ಸಂಬಂಧಗಳನ್ನು ಸ್ಥಿತ್ಯಂತರಗೊಳಿಸುವ, ಅಪವಿತ್ರೀಕರಿಸುವ, ಹೊಸಸಂಬಂಧಗಳ ಹೊಸ ಬದುಕಿನ ನೆಲೆಗಳ ಶೋಧಕ ಪ್ರವೃತ್ತಿಗಳೇ ಇಂಥ ವಿಘಟನೆಗಳಾಗಿವೆ. ವಿಲೋಮ ಮತ್ತು ಅನುಲೋಮ ಸಂಬಂಧಗಳ ಮೂಲಕ, ಮೇಲು-ಕೀಳಿನ, ಹಳತು-ಹೊಸತರ ದ್ವಂದ್ವದ ಮೂಲಕ ಅಂಖಂಡವಾದ ಹೊಸಬದುಕಿನ ನೆಲೆಗಳತ್ತ ಸಾಗುತ್ತಾರೆ. ಕಂಬಾರ ಈ ಗುಣ ಅವರ ಮಹಾಮಾಯೆಯಲ್ಲಿ ಒಂದು ಸ್ಥಿರನೆಲೆ ಕಂಡುಕೊಂಡದ್ದನ್ನು ಕಾಣಬಹುದಾಗಿದೆ.

ಕಂಬಾರರ ಕುಲುಮೆಯಲ್ಲಿ ಯಾವ ಪಾತ್ರವೂ ಮೇಲು-ಕೀಳಿನ ಝಳಕ್ಕೆ ತಾಗುವುದಿಲ್ಲ. ಎಂಥ ನೀಚ ಮತ್ತು ಕುರೂಪಿ ಪಾತ್ರಗಳೂ ತನ್ನದೇ ಆದ ಒಂದು ವ್ಯಕ್ತಿತ್ವವನ್ನು ಹೊಂದಿರುತ್ತವೆ. ಶ್ರಮ ಬದುಕಿನ ಕಣ್ಣಿಂದ ನೋಡುವ ಕಂಬಾರರಿಗೆ ದತ್ತಪ್ಪನೂ ಒಂದೇ ಚಿಮಣಾ ಮತ್ತು ನಿಂಗೂನು ಒಂದೇ. ಅವರ ವ್ಯಕ್ತಿ ವಿಶಿಷ್ಟತೆಯಲ್ಲಿ ಅವರು ಭಿನ್ನವಾಗಿ ಕಾಣುತ್ತಾರಷ್ಟೆ. ಚಿಮಣಾಳಂತಹ ಹೆಣ್ಣು ಪಾತ್ರವೂ ಜಾತ್ಯಾ ಕಸಬೇರಿಗಿಂತ ಭಿನ್ನವಾಗಿ ಚಿತ್ರಿತವಾಗುತ್ತದೆ.

ಹೇಳತೇನ ಕೇಳದ ಗೌಡತಿಯ ವಿಷಮ ದಾಂಪತ್ಯದಿಂದ ಹಿಡಿದು ಸಿಂಗಾರೆವ್ವ ಮತ್ತು ಅರಮನೆ, ಸಿರಿಸಂಪಿಗೆ, ಚಕೋರಿ, ಮಹಾಮಾಯಿ, ಶಿಖರಸೂರ್ಯದವರೆಗೂ ಕಂಬಾರರ ಕಥನ ಪ್ರಕ್ರಿಯೆ ಒಂದು ಹೊಸದಾದ ಜೀವಸೆಲೆ. ಅದು ಮುಗಿಯದ ಕಥೆ. ಕಂಬಾರರ ಸಾಹಿತ್ಯದ ಹೊರ ಮೈ ಏನೇ ಆಗಿದ್ದರೂ ಆಳದಲ್ಲಿ ಸತ್ಯಾನ್ವೇಷಣೆಯ ಧ್ಯಾನದ ಸ್ಥಿತಿಯನ್ನೇ ಮುಂದುವರಿಸುತ್ತದೆ. ಕಂಬಾರ ಸಾಹಿತ್ಯ ಹೊಸ ವಸ್ತುವಿನ ಹುಡುಕಾಟಕ್ಕಿಂತ ಕೆಲ ಮೂಲ ವಸ್ತುಗಳ ಮೂಲಸ್ಥಿತಿಗಳ ಹೊಸ ವಿಸ್ತಾರವನ್ನಷ್ಟೆ ಕಾಣಿಸುತ್ತದೆ. ಅಂದರೆ ಕಂಬಾರರ ಚಿಂತನೆ ಎರಡು ರೀತಿಯ ಕೆಲಸಗಳನ್ನು ಏಕಕಾಲದಲ್ಲಿ ಸಾಧ್ಯವಾಗಿಸಿಕೊಳ್ಳುತ್ತದೆ. ಒಂದು ಮೂಲ ಸ್ಥಿತಿಗಳನ್ನು ಉಳಿಸುವ ಅಥವಾ ಅನುಭವಕ್ಕೆ ತಂದುಕೊಳ್ಳುವುದರೊಂದಿಗೇನೇ ಹಿಂದಿರದ ಹೊಸ ಆವಿಷ್ಕಾರಗಳನ್ನು ಕಟ್ಟಿಕೊಳ್ಳುವ ಕೆಲಸ. ಸಮರ್ಥಕಲಾವಿದನೊಬ್ಬ ಒಂದೇ ಮಾಧ್ಯಮದಲ್ಲಿ ಭಿನ್ನ ರೇಖೆಗಳನ್ನು ಮೂಡಿಸುವಂತೆ ಕಂಬಾರರೂ ವಸ್ತು ಒಂದೇ ಆದರೂ ಹೊಸ ಅರ್ಥಗಳೊಂದಿಗೆ ಕಥಿತವ್ಯಕ್ತಿ, ಕಥೆ ಹೇಳುವ ಮತ್ತು ಕೇಳುವ ವ್ಯಕ್ತಿಯ ಅನುಭವಗಳು ಪ್ರಾಧಾನ್ಯತೆ ಪಡೆಯುತ್ತವೆ. ಸಿಂಗಾರೆವ್ವನ ಪಾತ್ರ ಸುಂದರಿಯಾಗಿ, ಮಗಳಾಗಿ, ಹೆಂಡತಿಯಾಗಿ, ವಿಧವೆಯಾಗಿ, ಜವಾಬ್ದಾರಿಯುಳ್ಳ ದೊರೆಸ್ಯಾನಿಯಾಗಿ, ವಂಶೋದ್ಧಾರಕಳಾಗಿ, ಹಳ್ಳಿ ಜನಕ್ಕೆ ದೇವತೆಯಾಗಿ, ಮಾರನಂಥವರಿಗೆ ಆಟದ ವಸ್ತುವಾಗಿ, ಒಂದೇ ಏಟಿಗೆ ಮೈ ಹೊರಳಿಸಿಕೊಳ್ಳುತ್ತಾಳೆ. ರಾಜಕೀಯ ಹಾಗೂ ಧಾರ್ಮಿಕ ಸಾಹಿತ್ಯ ಬರೆಯುತ್ತಲೇ ಹೆಪ್ಪುಗಟ್ಟುತ್ತವೆ. ಆದರೆ ಸೃಜನಶೀಲ ಸಾಹಿತ್ಯ ತನ್ನ ಒಳತೋಟಿಗಳಿಂದಾಗಿ ಸಂಕೀರ್ಣವಾಗಿರುತ್ತದೆ. ಕಂಬಾರರ ಇಂಥ ಸೃಜನಶೀಲ ಒತ್ತಡ ವ್ಯಕ್ತಿ ಜಿಜ್ಞಾಸೆಯನ್ನು ಸಂಸ್ಕೃತಿ ಸಂಕಥನದ ಎತ್ತರಕ್ಕೆ ಏರಿಸಿ ಬಿಡುತ್ತದೆ. ಹಾಗೆ ದೇಸೀ ಜನ ಬದುಕನ್ನು ಪಾಶ್ಚಾತ್ಯ ದೃಷ್ಟಿಕೋನದಿಂದ ನೋಡುವುದರ ಹಿಂದಿನ ಅಪಾಯವನ್ನು ಗ್ರಹಿಕೆಗೆ ತಂದುಕೊಡುತ್ತದೆ.

ಕಂಬಾರರ ಯಾವ ಅನುಭವಗಳೂ ಬರೀ ಪರಿಕಲ್ಪನೆಯ ಮಟ್ಟಕ್ಕೆ ನಿಲ್ಲುವುದಿಲ್ಲ. ಅವು ಬದುಕಿನ ಜೀವ ವಿಶೇಷಗಳು. ಚತುಷ್ಪಯರು, ಪ್ರಶ್ನೋತ್ತರ ಮಾಸ್ತರ, ನಾಯೆಲ್ಯಾ, ಲಗುಮವ್ವಾ, ನಿಂಗೂ, ರಾಮಗೊಂಡ, ಸರಗಂದೇಸಾಯಿ, ಊರ ಪರಿಸರ ಇವೆಲ್ಲ ನಿರೂಪಕನ ಚಿತ್ತಭಿತ್ತಿಯ ಜೀವಂತ ನೆಲೆಗಳು. ನಿರೂಪಕನ ಕಾಲದಲ್ಲಿ, ಹಾಗೇ ಕಾಲದ ಬೇರೆ ತುದಿಯಲ್ಲಿ ಬದುಕುತ್ತಿರುವವರು. ಆ ಮೂಲಕ ಊರಿನ ಸ್ಥಿತಿಗತಿಯೊಂದನ್ನು ಅರಿಯುವ ಪ್ರಯತ್ನ ಮಾಡುತ್ತಾರೆ. ಏಕಕಾಲದಲ್ಲಿ ನಾಯೆಲ್ಯಾ, ನಿಂಗೂನಂಥ ದಡ್ಡತನಗಳೊಂದಿಗೆ ಗುಡಸೀಕರ ಮತ್ತು ಬಸವರಾಜರಂತಹ ಚಾಣಾಕ್ಷತನದ ಆಧುನಿಕ ಅಹಂಕಾರಗಳೂ ಪರಂಪರೆಯ ತರ್ಕಗಳೂ ವಿಮರ್ಶೆಗೆ ಒಳಗಾಗುತ್ತವೆ.

ಗುಡಿಸೀಕರನಂಥವರ ಪರಿಭಾಷೆ ಒಂದಾದರೆ ಗೌಡ ಲಗುಮವ್ವರ ಪರಿಭಾಷೆಯೇ ಇನ್ನೊಂದು. ನಿಂಗೂನ ಹೆಣ್ತನವನ್ನು ಒಪ್ಪಿಕೊಳ್ಳುವ ಹಾಗೆ ಚತುಷ್ಪಯರ ನಡವಳಿಕೆಗಳನ್ನೂ ಲೇವಡಿ ಮಾಡುತ್ತಾರೆ. ಕದ್ದು ಬಸಿರಾದ ಆಧುನಿಕ ವೇಷದ ಚಿಮಣಾಳಿಗೆ ಅವಳು ವೈರಿ ಪಕ್ಷದವಳಾಗಿದ್ದರೂ ನಿಂಗೂ ಗರ್ಭಪಾತಕ್ಕೆ ಸಹಾಯ ಮಾಡುತ್ತಾನೆ. ಹೀಗೆ ಕಂಬಾರರು ಊರಿನ ವಿವಿಧ ಸಂವೇದನೆಗಳ ತಾಕಲಾಟ, ಹೊಂದಾಣಿಕೆಯನ್ನು ತೀವ್ರವಾಗಿ ಚಿತ್ರಿಸುತ್ತಾರೆ.

ತನ್ನ ದ್ವಂದ್ವ ವ್ಯಕ್ತಿತ್ವದಿಂದಾಗಿ ನಿಂಗೂ ಎಲ್ಲ ಕಡೆಗೂ ಸಲ್ಲುತ್ತಾನೆ. ನಿಂಗೂನ ನಿಷ್ಕಪಟತೆ, ಸಾತ್ವಿಕತೆಗಳನ್ನು ಗುರುತಿಸುವ ಮೂಲಕ ಅವುಗಳ ನಡುವಿನ ನಿರ್ವೀರ್ಯತೆಯನ್ನು ಲೇಖಕರು ಎತ್ತಿತೋರಿಸುತ್ತಾರೆ. ಆಧುನಿಕ ಮನಸ್ಸಿಗೆ ನಿಂಗೂ ಒಂದು ವ್ಯಕ್ತಿತ್ವವಲ್ಲದ ಬರಡು ನೆಲೆ. ಆದರೆ ಪರಂಪರೆ ಬದುಕಿಗೆ ಆತನೊಬ್ಬ ಉಪಯುಕ್ತ ಮತ್ತು ಜೀವಂತಸೆಲೆ. ಯಾಕೆಂದರೆ ಗಂಡು-ಹೆಣ್ಣು ಎನ್ನುವ ಜೈವಿಕ ನಿಬಂಧನೆಗೆ ಒಳಪಡದ ನಿಂಗೂ ಎರಡೂ ಪ್ರಪಂಚದಲ್ಲಿ ಮುಕ್ತವಾಗಿ ಹರಿದಾಡಬಲ್ಲ ವ್ಯಕ್ತಿತ್ವ. ನಿಂಗೂನ ದೈನಂದಿನ ಜೀವನಕ್ರಮ, ಕೌಟುಂಬಿಕ ಸಮಸ್ಯೆಗಳು, ನೆರೆಹೊರೆಯ ಸಂಬಂಧಗಳು ಆತನನ್ನು ಜೀವಂತವಾಗಿಡುತ್ತವೆ. ಎಲ್ಲರೂ ಪ್ರೀತಿಸುವ ಪಾತ್ರವದು. ಗಂಡು-ಹೆಣ್ಣು, ಪೌರ್ವಾತ್ಯ-ಪಾಶ್ಚಿಮಾತ್ಯ ಎನ್ನುವ ಜೈವಿಕ ಮತ್ತು ಸಾಂಸ್ಕೃತಿಕ ಭೇದ ಕಲ್ಪನೆಯ ಮಧ್ಯ ಹೊಸತಾದ ಜೀವನ ನಿರೀಕ್ಷೆಯನ್ನು ಕಂಬಾರರು ಕಾಣುತ್ತಾರೆ. ಆ ಮೂಲಕ ದೇಸೀ ನೆಲೆಗಳ ಪುನಾರಚನೆಗೆ ತೊಡಗುತ್ತಾರೆ.

ನಿಂಗೂನಂಥ ಪಾತ್ರಗಳಲ್ಲಿ ಇಂಥ ಸಂಸ್ಕೃತಿಯ ಪುನಾರಚನಾ ಸ್ವಭಾವಗಳನ್ನು ದಟ್ಟವಾಗಿ ಕಾಣುತ್ತೇವೆ. ಪರಂಪರೆಯಲ್ಲಿ ಬಂಜೆತನಕ್ಕೆ ನೆಲೆಯಿಲ್ಲ, ಬಂಜೆತನವನ್ನು ಸಾಧ್ಯವಾದ ಮಟ್ಟಿಗೆ ರಚನಾತ್ಮಕವಾಗಿ ಅದು ಬಳಸಿಕೊಳ್ಳಲು ಪ್ರಯತ್ನಿಸುತ್ತದೆ. ಬರಡು ಅಥವಾ ಸುಗುಡಿ ದನಗಳನ್ನು ವ್ಯವಸಾಯಕ್ಕಾಗಿ ಬಳಸುವ ರೀತಿಯನ್ನು ಕಂಡಾಗ ಫಲೋತ್ಪತ್ತಿಯ ವ್ಯಾಖ್ಯಾನ ಬದಲೀಯಾಗುತ್ತದೆ. ಸುಗುಡಿ ದನದ ತಾಯ್ತತನದ ಶಕ್ತಿ ಹಿಂದಾಗಿ ಅದರ ಶ್ರಮಶಕ್ತಿ ಮುಂದಾಗುತ್ತದೆ. ನಿರ್ವೀರ್ಯ ಸ್ಥಿತಿಯನ್ನು ಪರಿಣಾಮಕಾರಿಯಾಗಿ ಬಳಸುವ ಅರ್ಥಪೂರ್ಣತೆಯನ್ನು ಇಲ್ಲಿ ಕಾಣುತ್ತೇವೆ. ಒಂದು ಮೈ ನಿರುಪಯುಕ್ತವಾದರೆ ಅದರ ಇನ್ನೊಂದು ಮೈಯ ಚಲನಶೀಲಗುಣದ ಸದ್ಬಳಕೆ, ಶ್ರಮ ಬದುಕಿನ ಗುಣಾತ್ಮಕತೆಯಾಗಿದೆ. ಕಂಬಾರರ ಶಕ್ತಿಯಿರುವುದೇ ಇಂಥಲ್ಲಿ. ಇದು ಏಕಾಕೃತಿ ಮತ್ತು ಕೇಂದ್ರೀಕೃತವಾದ ವಿಚಾರಗಳನ್ನು ಪ್ರತಿಪಾದಿಸುವ

ವಸಾಹತುಶಾಹಿಗೆ ಕೊಡುವ ಎದಿರೇಟು. ಸಂಸ್ಕೃತಿನಿಷ್ಠ ಮನುಷ್ಯ ಮಾತ್ರ ಸಂಸ್ಕೃತಿನಿಷ್ಠ ನೆಲೆಗಳನ್ನು ಕಾಳಜಿ ಪೂರ್ವಕವಾಗಿ ಬಳಸಿಕೊಳ್ಳುತ್ತಾನೆ. ಕೊಳ್ಳುಬಾಕ ಸಂಸ್ಕೃತಿಯ ಮುಖ್ಯ ಲಕ್ಷಣ ಲಾಭ. ಲಾಭ ಇಲ್ಲದ ಸಂಗತಿಗಳನ್ನು ಇದು ಸಹಿಸುವುದಿಲ್ಲ.

ಆದಿಗೆ ಆದಿಯಾದ ಕರಿಮಾಯಿ "ಯಾರಿಗೇನು ಕೊಡಬೇಕೆಂದು ತಿಳಿಯದೇ ಕೊಡುವ ಉತ್ಸಾಹದಲ್ಲಿ ಸಮೃದ್ಧಿಯ ಹಡೆದ ತಾಯಿ, ಕೆಲವರಿಗೆ ಕಳ್ಳ ಬುದ್ಧಿಯನ್ನು ಕೊಟ್ಟಳು. ಹಾಗೆ ತನ್ನ ಹಿಂದೆಯೇ ನಡೆಯುವ (ಬಸವರಾಜ-ದುರ್ಗಿ) ಹಾದರಕ್ಕೂ ಇಂಬುಗೊಟ್ಟಳು. ಹುಲಿಯ ನೆರಳು ನಾಟಕದ ಗೌಡತಿಯಂಥ ಹೆಣ್ಣು ಪಾತ್ರಗಳು ಅನೀತಿಯನ್ನೆಲ್ಲ ಗರ್ಭೀಕರಿಸಿಕೊಂಡಂಥವು. ಪ್ರಕೃತಿಯಂಥ ಪ್ರಕೃತಿಯೂ ಸಚರಾಚರಗಳನ್ನೆಲ್ಲ ಹೊಟ್ಟೆಯೊಳಗಿಟ್ಟುಕೊಂಡು ಸತ್ಯಕ್ಕೆ ಬೆನ್ನುಮಾಡಿ ನಿಗೂಢವಾಗಿ ನಿಂತಿರುವಂಥದ್ದು.

ಕಂಬಾರರ ಸಾಹಿತ್ಯ ಕೃತಿಗಳಲ್ಲಿ ಪಾತ್ರಗಳ ಬೀಳುವಿಕೆ ಬೆನ್ನು ಮೇಲಾಗಿರುತ್ತದೆ. ಒದ್ದರು ಬೆನ್ನ ಮೇಲೆ, ಬಿದ್ದರೂ ಬೆನ್ನ ಮೇಲೆ. ಕರಿಮಾಯಿಯಲ್ಲಿ ಚಿಮಣಾ ಶಿವಲಿಂಗನಿಗೆ ಬೆನ್ನ ಮೇಲೆ ಒದೆಯುವುದು, ಅವಳು ಜಾರಿಬಿದ್ದಾಗ ಬೆನ್ನು ಮೇಲೆ ಮಾಡಿ ಬೀಳುವುದು. ಸ್ವತಃ ಕರಿಮಾಯಿಯೇ ಬಲಗೈ ಮುರಕೊಂಡು ಬಕ್ಕಬಾರ್ಲೆ ಬೀಳುತ್ತಾಳೆ. ಹಳ್ಳಿಯಲ್ಲಿ ಒಂದು ಬೈಗುಳವಿದೆ. "ನಿನ್ನ ಹೆಣಾ ಬಕ್ಕಬಾರ್ಲೆ ಬೀಳ್ಲಿ" "ನಿನ್ನ ಉರುಣಿಗಿ ಬಕ್ಕಬಾರ್ಲೆ ಬಿದ್ದು ಹೋಗ್ಲಿ" ಎನ್ನುವುದು.

ಸಾಮಾನ್ಯವಾಗಿ ಮನುಷ್ಯ ಸಹಜ ಸ್ವಭಾವದಲ್ಲಿ ಬೆನ್ನು ತೋರಿಕೆಯ ವಸ್ತು. ಯಾರನ್ನಾದರೂ ನೇರ ನೋಡಿದಾಗ ನಾಚಿ ಮುಖ ತಿರುಗಿಸಿ ಬೆನ್ನು ತೋರಿಸುವುದನ್ನು ಕಾಣುತ್ತೇವೆ. ಇದು ಹೆಣ್ಣಿನಲ್ಲಿ ಹೆಚ್ಚಾಗಿ ಕಾಣುವ ಸಂಕೋಚವೂ ಸತ್ಯವೂ ಆಗಿದೆ. ಈ ಅರ್ಥದಲ್ಲಿ ಮುಂಭಾಗ ಸಮೃದ್ಧಿಯ ನೆಲೆ. ಆದರೆ ಹಿಂಭಾಗ ಬರಡುತನದ ಬೀಡಾಗಿರುತ್ತದೆ. ಮುಂಭಾಗ ಸತ್ಯವಾದರೆ ಹಿಂಭಾಗ ಸುಳ್ಳಾಗುತ್ತದೆ. ಇವು ಮನಸ್ಸಿನ ದ್ವಂದ್ವಗಳಂತೆ ದೈಹಿಕ ದ್ವಂದ್ವಗಳೂ ಆಗಿವೆ. ಕರಿಮಾಯಿಯ ಮುಖದ ಮುಂದಿನ ಆಚರಣೆಗಳು ಸತ್ಯ ಬದುಕಿನ ಸಮೃದ್ಧಿಯ ಫಲಿತಗಳ ಪ್ರತೀಕಗಳಾದರೆ ಹಿಂಭಾಗದಲ್ಲಿ ನಡೆಯುವ ಕ್ರಿಯೆಗಳು ಸುಳ್ಳಿನ ಅನೈತಿಕ ಸಂಬಂಧದ ಅಸಂಬದ್ಧ ಸ್ಥಿತಿಗಳಾಗಿವೆ.

ತಾಯಿ ಮತ್ತು ಸತ್ಯದ ಮಧ್ಯೆ ಅವಳ ಅಜಾಗೃತ ಸ್ಥಿತಿ ಕಾರಣವಾದಂತೆ ರಾಮಗೊಂಡ ಮತ್ತು ತಾಯಿಯ ಮಧ್ಯ ತಾಯಿ ಹೊಟ್ಟ್ಯಾಗಿನ ಪಿಂಡ ಅಡತಾರಾಗಿ ನಿಂತಿದೆ. ಈ ಪಿಂಡದ ಅಂತ್ಯವಾಗದೆ ಆತನಿಗೆ ಸತ್ಯದ ಅರಿವಾಗದು. ಕಾರಣ ಪಿಂಡ ಮತ್ತು ಪಿಂಡಹೊತ್ತ ಗರ್ಭಗಳು ಸತ್ಯವನ್ನು ಸಾಯಿಸುವಷ್ಟು ಪ್ರಬಲವಾಗಿವೆ. ನಿರ್ಬಲ ನಾಯಕನಿಗೆ ನಿಜ ಸತ್ಯಗೊತ್ತಿರುವಂತೆ ಅಜಾಗೃತ ಸ್ಥಿತಿಯಲ್ಲಿರುವ ತಾಯಿಗೂ ಗೊತ್ತು. ಆದರೆ ಅವರ ಸಮೃದ್ಧಹೀನ ಸ್ಥಿತಿ ಅದನ್ನು ತಡೆಯಲು ವಿಫಲವಾಗಿದೆ. ಪರಂಪರೆಯ ಪ್ರಮುಖರಾದ ಗೌಡ ಮತ್ತು ಕರಿಮಾಯಿ ಇಬ್ಬರೂ ನಿರ್ಬಲರಾಗಿರುವ ಚಿಂತಾಜನಕ ಸ್ಥಿತಿಯು ಅವರು ಪ್ರತಿನಿಧಿಸುವ ಸಂಸ್ಕೃತಿಯ ಶಾಪಗ್ರಸ್ತ ಸ್ಥಿತಿಯ ಪ್ರತೀಕವಾಗಿದೆ. ಹೊಸದರ ಬರುವಿಕೆಗಾಗಿ ನಿರೀಕ್ಷೆಯಲ್ಲಿಯೇ ಕಾಲಕಳೆಯುತ್ತಿದ್ದಾರೆ.

ನಮ್ಮಜ್ಜ, ಗಂಗಾಮಾಯಿಯಂಥ ಕಂಬಾರರ ಕವಿತೆಗಳು ಸಮೃದ್ಧಹೀನ ವ್ಯವಸ್ಥೆಯನ್ನು ಸೂಚಿಸುವುದರ ಜೊತೆಗೆ ದುರಂತಕ್ಕೆ ಕಾರಣವನ್ನು ಒಳಗಿನಿಂದಲೇ ಹುಡಕಲು ಪ್ರಯತ್ನಿಸುತ್ತವೆ. ಇಲ್ಲಿ ಸುಧಾರಣೆಯನ್ನು

ಮಂತ್ರದ ನೀರು ಅಥವಾ ಪಡುವಣ ಶಕ್ತಿಯಿಂದ ನಿರ್ಧರಿಸುವುದಿಲ್ಲ. ಬದಲಾಗಿ ಪರಂಪರೆಯ ಮುದಿತನದಲ್ಲೇ ದುರಂತತೆಗೆ ಕಾರಣವನ್ನೂ ಹುಡುಕುತ್ತಾರೆ. ಸುತ್ತಲಿನ ಮುದಿತನದ ಕಬ್ಬಿಣದ ಭಾವಭಂಗಿಗಳಿಂದ ತಪ್ಪಿಸಿಕೊಳ್ಳಲು ಪಡುವ ಪ್ರಯತ್ನದ ವ್ಯರ್ಥಹೋರಾಟವನ್ನು ನಮ್ಮಜ್ಜದಲ್ಲಿ ಕಾಣಬಹುದು ಎನ್ನುವ ಕೆ.ಮರುಳಸಿದ್ದಪ್ಪನವರ ಮಾತು ಅರ್ಥಪೂರ್ಣವಾದುದು (ಪುಟ.೨೧)

ಈ ಆಶಯ ಮಹಾಮಾಯಿ ನಾಟಕದಲ್ಲಿ ಇನ್ನಷ್ಟು ಸ್ಪಷ್ಟಗೊಳ್ಳುತ್ತದೆ. ಮದನತಿಲಕ ಇಂದಿನ ವಯಗ್ರಾ ಮಾತ್ರೆಗಳಂತೆ ತಾರುಣ್ಯದ ಔಷಧಿಯನ್ನು ಸಂಜೀವಶಿವನಿಂದ ಪಡೆದು ನವಯೌವ್ವನವನ್ನು ಅನುಭವಿಸುತ್ತಾನೆ. ಇವನ ಚಹರೆ ಮುದುಕನದು. ಉತ್ಸಾಹ ಮತ್ತು ಉತ್ಕಟತೆ ಯುವಕನದು. ಸಂಭೋಗಾಕಾಂಕ್ಷೆಯೇ ಆ ಮುದುಕನ ಉತ್ಕಟತೆ. ಆಗಲೇ ಅವನಿಗೆ ಬಹುಪತ್ನಿಯರಿದ್ದಾರೆ. ಆದರೂ ಇನ್ನೊಂದನ್ನು ಭೋಗಿಸುವ ತೀವ್ರತೆ. ಈ ಸಾಲಿನಲ್ಲಿ ಸರಗಂದೇಸಾಯಿ, ಗೌಡ, ಶಿಖರಸೂರ್ಯರನ್ನು ಸೇರಿಸಬಹುದು. ಹೀಗೆ ಮುದಿತನಗಳಿಂದ ತಪ್ಪಿಸಿಕೊಳ್ಳಲು ತನ್ನೊಳಗಿನಿಂದಲೇ ಕಾರಣ ಹಾಗೂ ಪರಿಹಾರವನ್ನು ಹುಡುಕಿಕೊಳ್ಳುತ್ತವೆ. ಹಳೆಯದರ ಭರವಸೆಯಾಗಿ ಸಂಜೀವಶಿವ ಹಾಗೂ ನಿನ್ನಡಿಯಂತಹ ವ್ಯಕ್ತಿತ್ವಗಳು ಬೆಳೆದರೂ ಅವು ಸತ್‌ಶಕ್ತಿಯ ಪ್ರತೀಕವಾಗಿವೆ.

ಕಂಬಾರರ ಸಾಹಿತ್ಯದಲ್ಲಿ ಭೂತಗಳಾಗಿ ಕಾಣಿಸುವ ಹಳೆ ತಲೆಮಾರು ತನ್ನ ಸಂಪ್ರದಾಯದ ಕಥಾನಾಯಕರ ಸಂದಿಗ್ಧ ಸ್ಥಿತಿಗತಿಗಳ ಮೀರುವಿಕೆಗೆ, ಬದುಕುವ ಆಸೆಗಳಿಗೆ ಪ್ರೇರಣೆ ನೀಡುತ್ತವೆ. ಚಕೋರಿ ಹಾಗೂ ಶಿಖರಸೂರ್ಯರಲ್ಲಿ ಇದನ್ನು ಕಾಣಬಹುದು. ಭೂತಕಾಲದ ಭೂತಗಳಿರುವುದು ಊರಹೊರಗಿನ ಕಾಡಿನಲ್ಲಿ. ವಸಾಹತುಶಾಹಿಯ ಸಧ್ಯದ ಆಕ್ರಮಣಕ್ಕೆ ಮಣಿದರೂ ಸಾಯದೇ ಜೀವಂತವಾಗಿರುವ ಹಳೆ ಸಂವೇದನೆಗಳು ಅವಕಾಶಕ್ಕಾಗಿ ಹಾತೊರೆಯುತ್ತಿರುತ್ತವೆ. ಹಸಿರು ಕೈಕೊಟ್ಟಿದೆ ಆದರೆ ಮರ ಒಣಗಿಲ್ಲ ಎಂಬುದು ವಿಶೇಷ. ಹಾಗೆ ಸರಗಂದೇಸಾಯಿ, ರಾಮಗೊಂಡ ಇವರೆಲ್ಲ ಸಜೀವ ಹೆಣಗಳು. ಆದರೆ ಸತ್ತಿಲ್ಲ. ಕರಿಮಾಯಿ ಶಾಪಗ್ರಸ್ಥಳಾಗಿದ್ದಾಳೆ. ಅದರೆ ಊರುಬಿಟ್ಟು ಹೋಗಿಲ್ಲ. ಅವಳ ಬರುವಿಕೆಯ ನಿರೀಕ್ಷೆಯಲ್ಲಿ ಜನ ಕಾಲಕಳೆಯುತ್ತಿದ್ದಾರೆ. ಗುಳೇಹೋಗಿಲ್ಲ. ಕಾರಣ ಪರಂಪರೆಯ ಹಿತ್ತಲೊಳಗಿನ ಬಾವಿಗಳ ಹಳೇಬೇರಿನಲ್ಲಿನ ಜೀವಾಂಶ ಇನ್ನೂ ಸತ್ತಿಲ್ಲ. ಹೀಗಾಗಿಯೇ ಬಾವಿ ತುಂಬ ಹಸಿರಿನ ವಾಸನೆಯಿದೆ. ಮೂಡಣದ ಮುದಿಕುರುವೊಡೆದು ನೆತ್ತರು ಕಿವು ಸೋರಿತ್ತೋ ಮತ್ತೇ ಚಲನೆ ಸುರುವಾಗುವ ಹವಣಿಕೆ. ಬಟಾಬಯಲಿನ್ಯಾಗ ಮಟಾಮಾಯವಾಗಿ ಬೆಂಕಿ ಆರಿ ಬೆಳಕುಳಿಯುವ ಹೊತ್ತು.

ಮದನತಿಲಕನ ನವಯೌವ್ವನ, ಸಂಜೀವಶಿವ, ರಾಜಕುಮಾರಿ, ನಿನ್ನಡಿ ಇವೆಲ್ಲ ಜಡತ್ವ ಕಳೆದುಕೊಂಡ ಹೊಸ ಪ್ರಜ್ಞೆಯ ಸ್ವತಂತ್ರ ಘಟಕಗಳು. ಮದನತಿಲಕ ಪರಂಪರೆಯ ಪ್ರತಿನಿಧಿ. ರಾಜಕುಮಾರಿ ಊಳಿಗಮಾನ್ಯ ಸ್ಥಿತಿಯ ಪ್ರತಿನಿಧಿ. ಇವೆರಡರ ಮಧ್ಯ ಬೆಳೆದು ಎರಡೂ ಸ್ಥಿತಿಗಳಿಗೂ ಹೊಸ ಚಲನೆಯೊಂದನ್ನು ಪುನರ್‌ಜನ್ಮವನ್ನು ತಂದುಕೊಡುವ ಹುಡುಗರು ಹೊಸತನದ ಹರಿಕಾರರು. ಕನ್ನಡ ಪ್ರಜ್ಞೆಯ ಉತ್ಪನ್ನಗಳು. ಕಂಬಾರರ ಹಿಂದಿನ ಕಾದಂಬರಿಗಳಲ್ಲಿ ಕಾವ್ಯಗಳಲ್ಲಿ ಇಂಥ ಸಂವೇದನೆಗಳು ಬಂದಿದ್ದರೂ ಇಷ್ಟೊಂದು ತೀವ್ರತರವಾದ ಸ್ವಾತಂತ್ರ್ಯವನ್ನು ಪಡೆದಿಲ್ಲ ಎನಿಸುತ್ತದೆ. ಇದು ಹೊಸಕಾಲಕ್ಕೆ ತಕ್ಕಂತೆ ಬದಲಾದ ಕಂಬಾರರ ಚಿಂತನೆಯ ಕ್ರಮವನ್ನು ಅರಹುತ್ತದೆ. ಹೋರಿಯ ಉನ್ಮತ್ತತೆ ಹುಡುಗನ (ಸಂಜೀವಶಿವ) ಜವಾಬ್ದಾರಿಯಲ್ಲಿ

ಕ್ರಿಯಾಶೀಲವಾಗಿ ಕಾಣುತ್ತದೆ. ತಾರುಣ್ಯದ ಉನ್ಮತ್ತತೆ ಹುಡುಗರಾದ ಸಂಜೀವಶಿವ ಹಾಗೂ ನಿನ್ನಡಿಯಂಥವರನ್ನು ಹಾಳುಮಾಡದೆ ಅದು ಶಾಂತ ಮತ್ತು ಸಮಚಿತ್ತದತ್ತ ಹರಿದದ್ದು ಆತನ ವ್ಯಕ್ತಿ ವಿಶಿಷ್ಟತೆಯನ್ನು ಎತ್ತಿ ತೋರಿಸುತ್ತದೆ. ಇಲ್ಲಿ ಉದ್ವಿಗ್ನ ಕಾಮಕ್ಕಿಂತ ಅದನ್ನು ಮೀರಿದ ಉನ್ನತ ಬದುಕಿಗೆ ನೈತಿಕ ಶಕ್ತಿಗೆ ಬೆಲೆ ಬರುತ್ತದೆ. ಪ್ರಜ್ಞೆಯ ಅಖಂಡತೆಗೆ ಮಾನ್ಯತೆ ಸಿಗುತ್ತದೆ. ಇದು ಸಾಧ್ಯವಾಗಿದ್ದು ಮುಖ್ಯವಾಗಿ ಕಂಬಾರರು ಕಾಣುವ ವಿಸ್ತೃತವಾದ ತಾಯಿತತ್ವದ ಸೃಜನಶೀಲ ನೆಲೆಯಲ್ಲಿ. ಅಖಂಡತೆ, ಸೃಜನಶೀಲತೆ, ಅಂತಸತ್ವವುಳ್ಳ ಅರಿವು, ಹಾಗೂ ಸಾಮೂಹಿಕತೆ ಇವು ತಾಯಿ ಸಂಸ್ಕೃತಿಯ ಬಹುಮುಖ್ಯ ಸಂಕಲ್ಪಗಳಾಗಿವೆ.

* * *

ಅನುಬಂಧ

ಪರಾಮರ್ಶನ ಗ್ರಂಥಗಳು

ಅಶೋಕ ಟಿ.ಪಿ, ೧೯೯೧; **ಸಾಹಿತ್ಯ ಸಂದರ್ಭ**, ಅಕ್ಷರ ಪ್ರಕಾಶನ ಹೆಗ್ಗೋಡು.

ಆಮೂರ ಜಿ.ಎಸ್. ೧೯೮೧; **ಸಮಕಾಲೀನ ಕಥೆ ಕಾದಂಬರಿ ಹೊಸ ಪ್ರಯೋಗಗಳು**, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಇಮ್ರಾಪೂರ ಎಸ್.ಜಿ. (ಸಂ) ೧೯೯೩; **ಜಾನಪದ ಸಾಹಿತ್ಯ ದರ್ಶನ ಭಾಗ-೧೮**, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಕಲವೀರ ಮನ್ವಾಚಾರ್, **ಮಾತೃದೇವತಾ ಆರಾಧನೆ ಉಗಮ ಮತ್ತು ವಿಕಾಸ**, ಸಂಶೋಧನಾ ಮಹಾಪ್ರಬಂಧ (ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕೇಶವಮೂರ್ತಿ ಕೆ.ಆರ್., **ದಲಿತ ಬಂಡಾಯ ಕಾದಂಬರಿಗಳಲ್ಲಿ ಶ್ರಮ ಸಂಸ್ಕೃತಿಯ ಎಚ್ಚರ ಹಾಗೂ ಪರ್ಯಾಯಗಳ ಹುಡುಕಾಟ**, ಸಂಶೋಧನಾ ಮಹಾಪ್ರಬಂಧ (ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ,ಹಂಪಿ.

ಕೋದಂಡರಾಮ ಎನ್.ಕೆ.(ಡಾ) ೧೯೯೬; **ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ**, ಗಾಯತ್ರಿ ಸ್ಮಾರಕ ಗ್ರಂಥಮಾಲೆ, ಮೈಸೂರ.

ಖಂಡೋಬಾ ಪಿ.ಕೆ. ೨೦೦೫; **ಸಂಸ್ಕೃತಿ ಶೋಧ**, ಸಂಗೀತ ಪಬ್ಲಿಕೇಷನ್ಸ್ ಗುಲ್ಬರ್ಗಾ,
ಗಿರಡ್ಡಿ ಗೋವಿಂದರಾಜ. ೧೯೯೨; **ಸಾತತ್ಯ**, ಸ್ನೇಹ ಪ್ರಕಾಶನ, ಬೆಂಗಳೂರು.

ಗುರುಪಾದಪ್ಪ ಮರೆಗುದ್ದಿ.(ಡಾ) ೧೯೮೯; **ಕುವೆಂಪು ಕಾದಂಬರಿಗಳ ಸಾಂಸ್ಕೃತಿಕ ಅಧ್ಯಯನ**, ಸಹ್ಯಾದ್ರಿ ಪ್ರಕಾಶನ, ಬೆಂಗಳೂರು.

ಚಿದಾನಂದಮೂರ್ತಿ.(ಡಾ) ೨೦೦೨; **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, (ಕ್ರಿ.ಶ.೪೫೦-೧೧೫೦) ಸ್ವಪ್ನ ಬುಕ್ ಹೌಸ್, ಬೆಂಗಳೂರು – ೫೬೦೦೦೯.

ಚಂದ್ರಶೇಖರ ಕಂಬಾರ.(ಡಾ) ೧೯೯೩; **ಕರಿಮಾಯಿ**, ಅಕ್ಷರ ಪ್ರಕಾಶನ ಹೆಗ್ಗೋಡು (ಸಾಗರ)

ಚಂದ್ರಶೇಖರ ಕಂಬಾರ. ೧೯೮೩; **ಜೀಕೆ.ಮಾಸ್ತರರ ಪ್ರಣಯ ಪ್ರಸಂಗ**, ಅಕ್ಷರ ಪ್ರಕಾಶನ, ಹೆಗ್ಗೋಡು

ಚಂದ್ರಶೇಖರ ಕಂಬಾರ.(ಡಾ) ೨೦೦೪; **ದೇಶಿಯ ಚಿಂತನೆ**, ಅಂಕಿತ ಪ್ರಕಾಶನ, ಬಸವನಗುಡಿ, ಬೆಂಗಳೂರು.

ಚಂದ್ರಶೇಖರ ಕಂಬಾರ.(ಡಾ) ೨೦೦೬; **ಶಿಖರಸೂರ್ಯ**, ಅಕ್ಷರ ಪ್ರಕಾಶನ, ಹೆಗ್ಗೋಡು (ಸಾಗರ)

ಚಂದ್ರಶೇಖರ ಕಂಬಾರ.(ಡಾ) ೨೦೦೦; **ಸಿಂಗಾರೆವ್ವ ಮತ್ತು ಅರಮನೆ**, ಅಕ್ಷರ ಪ್ರಕಾಶನ, ಹೆಗ್ಗೋಡು (ಸಾಗರ)

ಜನಾರ್ಧನ ಭಟ್. (ಸಂ) ೨೦೦೨; **ಸಾಹಿತ್ಯ ವಿಮರ್ಶೆ ೨೦೦೧**, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು

ದೇವರಕೊಂಡಾರೆಡ್ಡಿ (ಸಂ). ೧೯೯೬: **ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ-೩**, ಕನ್ನಡ ವಿಶ್ವವಿದ್ಯಾಲಯ,ಹಂಪಿ, ವಿದ್ಯಾರಣ್ಯ.

ಧರ್ಮವೀರ ಕೆ.ಹೆಚ್. **ಸ್ಥಿತ್ಯಂತರ ಸಮಾಜದ ಸಂಘರ್ಷಗಳ ಸ್ವರೂಪ** (ಶ್ರೀಕೃಷ್ಣ ಆಲನಹಳ್ಳಿ ಕಾದಂಬರಿಗಳ ಮುಖೇನ), ಸಂಶೋಧನ ಮಹಾಪ್ರಬಂಧ, (ಅಪ್ರಕಟಿತ) ಕನ್ನಡ ವಿಶ್ವವಿದ್ಯಾಲಯ, ಹಂಪಿ.

ನಾಗರಾಜ್ ಡಿ.ಆರ್. ೨೦೦೨; **ಶಕ್ತಿಶಾರದೆಯ ಮೇಳ**, ಆಧುನಿಕ ಕನ್ನಡ ಕಾವ್ಯದ ಅಧ್ಯಯನ ಅಕ್ಷರ ಪ್ರಕಾಶನ ಹೆಗ್ಗೋಡು (ಸಾಗರ)

ನಾಗರಾಜ್ ಡಿ.ಆರ್. ೨೦೦೬; **ಸಾಹಿತ್ಯ ಕಥನ** (ವಿಮರ್ಶಾ ಲೇಖನಗಳ ಸಂಕಲನ) ಅಕ್ಷರ ಪ್ರಕಾಶನ, ಹೆಗ್ಗೋಡು (ಸಾಗರ)

ಶ್ರೀಮತಿ ನಾಗವೇಣಿ ಎಚ್. ೨೦೦೪; **ರಂಗಸಂಪನ್ನರು ಡಾ.ಚಂದ್ರಶೇಖರ ಕಂಬಾರ** ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು.

ಬರಗೂರ ರಾಮಚಂದ್ರಪ್ಪ. (ಸಂ) ೧೯೯೩; **ಕನ್ನಡ ಸಾಹಿತ್ಯದಲ್ಲಿ ನಿಸರ್ಗ ಮತ್ತು ಸಾಮಾಜಿಕ ಸ್ಥಿತ್ಯಂತರ**, ಕನ್ನಡ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು,

ಬರಗೂರ ರಾಮಚಂದ್ರಪ್ಪ. (ಸಂ) ೧೯೯೩; **ಕನ್ನಡ ಸಾಹಿತ್ಯದ ಪುನರ್ ಮೌಲ್ಯೀಕರಣ ಸಂಪುಟ-೮**, ಕನ್ನಡ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು.

ಬರಗೂರ ರಾಮಚಂದ್ರಪ್ಪ. (ಸಂ) ೧೯೯೩; **ನವ್ಯಸಾಹಿತ್ಯದಲ್ಲಿ ನಿಸರ್ಗ ಮತ್ತು ಅಭಿವ್ಯಕ್ತಿ ವಿಧಾನ**, ಕನ್ನಡ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು,

ಬರಗೂರ ರಾಮಚಂದ್ರಪ್ಪ. (ಸಂ) ೧೯೯೨; **ವಸಾಹತುಶಾಹಿ ಅನುಭವ ಮತ್ತು ಕಂಬಾರರ ಸಾಹಿತ್ಯ ವಿಚಾರ ಸಂಕಿರಣ ಮಾಲೆ**, ಕನ್ನಡ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು ಅಕ್ಟೋಬರ್

ಬರಗೂರ ರಾಮಚಂದ್ರಪ್ಪ. (ಸಂ) **ಸಂಸ್ಕೃತಿಯ ಸ್ಥಿತ್ಯಂತರ ಮತ್ತು ಶ್ರೀಕೃಷ್ಣ ಆಲನಹಳ್ಳಿಯವರ ಸಾಹಿತ್ಯ**, ವಿವಿಧ ಲೇಖಕರು ಕನ್ನಡ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು.

ಬಸವರಾಜ ಮಲಶೆಟ್ಟಿ. ೨೦೦೬; **ಚಂದ್ರಶೇಖರ ಕಂಬಾರ**, ನವಕರ್ನಾಟಕ ಪ್ರಕಾಶನ (ದ್ವಿಮು)

ಡಾ.ಮಣಿಪಾಲ ಆಕ್ಕೆ. ೨೦೦೬; **ವಿಮರ್ಶೆಯ ಸವಾಲು**, ಎರಡು ದಶಕಗಳ ವಿಮರ್ಶಾ ಲೇಖನಗಳ ಸಂಕಲನ, ಸಂವಾದ ಪ್ರಕಾಶನ, ಮಣಿಪಾಲ

ಮ್ಯಾಗೇರಿ ಐ.ಜೆ., ೧೯೯೬; **ವಸಾಹತುಶಾಹಿ ಅನುಭವ ಮತ್ತು ಕನ್ನಡ ಸಾಹಿತ್ಯ**, ಸಂಶೋಧನಾ ಮಹಾಪ್ರಬಂಧ (ಅಪ್ರಕಟಿತ) ಕನ್ನಡ ವಿಶ್ವವಿದ್ಯಾಲಯ,ಹಂಪಿ.

ರಹಮತ್ ತರೀಕೆರೆ (ಸಂ) ೨೦೦೬; **ಕನ್ನಡ ಅಧ್ಯಯನ** ಚಳಿಸಂಚಿಕೆ (ಅಕ್ಟೋಬರ್, ನವ್ಹಂಬರ್ ಡಿಸೆಂಬರ್)

ಲಕ್ಷ್ಮೀದೇವಿ ಎನ್. **ಸ್ವಾತಂತ್ರ್ಯೋತ್ತರ ಸಣ್ಣಕತೆಗಳಲ್ಲಿ ಗ್ರಾಮೀಣ ಸಂಸ್ಕೃತಿ**, ಸಂಶೋಧನಾ ಮಹಾಪ್ರಬಂಧ (ಅಪ್ರಕಟಿತ), ಕನ್ನಡ ವಿಶ್ವವಿದ್ಯಾಲಯ,ಹಂಪಿ.

ವಿಕ್ರಮ ವಿಸಾಜಿ. ೨೦೦೧; **ಕಂಬಾರರ ನಾಟಕಗಳು**, ಸಂಜಯ ಬೆಂಗಳೂರು.

ವೀರಭದ್ರಪ್ಪ ಶೇಷಪ್ಪ ಬಡಿಗೇರ. ೧೯೯೯; **ಉತ್ತರ ಕರ್ನಾಟಕದ ಗೀತಮೇಳಗಳು**, ಸಂಶೋಧನಾ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ,ಹಂಪಿ.

ವೀರೇಶ ಬಡಿಗೇರ. (ಡಾ) ೨೦೦೨; **ಪ್ರಥಮ ಶ್ರೀ ಕಾಳಿ ಪ್ರಶಸ್ತಿ ಪುರಸ್ಕೃತ ಡಾ.ಚಂದ್ರಶೇಖರ ಕಂಬಾರ**, ವಿಶ್ವಕರ್ಮ ಸಮಾಜ ವಿಕಾಸ ಸಂಸ್ಥೆ (ರಿ) ಶಿರಸಂಗಿ. ತಾ. ಸವದತ್ತಿ ಜಿ.ಬೆಳಗಾಂವಿ.
ಶಿವಪ್ರಕಾಶ ಎಚ್.ಎಸ್., ೧೯೯೭; ಸಿರಿಸಂಪಿಗೆ ಕಂಬಾರ – ೬೦, ಡಾ.ಚಂದ್ರಶೇಖರ ಕಂಬಾರ ಅಭಿನಂದನಾ ಗ್ರಂಥ, ರಂಗನಿರಂತರ, ರಾಜಾಜಿನಗರ ಬೆಂಗಳೂರು.

ಶಿವರಾಮ ಕಾಡನಕುಪ್ಪೆ. ೨೦೦೩; **ಸಾಮಾಜಿಕ ನೆಲೆ**, ಕನ್ನಡ ಪುಸ್ತಕ ಪ್ರಾಧಿಕಾರ

ಶೇಷಗಿರಿರಾವ್ ಎಲ್.ಎಸ್. ೧೯೯೩; **ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ**, ಉದಯಭಾನು, ಕಲಾಸಂಘ, ಬೆಂಗಳೂರು.

ಡಾ.ಶ್ರೀಕಂಠಶಾಸ್ತ್ರೀ ಎಸ್., ೧೯೯೯; ಭಾರತೀಯ ಸಂಸ್ಕೃತಿ, ಮೈಸೂರ ವಿಶ್ವವಿದ್ಯಾಲಯ

ಸುಜಾತಾ ಎನ್.ಬಿ. **ಕನ್ನಡ ಮೂರು ಪ್ರಾತಿನಿಧಿಕ ಕಾದಂಬರಿಗಳಲ್ಲಿ ಪ್ರಾದೇಶಿಕತೆಯ ಸ್ವರೂಪ**, ಸಂಶೋಧನಾ ಮಹಾಪ್ರಬಂಧ (ಅಪ್ರಕಟಿತ), ರಾಷ್ಟ್ರಕವಿ ಕುವೆಂಪು ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ದೇವಂಗಿ ತಾ.ತೀರ್ಥಹಳ್ಳಿ ಜಿ. ಶಿವಮೊಗ್ಗ.

ಸೋಮೇಶ್ವರ ಇಮ್ರಾಪುರ, (ಸಂ) ಪ್ರ.ಸಂ.೨೦೦೧; **ಸಂಪದ ಸಾಹಿತ್ಯದರ್ಶನ–೨೪**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಧಾರವಾಡ.

ಹಿರೇಮಠ ಎನ್.ಎಸ್., ೨೦೦೧; **ದಲಿತ ಸಂಸ್ಕೃತಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಡಾ.ಜಯಪ್ರಕಾಶ ಮಾವಿನಕುಳಿ, (ಸಂ) ೨೦೦೪; **ಶಿವಾಪುರ ಕಂಬಾರ ನಮಸ್ಕಾರ**, ಪದ್ಮಶ್ರೀ ಡಾ.ಚಂದ್ರಶೇಖರ ಕಂಬಾರ ಅಭಿನಂದನಾ ಗ್ರಂಥ, ಚಂದ್ರಶೇಖರ ಕಂಬಾರ ಅಭಿನಂದನಾ ಸಮಿತಿ
ನಾರಾಯಣ ಕೆ.ವ್ಹಿ. ೧೯೯೭; ಬೇರು ಕಾಂಡ ಚಿಗುರು, ವಿವೇಕ ಪ್ರಕಾಶನ, ಬೆಂಗಳೂರು.

ವೈಕುಂಠರಾಜು ಬಿ.ವಿ. ಪ್ರಶಸ್ತಿ – ೧೯೮೭; **ಕರ್ನಾಟಕ ನಾಟಕ ಅಕಾಡೆಮಿ**,–೨೫.೦೫.೧೯೮೮; ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು.

* * *

ಪರಾಮರ್ಶಿಸಿದ ಲೇಖನಗಳು

ಕವಿತಾ ರೈ, **ಜಾಗತೀಕರಣದ ಎದುರು ದೇಸೀ ಅಂತಃಸತ್ವ**, ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, ಭಾನುವಾರ ೯.೯.೨೦೦೭

ಕೀರ್ತಿನಾಥ ಕುರ್ತಕೋಟಿ, **ಬಣ್ಣದ ಬಾರ್ಡರ ಸೀರೆ** (ಅಪ್ರಕಟಿತ ಲೇಖನ)

ಕೃಷ್ಣಮೂರ್ತಿ ಹನೂರ, **ಕಂಬಾರರ ಮಡಿಲಲ್ಲಾಡುವ ಜಾನಪದ ಕೂಸು**, ಮಯೂರ, ಮಾಸಪತ್ರಿಕೆ, ಫೆಬ್ರವರಿ; ೨೦೦೮. ಸಂಪುಟ.೪೧, ಸಂಚಿಕೆ.೦೨.

ಜಯಪ್ರಕಾಶ ಮಾವಿನಕುಳಿ ಡಾ., **ಅನ್ನ ಹುಲ್ಲು ಕಸಿಯುವವರ ಎದುರು ಅಂತಃಚಕ್ಷು**, ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, ಭಾನುವಾರ ೧೪.೧೦.೨೦೦೭.

ನರಹಳ್ಳಿ ಬಾಲಸುಬ್ರಹ್ಮಣ್ಯ ಡಾ., **ಶಿಖರಸೂರ್ಯ ಬೌದ್ಧಿಕ ಅಹಂಕಾರದ ಅನ್ವೇಷಣೆ**, ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, ಭಾನುವಾರ.

ನರಹಳ್ಳಿ ಬಾಲಸುಬ್ರಹ್ಮಣ್ಯ, **ಇಂಗ್ಲೀಷ್ ಕಲಿಕೆ : ಗೊಂದಲಗಳು ಸವಾಲುಗಳು**, ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, ಭಾನುವಾರ ೧೨ ಜೂನ್ ೨೦೦೫.

ಪುಷ್ಪ ಎಚ್.ಎಲ್.ಡಾ., **ಸಮುದಾಯದೆದುರು ಸೋತ ದುರಂತ ನಾಯಕ**, ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, ಭಾನುವಾರ ೧೬.೦೯.೨೦೦೭.

ಮಾಧವ ಪೆರಾಜೆ ಡಾ., **ಕಾವ್ಯಕ್ಕೆ ಗುರುವೆನಲು ರಚಿಸಿದ ಶಿಖರಸೂರ್ಯ**, ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, ಭಾನುವಾರ ೦೭.೧೦.೨೦೦೭.

ಮುಕುಂದರಾಜ್ ಎಲ್.ಎನ್., **ಹೊಸಕಾಲದ ಚೈತನ್ಯ ಕಥನ**, ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, ಭಾನುವಾರ ೨೩.೦೯.೨೦೦೭.

ರಾಜೇಂದ್ರ ಚೆನ್ನಿ ಡಾ., **ಕಂಬಾರರ ಕಾವ್ಯ**, ಮಯೂರ, ಮಾಸಪತ್ರಿಕೆ, ಫೆಬ್ರವರಿ ೨೦೦೮, ಸಂಪುಟ ೪೧, ಸಂಚಿಕೆ.೦೨.

ವೀರೇಂದ್ರ ಶೀಲವಂತ, **ಪ್ರೀತಿಯ ಕಾರಂಜಿಗೆ ಥಣ್ಣಗಾಗಿ ಹೋದ ಜಾತಿ ಎಂಬ ಬೆಂಕಿ**, 'ಕುರುಕ್ಷೇತ್ರ', ಕನ್ನಡ ಪಾಕ್ಷಿಕ ಪತ್ರಿಕೆ, ೧೯.೦೬.೨೦೦೭.

ವೀರೇಶ ಬಡಿಗೇರ, **ವ್ಯಸನಶಾಹಿ ವಿರುದ್ಧ ಸೃಜನಶೀಲ ಅಸ್ತ್ರ**, ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, ಭಾನುವಾರ ೦೪.೧೧.೨೦೦೭.

ವೀರೇಶ ಬಡಿಗೇರ ಡಾ., **ಸೃಷ್ಟಿಶೀಲ ಮನಸ್ಸಿನ ಸೃಜನಶೀಲ ಕೃತಿ**, ಪುಸ್ತಕ ಮಾಹಿತಿ, ದ್ವೈಮಾಸಿಕ ಪತ್ರಿಕೆ, ನಿರ್ದೇಶಕರು ಪ್ರಸಾರಾಂಗ, ಕ.ವಿ.ವಿ, ಹಂಪಿ, ಅಕ್ಟೋಬರ್–ಡಿಸೆಂಬರ ೨೦೦೭, ಸಂ.೧೫, ಸಂಚಿಕೆ. ೦೪.

ವಿವೇಕ ಶಾನಭಾಗ, **ಯೊಕ್ನಪಟಾವಫ್, ಮಾಲ್ಗುಡಿ, ಶಿವಾಪುರ, ಹನೇಹಳ್ಳಿ**. ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, ಭಾನುವಾರ ೨೫.೩.೨೦೦೭.

ಪಿಶಾಖ್ ಎನ್, **ಬಸವಣ್ಣನ ಕನಸು' ಕಾಣುತ್ತಾ**, ಕಂಬಾರರೊಂದಿನ ಸಂದರ್ಶನ ಲೇಖನ, ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, ಭಾನುವಾರ ೦೩.೦೨.೨೦೦೮.

ಶಂಕರ್ ಎನ್.ಎಸ್, **ನಿಬ್ಬೆರಗಾಗಿಸುವ ಕಾವ್ಯ ಪ್ರತಿಭೆ**, ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, ಭಾನುವಾರ.

ಶ್ರೀಧರ ಬಳಿಗಾರ, **ಕೃಷಿ ಸಂಸ್ಕೃತಿಯ ಅವನತಿ**, ಪ್ರಜಾವಣಿ, ಶುಕ್ರವಾರ ೧೧.೦೪.೨೦೦೮.

ಸುರೇಂದ್ರನಾಥ ಮಿಣಜಗಿ, **ಶಿಖರಸೂರ್ಯ: ಈ ಯುಗದ ಪ್ರತಿಪುರಾಣ**, ವಿಜಯಕರ್ನಾಟಕ, ಸಾಪ್ತಾಹಿಕ ವಿಜಯ, ಭಾನುವಾರ ೨೭.೦೧.೨೦೦೮.

ಸ್ವಾಮಿ ಓ.ಎಲ್.ಎನ್, **ಕಂಬಾರ ಒಂದು ಅಪೂರ್ವ ಚಿತ್ರ**, ಮಯೂರ, ಮಾಸಪತ್ರಿಕೆ, ಫೆಬ್ರವರಿ ೨೦೦೮, ಸಂಪುಟ.೪೧, ಸಂಚಿಕೆ.೦೨.

ಹಿ.ಚಿ.ಬೋರಲಿಂಗಯ್ಯ, **ವಿಸ್ಮೃತಿತತ್ವ ಮತ್ತು ದೇಸೀತತ್ವ**, ಕನ್ನಡ ಅಧ್ಯಯನ, – ತ್ರೈಮಾಸಿಕ ಪತ್ರಿಕೆ, ಚಳಿಸಂಚಿಕೆ, ಅಕ್ಟೋಬರ್–ನವ್ಹಂಬರ್–ಡಿಸೆಂಬರ್ ೨೦೦೧. ಸಂಪುಟ ೭, ಸಂಚಿಕೆ.೦೨.

ಹಿರೇಮಗಳೂರ ಕಣ್ಣನ್, **ಜನುಮಕೊಟ್ಟವಳನ್ನು ಮರೆಯಬೇಡಿ**, ಸಂಯುಕ್ತ ಕರ್ನಾಟಕ, ಸೋಮವಾರ ೧೨.೦೫.೨೦೦೮.

ದೇಸೀಯ ಭಾಷೆ ಕಲೆ ಸಂಸ್ಕೃತಿ ಉಳಿಸಿ, ಪ್ರಜಾವಾಣಿ ವಾರ್ತೆ–ಬೆಂಗಳೂರು, ಕಂಬಾರರ ಭಾಷಣ ಕುರಿತ ವಿವರ, ಪ್ರಜಾವಾಣಿ, ಬುಧವಾರ ೧೨.೦೩.೨೦೦೮.

* * *